ಶುಕ್ರವಾರ, ಅಕ್ಟೋಬರ್ 10, 2025| ₹ 7.00
prajavani.net prajavani
www.prajavani.net

ಶಾಂತಿ ನೆಲಸಲಿ...

ಇಸ್ರೇಲ್–ಪ್ಯಾಲೆಸ್ಟೀನ್ ಯುದ್ಧವನ್ನು ವಿರೋಧಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಗುರುವಾರ ಪ್ರತಿಭಟನೆ ನಡೆಯಿತು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

ಚಿಟಿಕೆ ಸುದ್ದಿ

ವರದಿಗೆ ಮಹಿಳಾ ಆಯೋಗ ಸೂಚನೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹಾಗೂ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರ ವಿರುದ್ಧ ಕಾನೂನು ಕ್ರಮಕ್ಕೆ ಕೋರಿ ಬರೆದ ಪತ್ರದ ವಿಚಾರವಾಗಿ ವರದಿ ನೀಡುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಸೂಚನೆ ನೀಡಿದೆ.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಹಾಗೂ ಸಹಕಾರ ಇಲಾಖೆ ಉಪ ನಿಬಂಧಕರು ಅರ್ಜಿಯಲ್ಲಿನ ಅಂಶಗಳ ಸತ್ಯಾಸತ್ಯತೆ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ಅರ್ಜಿದಾರರಿಗೆ ನ್ಯಾಯ ಹಾಗೂ ರಕ್ಷಣೆ ಒದಗಿಸಬೇಕು' ಎಂದು ಆಯೋಗದ ಕಾರ್ಯದರ್ಶಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನಲ್ಲಿ ವಾಸಿಸುತ್ತಿರುವ ಉಡುಪಿ, ದಕ್ಷಿಣ ಕನ್ನಡ ಹಾಗೂ ಕಾಸರಗೋಡಿನವರು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸುವಂತೆ ದಕ್ಷಿಣ ಕನ್ನಡಿಗರ ಸಂಘ ಕೋರಿದೆ.

2024–25ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ 90ಕ್ಕಿಂತ ಅಧಿಕ ಅಂಕ ಗಳಿಸಿದವರು ಅಂಕಪಟ್ಟಿಯ ಪ್ರತಿಯನ್ನು ಅ.16ರ ಒಳಗೆ ಕೆ.ಸಿ. ಬಲ್ಲಾಳ, ಅಧ್ಯಕ್ಷ, ದಕ್ಷಿಣ ಕನ್ನಡಿಗರ ಸಂಘ, 196, 5ನೇ ಮುಖ್ಯರಸ್ತೆ, ವೈಯಾಲಿಕಾವಲ್, ಬೆಂಗಳೂರು–560003 ಇಲ್ಲಿಗೆ ಸಲ್ಲಿಸುವಂತೆ ಕೋರಲಾಗಿದೆ.

ಜಿಎಸ್‌ಟಿಯಿಂದ ವಿನಾಯಿತಿಗೆ ಮನವಿ

ಬೆಂಗಳೂರು: 'ಮುದ್ರಣ ಮಾಧ್ಯಮಗಳಿಗೆ ಪೂರಕವಾದ ವಸ್ತುಗಳ ಮೇಲೆ ವಿಧಿಸಲಾಗಿರುವ ಜಿಎಸ್‌ಟಿಯಿಂದ ವಿನಾಯಿತಿ ನೀಡಬೇಕು' ಎಂದು ಅಖಿಲ ಭಾರತ ಕಾರ್ಯನಿರತ ಪತ್ರಕರ್ತರ ಸಂಘ ಒತ್ತಾಯಿಸಿದೆ.

'ಮುದ್ರಣ ಮಾಧ್ಯಮಕ್ಕೆ ಅಗತ್ಯ ಇರುವ ನ್ಯೂಸ್ ಪ್ರಿಂಟ್, ಇಂಕ್, ಪ್ರಿಂಟಿಂಗ್ ಪ್ಲೇಟ್ಸ್ ಮೇಲೆ ಜಿಎಸ್‌ಟಿ ವಿಧಿಸಲಾಗಿದೆ. ಇವುಗಳಿಗೆ ವಿನಾಯಿತಿ ಸಿಕ್ಕರೆ ಖಂಡಿತಾ ಖರ್ಚಿನ ಪ್ರಮಾಣ ತಗ್ಗಲಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬರೆದಿರುವ ಪತ್ರದಲ್ಲಿ ಸಂಘದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ತಿಳಿಸಿದ್ದಾರೆ.

ಫೋನ್–ಇನ್ ಇಂದು

ಬೆಂಗಳೂರು: ನಾಗರಿಕರ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ತ್ವರಿತ ಪರಿಹಾರ ಒದಗಿಸುವ ಉದ್ದೇಶದಿಂದ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಅ.10ರಂದು ಫೋನ್-ಇನ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಶುಕ್ರವಾರ ಬೆಳಿಗ್ಗೆ 7ರಿಂದ 9ರವರೆಗೆ ಫೋನ್–ಇನ್ ನಡೆಯಲಿದೆ. ಮೊಬೈಲ್, ವಾಟ್ಸ್‌ಆ್ಯಪ್: 9480685705, ದೂರವಾಣಿ: 080-22975936 / 080-23636671

ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಸ್ವಚ್ಛತೆ

ಬೆಂಗಳೂರು: ಉತ್ತರ ನಗರ ಪಾಲಿಕೆ ವತಿಯಿಂದ ಸಂಸ್ಥೆಗಳ ಸಹಯೋಗದಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಅ.11ರಂದು ಆಯೋಜಿಸಲಾಗಿದೆ.

ಶನಿವಾರ ರಾತ್ರಿ 10.30ರಿಂದ ಮಧ್ಯರಾತ್ರಿ 1ರವರೆಗೆ ರಾಮಮೂರ್ತಿ ನಗರ ಬ್ರಿಡ್ಜ್‌ನಿಂದ ನಾಗವಾರ ವೀರಣ್ಣಪಾಳ್ಯ ಜಂಕ್ಷನ್ (ರಿಂಗ್ ರಸ್ತೆ) ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮದಲ್ಲಿ ಎಂಜಿನಿಯರಿಂಗ್, ರಸ್ತೆ ಮೂಲಸೌಕರ್ಯ, ಬೆಂಗಳೂರು ಜಲಮಂಡಳಿ, ಅರಣ್ಯ, ಸಂಚಾರ ಪೊಲೀಸ್ ಹಾಗೂ ನಮ್ಮ ಮೆಟ್ರೊ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಪೌರಕಾರ್ಮಿಕರು, ಸಹಾಯಕರು ಮತ್ತು ಚಾಲಕರು, ಆಟೊ ಟಿಪ್ಪರ್‌ಗಳೊಂದಿಗೆ ಸ್ವಚ್ಛತಾ ಕಾರ್ಯ ನಡೆಸಲಾಗುವುದು.

ಸಹಭಾಗಿತ್ವ ಸಂಸ್ಥೆಗಳು: ಎನ್ಇಆರ್‌ಡಬ್ಲ್ಯುಎ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್, ಎಚ್‌ಬಿಆರ್ ಲೇಔಟ್ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್, ನಾಗವಾರ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್, ಕ್ಲೀನ್ ಬೆಂಗಳೂರು, ಹಸಿರು ದಳ, ಬಾಣಸವಾಡಿ ರೈಸಿಂಗ್ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್, ರಿಂಗ್ ರಸ್ತೆಯ ವಾಣಿಜ್ಯ ಮಳಿಗೆಗಳ ಮಾಲೀಕರು ಭಾಗವಹಿಸಲಿದ್ದಾರೆ.

ಈ ಸ್ವಚ್ಛತಾ ಕಾರ್ಯಕ್ರಮದಲ್ಲಿ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಸುಧಾರಿಸುವುದು, ಪರಿಸರ ಸಂರಕ್ಷಣೆ ಹಾಗೂ ನಾಗರಿಕರಲ್ಲಿ ಸ್ವಚ್ಛತಾ ಅಭ್ಯಾಸಗಳನ್ನು ಉತ್ತೇಜಿಸಲಾಗುತ್ತದೆ. ಸಾರ್ವಜನಿಕರು, ಸಂಘ ಸಂಸ್ಥೆಗಳು, ವಾಣಿಜ್ಯ ಮಳಿಗೆಯ ಮಾಲೀಕರು ಭಾಗವಹಿಸಬಹುದು ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಮತಾ ತಿಳಿಸಿದ್ದಾರೆ.

ಐದೇ ಪ್ರಶ್ನೆಗಳಿಗೆ ಸಮೀಕ್ಷೆ ಪೂರ್ಣ!

ನಿಗದಿತ ಗುರಿ ತಲುಪುವ ಒತ್ತಡ • ಜನರ ಅಸಹಕಾರ, ಅಪೂರ್ಣ ಮಾಹಿತಿ ಸಂಗ್ರಹ

• ವರುಣ ಹೆಗಡೆ

ಮುಖ್ಯಾಂಶಗಳು

- ಸಮೀಕ್ಷಕರಿಗೆ ಸಿಗದ ತರಬೇತಿ– ಜನರ ಜೊತೆಗೆ ಸಂವಹನ ಕೊರತೆ
- ಹೆಚ್ಚಿದ ಒತ್ತಡ: ಹತ್ತು ನಿಮಿಷದೊಳಗೆ ಸಮೀಕ್ಷೆ ಪೂರ್ಣ

ಬೆಂಗಳೂರು: ದಿನವೊಂದಕ್ಕೆ ನಿಗದಿತ ಗುರಿ ತಲುಪುವ ಒತ್ತಡ ಹಾಗೂ ಜನರ ಅಸಹಕಾರದಿಂದಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಕೆಲ ಸಮೀಕ್ಷಕರು ನಾಲ್ಕರಿಂದ ಐದೇ ಪ್ರಶ್ನೆಗಳಿಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪೂರ್ಣಗೊಳಿಸುತ್ತಿದ್ದಾರೆ.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಕೈಗೊಂಡಿರುವ ಈ ಸಮೀಕ್ಷೆ ಜಿಬಿಎ ವ್ಯಾಪ್ತಿಯಲ್ಲಿ ಇದೇ 4ರಿಂದ ಪ್ರಾರಂಭವಾಗಿದೆ. ಇಲ್ಲಿ ಸುಮಾರು 46 ಲಕ್ಷ ಮನೆಗಳಿಗೆ ಯುಎಚ್ ಐಡಿ ಅಂಟಿಸಲಾಗಿದ್ದು, ಐದು ದಿನಗಳ ಅವಧಿಯಲ್ಲಿ ಶೇ 15ರಷ್ಟು ಸಮೀಕ್ಷೆ ಪೂರ್ಣಗೊಳಿಸಲಾಗಿದೆ. ಇದೇ 19ರೊಳಗೆ ಈ ಸಮೀಕ್ಷೆ ಪೂರ್ಣಗೊಳಿಸಲು ರಾಜ್ಯ ಸರ್ಕಾರ ಗಡುವು ನೀಡಿದೆ. ಸಮೀಕ್ಷೆಯು 60 ಪ್ರಶ್ನೆಗಳನ್ನು ಒಳಗೊಂಡಿದ್ದರೂ ಮನೆಗಳಿಗೆ ಭೇಟಿ ನೀಡುವ ಸಮೀಕ್ಷಕರಲ್ಲಿ ಕೆಲವರು, ಸಮೀಕ್ಷೆಯನ್ನು ವೇಗವಾಗಿ ಪೂರ್ಣಗೊಳಿಸುವ ಉದ್ದೇಶದಿಂದ ಹಾಗೂ ಮನೆಯ ಸದಸ್ಯರು ಸಮರ್ಪಕ ಉತ್ತರ ಕೊಡದ ಕಾರಣ ಆಧಾರ್ ಸಂಖ್ಯೆ, ಜಾತಿ, ಶಿಕ್ಷಣ ಹಾಗೂ ಆದಾಯದ ಬಗ್ಗೆ ಮಾತ್ರ ಮಾಹಿತಿ ಕಲೆಹಾಕುತ್ತಿದ್ದಾರೆ. ಅದು ಕೂಡ ಮನೆಯ ಎಲ್ಲ ಸದಸ್ಯರಿಂದ ಮಾಹಿತಿ ಪಡೆಯದೆ, ಭೇಟಿ ವೇಳೆ ಮನೆಯಲ್ಲಿ ಇರುವ ವ್ಯಕ್ತಿಗಳ ಮಾಹಿತಿ ನಮೂದಿಸಿಕೊಳ್ಳುತ್ತಿದ್ದಾರೆ.

ಈ ಸಮೀಕ್ಷೆ ನಡೆಸಲು ನಗರದಲ್ಲಿ ಸಮೀಕ್ಷಕರ ಕೊರತೆ ಇರುವ ಕಾರಣ, ಶಿಕ್ಷಕರ ಜತೆಗೆ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರನ್ನೂ ಬಳಸಿಕೊಳ್ಳಲಾಗಿದೆ. ಅವರಿಗೆ ಸೂಕ್ತ ತರಬೇತಿ ನೀಡದಿರುವುದು, ಜನರಿಂದ ಹೇಗೆ ಮಾಹಿತಿ ಕಲೆಹಾಕಬೇಕೆಂದು ತಿಳಿಸಿಕೊಡದ ಕಾರಣ, ಸಮೀಕ್ಷೆಗೆ ಸಂಬಂಧಿಸಿದಂತೆ ಜನರ ಜತೆಗೆ ಸಂವಹನ ಕಷ್ಟಸಾಧ್ಯವಾಗುತ್ತಿದೆ. ಇದರಿಂದಾಗಿಯೂ ಪ್ರಶ್ನಾವಳಿಯಲ್ಲಿನ ಪ್ರಶ್ನೆಗಳನ್ನು ಕೇಳುವ ಗೋಜಿಗೆ ಅವರು ಹೋಗುತ್ತಿಲ್ಲ.

'ಮನೆಗೆ ಬಂದ ಸಮೀಕ್ಷಕರು ಆಧಾರ್ ಸಂಖ್ಯೆ ಕೇಳಿದರು. ಮನೆಯವರು ಹೊರಗಡೆ ಇದ್ದ ಕಾರಣ ಅವರ ಆಧಾರ್ ಸಂಖ್ಯೆ ಪಡೆದು, ಮೊಬೈಲ್ ಸಂಖ್ಯೆಗೆ ಬಂದ ಒಟಿಪಿ ನಮೂದಿಸಿದರು. ಜಾತಿ ಯಾವುದೆಂದು ಪ್ರಶ್ನಿಸಿದ ಅವರು, ಶಿಕ್ಷಣ ಮತ್ತು ಉದ್ಯೋಗದ ಬಗ್ಗೆ ಕೇಳಿದರು. ಆದಾಯವನ್ನು ಅವರೇ ಒಂದಷ್ಟು ನಮೂದಿಸಿಕೊಂಡರು. ಮನೆಯವರ ಶಿಕ್ಷಣ, ಉದ್ಯೋಗ ಸೇರಿ ಯಾವುದೇ ಮಾಹಿತಿಯನ್ನು ಪಡೆಯಲಿಲ್ಲ. ಹತ್ತು ನಿಮಿಷದೊಳಗೆ ಸಮೀಕ್ಷೆ ಪೂರ್ಣಗೊಳಿಸಿದರು' ಎಂದು ಹೊಸಕೆರೆಹಳ್ಳಿ ನಿವಾಸಿ ವೀಣಾ ತಿಳಿಸಿದರು.

ಯುಎಚ್‌ಐಡಿ ಗೊಂದಲ: ನಾಲ್ಕೈದು ಮನೆಗಳಿರುವ ಕಟ್ಟಡಗಳ ಮನೆ ಬಾಗಿಲುಗಳ ಬಳಿ ಅಂಟಿಸಿರುವ ಯುಎಚ್‌ಐಡಿ ಒಳಗೊಂಡ ಸ್ಟಿಕ್ಕರ್‌ಗಳು ಅದಲು ಬದಲು ಆಗಿರುವುದೂ ಸಮೀಕ್ಷಕರ ಗೊಂದಲಕ್ಕೆ ಕಾರಣವಾಗುತ್ತಿದೆ. ಈ ಕಾರಣದಿಂದ ಸಮೀಕ್ಷೆ ಸಾಧ್ಯವಾಗದೆ ಸಮೀಕ್ಷಕರು ಪರದಾಟ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗುತ್ತಿದೆ. ಇದರಿಂದಾಗಿಯೂ ಸಮೀಕ್ಷಕರು ವಾಪಸ್ ತೆರಳುತ್ತಿದ್ದಾರೆ. ಹೀಗಾಗಿ, ಕೆಲವರು ಸಮೀಕ್ಷೆಯಿಂದ ಹೊರಗೆ ಉಳಿಯುವಂತಾಗಿದೆ. ಇನ್ನೊಂದೆಡೆ ಮನೆಯ ಸದಸ್ಯರು ಹೊರಗಿದ್ದಲ್ಲಿ, ಸಮೀಕ್ಷಕರ ಭೇಟಿ ವೇಳೆ ಅವರ ಸಂಪರ್ಕ ಸಾಧ್ಯವಾಗದಿದ್ದಲ್ಲಿ ಮನೆಯಲ್ಲಿ ಇದ್ದವರ ಮಾಹಿತಿಯನ್ನು ಮಾತ್ರ ಸಮೀಕ್ಷಕರು ಪಡೆದುಕೊಳ್ಳುತ್ತಿದ್ದಾರೆ.

'ದಸರಾ ರಜೆ ಕಾರಣ ಕುಟುಂಬದ ಸದಸ್ಯರು ಊರಿಗೆ ತೆರಳಿದ್ದರು. ಸಮೀಕ್ಷಕರು ಅವರ ಆಧಾರ್ ಸಂಖ್ಯೆ ಕೇಳಿದರು. ಆದರೆ, ಅವರ ಸಂಪರ್ಕ ಆ ಸಂದರ್ಭದಲ್ಲಿ ಸಾಧ್ಯವಾಗಲಿಲ್ಲ. ಈಗ ರಜೆ ಮುಗಿದ ಕಾರಣ ಕುಟುಂಬಸ್ಥರು ಮತ್ತೆ ಬೆಂಗಳೂರಿಗೆ ಬರುತ್ತಿದ್ದು, ಅವರನ್ನು ಸಮೀಕ್ಷೆಯಿಂದ ಹೊರಗಿಟ್ಟಂತಾಗಿದೆ' ಎಂದು ಆರ್.ಆರ್. ನಗರದ ನಿವಾಸಿ ಕಿರಣ್ ತಿಳಿಸಿದರು.

'ಮಾಹಿತಿ ನೀಡಲು ನಿರಾಕರಣೆ, ಅಗೌರವ'

'ಸಮೀಕ್ಷೆಗೆ ನಗರದ ಜನರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮನೆಯ ಬಾಗಿಲುಗಳನ್ನು ಎಷ್ಟೇ ಬಡಿದರೂ, ಬೆಲ್ ಮಾಡಿದರೂ ಕೆಲವರು ಬಾಗಿಲು ತೆರೆಯದೆ ಕಳಿಸುತ್ತಿದ್ದಾರೆ. ಇನ್ನೂ ಕೆಲವರು ಶಿಕ್ಷಕರು ಎಂದೂ ನೋಡದೆ ಅಗೌರವ ತೋರಿ, ಮಾಹಿತಿ ನೀಡಲು ನಿರಾಕರಿಸುತ್ತಿದ್ದಾರೆ. ಇದರಿಂದಾಗಿಯೂ ಕೆಲ ಸಮೀಕ್ಷಕರು ಪ್ರಶ್ನೆಗಳ ಸಂಖ್ಯೆ ಕಡಿಮೆ ಮಾಡುತ್ತಿದ್ದಾರೆ. ಸಮೀಕ್ಷೆಯ ಆಶಯ ಒಳ್ಳೆಯದಾಗಿದ್ದರೂ ಪೂರ್ವ ತಯಾರಿ ಮಾಡಿಕೊಳ್ಳದ ಕಾರಣ ನಾವು ಸಮಸ್ಯೆ ಎದುರಿಸಬೇಕಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಶಿಕ್ಷಕರು ಬೇಸರ ವ್ಯಕ್ತಪಡಿಸಿದರು.

ಸಮರ್ಪಕ ತರಬೇತಿ ಇಲ್ಲ: ಸಮೀಕ್ಷಕರಿಗೆ ನಡೆಸಿದ ಕಾರ್ಯಾಗಾರದಲ್ಲಿ ಸಮೀಕ್ಷೆ ಪ್ರಕ್ರಿಯೆ ಬಗ್ಗೆ ವಿಡಿಯೊ ಮೂಲಕ ತಿಳಿಸಲಾಗಿದೆ. ಆದರೆ, ಜನರ ಜತೆಗೆ ಹೇಗೆ ಸಂವಹನ ನಡೆಸಬೇಕು, ಹೇಗೆ ನಿರ್ವಹಿಸಬೇಕು ಎಂಬ ಬಗ್ಗೆ ತಿಳಿಸಿಲ್ಲ. ಇದರಿಂದಾಗಿ ಶಿಕ್ಷಕರಲ್ಲದ ಸಮೀಕ್ಷಕರು ಸಮಸ್ಯೆ ಎದುರಿಸುತ್ತಿದ್ದಾರೆ. ಸಮೀಕ್ಷೆ ನಡೆಸಿದ ಸ್ಥಳದ ವಿವರವನ್ನು ಆ್ಯಪ್ ಸ್ವಯಂ ಪ್ರೇರಿತವಾಗಿ ತೆಗೆದುಕೊಳ್ಳುವ ಕಾರಣ, ವಾರ್ಡ್ ಬದಲಾದಾಗ ಅದನ್ನು ಸರಿ ಮಾಡಲು ಸಮೀಕ್ಷಕರು ಸಮಸ್ಯೆ ಎದುರಿಸುತ್ತಿದ್ದಾರೆ.

30 ಮನೆಗಳ ಗುರಿ– ನಾಯಿಗಳ ಕಾಟದಿಂದ ಹೈರಾಣ

ಪ್ರತಿನಿತ್ಯ 30 ಮನೆಗಳ ಸಮೀಕ್ಷೆ ಪೂರ್ಣಗೊಳಿಸುವಂತೆ ಸಮೀಕ್ಷಕರಿಗೆ ಗುರಿ ನೀಡಲಾಗಿದೆ. ಆದರೆ, ಮಾಹಿತಿ ಕೊಡಲು ವಿಳಂಬ, ನಿರಾಕರಣೆ, ಬಾಗಿಲು ತೆರೆಯದಿರುವುದು ಸೇರಿ ವಿವಿಧ ಕಾರಣಗಳಿಂದ ಸಮೀಕ್ಷಕರಿಗೆ ಈ ಗುರಿ ಕಷ್ಟಸಾಧ್ಯವಾಗುತ್ತಿದೆ. ಕೆಲವರು ಒಟಿಪಿ ನೀಡಲು ನಿರಾಕರಿಸಿದರೆ, ಇನ್ನೂ ಕೆಲವರು ಏನೆಲ್ಲ ಪ್ರಶ್ನೆಗಳಿವೆ ಎಂದು ಪರಿಶೀಲಿಸುತ್ತಿರುವುದರಿಂದಲೂ ವಿಳಂಬವಾಗುತ್ತಿದೆ.

'ಒಂದು ಮನೆಯಲ್ಲಿ ನಾಲ್ವರು ಸದಸ್ಯರಿದ್ದರೆ ನೀಡಲಾದ ಪ್ರಶ್ನಾವಳಿ ಪ್ರಕಾರ ಎಲ್ಲ ಮಾಹಿತಿ ಪಡೆಯಬೇಕಾದರೆ ಕನಿಷ್ಠ ಒಂದು ಗಂಟೆ ಬೇಕಾಗುತ್ತದೆ. ಪ್ರಶ್ನಾವಳಿಯನ್ನು ಸರಳೀಕರಿಸಬೇಕಿತ್ತು. ವಾಸ್ತವ ಮಾಹಿತಿಯನ್ನು ಯಾರೂ ನೀಡುತ್ತಿಲ್ಲ. ಇದರಿಂದಾಗಿ ಕೆಲ ಪ್ರಶ್ನೆಗಳನ್ನು ಕೇಳಲು ನಮಗೂ ಸಾಧ್ಯವಾಗುತ್ತಿಲ್ಲ. ಆಧಾರ್ ಕಾರ್ಡ್ ಸಂಖ್ಯೆ, ಒಟಿಪಿ ನೀಡಲೂ ನಿರಾಕರಿಸುತ್ತಿದ್ದು, ನಾವು ಹೈರಾಣಾಗಿದ್ದೇವೆ. ಮಳೆ ಮತ್ತು ನಾಯಿ ಕಾಟದ ನಡುವೆ ಸಮೀಕ್ಷೆ ನಡೆಸುತ್ತಿದ್ದೇವೆ. ಸಮೀಕ್ಷೆಗೆ ಗೈರಾದರೆ ಅಧಿಕಾರಿಗಳು ಅಮಾನತು ಮಾಡುವುದಾಗಿ ಹೆದರಿಸುತ್ತಿದ್ದಾರೆ' ಎಂದು ಸಮೀಕ್ಷಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅನುಪಯುಕ್ತ ಗೃಹ ಸಾಮಗ್ರಿ: ವಿಲೇವಾರಿಗೆ ತಂತ್ರಾಂಶ

ಘನತ್ಯಾಜ್ಯ ನಿರ್ವಹಣಾ ರಾಯಭಾರಿಗಳ ಆಯ್ಕೆ: ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ

ಪ್ರಜಾವಾಣಿ ವಾರ್ತೆ

ಘನತ್ಯಾಜ್ಯ ನಿರ್ವಹಣಾ ರಾಯಭಾರಿಗಳನ್ನು ಕರೀಗೌಡ ಸನ್ಮಾನಿಸಿದರು

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಅನುಪಯುಕ್ತ ಗೃಹೋಪಯೋಗಿ ಸಾಮಗ್ರಿಗಳ ವಿಲೇವಾರಿಗಾಗಿ ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಅ.20ರಂದು ಬಿಡುಗಡೆ ಮಾಡಲಾಗುತ್ತದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ತಿಳಿಸಿದರು.

ನಗರದಲ್ಲಿ ವಿವಿಧ ಬಗೆಯ ಘನತ್ಯಾಜ್ಯ ಮರುಬಳಕೆದಾರರ ಜೊತೆ ಸಭೆ ನಡೆಸಿದ ನಂತರ ಅವರು ಮಾತನಾಡಿದರು.

ನಗರದಲ್ಲಿ ತ್ಯಾಜ್ಯ ವಿಲೇವಾರಿಯಲ್ಲಿ ಸಾಕಷ್ಟು ಮಾರ್ಪಾಡುಗಳನ್ನು ಮಾಡಲಾಗುತ್ತಿದೆ. ನಾಗರಿಕರ ಬೇಡಿಕೆಯ ಆಧಾರದ ಮೇಲೆ, ಅನುಪಯುಕ್ತ, ಗೃಹೋಪಯೋಗಿ ಸಾಮಗ್ರಿಗಳ ಸೂಕ್ತ ವಿಲೇವಾರಿಗಾಗಿ ತಂತ್ರಾಂಶವನ್ನು ಬಿಡುಗಡೆ ಮಾಡುತ್ತಿರುವುದಾಗಿ ಅವರು ತಿಳಿಸಿದರು.

ಸಂಗ್ರಹಿಸಲಾದ ಸೋಫಾ, ಹಾಸಿಗೆ, ಕಮೋಡ್ ಮುಂತಾದ ವಸ್ತುಗಳನ್ನು ಕೇಂದ್ರಿತವಾಗಿ ಶೇಖರಿಸಿ, ನಂತರ ಮರುಬಳಕೆದಾರರಿಗೆ ತಲುಪಿಸುವ ವ್ಯವಸ್ಥೆಯನ್ನು ರೂಪಿಸಬೇಕು. ಸಣ್ಣ ಪ್ರಮಾಣದ ತ್ಯಾಜ್ಯವನ್ನು ಸಾಗಣೆ ಮಾಡುವುದು ಕಷ್ಟ. ಸಾಗಣೆ ವೆಚ್ಚ ಅಧಿಕವಾಗಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಸಲಹೆಗಳು ಬಂದವು. ಅವುಗಳನ್ನು ಪರಿಗಣಿಸಿ ತಂತ್ರಾಂಶ ರೂಪಿಸಲಾಗುತ್ತಿದೆ ಎಂದರು.

ಘನತ್ಯಾಜ್ಯ ನಿರ್ವಹಣಾ ರಾಯಭಾರಿಗಳಾಗಿ ಆಯ್ಕೆಯಾದ ಶೋಭಾ ಭಟ್– ಆರ್.ಆರ್. ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಡಾ. ಶಾಂತಿ ತುಮ್ಮಲ– ಎಚ್.ಎಸ್.ಆರ್. ಸಿಟಿಜನ್ಸ್ ಫೋರಂ, ಅನಿರುದ್ಧ ದತ್ತ– ಲೆಟ್ಸ್ ಬಿ ದ ಚೇಂಜ್, ನಳಿನಿ ಶೇಖರ್– ಹಸಿರು ದಳ, ಅಮಿತ್ ಅಮರನಾಥ– ಯುವ ಫಾರ್ ಪರಿವರ್ತನ, ಸುನಿತ್– ಸಾಹಸ್, ಪದ್ಮಶ್ರೀ ಬಾಲರಾಮ್– ಕೋರಮಂಗಲ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಉಪಸ್ಥಿತರಿದ್ದರು.

ರಸ್ತೆ ಗುಂಡಿ: ಅಧಿಕಾರಿಗಳಿಗೆ ತರಾಟೆ

ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ದ್ವಿಚಕ್ರದಲ್ಲಿ ಸಂಚರಿಸಿ, ರಸ್ತೆಗಳಲ್ಲಿ ಗುಂಡಿ ಗಮನಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಂಡ ರಸ್ತೆಗಳಲ್ಲಿ ಉಂಟಾಗಿರುವ ಗುಂಡಿಗಳನ್ನು ಸಂಬಂಧಿಸಿದ ಗುತ್ತಿಗೆದಾರರಿಂದಲೇ ತುರ್ತಾಗಿ ಗುಂಡಿ ಮುಚ್ಚುವ ಕಾಮಗಾರಿ ಕೈಗೊಳ್ಳಲು ಸೂಚಿಸಿದರು.

ರೇಸ್ ಕೋರ್ಸ್ ರಸ್ತೆ, ಚಾಲುಕ್ಯ ವೃತ್ತ, ವಸಂತ ನಗರ ಸುತ್ತಮುತ್ತಲಿನ ರಸ್ತೆ, ಅರಮನೆ ರಸ್ತೆ, ಕಬ್ಬನ್ ರಸ್ತೆ, ವಿಧಾನಸೌಧ ರಸ್ತೆ, ರಾಜಭವನ ರಸ್ತೆ, ಕ್ವೀನ್ಸ್ ರಸ್ತೆ, ಅಲಿ ಆಸ್ಕರ್ ರಸ್ತೆ, ಶಿವಾಜಿನಗರದ ವಿವಿಧ ರಸ್ತೆಗಳಲ್ಲಿ ಆಯುಕ್ತರು ಸಂಚರಿಸಿದರು.

ಸಚಿವರಾದ ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಖಾನ್, ಶಾಸಕರಾದ ಎನ್.ಎ. ಹ್ಯಾರಿಸ್, ರಿಜ್ವಾನ್ ಅರ್ಷದ್ ಅವರ ಕೇಂದ್ರ ನಗರ ಪಾಲಿಕೆ ಆಯುಕ್ತ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ರಸ್ತೆ ಅಭಿವೃದ್ಧಿ, ಬ್ಲ್ಯಾಕ್ ಸ್ಪಾಟ್ ಮುಕ್ತ, ರಸ್ತೆ ಅಗೆತ ಸೇರಿದಂತೆ ಹಲವು ಕಾಮಗಾರಿಗಳ ಬಗ್ಗೆ ಶೀಘ್ರ ಕ್ರಮಕೈಗೊಳ್ಳಲು ಸೂಚಿಸಿದರು.

ಸುದ್ದಿ 2 ನಿಮಿಷ

'ದೇವೇಗೌಡ ಆರೋಗ್ಯವಾಗಿದ್ದಾರೆ'

ಬೆಂಗಳೂರು: 'ಎಚ್.ಡಿ.ದೇವೇಗೌಡ ಅವರು ಆರೋಗ್ಯವಾಗಿದ್ದು, ಯಾರೂ ಆತಂಕಪಡುವ ಅಗತ್ಯವಿಲ್ಲ. ಇನ್ನು ಮೂರ್ನಾಲ್ಕು ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾಗುತ್ತಾರೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದ ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ತಮ್ಮ ತಂದೆಯವರನ್ನು ಗುರುವಾರ ರಾತ್ರಿ ಭೇಟಿ ಮಾಡಿದ ನಂತರ ಕುಮಾರಸ್ವಾಮಿ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಆತಂಕಪಡಬೇಡಿ. ತಂದೆಯವರಿಗೆ ಆರೋಗ್ಯದ ಸಮಸ್ಯೆ ಇಲ್ಲ. ಮೂರು ದಿನಗಳಿಂದ ವೈದ್ಯರು ಚಿಕಿತ್ಸೆ ನೀಡಿದ್ದಾರೆ. ಅವರು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

12 ದೇಶಗಳ ರಾಯಭಾರ ಕಚೇರಿ ಅಧಿಕಾರಿಗಳ ಸಭೆ

ಬೆಂಗಳೂರು: ವಿವಿಧ ದೇಶಗಳ ರಾಯಭಾರ ಕಚೇರಿ ಅಧಿಕಾರಿಗಳ ಜತೆಗೆ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಗುರುವಾರ ಸಭೆ ನಡೆಸಿದರು.

ಸಭೆಯಲ್ಲಿ ಜರ್ಮನಿ, ಆಸ್ಟ್ರೇಲಿಯಾ, ಫ್ರಾನ್ಸ್, ಜಪಾನ್, ಇಸ್ರೇಲ್, ಅಮೆರಿಕ ಸೇರಿ 12 ದೇಶಗಳ ರಾಯಭಾರ ಕಚೇರಿ ಅಧಿಕಾರಿಗಳು ಭಾಗಿಯಾಗಿದ್ದರು. ರಾಯಭಾರ ಕಚೇರಿಗಳಿಗೆ ಬಾಂಬ್ ಬೆದರಿಕೆ, ಆ ಕಚೇರಿಗಳ ಅಧಿಕಾರಿ, ಸಿಬ್ಬಂದಿ ಹಾಗೂ ಪ್ರಜೆಗಳ ಭದ್ರತೆ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ.

ವೀಸಾ ಪಡೆದು ವಿದೇಶಿ ಪ್ರಜೆಗಳು ನಗರಕ್ಕೆ ಬರುತ್ತಿದ್ದಾರೆ. ಅವರು ಎಲ್ಲಿ ವಾಸವಾಗಿದ್ದಾರೆ? ಅವರ ಕೆಲಸಗಳೇನು? ಇತರೆ ಮಾಹಿತಿಗಳು ಸಿಗುತ್ತಿಲ್ಲ. ತಮ್ಮ ದೇಶಗಳಿಂದ ಬೆಂಗಳೂರಿಗೆ ಬರುವ ವ್ಯಕ್ತಿಗಳು ಮತ್ತು ರಾಯಭಾರ ಕಚೇರಿಯ ಅಧಿಕಾರಿ, ಸಿಬ್ಬಂದಿ ವಿವರ, ಕಚೇರಿ ವಿಳಾಸ, ಸಂಪರ್ಕ ಸಂಖ್ಯೆ ಹಾಗೂ ಇತರೆ ಮಾಹಿತಿಯನ್ನು ನಗರದ ಗುಪ್ತಚರ ವಿಭಾಗ, ಕಮಾಂಡ್ ಸೆಂಟರ್ ಡಿಸಿಪಿಗಳಿಗೆ ನೀಡಬೇಕು ಎಂದು ಸೀಮಾಂತ್ ಕುಮಾರ್ ಸಿಂಗ್ ಸೂಚನೆ ನೀಡಿದರು.

ಡ್ರಗ್ಸ್ ಮಾರಾಟದಲ್ಲಿ ವಿದೇಶಿ ಪ್ರಜೆಗಳು ಪಾಲ್ಗೊಳ್ಳುತ್ತಿದ್ದಾರೆ. ವಿದ್ಯಾರ್ಥಿ ವೀಸಾ, ವ್ಯಾಪಾರ- ವ್ಯವಹಾರ, ಮೆಡಿಕಲ್, ಪ್ರವಾಸಿ ವೀಸಾದೊಂದಿಗೆ ನಗರಕ್ಕೆ ಬಂದು ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗುತ್ತಿದ್ದಾರೆ. ರಾಜ್ಯದ ಯಾವುದೇ ಜಿಲ್ಲೆಯಲ್ಲಿ ತಮ್ಮ ದೇಶದ ಪ್ರಜೆಗಳು ವಾಸವಿದ್ದರೂ ಅವರ ಮಾಹಿತಿಯನ್ನು ನೀಡಬೇಕು. ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗೆ ಕಡಿವಾಣ ಹಾಕಲು ಹಾಗೂ ವಿದೇಶಿ ಪ್ರಜೆಗಳಿಗೆ ಸೂಕ್ತ ಭದ್ರತೆ ಒದಗಿಸಲು ಪೊಲೀಸರಿಗೆ ಅನುಕೂಲವಾಗುತ್ತದೆ ಎಂದು ಕಮಿಷನರ್ ಹೇಳಿದರು.

ಇತ್ತೀಚೆಗೆ ಆಸ್ಟ್ರೇಲಿಯಾದ ರಾಯಭಾರ ಕಚೇರಿಗೆ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು.

ನಗರದ ಕೆಲವೆಡೆ ಭಾರಿ ಮಳೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಗುರುವಾರ ಸಂಜೆ ಭಾರಿ ಮಳೆಯಾಯಿತು. ಗುರುವಾರ ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣವಿದ್ದು, ಆಗಾಗ ತುಂತುರು ಮಳೆಯಾಗುತ್ತಿತ್ತು. ಸಂಜೆ ವೇಳೆಗೆ ಗುಡುಗು ಸಹಿತ ಬಿರುಸಿನ ಮಳೆಯಾಯಿತು.

ರೂಪೇನ ಅಗ್ರಹಾರದಿಂದ ಬೊಮ್ಮನ ಹಳ್ಳಿ, ಅಯ್ಯಪ್ಪ ಅಂಡರ್‌ಪಾಸ್‌ನಿಂದ ಮಡಿವಾಳ, ದೊಮ್ಮಲೂರು ಸೇತುವೆ, ಮಡಿವಾಳ ಪೊಲೀಸ್ ಠಾಣೆಯಿಂದ ಸಿಲ್ಕ್ ಬೋರ್ಡ್, ಇಬ್ಲೂರಿನಿಂದ ಅಗರ, ರೇನ್‌ಬೊ ಜಂಕ್ಷನ್‌ನಿಂದ ಕಾರ್ತಿಕ್ ನಗರ, ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆಯಿಂದ ನಗರದ ಕಡೆಗಿನ ರಸ್ತೆಗಳಲ್ಲಿ ನೀರು ನಿಂತು ಸಂಚಾರ ಅಸ್ತವ್ಯಸ್ತಗೊಂಡಿತ್ತು. ಬೊಮ್ಮನಹಳ್ಳಿಯಲ್ಲಿ 3.5 ಸೆಂ.ಮೀ, ಎಚ್‌ಎಸ್‌ಆರ್ ಲೇಔಟ್, ಗರುಡಾಚಾರ್ ಪಾಳ್ಯದಲ್ಲಿ 3 ಸೆಂ.ಮೀ, ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ 2.5 ಸೆಂ.ಮೀ, ಸಿಂಗಸಂದ್ರ, ಕಾಡುಗೋಡಿ, ಕೆ.ಆರ್. ಪುರದಲ್ಲಿ 2 ಸೆಂ.ಮೀ, ಹೂಡಿ, ದೊಡ್ಡನೆಕ್ಕುಂದಿ, ಕೋರಮಂಗಲ, ಅರೆಕೆರೆಯಲ್ಲಿ 1.5 ಸೆಂ.ಮೀ ಮಳೆಯಾಯಿತು.

ಎಂ.ಜಿ.ರಸ್ತೆಯ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ಆಯೋಜನೆ

ಇಂದಿನಿಂದ 'ಇಂಡಿಯನ್ ಆರ್ಟಿಸನ್ಸ್ ಹಾಟ್' ಪ್ರದರ್ಶನ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ | DH Presents ದಿ ಇಂಡಿಯನ್ ಆರ್ಟಿಸನ್ಸ್ ಹಾಟ್ THE INDIAN ARTISANS HAAT

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ಎಂ.ಜಿ. ರಸ್ತೆಯ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ 'ದಿ ಇಂಡಿಯನ್ ಆರ್ಟಿಸನ್ಸ್ ಹಾಟ್' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಶುಕ್ರವಾರ ಚಾಲನೆ ದೊರೆಯಲಿದೆ.

ಇದೇ 19ರವರೆಗೆ ನಡೆಯುವ ಈ ಪ್ರದರ್ಶನಕ್ಕೆ, ಶುಕ್ರವಾರ ಸಂಜೆ 5.30ಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಲಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎನ್.ಎ. ಹ್ಯಾರಿಸ್, ನಟಿ ಪೂಜಾ ಗಾಂಧಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ದೀಪಾವಳಿ ಪ್ರಯುಕ್ತ ಈ ಪ್ರದರ್ಶನವನ್ನು ಆಯೋಜಿಸಲಾಗಿದೆ. ಕೈಮಗ್ಗ, ಹಸ್ತಶಿಲ್ಪ ಮತ್ತು ಪರಂಪರಾತ್ಮಕ ಕಲೆಗಳನ್ನು ಈ ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ದೇಶದ ವಿವಿಧ ಭಾಗಗಳ ಕಲಾವಿದರು ಈ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದು, ತಾವು ತಯಾರಿಸಿದ ಕಲಾತ್ಮಕ ಉತ್ಪನ್ನಗಳನ್ನು ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ, ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲಿದ್ದಾರೆ. ದೇಶೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವುದು ಹಾಗೂ ಹೊಸ ಪೀಳಿಗೆಗೆ ಸಾಂಪ್ರದಾಯಿಕ ಕಲಾ ಪ್ರಕಾರಗಳನ್ನು ಪರಿಚಯಿಸುವುದು ಈ ಪ್ರದರ್ಶನದ ಆಶಯವಾಗಿದೆ.

ಪ್ರಮುಖವಾಗಿ ಚನ್ನಪಟ್ಟಣದ ಆಟಿಕೆಗಳು, ಉತ್ತರ ಪ್ರದೇಶದ ಖುರ್ಜಾದ ಮಣ್ಣಿನ ಪಾತ್ರೆ ಹಾಗೂ ಅಲಂಕಾರಿಕ ವಸ್ತುಗಳು, ಒಡಿಶಾದ ಡೋಕ್ರಾ ಕಲೆ ಹಾಗೂ ಮರದ ಆಟಿಕೆಗಳು, ವರ್ಣಚಿತ್ರಗಳು, ಆಭರಣಗಳು, ಮನೆ ಅಲಂಕಾರಿಕ ವಸ್ತುಗಳು ಸೇರಿದಂತೆ ಹಲವು ವೈವಿಧ್ಯ ಸಾಂಪ್ರದಾಯಿಕ ಉತ್ಪನ್ನಗಳು ಒಂದೇ ಸೂರಿನಡಿ ಲಭ್ಯವಾಗಲಿವೆ.

ತಮಿಳುನಾಡು, ಮಹಾರಾಷ್ಟ್ರ, ಮಣಿಪುರ, ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಸೇರಿ ದೇಶದ ವಿವಿಧ ರಾಜ್ಯಗಳಿಂದ ಕಲಾವಿದರು ತಾವು ತಯಾರಿಸಿದ ಉತ್ಪನ್ನಗಳನ್ನು ತರಲಿದ್ದಾರೆ. ವಿವಿಧ ಬಗೆಯ ಸೀರೆಗಳು, ಪಿಠೋಪಕರಣ, ಬ್ಯಾಗ್‌ಗಳು, ಖಾದಿ ಬಟ್ಟೆಗಳೂ ದೊರೆಯಲಿವೆ.

10 ದಿನಗಳ ಈ ಪ್ರದರ್ಶನದಲ್ಲಿ ವಾರಾಂತ್ಯ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಇಡೀ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್ ಅನ್ನು ದೀಪಾವಳಿ ವಿಷಯಾಧರಿಸಿ ಅಲಂಕಾರ ಮಾಡಲಾಗುತ್ತದೆ.

ಅಂಗವಿಕಲರ ಅನುದಾನವನ್ನು ಸಮರ್ಪಕವಾಗಿ ಬಳಸಲು ಆಗ್ರಹ

ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಅಂಗವಿಕಲರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಸದಸ್ಯರು ಕನಿಷ್ಠ 10000 ಪಿಂಚಣಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಅಂಗವಿಕಲರಿಗೆ ಕೆಲಸ ಇಲ್ಲವೇ ಜೀವನಾವಶ್ಯಕ ಭತ್ಯೆ ಕೊಡಬೇಕು' ಎನ್ನುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಅಂಗವಿಕಲರು ಪ್ರತಿಭಟನೆ ನಡೆಸಿದರು.

'ಎಲ್ಲ ರೀತಿಯ ಅಂಗವೈಕಲ್ಯ ಇರುವ ಆರೈಕೆದಾರರಿಗೆ ರಾಜ್ಯ ಸರ್ಕಾರವು ಮಾಸಿಕ ₹ 1000 ಪ್ರೋತ್ಸಾಹಧನ ನೀಡಿರುವುದು ಸ್ವಾಗತಾರ್ಹ. ಇದನ್ನು ₹3000ಕ್ಕೆ ಏರಿಸಬೇಕು. ಮಾಸಿಕ ಪಿಂಚಣಿ ಈಗಲೂ ₹1400 ಇದೆ. ಇದರಲ್ಲಿ ಕೇಂದ್ರದ ಪಾಲು ಬರೀ ₹300 ಮಾತ್ರ. 15 ವರ್ಷದಿಂದ ಪಿಂಚಣಿ ಏರಿಕೆಯಾಗದೇ ಅಂಗವಿಕಲರಿಗೆ ತೊಂದರೆಯಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಆಂಧ್ರದಲ್ಲಿ ಮಾಸಿಕ ₹ 6000, ತೆಲಂಗಾಣದಲ್ಲಿ ₹4000, ದೆಹಲಿ, ಹರಿಯಾಣದಲ್ಲಿ ₹3000 ಪಿಂಚಣಿ ದೊರೆಯುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರ ತಲಾ ₹5000 ನೀಡಿ ಮಾಸಿಕ ಪಿಂಚಣಿಯನ್ನು ₹10 ಸಾವಿರ ಏರಿಕೆ ಮಾಡಬೇಕು. ರಾಜಸ್ಥಾನದ ಮಾದರಿಯಲ್ಲಿ ವಾರ್ಷಿಕ ಶೇ 15ರಷ್ಟು ಹೆಚ್ಚಳದ ಪಿಂಚಣಿ ಹಕ್ಕು ಕಾಯಿದೆ ಜಾರಿಗೆ ತರಬೇಕು' ಎಂದು ಆಗ್ರಹಿಸಿದರು. ಪಂಚಾಯಿತಿಗಳಲ್ಲಿ ಮೀಸಲಿಟ್ಟಿರುವ ಅಂಗವಿಕಲರ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಬೇಕು. ಬಸ್ ಪಾಸ್ ರಾಜ್ಯದಾದ್ಯಂತ ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

ಅಂಗವಿಕಲರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕ ಟಿ.ರಾಘವೇಂದ್ರ ಹಾಗೂ ರಾಜ್ಯ ಅಂಗವಿಕಲರ ಹಕ್ಕುಗಳ ಸಮಿತಿಯ ಆಯುಕ್ತ ದಾಸ್ ಸೂರ್ಯವಂಶಿ ಅವರು ಪ್ರತಿಭಟನಕಾರರ ಮನವಿ ಸ್ವೀಕರಿಸಿ ಸರ್ಕಾರದ ಗಮನಕ್ಕೆ ತರುವ ಭರವಸೆ ನೀಡಿದರು.

ಇದಕ್ಕೆ ಒಪ್ಪದ ಒಕ್ಕೂಟದ ಪ್ರತಿನಿಧಿಗಳು, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಆಗಮಿಸುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು. ಅನಾರೋಗ್ಯದಿಂದ ಬರಲು ಆಗುತ್ತಿಲ್ಲ. ಭರವಸೆ ಈಡೇರಿಸಲು ಕ್ರಮ ವಹಿಸುವುದಾಗಿ ಸಚಿವರು ದೂರವಾಣಿ ಮೂಲಕ ತಿಳಿಸಿದರು. ನಂತರ ಪ್ರತಿಭಟನೆ ಕೈ ಬಿಡಲಾಯಿತು.

ಒಕ್ಕೂಟದ ಅಧ್ಯಕ್ಷ ಜಿ.ಎನ್. ನಾಗರಾಜ್, ಪ್ರಧಾನ ಕಾರ್ಯದರ್ಶಿ ರಂಗಪ್ಪ ದಾಸರ್, ಕಾರ್ಯದರ್ಶಿ ಯಶಸ್ವಿ, ವೆಂಕಟೇಶ್, ಅಪೂರ್ವ ರಾಜನ್ ಹಾಜರಿದ್ದರು.

ಕಂಡ ಕಂಡಲ್ಲಿ ಕಸ ಚೆಲ್ಲಾಪಿಲ್ಲಿ

ಬೆಂಗಳೂರಿನ ಮೈಸೂರು ರಸ್ತೆಯ ಹಳೆ ಗುಡ್ಡದಹಳ್ಳಿಯ 6ನೇ ಕ್ರಾಸ್‌ನಲ್ಲಿ ವಿಲೇಯಾಗದೆ ಬಿದ್ದಿರುವ ಕಸದ ರಾಶಿ

ಕಸ್ತೂರ ಬಾ ನಗರದ ಅಶ್ವತ್ಥ ಕಟ್ಟೆ ರಸ್ತೆಯಲ್ಲಿ ವಿಲೇವಾರಿಯಾಗದ ಕಸದ ರಾಶಿ

ರಸ್ತೆಯಲ್ಲಿ ಕಸ ಕಂಡರೆ ಫೋಟೊ ಕಳುಹಿಸಿ

ನಗರದ ರಸ್ತೆಗಳ ಬದಿಯಲ್ಲಿ, ಪಾದಚಾರಿ ಮಾರ್ಗದಲ್ಲಿ ತ್ಯಾಜ್ಯದ ರಾಶಿ ಕಂಡು ಬಂದರೆ ಅವುಗಳ ಫೋಟೊ ತೆಗೆದು 'ಪ್ರಜಾವಾಣಿ'ಗೆ ಕಳುಹಿಸಿ..

ವಾಟ್ಸ್‌ಆ್ಯಪ್ **9606038256**

ಬೆಂಗಳೂರಿನ ಶ್ರೀನಗರದ ಗುತ್ತೆ ಪ್ರದೇಶದ 6ನೇ ಮುಖ್ಯ ರಸ್ತೆಯಲ್ಲಿ ವಿಲೇವಾರಿಯಾಗದ ಕಸದ ರಾಶಿ. ಪ್ರಜಾವಾಣಿ ಚಿತ್ರಗಳು

ಶುಕ್ರವಾರ, ಅಕ್ಟೋಬರ್ 10, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 280 | ಪುಟ 20
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಯಶಸ್ವಿನಿ ಆಯ್ಕೆ
ಭುವನೇಶ್ವರದಲ್ಲಿ ನಡೆಯಲಿರುವ ಐಟಿಟಿಎಫ್–ಎಟಿಟಿಯು ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವ ಭಾರತ ಮಹಿಳಾ ತಂಡಕ್ಕೆ ಕರ್ನಾಟಕದ ಯಶಸ್ವಿನಿ ಘೋರ್ಪಡೆ ಆಯ್ಕೆಯಾಗಿದ್ದಾರೆ

ವರ್ಷಧಾರೆ
ಬೆಂಗಳೂರಿನಲ್ಲಿ ಗುರುವಾರ ಸುರಿದ ಮಳೆ ಸಂದರ್ಭದಲ್ಲಿ ಮಹಿಳೆಯೊಬ್ಬರು ಮಗುವಿನೊಂದಿಗೆ ಕೊಡೆ ಹಿಡಿದು ಸಾಗಿದರು

ಸೆನ್ಸೆಕ್ಸ್ 82,172 | ನಿಫ್ಟಿ 25,181 | $/₹ 88.79 | ಚಿನ್ನ (Std. 10g) ₹1,27,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,63,000 (ಬೆಂಗಳೂರು)

ಹಂಗರಿಯ ಲೇಖಕ ಲಾಸ್ಲೊಗೆ ನೊಬೆಲ್ ಸಾಹಿತ್ಯ ಪುರಸ್ಕಾರ

ಸ್ಟಾಕ್‌ಹೋಮ್ (ಎಪಿ): ಹಂಗರಿಯ ಲೇಖಕ ಲಾಸ್ಲೊ ಕ್ರಾಸ್ನಾಹೊರ್ಕೈ ಅವರಿಗೆ ಈ ಸಾಲಿನ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ದೊರೆತಿದೆ.

ಅವರು ಸರಳ ವಾಕ್ಯಗಳ ಮೂಲಕ, ತಮಾಷೆಯ ವಿವರಣೆಯೊಂದಿಗೆ ತತ್ತ್ವಜ್ಞಾನವನ್ನು ಹೇಳುವ ವಿಶಿಷ್ಟ ಕಾದಂಬರಿ ರಚನೆಯ ಮೂಲಕ ಗಮನಸೆಳೆದಿದ್ದಾರೆ. ಅರ್ನೆಸ್ಟ್ ಹೆಮ್ಮಿಂಗ್‌ವೆ, ಆಲ್ಬರ್ಟ್ ಕಮು ಹಾಗೂ ಟೋನಿ ಮಾರಿಸನ್ ಅವರ ಸಾಹಿತ್ಯಿಕ ಶ್ರೇಷ್ಠ ಕೃತಿಗಳ ಹೆಜ್ಜೆ ಗುರುತುಗಳನ್ನು ಅನುಕರಿಸುವ ಮೂಲಕ ಪ್ರತಿಷ್ಠಿತ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ವಿವರ 7

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸಂಪುಟ ಪುನರ್‌ರಚನೆ ಸಂಚಲನ

ಕಾಂಗ್ರೆಸ್ ಶಾಸಕರಲ್ಲಿ ಗರಿಗೆದರಿದ ಆಕಾಂಕ್ಷೆ

● 'ರಹಸ್ಯ' ಸಭೆ ಮೊರೆ ಹೋದ ಸಚಿವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಎರಡೂವರೆ ವರ್ಷ ಪೂರೈಸುತ್ತಿರುವ ಬೆನ್ನಲ್ಲೇ, ಕಾಂಗ್ರೆಸ್ ಪಾಳಯದಲ್ಲಿ ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ಸದ್ದು ಜೋರಾಗಲಾರಂಭಿಸಿದೆ.

ಹೈಕಮಾಂಡ್ ಎಚ್ಚರಿಕೆಗೂ ಕಿವಿಗೊಡದೆ ಸಚಿವರು, ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರ ಬಹಿರಂಗ ಹೇಳಿಕೆ ನೀಡಲು ಮತ್ತೆ ಶುರು ಮಾಡಿದ್ದಾರೆ.

ಈ ಬೆಳವಣಿಗೆಗಳ ನಡುವೆ, ಮುಖ್ಯಮಂತ್ರಿಯ ಆಪ್ತ ವಲಯದಲ್ಲಿರುವ ಸಚಿವರಾದ ಸತೀಶ ಜಾರಕಿಹೊಳಿ, ಎಚ್‌.ಸಿ. ಮಹದೇವಪ್ಪ ಮತ್ತು ಜಿ. ಪರಮೇಶ್ವರ ಅವರು ಕುಮಾರಕೃಪ ಅತಿಥಿಗೃಹದ ಸಮೀಪವಿರುವ ಅಪಾರ್ಟ್‌ಮೆಂಟ್ ಒಂದರಲ್ಲಿ ಗುರುವಾರ ಬೆಳಿಗ್ಗೆ ರಹಸ್ಯ ಸಭೆ ನಡೆಸಿದ್ದಾರೆ. ಸಚಿವರ ಈ ನಡೆ ನಾನಾ ರಾಜಕೀಯ ಚರ್ಚೆಗಳಿಗೆ ಎಡೆ ಮಾಡಿಕೊಟ್ಟಿದೆ.

ನಾಯಕತ್ವ ಬದಲಾವಣೆ ಮತ್ತು ಸಂಪುಟ ಪುನರ್‌ರಚನೆಯ ಮಾತುಗಳು ಮುನ್ನೆಲೆಗೆ ಬಂದಿರುವ ಹೊತ್ತಿನಲ್ಲಿ ಈ ಮೂವರು ಸಭೆ ನಡೆಸಿರುವುದು ಹೆಚ್ಚು ಮಹತ್ವ ಪಡೆದುಕೊಂಡಿದೆ. ನಾಯಕತ್ವ ಬದಲಾವಣೆಯ ವಿಚಾರದಲ್ಲಿನ ಗೊಂದಲವನ್ನು ಹೈಕಮಾಂಡ್ ಬಗೆಹರಿಸಬೇಕು. ಪಕ್ಷದಲ್ಲಿರುವ 'ಒಬ್ಬರಿಗೆ ಒಂದೇ ಹುದ್ದೆ' ನಿಯಮ ಪಾಲನೆ ಮಾಡಬೇಕು. ಸಂಪುಟ ಪುನರ್‌ರಚನೆಯಾದರೆ ಕೆ.ಎನ್. ರಾಜಣ್ಣ ಅವರಿಗೆ ಮತ್ತೆ ಅವಕಾಶ ನೀಡಬೇಕು ಮತ್ತಿತರ ವಿಷಯಗಳ ಬಗ್ಗೆ ಈ ಮೂವರೂ ವಿಚಾರ ವಿನಿಮಯ ನಡೆಸಿದರು ಎಂದು ಗೊತ್ತಾಗಿದೆ.

ನಾಯಕತ್ವ ಗೊಂದಲವನ್ನು ಹೈಕಮಾಂಡ್ ಬಗೆಹರಿಸಬೇಕೆಂದು ಬಹಿರಂಗವಾಗಿಯೇ ಸತೀಶ ಜಾರಕಿಹೊಳಿ ಮತ್ತು ಜಿ. ಪರಮೇಶ್ವರ ಇತ್ತೀಚೆಗಷ್ಟೆ ಒತ್ತಾಯಿಸಿದ್ದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ನವೆಂಬರ್‌ಗೆ ಎರಡೂವರೆ ವರ್ಷ ಪೂರ್ಣಗೊಳಿಸಲಿದ್ದಾರೆ. 'ಸರ್ಕಾರ ರಚನೆಯ ಸಂದರ್ಭದಲ್ಲಿ 'ಅಧಿಕಾರ ಹಂಚಿಕೆ' ಸೂತ್ರ ನಡೆದಿದೆ ಅದು ಅನುಷ್ಠಾನಗೊಂಡರೆ, ಸಿದ್ದರಾಮಯ್ಯ ಬಿಟ್ಟುಕೊಡಬೇಕಾಗುತ್ತದೆ' ಎಂದು ಕಾಂಗ್ರೆಸ್ ಒಂದು ಬಣ ಪದೇ ಪದೇ ಪ್ರತಿಪಾದಿಸುತ್ತಾ ಬಂದಿದೆ.

7

> **ಸಂಪುಟ ಪುನರ್ ರಚನೆಗೂ ಸಚಿವರಿಗೆ ಔತಣ ಕೂಟ ಆಯೋಜಿಸಿರುವುದಕ್ಕೂ ಯಾವುದೇ ಸಂಬಂಧವಿಲ್ಲ. ಊಟ ಕೊಟ್ಟು ಬಹಳ ದಿನ ಆಗಿದೆ. ಹೀಗಾಗಿ ಆಹ್ವಾನಿಸಿದ್ದೇನೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಮಾಹಿತಿ ಇಲ್ಲ'

'ಸಚಿವ ಸಂಪುಟದಲ್ಲಿ ಬದಲಾವಣೆ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ. ಇದು ಪಕ್ಷ ಮತ್ತು ಮುಖ್ಯಮಂತ್ರಿಯವರಿಗೆ ಬಿಟ್ಟ ವಿಚಾರ. ಅವರು ಈ ಬಗ್ಗೆ ತೀರ್ಮಾನ ಮಾಡುತ್ತಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

7

ಸದ್ದಿನ ಹಿಂದಿನ ಲೆಕ್ಕಾಚಾರ

ಕೆಲವು ತಿಂಗಳಿಗಳಿಂದ ತಣ್ಣಗಾಗಿದ್ದ ಸಂಪುಟ ಪುನರ್ ರಚನೆ ವಿಷಯ ಮತ್ತೆ ಮುನ್ನೆಲೆಗೆ ಬಂದಿರುವ ಹಿಂದೆ ಹಲವು ಲೆಕ್ಕಾಚಾರಗಳಿವೆ ಎಂಬ ಚರ್ಚೆ ಕಾಂಗ್ರೆಸ್ ಪಡಸಾಲೆಯಲ್ಲಿ ಶುರುವಾಗಿದೆ.

ವಾಲ್ಮೀಕಿ ಜಯಂತಿಯ ದಿನ ಮಾತನಾಡಿದ್ದ ಸಿದ್ದರಾಮಯ್ಯ, 'ವಾಲ್ಮೀಕಿ ಸಮುದಾಯಕ್ಕೆ ಸಚಿವ ಸ್ಥಾನ ಸ್ಥಾನ ನೀಡುವ ಬಗ್ಗೆ ಸಂಪುಟ ವಿಸ್ತರಣೆ ವೇಳೆ ನೋಡೋಣ' ಎಂದಿದ್ದರು. 'ನವೆಂಬರ್ ಕ್ರಾಂತಿಯೂ ಇಲ್ಲ ಏನೂ ಇಲ್ಲ' ಎಂದೂ ಅದೇ ಆಸುಪಾಸು ಹೇಳಿಕೆ ನೀಡಿದ್ದರು.

ಹಾಗಿದ್ದರೂ ದಿಢೀರನೇ ಸಂಪುಟ ಪುನರ್ ರಚನೆಯ ಸಂಗತಿ ಚರ್ಚೆಯ ಕೇಂದ್ರಕ್ಕೆ ಬಂದಿದ್ದು ಏಕೆ ಎಂಬ ಪ್ರಶ್ನೆಯ ಸುತ್ತ ಚರ್ಚೆಗಳು ಆರಂಭವಾಗಿವೆ. ತಮ್ಮ ಬೆನ್ನಿಗೆ ನಿಂತಿರುವ ಸಚಿವರು ಹಾಗೂ ಶಾಸಕರು ದೂರ ಸರಿಯದಂತೆ, ಅವರನ್ನು ಹಿಡಿದಿಟ್ಟುಕೊಳ್ಳುವ ಜಾಣ ನಡೆಯನ್ನು ಸಿದ್ದರಾಮಯ್ಯ ಅನುಸರಿಸುತ್ತಿದ್ದಾರೆ ಎಂಬ ವಿಶ್ಲೇಷಣೆ ಕಾಂಗ್ರೆಸ್ ಪಡಸಾಲೆಯಲ್ಲಿ ನಡೆಯುತ್ತಿದೆ.

ಬಿಹಾರ ಚುನಾವಣೆ ಬಳಿಕ ಏನೋ ಆಗಲಿದೆ ಎಂಬ ವದಂತಿಗಳಿಗೆ ತೆರೆ ಎಳೆದು, ತಮ್ಮ ಕೋಟೆಯನ್ನು ಮತ್ತಷ್ಟು ಭದ್ರಪಡಿಸಿಕೊಳ್ಳುವ ಯತ್ನವೂ ಇದರ ಹಿಂದೆ ಇದೆ ಎಂಬ ಅಭಿಪ್ರಾಯವೂ ಕಾಂಗ್ರೆಸ್‌ನಲ್ಲಿದೆ.

ಔತಣಕೂಟಕ್ಕೆ ಸಿ.ಎಂ ಆಹ್ವಾನ

'ಇದೇ 13ರಂದು ಔತಣಕೂಟ ಆಯೋಜಿಸಿದ್ದು, ಅದಕ್ಕೆ ಎಲ್ಲರೂ ಬರಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟದ ಸಹೋದ್ಯೋಗಿಗಳಿಗೆ ಆಹ್ವಾನ ನೀಡಿದರು.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, 'ಯಾವ ಕಾರಣಕ್ಕೆ ಔತಣ ಕೂಟ' ಎಂದು ಕೆಲವು ಸಚಿವರು ಪ್ರಶ್ನಿಸಿದರು. 'ಇತ್ತೀಚೆಗೆ ಗುತ್ತಿಗೆದಾರರ ಸಂಘದವರು ಕಮಿಷನ್ ವಿಚಾರವಾಗಿ ಕೆಲವು ಇಲಾಖೆಗಳ ಬಗ್ಗೆ ಆರೋಪ ಮಾಡಿದ್ದಾರೆ. ಅದರ ಕುರಿತು ಚರ್ಚಿಸಿ ಸಮಸ್ಯೆ ಬಗೆಹರಿಸಬೇಕು ಎಂಬ ಕಾರಣಕ್ಕೆ ಔತಣ ಕೂಟ ಏರ್ಪಡಿಸಿದ್ದೇನೆ' ಎಂದು ಸಿದ್ದರಾಮಯ್ಯ ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, 'ನನ್ನ ಇಲಾಖೆಯಲ್ಲಿ ಯಾವುದೇ ಗುತ್ತಿಗೆದಾರರಿಗೆ ಬಿಲ್ ಬಾಕಿ ಉಳಿಸಿಕೊಂಡಿಲ್ಲ. ಕಮಿಷನ್ ಆರೋಪವೂ ಇಲ್ಲ' ಎಂದರು. ಆಗ ಕೆಲವು ಸಚಿವರು, 'ಹಾಗಿದ್ದರೆ ನಮ್ಮ ಇಲಾಖೆಗಳಲ್ಲಿ ಆಗಿದೆ ಎಂಬುದು ನಿಮ್ಮ ಮಾತಿನ ಅರ್ಥವೇ' ಎಂದು ಪ್ರಶ್ನಿಸಿದರು. ಮಧ್ಯ ಪ್ರವೇಶಿಸಿದ ಸಿದ್ದರಾಮಯ್ಯ, 'ಎಲ್ಲ ವಿಚಾರಗಳನ್ನು ಆವತ್ತೇ ಮಾತನಾಡೋಣ' ಎಂದು ಚರ್ಚೆಗೆ ತೆರೆ ಎಳೆದರು ಎಂದು ಗೊತ್ತಾಗಿದೆ.

ವೀರೇಂದ್ರಗೆ ಸೇರಿದ 40 ಕೆ.ಜಿ ಚಿನ್ನದ ಗಟ್ಟಿ ಇ.ಡಿ ವಶಕ್ಕೆ

ನವದೆಹಲಿ (ಪಿಟಿಐ): ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ಬಂಧನದಲ್ಲಿರುವ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ (ಪಪ್ಪಿ) ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯವು ಗುರುವಾರ ಹೊಸದಾಗಿ ದಾಳಿ ನಡೆಸಿ ₹50.33 ಕೋಟಿ ಮೌಲ್ಯದ 40 ಕೆ.ಜಿ ಬಂಗಾರವನ್ನು ವಶಕ್ಕೆ ಪಡೆದಿದೆ.

ಕರ್ನಾಟಕದ ಚಿತ್ರದುರ್ಗ ಜಿಲ್ಲೆಯಲ್ಲಿರುವ ಚಳ್ಳಕೆರೆಯ ಎರಡು ಲಾಕರ್‌ಗಳಲ್ಲಿಡಲಾಗಿದ್ದ 24 ಕ್ಯಾರಟ್ ಚಿನ್ನದ ಗಟ್ಟಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನದ ಮಾಲೀಕರು ಯಾರು ಎಂಬುದನ್ನು ಬಹಿರಂಗಪಡಿಸಿಲ್ಲ.

ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಶಾಸಕರಾದ ವೀರೇಂದ್ರ ಅವರನ್ನು ಕಳೆದ ಆಗಸ್ಟ್ ತಿಂಗಳಲ್ಲಿ ಇ.ಡಿ. ಬಂಧಿಸಿತ್ತು.

6

'ನಿವೇಶನ ಅಕ್ರಮ ಖರೀದಿ ತಡೆಗೆ ಯೋಜನೆ ರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಂಜೂರಾದ ನಕ್ಷೆಗಳ ಭಾಗವಲ್ಲದ ಪರಿವರ್ತಿತ ಜಮೀನಿನಲ್ಲಿ ಗ್ರಾಹಕರು ನಿವೇಶನಗಳನ್ನು ಖರೀದಿಸುತ್ತಿರುವ ಪ್ರಕರಣ ಹೆಚ್ಚುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿರುವ ಹೈಕೋರ್ಟ್, 'ಇಂತಹ ವಹಿವಾಟುಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಸಮಗ್ರ ಯೋಜನೆಯೊಂದನ್ನು ರೂಪಿಸುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟಿದೆ.

'ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಇ-ಖಾತಾ ನೀಡಲು ಹೊಳಲ್ಕೆರೆ ಟೌನ್ ಪಂಚಾಯಿತಿಗೆ ನಿರ್ದೇಶಿಸಬೇಕು' ಎಂದು ಕೋರಿ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಬಿ.ದುರ್ಗ ಹೋಬಳಿ ನಂದಿಹಳ್ಳಿಯ ಯು.ಮಮತಾ ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಶಂಕರ ಎಸ್‌.ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸೂಕ್ತ ಮಾರ್ಗಸೂಚಿ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ–1961ರ ಕಲಂ 17(2ಬಿ) ಉದ್ದೇಶಕ್ಕೆ ಅನುಗುಣವಾಗಿ ಕ್ರಮಬದ್ಧಗೊಳಿಸುವ ಕಾರ್ಯವಿಧಾನವನ್ನು ರೂಪಿಸದ ಹೊರತು, ವೈಯಕ್ತಿಕ ಪ್ರಕರಣಗಳಲ್ಲಿ ನ್ಯಾಯಾಲಯಗಳು ಶಾಸನಬದ್ಧ ಆದೇಶವನ್ನು ಮೀರಿ ಕಾನೂನಿಗೆ ವಿರುದ್ಧವಾದ ನಿರ್ದೇಶನ ಗಳನ್ನು ನೀಡಲು ಸಾಧ್ಯವಿಲ್ಲ' ಎಂದು ಹೇಳಿದೆ.

4



ಹವಾಮಾನ ಮುನ್ಸೂಚನೆ: ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ

ಪ್ರತಿಭಟನೆ

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದನ್ನು ಖಂಡಿಸಿ ಬೆಂಗಳೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ವತಿಯಿಂದ ಜ್ಞಾನಭಾರತಿ ಆವರಣದಲ್ಲಿ ಪ್ರತಿಭಟನೆ ನಡೆಸಲಾಯಿತು

ಸಿಜೆಐ ಮೇಲೆ ಶೂ ಎಸೆಯಲು ಯತ್ನಿಸಿದ್ದನ್ನು ಖಂಡಿಸಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ನೇತೃತ್ವದಲ್ಲಿ ಶಾಂತಿ ನಗರದ ಬಿಎಂಟಿಸಿ ಕೇಂದ್ರ ಕಚೇರಿ ಎದುರು 'ಐ ಲವ್ ಅಂಬೇಡ್ಕರ್' ಅಭಿಯಾನ ಮಾಡಲಾಯಿತು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಚೆಲ್ಲ ಕುಮಾರ್, ವಿಧಾನ ಪರಿಷತ್‌ನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್, ಸೂರಜ್ ಹೆಗ್ಡೆ, ವಿ.ಎಸ್. ಆರಾಧ್ಯ ಇತರರು ಇದ್ದರು

ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದನ್ನು ಖಂಡಿಸಿ ಡಿ.ದೇವರಾಜ ಅರಸು ಅಹಿಂದ ವಕೀಲರ ವೇದಿಕೆ ವತಿಯಿಂದ ಹೈಕೋರ್ಟ್ ಎದುರು ಪ್ರತಿಭಟನೆ ನಡೆಸಲಾಯಿತು. ವಕೀಲರಾದ ಬಾಲನ್, ದ್ವಾರಕಾನಾಥ್, ಕೆ.ಆರ್.ಸುಭಾಷ್, ಮುನಿರಾಜು, ಗಣಪತಿನಾಯಕ್, ನಾಗಪ್ಪ ಕುರಿ, ಸಣ್ಣಾ ನಾಯಕ್, ರಾಚಪ್ಪ, ಚಂದ್ರು, ನರಸಿಂಹಮೂರ್ತಿ ಇದ್ದಾರೆ

ರಾಷ್ಟ್ರೋತ್ಥಾನ ಸಾಹಿತ್ಯದಿಂದ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೋತ್ಥಾನ ಸಾಹಿತ್ಯವು ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ನ.1ರಿಂದ ಡಿ.7ರವರೆಗೆ 'ಕನ್ನಡ ಪುಸ್ತಕ ಹಬ್ಬ' ಹಮ್ಮಿಕೊಂಡಿದ್ದು, ಈ ಹಬ್ಬದ ಪ್ರಯುಕ್ತ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದೆ.

ಗುರುವಾರ ಇಲ್ಲಿ ಸ್ಪರ್ಧೆಗಳ ಪೋಸ್ಟರ್‌ಗಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತ ಪ್ರಚಾರ ಪ್ರಮುಖ ರಾಜೇಶ್ ಪದ್ಮಾರ್ ಹಾಗೂ ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಬಿಡುಗಡೆ ಮಾಡಿದರು.

ಒಟ್ಟು ಮೂರು ವಿಭಾಗಗಳಲ್ಲಿ 10 ಸ್ಪರ್ಧೆಗಳು ನಡೆಯಲಿವೆ. 5ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ದೇಶಭಕ್ತಿ ಹಾಗೂ ನಾಡು-ನುಡಿಗೆ ಸಂಬಂಧಿಸಿದ ಗೀತಗಾಯನ, ಚಿತ್ರಕಲಾ ಸ್ಪರ್ಧೆ ನಡೆಯಲಿದೆ. 9ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಗೀತಗಾಯನದ ಜತೆಗೆ ಚರ್ಚಾ ಸ್ಪರ್ಧೆ, ವಿಡಿಯೊ ಭಾಷಣ ಸ್ಪರ್ಧೆ ಮತ್ತು ಲೇಖನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಪದವಿ ಮತ್ತು ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಪುಸ್ತಕ ಪರಿಚಯ ಮತ್ತು ಭಾಷಣ ಸ್ಪರ್ಧೆ ನಡೆಯಲಿದೆ ಎಂದು ನಾ. ದಿನೇಶ್ ಹೆಗ್ಡೆ ತಿಳಿಸಿದರು.

ವಿವರಕ್ಕೆ: 95911 55622

'ಆಹಾರದಲ್ಲಿ ಇರಲಿ ಕಡಿಮೆ ಉಪ್ಪು'

ರಾಜೀವ್ ಗಾಂಧಿ ಆರೋಗ್ಯ ವಿ.ವಿ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯ

ತಾಂತ್ರಿಕ ಸಲಹಾ ಸಮಿತಿಯಲ್ಲಿ ಪಾಲ್ಗೊಂಡಿದ್ದ ವೈದ್ಯಕೀಯ ತಜ್ಞರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಹಾರದಲ್ಲಿ ಅತಿಯಾಗಿ ಉಪ್ಪು ಬಳಕೆ ಮಾಡುವುದರಿಂದ ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿ ಮತ್ತು ಮೂತ್ರಪಿಂಡ ಕಾಯಿಲೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಆದ್ದರಿಂದ ಆಹಾರದಲ್ಲಿ ಉಪ್ಪಿನ ಬಳಕೆ ಕಡಿಮೆಗೊಳಿಸುವ ಬಗ್ಗೆ ಜಾಗೃತಿ ಮೂಡಿಸುವ ಜತೆಗೆ, ಪ್ರತ್ಯೇಕ ಕಾರ್ಯಯೋಜನೆ ರೂಪಿಸಬೇಕು' ಎಂದು ವೈದ್ಯಕೀಯ ತಜ್ಞರು ನಿರ್ಣಯ ಕೈಗೊಂಡರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ರಚನೆಯಾದ ತಾಂತ್ರಿಕ ಸಲಹಾ ಸಮಿತಿಯು ನಗರದಲ್ಲಿ ಗುರುವಾರ ಪ್ರಥಮ ಸಭೆ ನಡೆಸಿ, ಆಹಾರದಲ್ಲಿ ಉಪ್ಪಿನ ಬಳಕೆ ಕಡಿಮೆ ಮಾಡಲು ಮಾರ್ಗೋಪಾಯಗಳ ಬಗ್ಗೆ ಚರ್ಚಿಸಿತು. ಸಾಂಕ್ರಾಮಿಕವಲ್ಲದ ರೋಗಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ 'ಹಾಲ್ಟ್-ಸಾಲ್ಟ್' ಅಭಿಯಾನ ನಡೆಸುವುದು, ಉಪ್ಪಿನ ಬಳಿಕೆ ಕಡಿಮೆಗೊಳಿಸಲು ಕಾರ್ಯಯೋಜನೆಗಳನ್ನು ರೂಪಿಸಿ, ಅವನ್ನು ಕಾರ್ಯಗತಗೊಳಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಈ ಸಭೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಪಾಲ್ಗೊಂಡ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಅಗತ್ಯ ಬೆಂಬಲ ನೀಡುವುದಾಗಿ ಭರವಸೆ ನೀಡಿದರು.

ಯುವ ಪೀಳಿಗೆ ಗುರಿ: ವಿಶ್ವವಿದ್ಯಾಲಯದ ಕುಲಪತಿ ಭಗವಾನ್ ಬಿ.ಸಿ., 'ವಿಶ್ವವಿದ್ಯಾಲಯವು ಕೇವಲ ದಾಖಲಾತಿ, ಪರೀಕ್ಷೆ, ಫಲಿತಾಂಶ ಹಾಗೂ ತರಗತಿಯ ಚಟುವಟಿಕೆಗಳಿಗೆ ಸೀಮಿತವಾಗಿ ಉಳಿಯಬಾರದು. ಯುವ ಪೀಳಿಗೆಯ ಆರೋಗ್ಯ ವೃದ್ಧಿಗೆ ಸಹಕಾರಿಯಾದ ಕಾರ್ಯಕ್ರಮಗಳನ್ನು ರೂಪಿಸಬೇಕು. ಯುವಜನರು ಅಧಿಕ ರಕ್ತದೊತ್ತಡದಂತಹ ಅನಾರೋಗ್ಯ ಸಮಸ್ಯೆಗಳಿಗೆ ಒಳಪಡುತ್ತಿರುವುದು ಕಳವಳಕಾರಿ' ಎಂದು ಹೇಳಿದರು.

ರಿಸಾಲ್ವ್ ಟು ಸೇವ್ ಲೈವ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸೈಯದ್ ಇಮ್ರಾನ್ ಫಾರೂಕ್, 'ಉಪ್ಪು ಸೇವನೆಗೆ ಕಡಿವಾಣ ಹಾಕುವುದು ಅತ್ಯಂತ ಪರಿಣಾಮಕಾರಿ ಸಾರ್ವಜನಿಕ ಆರೋಗ್ಯ ಪರಿಹಾರಗಳಲ್ಲಿ ಒಂದಾಗಿದೆ. ಕರ್ನಾಟಕವು ಸೋಡಿಯಂ ಬಳಕೆಯನ್ನು ಕಡಿಮೆ ಮಾಡುವುದಲ್ಲದೆ, ಅದರಿಂದ ಉಂಟಾಗಬಹುದಾದ ಅನಾರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವ ವಿಧಾನಗಳನ್ನು ಕಂಡುಕೊಳ್ಳಲು ಕ್ರಮ ಕೈಗೊಳ್ಳಬೇಕು' ಎಂದರು.

ಕ್ಯಾನ್ಸರ್ ತಜ್ಞ ಡಾ. ವಿಶಾಲ್ ರಾವ್ ಯು.ಎಸ್., 'ನಾವು ಚಿಕಿತ್ಸೆಗೆ ನೀಡುವಷ್ಟೇ ಪ್ರಾಮುಖ್ಯವನ್ನು ಮುನ್ನೆಚ್ಚರಿಕೆಗೆ ನೀಡಿದಲ್ಲಿ ಇಲ್ಲಿನ ಅನಾರೋಗ್ಯ ಸಮಸ್ಯೆಗಳು ಅರ್ಧದಷ್ಟು ಇಳಿಮುಖವಾಗುತ್ತವೆ' ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ವೈದ್ಯರ ತರಬೇತಿ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು. ವಿ.ವಿ ರಿಜಿಸ್ಟ್ರಾರ್ ಡಾ. ರಿಯಾಜ್ ಬಾಷ, ಜಯದೇವ ಹೃದಯೋಗ ಸಂಸ್ಥೆಯ ಡಾ. ಶ್ರೀಧರ್, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಡಯಾಬಿಟಾಲಜಿಯ ಡಾ. ರವಿ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕಿ ಡಾ. ಕಾವ್ಯ ಹಾಗೂ ವಿವಿಧ ವೈದ್ಯಕೀಯ ಸಂಸ್ಥೆಗಳ ವೈದ್ಯಕೀಯ ತಜ್ಞರು ಉಪಸ್ಥಿತರಿದ್ದರು.

ಗಿನ್ನಿಸ್ ದಾಖಲೆಯತ್ತ 'ಥಟ್ ಅಂತ ಹೇಳಿ' ದಾಪುಗಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ರಸಪ್ರಶ್ನೆ ಕಾರ್ಯಕ್ರಮ ಐದು ಸಾವಿರ ಸಂಚಿಕೆಯ ಹೊಸ್ತಿಲಲ್ಲಿದ್ದು, ಈ ಕಾರ್ಯಕ್ರಮ ಗಿನ್ನಿಸ್ ದಾಖಲೆಯತ್ತ ದಾಪುಗಾಲಿಟ್ಟಿದೆ.

2002ರ ಜ. 4ರಂದು ಪ್ರಾರಂಭವಾದ ಈ ಕಾರ್ಯಕ್ರಮ ಅ. 13ರಂದು ಐದು ಸಾವಿರದನೇ ಸಂಚಿಕೆಯ ಪ್ರಸಾರಕ್ಕೆ ಸಜ್ಜಾಗಿದೆ. 11ರ ಬೆಳಿಗ್ಗೆ 10.30ಕ್ಕೆ ಜಿಕೆವಿಕೆ ಆವರಣದಲ್ಲಿರುವ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಕನ್ವೆನ್ಷನ್ ಸೆಂಟರ್‌ನಲ್ಲಿ ಚಿತ್ರೀಕರಣಗೊಳ್ಳಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್, ಅರಣ್ಯ, ಜೀವಿಶಾಸ್ತ್ರ, ಪರಿಸರ ಸಚಿವ ಈಶ್ವರ ಖಂಡ್ರೆ ಪಾಲ್ಗೊಳ್ಳುತ್ತಿದ್ದಾರೆ ಎಂದು ದೂರದರ್ಶನ ಕೇಂದ್ರ ದಕ್ಷಿಣ ವಲಯದ ಉಪ ಮಹಾನಿರ್ದೇಶಕರಾದ ಭಾಗ್ಯವಾನ್ ತಿಳಿಸಿದ್ದಾರೆ.

ಕಾರ್ಯಕ್ರಮಗಳ ಉಸ್ತುವಾರಿ ಹಾಗೂ ನಿರ್ವಹಣೆಯ ಜವಾಬ್ದಾರಿಯನ್ನು ಎಚ್.ಎನ್. ಆರತಿ ನಿಭಾಯಿಸುತ್ತಿದ್ದು, ನಿರ್ಮಾಪಕಿ ಎಂ.ಎನ್. ಚಂದ್ರಕಲಾ ಈ ಸಂಚಿಕೆಗಳ ನಿರ್ಮಾಣದಲ್ಲಿ ತೊಡಗಿದ್ದಾರೆ ಎಂದು ಹೇಳಿದರು.

23 ವರ್ಷಗಳ ಹಿಂದೆ ಉಷಾಕಿಣಿ ಅವರು ಈ ಕಾರ್ಯಕ್ರಮ ಆರಂಭಿಸಿದ್ದರು. 100ನೇ ಸಂಚಿಕೆಯಲ್ಲಿ ಸಾಹಿತಿ ಸುಧಾಮೂರ್ತಿ ಪಾಲ್ಗೊಂಡಿದ್ದರು. ಕನ್ನಡ ನಾಡು-ನುಡಿ, ನೆಲ-ಜಲ, ಸಾಂಸ್ಕೃತಿಕ ಸೊಗಡನ್ನು ನಾಡಿನ ಜನರಿಗೆ ಉಣಬಡಿಸುತ್ತಿರುವ ಥಟ್ ಅಂತ ಹೇಳಿ?! ಕಾರ್ಯಕ್ರಮ 2012ರಲ್ಲಿ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್' ಗೌರವಕ್ಕೆ ಪಾತ್ರವಾಗಿತ್ತು.

ಕೋವಿಡ್ ಸಮಯದಲ್ಲಿ ಕೆಲಕಾಲ ಹೊರತುಪಡಿಸಿದಂತೆ, ನಿರಂತರವಾಗಿ ಈ ಕಾರ್ಯಕ್ರಮ ಪ್ರಸಾರವಾಗುತ್ತಿದೆ. 75 ಸಾವಿರ ಪ್ರಶ್ನೆಗಳನ್ನು ಕೇಳಲಾಗಿದ್ದು, 15 ಸಾವಿರ ಸ್ಪರ್ಧಿಗಳು ಭಾಗವಹಿಸಿ, ಕನ್ನಡದ 70 ಸಾವಿರ ಪುಸ್ತಕಗಳನ್ನು ಬಹುಮಾನವಾಗಿ ಪಡೆದಿದ್ದಾರೆ.

ಕಾರಾಗೃಹ ವಾಸಿಗಳಿಗೆ ವಿಶೇಷ ಸ್ಪರ್ಧೆ, ಅಂಧರು, ಎಚ್.ಐ.ವಿ. ಸೋಂಕಿತರು ಹೀಗೆ ಹಲವು ವಿಭಾಗಗಳಲ್ಲಿ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗಿದೆ. ಮೆಟ್ರೊ ರೈಲಿನ ಪ್ರಯಾಣಿಕರೊಂದಿಗೆ, ವಿಧಾನ ಪರಿಷತ್ತಿನ ಸದಸ್ಯರೊಂದಿಗೆ ವಿಶೇಷ ಸಂಚಿಕೆಗಳನ್ನು ಬಿತ್ತರಿಸಲಾಗಿದೆ ಎಂದು ಭಾಗ್ಯವಾನ್ ಮಾಹಿತಿ ನೀಡಿದ್ದಾರೆ.

ನಗರದಲ್ಲಿ ಇಂದು

ಎಂಎಸ್‌ಎಂಇ ಮಾರುಕಟ್ಟೆ ಸಮಾವೇಶ: ಅತಿಥಿ: ಶೋಭಾ ಕರಂದ್ಲಾಜೆ, ಉಪಸ್ಥಿತಿ: ಎಸ್.ಸಿ.ಎಲ್.ದಾಸ್, ಶುಭ್ರಂಶು ಶೇಖರ ಆಚಾರ್ಯ, ಅತೀಶ್ ಕುಮಾರ್ ಸಿಂಗ್, ಬಿ.ಆರ್. ಗಣೇಶ್ ರಾವ್, ಆಯೋಜನೆ: ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ, ಸ್ಥಳ: ಕಾಸಿಯಾ ಸಭಾಂಗಣ, ವಿಜಯನಗರ, ಬೆಳಿಗ್ಗೆ 9.30

'ಸುವರ್ಣಮುಖಿ ಜಲಾಶಯದ ಜಲಾನಯನ ಪ್ರದೇಶದ ಪುನರುಜ್ಜೀವನ ಮತ್ತು ಬೆಂಗಳೂರು ನಗರದ ಮೇಲೆ ಅದರ ಪ್ರಭಾವ' ವಿಷಯದ ಮೇಲೆ ಕಾರ್ಯಾಗಾರ: ಮುಖ್ಯ ಭಾಷಣ: ಉಮಾ ಮಹಾದೇವನ್, ಗೋಪಾಲ್ ನಾಯಕ್, ಆಯೋಜನೆ ಹಾಗೂ ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಕನಕಪುರ ರಸ್ತೆ, ಬೆಳಿಗ್ಗೆ 10

ಸಾಂಸ್ಕೃತಿಕ, ಕ್ರೀಡೆ, ಕನ್ನಡ ಸಂಘ ಹಾಗೂ ಇತರೆ ಚಟುವಟಿಕೆಗಳ ಉದ್ಘಾಟನೆ: ರಿಜ್ವಾನ್ ಅರ್ಷದ್, ಅತಿಥಿಗಳು: ಎಲ್. ಹನುಮಂತಯ್ಯ, ರಮೇಶ್ ಬಿ., ಉಷಾ ಬಿ.ಎನ್., ಉಪಸ್ಥಿತಿ: ಬಿ.ಸಿ. ನಾಗೇಂದ್ರ ಕುಮಾರ್, ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಕಲಾ ಕಾಲೇಜು, ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 10.30

ದತ್ತಿ ಪ್ರಶಸ್ತಿಗಳ ಪ್ರದಾನ: ರಾಜೇಂದ್ರ ಬಾದಾಮಿಕರ್, ಉದ್ಘಾಟನೆ: ಬಿ.ಆರ್. ಗುರುಪ್ರಸಾದ್, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಎ.ಆರ್. ನಾರಾಯಣ ಘಟ್ಟ, ಟಿ.ಎಸ್. ಶೈಲಜಾ, ಪ್ರಶಸ್ತಿ ಪುರಸ್ಕೃತರು: ಎಚ್.ಎಸ್. ಸುರೇಶ್, ಮಿತ್ರಾ ವೆಂಕಟರಾಜು, ಬಿ.ಎಸ್. ಶೈಲಜಾ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಮಹೇಶ ಜೋಶಿ

'ಕಲಾ ಫಾರ್ ವಿದ್ಯಾ' ಕಲಾ ಪ್ರದರ್ಶನ ಉದ್ಘಾಟನೆ: ಸ್ಮಿತಾಲಕ್ಷ್ಮಿ ಚಿನ್ನಪ್ಪ, ಮೀರಾ ಶಂಕರ್, ಶಾಂತಿ ಬಾಳಿಗಾ, ಶ್ರೀಚಂದ್ ರಾಜ್‌ಪಾಲ್, ಆಯೋಜನೆ: ರೋಟರಿ ಕ್ಲಬ್ ಆಫ್ ಬೆಂಗಳೂರು: ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಸಂಜೆ 5

ಕೋಟಾ ಶಿವರಾಮ ಕಾರಂತ ಅವರ ಜನ್ಮದಿನದ ಅಂಗವಾಗಿ ನುಡಿನಮನ: ಮನು ಬಳಿಗಾರ್, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾ ಸಂಘ, ಕೆಂಪೇಗೌಡ ನಗರ, ಸಂಜೆ 6

ಭರತನಾಟ್ಯ ಪ್ರದರ್ಶನ: ರಮ್ಯ ವರ್ಣ, ಆಯೋಜನೆ: ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಸಂಜೆ 6.30

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಕಾಇಂ(ವಿ)/ಯೋಜನೆ(ವಿ)/ಸ.ಕಾ.ನಿ.ಇಂ(1)/25-26/605 ದಿನಾಂಕ:09.10.2025

ಸಾರ್ವಜನಿಕ ಎಚ್ಚರಿಕೆ ಪ್ರಕಟಣೆ

ಸಾರ್ವಜನಿಕ ಎಚ್ಚರಿಕೆಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕವಿಪ್ರನಿನಿಯು ರಾಮನಗರದ ಸುತ್ತಮುತ್ತಲಿನ ಪ್ರದೇಶಗಳಿಗೆ ಉತ್ತಮ ವಿದ್ಯುತ್‌ನ್ನು ಒದಗಿಸುವ ಸಲುವಾಗಿ ಘನ ಕರ್ನಾಟಕ ಸರ್ಕಾರದ ವತಿಯಿಂದ ಕ.ವಿ.ಪ್ರ.ನಿ.ನಿಯು ಹಾಲಿ ಇರುವ ಮೆಳೇಹಳ್ಳಿ 66ಕೆವಿ ಜೋಡಿ ವಿದ್ಯುತ್ ಗೋಪುರದ ಮೇಲೆ ಎರಡನೇ ವಿದ್ಯುತ್ ಮಾರ್ಗವನ್ನು ನಿರ್ಮಿಸಲಾಗಿದೆ. ಈ ಮಾರ್ಗವು **ಕೇತೋಹಳ್ಳಿ, ಮಾಯಗನಹಳ್ಳಿ, ದಾರಪುರ, ಲಕ್ಕಸಂದ್ರ, ಸುಗ್ಗನಹಳ್ಳಿ, ಕರಡಿದೊಡ್ಡಿ, ಬೋಮ್ಮಚನಹಳ್ಳಿ, ಮನಮಾನಹಳ್ಳಿ ಮತ್ತು ಮೇಳಹಳ್ಳಿ ಹಳ್ಳಿಗಳ ಸರಹದ್ದಿನ ಮೂಲಕ ಹಾದು ಹೋಗುವುದು. ಈ ಮಾರ್ಗವನ್ನು ದಿನಾಂಕ:10.10.2025 ರಂದು ಅಥವಾ ತದನಂತರ ವಿದ್ಯುದೀಕರಿಸಲಾಗುವುದು.** ಆದ್ದರಿಂದ ಈ ಮಾರ್ಗದಲ್ಲಿನ ಮೇಲ್ಕಂಡ ಗ್ರಾಮಗಳಲ್ಲಿ ಸಾರ್ವಜನಿಕರು ಗೋಪುರಗಳನ್ನು ಹತ್ತುವುದಾಗಲಿ, ಗೋಪುರದಲ್ಲಿ ಹಸಿರು ಬಳ್ಳಿ, ಕೊಂಬೆ, ಕಬ್ಬಿಣದ ತಂತಿಗಳು ಇತ್ಯಾದಿಗಳನ್ನು ವಿದ್ಯುತ್ ಪ್ರವಹಿಸುವ ತಂತಿಗಳಿಗೆ ಎಸೆಯುವುದಾಗಲಿ ಅಥವಾ ದನ-ಕರು-ಎಮ್ಮೆ ಹಾಗೂ ಇತರೆ ಸಾಕು ಪ್ರಾಣಿಗಳನ್ನು ಗೋಪುರಗಳಿಗೆ ಕಟ್ಟುವುದಾಗಲಿ, ಮಾರ್ಗದ ಕೆಳಗೆ ಎತ್ತರ ಬೆಳೆಯುವ ಮರಗಳನ್ನು ಬೆಳೆಸುವುದಾಗಲಿ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದ್ದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಯಾವುದೇ ರೀತಿಯಲ್ಲೂ ಜವಾಬ್ದಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಯೋಜನೆ ವಿಭಾಗ, ಕವಿಪ್ರನಿನಿ, ರಾಮನಗರ-562159

IN THE HON'BLE XLI ADDL CITY CIVIL AND SESSIONS JUDGE AT BENGALURU
OS. No. 3625/2023 (CCH-42)

PLAINTIFF: M/s Audio Wide Area Network, India Pvt Ltd, (Awan India Pvt Ltd), Represented by its Director, **Prasad E.S,** S/o E Sudarshan Raju, aged about 43 years, No. 60,JC Industrial Estate, Bikasipura Main Road, Kanakapura Road Bangalore -560061, Mobile:7406700018, Email.IDPrasad@awan.co.in **-V/s-**

DEFENDANTS: D1- M/s Blue Ridge Network India pvt Ltd.

D4- Vasanth Kumar HD

NOTICE/SUMMONS TO THE DEFENDANTS No. 1 and 4 U/O V Rule 20(1A) R/w SECTION 151 OF CPC

1. M/s Blue Ridge Networks India Pvt Ltd. No.3, 1 st floor, 4th Main, 2nd Stage J.C Industrial Estate, Bikasipura Main Road, Kanakapura Road Bengaluru-560062.

4. Vasanth Kumar H.D, S/o. Dodda Rame Gowda, aged about 46 years, No.D-6/9, DRDO Complex, C.V. Raman Nagar, Bangalore-560093.

Whereas, the Plaintiff above named have instituted a Suit Under Order VII Rule 1 and 2 Read with section 26 of the Civil Procedure Code-1908 seeking for Permanent injunction against the Defendants. Notice is hereby given to M/s Blue Ridge Network India pvt Ltd and Vasanth Kumar HD the Defendants in the above case to appear in court in person or through an advocate at 11:00 clock on **27-10-2025.** Failing wherein the said Suit will be heard and determined ex-parte

Given under my hand and seal of the court on 08-10-2025.

By order of the Court, Senior Sheristedar, City Civil Court, Bengaluru.

JOSEPH ANIL KUMAR A, Advocate
"Lalezhar Apartment" No.005, Ground floor, Next to High Point IV, Basaveshwara circle, Palace Road, Bangalore-560001.
Ph. No.9880308428

ನೈರುತ್ಯ ರೈಲ್ವೆ

ಟೆಂಡರ್ ಸೂಚನೆ ಸಂಖ್ಯೆ ಪ್ರಕಟಣೆ:
14-ಎಸ್‌ಎನ್‌ಟಿ-ಎಂವೈಎಸ್-2025 ದಿನಾಂಕ 04.10.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ-ಟೆಂಡರ್ (ಐಆರ್‌ಇಪಿಎಸ್) ಅನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಮೈಸೂರು ವಿಭಾಗದ ಮೇಲೆ ಕೊನೆಯ ಮೈಲು ಸಂಪರ್ಕಕ್ಕಾಗಿ ಸೌಲಭ್ಯ.	ರೂ.9,48,61,262.29
2	ಮೈಸೂರು ವಿಭಾಗದಲ್ಲಿ ಟೈರ್-2, 3 ಮತ್ತು 4 ಮತ್ತು ದೂರದ ಸ್ಥಳಗಳಲ್ಲಿ ಡೇಟಾಕಾಮ್ ಉಪಕರಣಗಳು ಮತ್ತು ಪಿಆರ್‌ಎಸ್/ಯುಟಿಎಸ್ ನ ನೆಟ್‌ವರ್ಕ್ ಸಂಪರ್ಕಕ್ಕಾಗಿ ಬದಲಾವಣೆ	ರೂ. 2,87,61,926.24
3	ಮೈಸೂರು ವಿಭಾಗದ ಮೈಸೂರು ನ್ಯೂ ಗೂಡ್ಸ್ ಟರ್ಮಿನಲ್ ರೈಲ್ವೆ ನಿಲ್ದಾಣ, ಹಾಸನ, ಅಮರಾವತಿ ಕಾಲೋನಿ ಮತ್ತು ಶಿವಮೊಗ್ಗ ಟೌನ್ ನಿಲ್ದಾಣದ ಗೂಡ್ಸ್ ಶೆಡ್‌ಗಳಲ್ಲಿ ಸಿಸಿಟಿವಿ ಕಣ್ಗಾವಲು ವ್ಯವಸ್ಥೆ ಒದಗಿಸುವುದು.	ರೂ. 78,64,360.04

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
27-10-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗ ಸಂಕೇತ ಮತ್ತು ಟೆಲಿಕಾಂ ಅಭಿಯಂತರರು/ಮೈಸೂರು

ಪಿಯುಬಿ/535/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Mobile ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು - 560 064.
ವೆಬ್‌ಸೈಟ್: rwf.indianrailways.gov.in

ಇ-ಟೆಂಡರ್ ಸೂಚನೆ

ಸಂ.:ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಂಆರ್/2025-26/54ಆರ್‌ಟಿ ದಿ. 08.10.2025

ಇ-ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಕೆಳಗಿನ ಕಾಮಗಾರಿಗಾಗಿ ಎಲೆಕ್ಟ್ರಾನಿಕ್ ಟೆಂಡರುಗಳನ್ನು ಆನ್‌ಲೈನ್ ವೆಬ್‌ಸೈಟ್ **http://www.ireps.gov.in (Works)** ಮೂಲಕ ಆಹ್ವಾನಿಸಿದ್ದಾರೆ. ಟೆಂಡರ್ ಸಂ.: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಂಆರ್/2025-26/54ಆರ್‌ಟಿ ದಿ. 08.10.2025. **ಕಾಮಗಾರಿಯ ಹೆಸರು: 1. ಶೂನ್ಯ ಮೌಲ್ಯದ ಅಪಾಯಕಾರಿ ತ್ಯಾಜ್ಯ ಮತ್ತು 2. ಶೂನ್ಯ ಮೌಲ್ಯದ ಅಪಾಯಕಾರಿಯಲ್ಲದ ತ್ಯಾಜ್ಯದ ಸುರಕ್ಷಿತ ವಿಲೇವಾರಿ.** ಅಂದಾಜು ಮೌಲ್ಯ: **ರೂ. 1,72,69,535.80.** ಇಎಂಡಿ: **ರೂ.2,36,300.00,** ಟೆಂಡರ್ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ: **30.10.2025, ಬೆಳಗ್ಗೆ 10:30 ಗಂಟೆಗೆ.** ಅವಧಿ: **30 ತಿಂಗಳುಗಳು.**

ಈ ಟೆಂಡರು ಸೂಚನೆ ಮತ್ತು ಅರ್ಹತಾ ಮಾನದಂಡಗಳನ್ನು ನಮ್ಮ ವೆಬ್‌ಸೈಟ್ **www.rwf.indianrailways.gov.in** ನಲ್ಲಿ ಸಹ ನೋಡಬಹುದು.

ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಡಬ್ಲ್ಯೂ-I

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ: ಬಿಐಎಪಿಎ/ಟಿಪಿ/ಭೂಉಬ/77/2025-26/1947 ದಿನಾಂಕ: 03.10.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ಭೂಉಪಯೋಗ ವಲಯಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಸಾವಿತ್ರಮ್ಮ ಕೋಂ ಲೇ॥ ಡಿ.ಮುನಿಶಾಮಪ್ಪ	ದೇವನಹಳ್ಳಿ	ಕುಂದಾಣ	ದೇವಗಾನಹಳ್ಳಿ	31/4	1-12	ವ್ಯವಸಾಯ	ವಾಣಿಜ್ಯ
2		ದೇವನಹಳ್ಳಿ	ಕುಂದಾಣ	ದೇವಗಾನಹಳ್ಳಿ	31/5	1-27	ವ್ಯವಸಾಯ	ವಾಣಿಜ್ಯ

ಷರಾ :- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಸದರಿ ಜಮೀನುಗಳ ಪರಿಸರದಲ್ಲಿ ವಸತಿ / ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನುಗಳ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನುಗಳಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು **ವ್ಯವಸಾಯ ಭೂಉಪಯೋಗ ವಲಯ ದಿಂದ ವಾಣಿಜ್ಯ ಭೂಉಪಯೋಗ ವಲಯಕ್ಕೆ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾಪ್ರ/ಜಿಎ/3152/2025-26

ಜೈಲಿನಲ್ಲೇ ಫೋಟೊಶೂಟ್, ಟಿ.ವಿ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ವಿಚಾರಣಾಧೀನ ಕೈದಿ, ರೌಡಿಶೀಟರ್ ಗುಬ್ಬಚ್ಚಿ ಸೀನ ಹಾಗೂ ಆತನ ಸಹಚರರಿಗೆ ವಿಶೇಷ ಸೌಲಭ್ಯ ಕಲ್ಪಿಸಿರುವ ಮತ್ತಷ್ಟು ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಜೈಲಿನಲ್ಲಿ ಗುಬ್ಬಚ್ಚಿ ಸೀನನ ಜನ್ಮದಿನ ಆಚರಣೆಗೆ ನೆರವು ನೀಡಿದ್ದ ಆರೋಪದ ಅಡಿ ಕಾರಾಗೃಹದ ಮುಖ್ಯ ವೀಕ್ಷಕ ಹಾಗೂ ವೀಕ್ಷಕನನ್ನು ಅಮಾನತು ಮಾಡಿ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಮಹಾನಿರ್ದೇಶಕ ಬಿ.ದಯಾನಂದ ಅವರು ಬುಧವಾರ ಆದೇಶಿಸಿದ್ದರು. ಜನ್ಮದಿನಾಚರಣೆ ಹಾಗೂ ವಿಶೇಷ ಸೌಲಭ್ಯಕ್ಕೆ ಸಂಬಂಧಿಸಿದ ಮತ್ತಷ್ಟು ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ವಿಚಾರಣಾಧೀನ ಕೈದಿಗಳಿಗೆ ಎಲ್‌ಇಡಿ ಟಿ.ವಿ ಸೌಲಭ್ಯದ ಜೊತೆಗೆ ಅಡುಗೆ ಮಾಡಿಕೊಳ್ಳಲು ಸ್ಟೌ, ಪಾತ್ರೆಗಳೂ ಸಿಗುತ್ತಿವೆ. ಬ್ಯಾರಕ್‌ನಲ್ಲೇ ಪ್ರತ್ಯೇಕವಾಗಿ ಅಡುಗೆ ಮಾಡಿಕೊಳ್ಳಲು ಚಿಕನ್ ಸಹ ಪೂರೈಸಲಾಗುತ್ತಿದೆ. ಪಾರ್ಟಿ ನಡೆಸಲು ಸ್ಪೀಕರ್ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ ಎಂಬ ಆರೋಪವಿದೆ. ಹಣದಾಸೆಗೆ ಕೈದಿಗಳ ಜೊತೆ ಜೈಲಾಧಿಕಾರಿಗಳು ಮತ್ತು ಸಿಬ್ಬಂದಿ ಶಾಮೀಲಾಗಿದ್ದಾರೆ ಎಂಬ ಆರೋಪ ವಿದ್ದು, ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಗುಬ್ಬಚ್ಚಿ ಸೀನ ಮತ್ತು ಸಹಚರರು ಗ್ರೂಪ್ ಫೋಟೊಶೂಟ್ ನಡೆಸಿದ್ದಾರೆ. ಪಾರಿವಾಳ ಹಿಡಿದುಕೊಂಡು ಜೈಲಿನ ಒಳಗೆ ಫೋಟೊ ತೆಗೆಸಿಕೊಂಡಿದ್ದಾರೆ ಅದರ ಫೋಟೊಗಳು ಲಭಿಸಿದ್ದು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಜನ್ಮದಿನ ಆಚರಣೆಯ ಫೋಟೊಗಳನ್ನು ಗುಬ್ಬಚ್ಚಿ ಸೀನನ ಸಹಚರ, ಕೊಲೆ ಆರೋಪಿ ಅರವಿಂದ್, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ. ಜೈಲಿನ ಒಳಗಿಂದಲೇ ಫೋಟೊಗಳನ್ನು ಅಪ್‌ಲೋಡ್ ಮಾಡಿರುವುದು ಗೊತ್ತಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಇಲಾಖೆಯ ಮಹಾನಿರ್ದೇಶಕ ಬಿ.ದಯಾನಂದ ಅವರು ಈ ಪ್ರಕರಣದ ತನಿಖೆಗೆ ಆದೇಶಿಸಿದ್ದರು. ಇಲಾಖೆಯ ಉಪ ಮಹಾನಿರೀಕ್ಷಕಿ ಕೆ.ಸಿ.ದಿವ್ಯಾ ಅವರು (ದಕ್ಷಿಣ ವಲಯ) ಅ.10ರಂದು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಘಟನೆ ಕುರಿತು ಪ್ರಾಥಮಿಕ ವಿಚಾರಣೆ ನಡೆಸಿ ತನಿಖಾ ವರದಿಯನ್ನು ಬಿ.ದಯಾನಂದ ಅವರಿಗೆ ಸಲ್ಲಿಸಿದ್ದರು.

‘ಕೈದಿಗಳಿಗೆ ಹೇಗೆ ಮೊಬೈಲ್ ದೊರೆಯಿತು? ಯಾರು ಮೊಬೈಲ್ ಪೂರೈಸಿದ್ದರು? ಯಾವಾಗಿನಿಂದ ಕೈದಿಗಳು ಮೊಬೈಲ್ ಬಳಸುತ್ತಿದ್ದಾರೆ ಎಂಬುದರ ಕುರಿತೂ ತನಿಖೆ ಮುಂದುವರಿದಿದೆ’ ಎಂದು ಮೂಲಗಳು ಹೇಳಿವೆ.

ರಾಜ್ಯದಾದ್ಯಂತ ಪರಿಸರ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಅಂಗವಾಗಿ ರಾಜ್ಯದ 15 ಕಡೆಗಳಲ್ಲಿ ಪರಿಸರ ಸಂರಕ್ಷಣೆ ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ತಿಳಿಸಿದರು.

ನರೇಂದ್ರಸ್ವಾಮಿ

‘ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಗೆ 50 ವರ್ಷ ಪೂರ್ಣಗೊಳ್ಳುತ್ತಿದ್ದು, ಇಂದಿರಾಗಾಂಧಿ ಅವರ ಜನ್ಮದಿನವಾದ ಅ.10ರಿಂದ ಸುವರ್ಣ ಮಹೋತ್ಸವದ ಕಾರ್ಯಕ್ರಮಗಳು ಆರಂಭವಾಗಲಿವೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾಹಿತಿ ನೀಡಿದರು.

ಬಳ್ಳಾರಿಯಲ್ಲಿ ಅ.10ರಂದು ಸುವರ್ಣ ಮಹೋತ್ಸವದ ಕಾರ್ಯಕ್ರಮ ಆರಂಭವಾಗಿ, ಎಲ್ಲ ಜಿಲ್ಲೆಗಳಲ್ಲೂ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಬೆಂಗಳೂರಿನಲ್ಲಿ ನವೆಂಬರ್ 18 ಮತ್ತು 19ರಂದು ರಾಜ್ಯಮಟ್ಟದ ಕಾರ್ಯಕ್ರಮ ನಡೆಯಲಿದೆ ಎಂದರು.

ಪ್ರಶಸ್ತಿ: ಪರಿಸರದ ಉಳಿವಿಗಾಗಿ ಕೆಲಸ ಮಾಡುತ್ತಿರುವ ವ್ಯಕ್ತಿ ಮತ್ತು ಸಂಘ–ಸಂಸ್ಥೆಗಳಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಅಂಗವಾಗಿ, ಜಿಲ್ಲಾ ಮಟ್ಟದಲ್ಲಿ ‘ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿ’ ನೀಡಲಾಗುವುದು ಎಂದು ತಿಳಿಸಿದರು.

ಸಲಹೆಗಾರ: ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವವನ್ನು ಅದ್ಧೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮಂಡಳಿಯ ಸಲಹೆಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ನರೇಂದ್ರ ಸ್ವಾಮಿ ಹೇಳಿದರು.

‘ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಮಂಜೂರಾಗಿರುವ ಶೇ60ರಷ್ಟು ಹುದ್ದೆಗಳು ಖಾಲಿ ಇದ್ದು, ಇದರ ಭರ್ತಿಗೆ ಸರ್ಕಾರ ಅನುಮೋದನೆ ನೀಡಿದೆ ಎಂದರು.

ಚಿತ್ರಕಲೆ, ರೀಲ್ಸ್‌ಗೆ ಬಹುಮಾನ

ಸುವರ್ಣ ಮಹೋತ್ಸವದ ಅಂಗವಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಪರಿಸರ ಸಂರಕ್ಷಣೆಯ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ₹3 ಸಾವಿರ ಬಹುಮಾನ ನೀಡಲಾಗುತ್ತದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಅವರು ತಿಳಿಸಿದರು.

ಯುವಕರಿಗಾಗಿ ‘ಪರಿಸರದ ಬಗ್ಗೆ ರೀಲ್ಸ್ ಮಾಡಿ, ಬಹುಮಾನ ಗೆಲ್ಲಿ’ ಎಂಬ ರಾಜ್ಯಮಟ್ಟದ ಕಾರ್ಯಕ್ರಮ ಆಯೋಜಿಸಲಾಗಿದೆ. ಪರಿಸರ ಕಾಳಜಿ, ಸಂರಕ್ಷಣೆಯ ಸಂದೇಶ ಸಾರುವ ಉತ್ತಮ ರೀಲ್ಸ್‌ಗಳನ್ನು ಪರಿಗಣಿಸಿ, ಪ್ರಥಮ ಬಹುಮಾನವಾಗಿ ₹50 ಸಾವಿರ, ದ್ವಿತೀಯ ಬಹುಮಾನವಾಗಿ ₹25 ಸಾವಿರ ಹಾಗೂ ತೃತೀಯ ಬಹುಮಾನವಾಗಿ ₹25 ಸಾವಿರ ನೀಡಲಾಗುವುದು ಎಂದರು.

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

BDA AUCTIONED SITE FOR SALE IN THE PRIME LOCALITY

Property / Site bearing No. 17, 4th Cross, Maruthinagar, Nagarabhavi Main Road, 1st Stage, Maruthinagar, Chandra Layout, Bangalore-560 072, measuring 40'x40' = 1600 sqft. (Adjacent to "MARUTHI ARCADE").

Interested parties may Contact: 984410 16132 from 9am to 5pm

ಎಂ. ಹನುಮಂತಯ್ಯ ಅವರಿಗೆ Ph.D. ಪದವಿ ಪ್ರದಾನ

ಸರಕಾರಿ ಪ್ರಥಮ ದರ್ಜೆ ಕಾಲೇಜು, ವರ್ತೂರು, ಬೆಂಗಳೂರು ... ಎಂ. ಹನುಮಂತಯ್ಯ ಅವರಿಗೆ, "Impact of Information and Communication Technology on Floriculture Crops in Karnataka: An Analysis of Production, Processing and Marketing" ಎಂಬ ವಿಷಯದ ಕುರಿತು ಪಿಎಚ್.ಡಿ. ಪದವಿ ಪ್ರದಾನ ಮಾಡಲಾಗಿದೆ.

ಅರುಣ ಸಿಲ್ಕ್ಸ್
ದೀಪಾವಳಿ ಹಾಗೂ ವಾರ್ಷಿಕೋತ್ಸವದ ಪ್ರಯುಕ್ತ
DISCOUNT SALE 10% to 50%
• ವೆಡ್ಡಿಂಗ್ ಸ್ಯಾರಿಸ್
• ಫ್ಯಾನ್ಸಿ ಸ್ಯಾರಿಸ್
• ಸಲ್ವಾರ್ಸ್
• ಡ್ರೆಸ್ ಮೆಟೀರಿಯಲ್ಸ್
• ಮೆನ್ಸ್ • ಕಿಡ್ಸ್ ವೇರ್
*On Selected Counter
ಅರುಣ ಸಿಲ್ಕ್ ಪ್ಯಾರಡೈಸ್ #713, ... ರಾಜಾಜಿನಗರ ಬೆಂಗಳೂರು- 86 Ph : 080 23197755
ಶ್ರೀ ಅರುಣ ಸಿಲ್ಕ್ಸ್ #141, 1ನೇ ಮುಖ್ಯರಸ್ತೆ, ... ಕೆಂಗೇರಿ ಉಪನಗರ, ಬೆಂಗಳೂರು- 60 Ph : 080 29917755
ಪಾರ್ಕಿಂಗ್ ಸೌಲಭ್ಯವಿದೆ Mob: 76764 05040 ಭಾನುವಾರ ಸಹ ತೆರೆದಿರುತ್ತದೆ

CREDAI KARNATAKA
LOOKING TO INVEST IN BENGALURU?
ಬೆಂಗಳೂರಿನ ಪ್ರತಿಷ್ಠಿತ 48 ಡೆವಲಪರ್‌ಗಳು ತಮ್ಮ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸುತ್ತಿದ್ದಾರೆ
CREDAI KARNATAKA Presents REALTY EXPO 2025
ಅಕ್ಟೋಬರ್ 10TH ಶುಕ್ರವಾರ | 11TH ಶನಿವಾರ | 12TH ಭಾನುವಾರ
Displaying properties from: ಬೆಂಗಳೂರು | ಮಂಗಳೂರು | ಮೈಸೂರು
KTPO, Whitefield
ಕುಂದಲಹಳ್ಳಿ / ನಲ್ಲೂರಹಳ್ಳಿ ಮೆಟ್ರೋ ಸ್ಟೇಷನ್ ಹತ್ತಿರ, ಬೆಂಗಳೂರು.
ENTRY FREE | AMPLE CAR PARKING
Scan to Register
Call us: +91 99645 93355 | +91 99645 92255
#YourDreamHome www.credaikarnataka.com #OoralliOnduMane

PUBLIC NOTICE

PUBLIC NOTICE

This public notice is hereby given that our client intends to lease land measuring 1 Acre – 25 Gunta (one acre – twenty – five gunta) comprised in Survey No. 23 situated at Seeghalli Village, Bidarahalli Hobli, Bangalore East Taluk (“**Said Land**”), from its present owner, DSR Prime Developers LLP (“**Owner**”), bounded as under:

North: Private Property bearing Survey No. 24

South: Private Property bearing Survey No. 23

East: Land in Survey No. 23

West: Road

In view of the above facts, this public notice is issued in the interest of all concerned and the general public so that if any entity/person, including any bank, financial institution, credit society or third party has any right, title, claim or interest over Said Land or has any objections to above-referred intended transaction by our client, or if any entity/person including any bank, financial institution, credit society or third party has any knowledge or is party to any sale, exchange, assignment, gift, license, tenancy, inheritance, pending litigation, possession, contract/ agreement, development rights, partnership, family arrangement/ settlement, decree or order of any Court of law / tribunal, hypothecation, lien, mortgage, charge, encumbrance, acquisition by the Government or any entity, prohibition or any other impediment in respect of Said Land, such entity/person may inform the undersigned, with documentary proof, within 15 (fifteen) days of the publication of this public notice, failing which, it shall be presumed that no adverse right, title, interest, share, claim or demand of any nature whatsoever exists in or upon or in respect of the Said Land, and the Owner is vested with absolute, clear, marketable and transferrable right, title and interest to the Said Land. It shall also be deemed that there are no impediments in respect of any future agreement/ transaction in respect of the Said Land.

Date: 10-10-2025

Arnav Sahni
Email: arnav.sahni@amsshardul.com
Contact Number: 7428295219
Shardul Amarchand Mangaldas
Amarchand Towers, 216 Okhla Industrial Estate, Phase III, New Delhi-110020, India

REAL ESTATE SELLING

Flat

Basavanagudi

FOR RENT FLAT 2BHK 1100 SFT 2 BATHROOMS, GROUND FLOOR ALL AMENITIES READY OCCUPATION 1ST NOVEMBER VEG FAMILIES ONLY: 9886019240

Residential/ Commercial

Bangalore North

BDA E-KHATA 20*30 East Face Excellent Location at Nadaprabhu Kempegowda Layout close to 330ft PRR2 Contact Owner: 9535629981, 8073367645

Sites

Jigani

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

REAL ESTATE BUYING

Sites

Nagarabhavi

WANTED BDA_SITE
30x40, 40x60, 50x80 Nagarabhavi, Rajajinagar Housing Cooperative Society, Visweswaraiah layout Kempegowda Layout. 8105688602.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Announcements

I, SAROJA B (BASAPPA) W/o. C.H.RAJAGOPAL Residing at No.4, 11th Main Road Shivanagar, Rajajinagar Bangalore -560010. Do hereby declare that in my Education records &'Passport (bearing No. M9396782) & some documents my date of birth is entered as 01-06-1964 instead of 10-10-1965. In further I will request the concerned authorities to do the correction & consider my date of birth as 10-10-1965, vide affidavit dated 29-09-2025 Before Notary C.K Anupama Bangalore

Change of Name

CHANGE OF NAME
I, **Anushka Londhe,** residing at Tuba Palace 8, Hennur Main Road, Lingarajpuram, Bengaluru North, Bengaluru-560084, have changed my name to **ANUSHKA Y LONDHE** vide affidavit dated 06.10.2025 before notary Y.R. Chandrasekar Bengaluru. Henceforth I shall be called **ANUSHKA Y LONDHE** only

CHANGE OF NAME
I, **Meher Taj Samad,** residing at No.5, Opp. 297, HMT Layout, V.V. Nagar, Bengaluru-560032, have changed my name to **MEHER TAJ** vide affidavit dated 09.10.2025 before notary D. Guna Shekar Bengaluru. Henceforth I shall be called **MEHER TAJ** only

CHANGE OF NAME
I, **SRINIVASA BHAT Y M & SRINIVASA BHATTA YALAGODU MANJUNATH,** residing at No.914, 3rd Cross, Dwaraka Nagar, Channasandra, Rajarajeshwari Nagar, Bengaluru-560098, declare that the above names pertain to me only. Henceforth I shall be known as **SRINIVASA BHAT Y M** vide affidavit 09.10.2025 before notary K.V. Prema Kumari, Bengaluru

CHANGE OF NAME
I, **Priya Philomin,** aged about 50 years, W/o. Prasad Rao, residing at No.206, Near Kaveri Circle, Kaveri Building, Kunjibettu, Kadiyall, Udupi Tq & Dist, have changed my name to **PRIYA PRASAD** vide affidavit dated 08.10.2025 before notary Indira K, Udupi.

I,SIRI MOHANA HOSAMANE MOHANA GOWDA S/o.Mohana Gowda H M residing at`No.35/3, BHCS- Layout, Thurahalli, Subramanyapura Post, Bangalore-560061 have`changed my`Name`to SIRI MOHANA vide`Affidavit Dtd:06.10.2025 Sworn`Before Notary G.R.Rajanna, Bangalore

SARAVANA. #38/1, Nandini Nilaya, 4th Cross, Venkateshwara Layout, Suddaguntepalya, Bengaluru-29, have changed my name to SARAVANA. K. Vide affidavit dated- 09/10/2025

Lost

DOCUMENT LOST
I, **SHANTHA,** Residing at # 20,2nd Cross, RR Layout, Pattanagere, Rajarajeshwari Nagar, Bengaluru, have lost my **Original Sale Deed, Document No./ Identification: Servey No. 15/1, 16 Khata No. 314, Site No.20.** While transit. If found please contact: **8971110821**

CAUTION NOTICE

This is to notify the General Public that our client **Mr.Mohamed Ebrahim Sait,** Son of Mr.Haroon Sait, Aged about 68 years, Residing at: No.39, 1st Floor, Victoria Layout, 3rd Cross, Vanarpet, Bangalore South, Bengaluru–560047 is the agreement holder having subsisting rights in respect of the below mentioned Schedule Property, having entered into an Agreement to Sell dated 12/03/2025 with Mrs.Naseema Saleem, Wife of Mr.Syed Saleem Ahmed, Aged about 64 years, Residing at: No.T3, 4th Floor, Golden Heights Apartments, 54, Millers Road, 2nd Cross, Bangalore–560046. The said Agreement to Sell dated 12/03/2025 is in force and our client has made substantial payments. Thus the General Public is hereby cautioned not to deal with the Schedule Property. Any person/s dealing with the Schedule Property without our client's consent will derive no title and he/she/they will be doing so at their own risks and costs and will not be binding on our client and our client will take necessary action against such person/s as per law.

:SCHEDULE PROPERTY:

All that Property consisting of Site with a Commercial Building bearing Municipal No.411 (Old Site No.411), situated at 7th Block, Koramangala, Ward No. 147/Adugodi, P.I.D. No.67-7-411, Bangalore and Site measuring East to West: 12 Mtrs and North to South: 9.15 Mtrs and totally measuring 109.80 Sq.Mtrs equivalent to 1182 Sq.Ft, with a building comprising of Basement Floor, Ground Floor, First Floor, Second Floor and Terrace Floor and entire property is bounded by:-

East by : Road;
West by : MICO Property;
North by : Property No.412; and
South by : Site No.110.

YASEEN BABU,
K.M. LEGAL ADVOCATES,
No.1C, 'WILOCRISA', # 14, Rest House Crescent Road, BANGALORE-560001. Ph : +91 9845855933
email: kmlegaladvocates@gmail.com

Place: Bangalore **Date:** 10/10/2025

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಯಲಹಂಕ: ಪ್ರೇಮಿಗಳ ಸಾವು

ಪೆಟ್ರೋಲ್ ಸುರಿದುಕೊಂಡು ಯುವಕ ಆತ್ಮಹತ್ಯೆ, ಉಸಿರುಗಟ್ಟಿ ಮೃತಪಟ್ಟ ಪ್ರೇಯಸಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಯಲಹಂಕದ ಕೂಲ್ ಕಂಫರ್ಟ್ ಲಾಡ್ಜ್‌ನ ಕೊಠಡಿಯಲ್ಲಿ ತಂಗಿದ್ದ ಪ್ರೇಮಿಗಳು ಮೃತಪಟ್ಟಿದ್ದು, ಯಲಹಂಕ ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಮೇಶ್ ಬಡ್ಡಿವಡ್ಡರ್ (25), ಕಾವೇರಿ ಬಡಿಗೇರ್ (22) ಮೃತಪಟ್ಟವರು ಎಂದು ಗುರುತಿಸಲಾಗಿದೆ.

ಲಾಡ್ಜ್‌ಗೆ ನೀಡಿದ್ದ ಗುರುತಿನ ಚೀಟಿ ಆಧರಿಸಿ ಮೃತ ಪ್ರೇಮಿಗಳ ಹೆಸರು ಗುರುತಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ಕಿಚನ್ ಸಿಕ್ಸ್ ಫ್ಯಾಮಿಲ್ ರೆಸ್ಟೊರೆಂಟ್ ಕಟ್ಟಡದಲ್ಲಿ ಎಂಟು ಕೊಠಡಿಗಳ ಕೂಲ್ ಕಂಫರ್ಟ್ ಲಾಡ್ಜ್ ಇದೆ. ಅದರಲ್ಲಿ ಪ್ರೇಮಿಗಳು ತಂಗಿದ್ದರು. ಕೊಠಡಿಯಲ್ಲಿ ಬೆಂಕಿ ಕಾಣಿಸಿದ್ದನ್ನು ಗಮನಿಸಿದ್ದ ವಸತಿಗೃಹದ ಸಿಬ್ಬಂದಿ ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದು ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿ ಕೊಠಡಿ ಪರಿಶೀಲಿಸಿದಾಗ ಯುವಕ ಸಜೀವ ದಹನವಾಗಿದ್ದರೆ, ಯುವತಿಯ ಮೃತದೇಹವು ಶೌಚಾಲಯದಲ್ಲಿ ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದರು.

ಕಾವೇರಿ ಸಮೀಪದ ಕಟ್ಟಡದಲ್ಲಿರುವ ಸ್ಪಾದಲ್ಲಿ ಕೆಲಸ ಮಾಡುತ್ತಿದ್ದರು. ಎಂಟು ದಿನಗಳಿಂದ ರಮೇಶ್ ಹಾಗೂ ಕಾವೇರಿ ಈ ವಸತಿ ಗೃಹದಲ್ಲಿ ತಂಗಿದ್ದರು ಎಂದು ಮೂಲಗಳು ತಿಳಿಸಿವೆ.

ಘಟನೆಗೆ ನಿಖರ ಕಾರಣ ಗೊತ್ತಾಗಿಲ್ಲ. ಇಬ್ಬರ ನಡುವೆ ಜಗಳವಾಗಿ ಮೊದಲಿಗೆ ಯುವಕ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದು. ಭಯದಿಂದ ಯುವತಿ ಶೌಚಾಲಯಕ್ಕೆ ತೆರಳಿ ಬಾಗಿಲು ಹಾಕಿಕೊಂಡು ಅಲ್ಲಿ ಉಸಿರುಗಟ್ಟಿ ಮೃತಪಟ್ಟಿರುವ ಸಾಧ್ಯತೆಯಿದೆ ಎಂದು ಪೊಲೀಸರು ಹೇಳಿದರು.

ವಿದ್ಯುತ್ ಶಾರ್ಟ್ ಸರ್ಕಿಟ್ ಘಟನೆಗೆ ಕಾರಣವಾಗಿರಬಹುದೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ. ಘಟನಾ ಸ್ಥಳಕ್ಕೆ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಹಾಗೂ ‘ಸೋಕೊ’ ತಂಡದವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅವರ ವರದಿ ಬಂದ ಬಳಿಕ ಘಟನೆ ಹೇಗಾಯಿತು ಎಂಬುದು ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು.

ಪೆಟ್ರೋಲ್ ಕೊಂಡೊಯ್ದ ದೃಶ್ಯ ಸೆರೆ?: ಸಿ.ಸಿ.ಟಿ.ವಿ. ಪರಿಶೀಲನೆ ನಡೆಸಲಾಗಿದೆ. ಗುರುವಾರ ಮಧ್ಯಾಹ್ನದ ವೇಳೆ ಕಾವೇರಿ ಕೊಠಡಿಯಲ್ಲೇ ಇದ್ದರು. ರಮೇಶ್ ಹೊರಗೆ ಬಂದು ಬಾಟಲಿಯೊಂದಿಗೆ ವಸತಿಗೃಹ ಪ್ರವೇಶಿಸುತ್ತಿರುವ ದೃಶ್ಯ ಸೆರೆಯಾಗಿದೆ. ಆತ್ಮಹತ್ಯೆ ಮಾಡಿಕೊಳ್ಳಲು ಪೆಟ್ರೋಲ್ ಖರೀದಿಸಿ ಕೊಂಡೊಯ್ದಿರುವ ಸಾಧ್ಯತೆಯಿದೆ ಎಂದು ಪೊಲೀಸರು ಹೇಳಿದರು.

ಪ್ರಚೋದನಕಾರಿ ಪೋಸ್ಟ್: 60 ಖಾತೆ ನಿಷ್ಕ್ರಿಯಗೊಳಿಸಿದ ಪೊಲೀಸರು

ಸಾಮಾಜಿಕ ಮಾಧ್ಯಮದಲ್ಲಿ ಪ್ರಚೋದನಕಾರಿ ಪೋಸ್ಟ್‌ಗಳನ್ನು ಹಾಕುತ್ತಿದ್ದ 60ಕ್ಕೂ ಹೆಚ್ಚು ಖಾತೆಗಳನ್ನು ನಗರದ ವಿವಿಧ ಠಾಣೆಗಳ ಸಾಮಾಜಿಕ ಜಾಲತಾಣ ವಿಭಾಗದ ಸಿಬ್ಬಂದಿ ನಿಷ್ಕ್ರಿಯಗೊಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸಾಮಾಜಿಕ ಜಾಲತಾಣಗಳಲ್ಲಿ ರೌಡಿಶೀಟರ್‌ಗಳ ಪರ ವಿಡಿಯೊ ಹಾಗೂ ಫೋಟೊಗಳು ಅಪ್‌ಲೋಡ್ ಮಾಡುತ್ತಿದ್ದವರನ್ನೂ ರೌಡಿಪಟ್ಟಿಗೆ ಸೇರಿಸಿದ್ದ ಪೊಲೀಸರು ಇದೀಗ ಅವರ ಖಾತೆಗಳನ್ನು ನಿಷ್ಕ್ರಿಯಗೊಳಿಸುವ ಪ್ರಕ್ರಿಯೆ ಆರಂಭಿಸಿದ್ದಾರೆ ಎಂದು ಗೊತ್ತಾಗಿದೆ.

ದಕ್ಷಿಣ ವಿಭಾಗದ ಪೊಲೀಸರು 17 ಖಾತೆಗಳನ್ನು ನಿಷ್ಕ್ರಿಯಗೊಳಿಸಿದ್ದಾರೆ. ಜತೆಗೆ, ಅವುಗಳ ಅಡ್ಮಿನ್‌ಗಳಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಿ ಎಚ್ಚರಿಕೆ ನೀಡಿದ್ದಾರೆ. ಮತ್ತೊಮ್ಮೆ ಇಂತಹ ಪೋಸ್ಟ್ ಅಥವಾ ವಿಡಿಯೊಗಳನ್ನು ಅಪ್‌ಲೋಡ್ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಸಮಾಜದ ಸ್ವಾಸ್ಥ್ಯ ಹಾಳು ಮಾಡುವಂತಹ ಪೋಸ್ಟ್‌ಗಳನ್ನು ಹಾಕುವ ಖಾತೆಗಳ ಮೇಲೆ ನಿಗಾ ವಹಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಮುಖ್ಯಸ್ಥನ ಅಮಾನತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪ ಹೊತ್ತಿರುವ ನಗರದ ಖಾಸಗಿ ಕಾಲೇಜಿನ ವಿಭಾಗವೊಂದರ ಮುಖ್ಯಸ್ಥ (ಎಚ್‌ಒಡಿ) ಸಂಜೀವ್ ಕುಮಾರ್ ಮಂಡಲ್ ಅವರನ್ನು ಅಮಾನತು ಮಾಡಬೇಕು ಎಂದು ಆಗ್ರಹಿಸಿ ಕಾಲೇಜು ಆವರಣದಲ್ಲಿ ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು.

ತಿಲಕ್‌ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪೊಲೀಸರು ಆರೋಪಿಯನ್ನು ಬಂಧಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಸಂಜೀವ್ ಕುಮಾರ್ ಮಂಡಲ್ ಅವರನ್ನು ತಕ್ಷಣವೇ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು. ಆಡಳಿತ ಮಂಡಳಿ ಪದಾಧಿಕಾರಿಗಳು, ಉಪನ್ಯಾಸಕರ ಮಾತಿಗೂ ಮಣಿಯದೇ ವಿದ್ಯಾರ್ಥಿಗಳು ಕಾಲೇಜಿಗೆ ಮುತ್ತಿಗೆ ಹಾಕಿದರು.

19 ವರ್ಷದ ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ಸಂಜೀವ್ ಕುಮಾರ್ ಮಂಡಲ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 75 ಅಡಿ ಎಫ್‌ಐಆರ್ ದಾಖಲಾಗಿತ್ತು. ವಿಚಾರಣೆಗೆ ಬಂದಾಗ ಆರೋಪಿಯನ್ನು ಬಂಧಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದರು. ಸದ್ಯ ಆರೋಪಿ ತಲೆಮರೆಸಿಕೊಂಡಿದ್ದಾರೆ ಎಂದು ಹೇಳಲಾಗಿದೆ.

‘ಕಾಲೇಜಿನಲ್ಲಿ ಬಿಸಿಎ ಪದವಿಯ 3ನೇ ವರ್ಷದ ವಿದ್ಯಾರ್ಥಿನಿಯನ್ನು ಸೆ.25ರಂದು ಸಂಜೀವ್ ಕುಮಾರ್ ಮಂಡಲ್ ಅವರು ಮನೆಯಲ್ಲಿ ಪತ್ನಿ, ಮಕ್ಕಳು ಇರುವುದಾಗಿ ಹೇಳಿ ಊಟಕ್ಕೆ ಕರೆದುಕೊಂಡು ಹೋಗಿದ್ದರು. ಜಯನಗರದ 9ನೇ ಕಾಲೊನಿಯ ಕಾರ್ಪೊರೇಷನ್ ಕಾಲೊನಿಯಲ್ಲಿ ಅವರ ಮನೆ ಇದೆ. ಮನೆಗೆ ಹೋದ ಬಳಿಕ ಮನೆಯಲ್ಲಿ ಯಾರೂ ಇಲ್ಲವೆಂದು ತಿಳಿಸಿದ್ದರು. ಕುಡಿಯಲು, ತಿನ್ನಲು ಏನಾದರೂ ಬೇಕಾ ಎಂದು ಕೇಳಿದ್ದರು. ಆಗ ನಾನು ಗಾಬರಿಯಿಂದ ಬೇಡವೆಂದು ಹೇಳಿದ್ದೆ’ ಎಂದು ವಿದ್ಯಾರ್ಥಿನಿ ದೂರು ನೀಡಿದ್ದರು.

‘ಸಂಜೀವ್ ಕುಮಾರ್ ಮಂಡಲ್ ಅವರ ಮನೆಯ ಸೋಫಾದಲ್ಲಿ ಕುಳಿತಿದ್ದೆ. ಆಗ ಅವರು ನನ್ನ ಹತ್ತಿರ ಬಂದು, ಪಕ್ಕದಲ್ಲಿ ಕುಳಿತು ಹಾಜರಾತಿ ಕಡಿಮೆಯಿದೆ ಎಂದು ಹೇಳಿ ಭುಜದ ಮೇಲೆ ಕೈಹಾಕಿ ಅನುಚಿತವಾಗಿ ವರ್ತಿಸಿದ್ದರು. ಅದಕ್ಕೆ ವಿರೋಧಿಸಿದಾಗ, ನಿನ್ನ ಹಾಜರಾತಿ ಕಡಿಮೆಯಿದ್ದು, ಹೆಚ್ಚು ಮಾಡುತ್ತೇನೆ. ಅಂಕಗಳನ್ನೂ ಹೆಚ್ಚಿಸುತ್ತೇನೆ ಎಂದು ಹೇಳಿ ಕೂದಲು ಸವರುತ್ತಾ ಲೈಂಗಿಕ ದೌರ್ಜನ್ಯ ಎಸಗಿದ್ದರು. ಅಷ್ಟರಲ್ಲಿ ಸ್ನೇಹಿತರು ಕರೆ ಮಾಡಿದ್ದರಿಂದ ಆಗ ತುರ್ತು ಕೆಲಸ ಇರುವುದಾಗಿ ಹೇಳಿ ಅಲ್ಲಿಂದ ಬಂದಿದ್ದೆ’ ಎಂದು ವಿದ್ಯಾರ್ಥಿನಿ ದೂರಿನಲ್ಲಿ ಉಲ್ಲೇಖಿಸಿದ್ದರು.

ಬಾಲಕನಿಗೆ ಡ್ರಗ್ಸ್ ನೀಡಿ ಹಲ್ಲೆ

ಬಾಲಕನೊಬ್ಬನಿಗೆ ಡ್ರಗ್ಸ್ ತೆಗೆದುಕೊಳ್ಳುವಂತೆ ಬಲವಂತ ಮಾಡಿ, ವಿವಸ್ತ್ರಗೊಳಿಸಿ ಹಲ್ಲೆ ನಡೆಸಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಆರು ಬಾಲಕರನ್ನು ಗೋವಿಂದರಾಜನಗರ ಠಾಣೆಯ ಪೊಲೀಸರು, ಬಾಲನ್ಯಾಯ ಮಂಡಳಿಗೆ ಕಳುಹಿಸಿದ್ದಾರೆ.

ಠಾಣೆಯ ಸಾಮಾಜಿಕ ಜಾಲತಾಣ ವಿಭಾಗದ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದ ವೇಳೆ ವಿಡಿಯೊವೊಂದು ಕಾಣಿಸಿತ್ತು. ಆ ವಿಡಿಯೊದಲ್ಲಿ, ಒಬ್ಬ ಬಾಲಕನಿಗೆ ಕಾನೂನು ಸಂಘರ್ಷಕ್ಕೆ ಒಳಗಾದ ಆರು ಬಾಲಕರು ಸೇರಿಕೊಂಡು ಬೆತ್ತಲೆಗೊಳಿಸಿ ಹಲ್ಲೆ ನಡೆಸಿರುವುದು ಹಾಗೂ ಬಲವಂತದಿಂದ ಡ್ರಗ್ಸ್ ಸೇವನೆ ಮಾಡಿಸುತ್ತಿರುವ ದೃಶ್ಯವು ಸೆರೆಯಾಗಿತ್ತು. ಘಟನೆಯ ಸಂಬಂಧ ಪೊಲೀಸರು ಸ್ವಯಂ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

‘ಪ್ರಕರಣ ಭೇದಿಸಲು ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು. ಅ.5ರಂದು ನೊಂದ ಬಾಲಕ ಪತ್ತೆಯಾಗಿದ್ದ. ಆತ ನೀಡಿದ ಮಾಹಿತಿ ಆಧರಿಸಿ, ಕೃತ್ಯ ಎಸಗಿದ ಆರು ಬಾಲಕರನ್ನು ಪತ್ತೆ ಮಾಡಲಾಯಿತು. ನೊಂದ ಬಾಲಕನ ವಿಚಾರಣೆ ನಡೆಸಿದಾಗ ಆರು ತಿಂಗಳ ಹಿಂದೆ ನಡೆದ ಘಟನೆ ಎಂಬುದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

‘ನನ್ನ ಮನೆಯೊಂದಕ್ಕೆ ಕರೆದೊಯ್ದು ಕೊಠಡಿಯಲ್ಲಿ ಕೂಡಿ ಹಾಕಿದ್ದರು. ಸಿಗರೇಟ್‌ನಲ್ಲಿ ಮಾದಕ ವಸ್ತು ತುಂಬಿ ಸೇವನೆ ಮಾಡುವಂತೆ ಒತ್ತಾಯಿಸಿದ್ದರು. ಸಿಗರೇಟ್ ಸೇದಲು ನಿರಾಕರಿಸಿದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದರು. ಘಟನೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದರು ಎಂಬುದಾಗಿ ನೊಂದ ಬಾಲಕ ತಿಳಿಸಿದ್ದ’ ಎಂದು ಪೊಲೀಸರು ಹೇಳಿದರು.

ಆಭರಣ ಮಳಿಗೆಯಲ್ಲಿ ಚಿನ್ನ ದೋಚಿದ್ದವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕಿದ್ದ ಮಳಿಗೆಯಲ್ಲಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಜಾಲಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಹಾವೀರ್ ಸಿಂಗ್ (20) ಹಾಗೂ ಕುಲದೀಪ್ ಸಿಂಗ್ (20) ಬಂಧಿತರು.

ಬಂಧಿತರಿಂದ ₹45 ಲಕ್ಷ ಮೌಲ್ಯದ 429 ಗ್ರಾಂ ಚಿನ್ನಾಭರಣವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರರು ಠಾಣಾ ವ್ಯಾಪ್ತಿಯ ಮುತ್ಯಾಲನಗರದಲ್ಲಿ ಚಿನ್ನಾಭರಣ ಮಳಿಗೆ ನಡೆಸುತ್ತಿದ್ದಾರೆ. ಆ ಅಂಗಡಿಯಲ್ಲಿ ಆರೋಪಿಗಳಿಬ್ಬರೂ ಕೆಲಸಕ್ಕಿದ್ದರು. ಸೆ.26ರಂದು ದೂರುದಾರ ಹಾಗೂ ಅವರ ಪುತ್ರ ಊಟಕ್ಕೆಂದು ಮನೆಗೆ ತೆರಳಿದ್ದಾಗ ಲಾಕರ್‌ನಲ್ಲಿದ್ದ 540 ಗ್ರಾಂ ಚಿನ್ನದ ಆಭರಣಗಳನ್ನು ಕದ್ದು ಆರೋಪಿಗಳು ಪರಾರಿ ಆಗಿದ್ದರು. ಕೃತ್ಯ ನಡೆದ ದಿನವೇ ಅಂಗಡಿ ಮಾಲೀಕರು ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಬೇರೆಡೆ ಕೆಲಸಕ್ಕೆ ಸೇರಿದ್ದರು: ಕೃತ್ಯ ಎಸಗಿದ ಬಳಿಕ ಆರೋಪಿಗಳು ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ ಬಳಿಯಿರುವ ಮತ್ತೊಂದು ಚಿನ್ನದ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ್ದರು. ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

‘ಬೇಸರವಾಗಿದ್ದರೆ ಕ್ಷಮೆ ಯಾಚಿಸುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರ ಕೋರಿಕೆ ಮೇರೆಗೆ ನಮ್ಮ ಮೆಟ್ರೊ ನಿಲ್ದಾಣಗಳಿಗೆ ಸಾಹಿತಿಗಳು, ಸಾಧಕರ ಹೆಸರಿರುವ ಪಟ್ಟಿ ಕಳುಹಿಸಲಾಗಿತ್ತು. ಸಾಧಕರನ್ನು ಗುರುತಿಸಲಾಗಿತ್ತೇ ಹೊರತು ಬೇರೆ ಉದ್ದೇಶ ಇರಲಿಲ್ಲ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದರು.

ಎಲ್.ಎನ್. ಮುಕುಂದರಾಜ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪುತ್ರಿ ತಮ್ಮ ತಂದೆ ಹೆಸರನ್ನು ರಾಜಾಜಿನಗರ ನಿಲ್ದಾಣಕ್ಕೆ ಇಡುವ ವಿಚಾರ ಪ್ರಸ್ತಾಪಿಸಿದ್ದರು. ಇದೇ ವೇಳೆ ನಿಗಮದವರು ಕೋರಿದ್ದರಿಂದ ಆ ಭಾಗದಲ್ಲಿ ನೆಲಸಿದ್ದ ಎಚ್. ನರಸಿಂಹಯ್ಯ ಸಹಿತ ವಿವಿಧ ಕ್ಷೇತ್ರದವರ ಹೆಸರು ಶಿಫಾರಸು ಮಾಡಲಾಗಿತ್ತು. ತರಾತುರಿಯಲ್ಲಿ ಪಟ್ಟಿ ನೀಡುವಂತೆ ಕೋರಿದಾಗ ಮಹಿಳೆಯರು, ಸಾಧಕರ ಹೆಸರು ಬಿಟ್ಟು ಹೋಗಿರಬಹುದು. ಯಾರಿಗಾದರೂ ಬೇಸರವಾಗಿದ್ದರೆ ಕ್ಷಮೆ ಯಾಚಿಸುವೆ’ ಎಂದು ತಿಳಿಸಿದರು.

ಕೋರ್ಟ್ ಕಟ್ಟಡದಿಂದ ಜಿಗಿದು ಕೈದಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ವಿಚಾರಣೆಗೆ ಕರೆತಂದಿದ್ದ ವಿಚಾರಣಾಧೀನ ಕೈದಿಯೊಬ್ಬರು ಸಿಟಿ ಸಿವಿಲ್ ಕೋರ್ಟ್ ಕಟ್ಟಡದ ಐದನೇ ಮಹಡಿಯಿಂದ ಜಿಗಿದು ಗುರುವಾರ ಮಧ್ಯಾಹ್ನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗೌತಮ್ ಆತ್ಮಹತ್ಯೆ ಮಾಡಿಕೊಂಡ ವಿಚಾರಣಾಧೀನ ಕೈದಿ.

ಕೆ.ಆರ್.ಪುರದ ನಿವಾಸಿ ಗೌತಮ್ ಅವರು ತಮ್ಮ ಸಂಬಂಧಿಯೂ ಆಗಿರುವ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಎಂಬ ಆರೋಪವಿತ್ತು. ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಅಡಿ ಆಡುಗೋಡಿ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದರು. ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಿ ಆರೋಪಿಯನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿದ್ದರು. ಗುರುವಾರ ಬೆಳಿಗ್ಗೆ ಆರೋಪಿಯನ್ನು ಪೊಲೀಸರು ನ್ಯಾಯಾಲಯಕ್ಕೆ ವಿಚಾರಣೆಗೆಂದು ಕರೆತಂದಿದ್ದರು. ಆಗ ವಿಚಾರಣಾಧೀನ ಕೈದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಮೂರನೇ ತ್ವರಿತಗತಿ ವಿಶೇಷ ನ್ಯಾಯಾಲಯದಲ್ಲಿ ಗುರುವಾರ ಪೋಕ್ಸೊ ಪ್ರಕರಣದ ವಿಚಾರಣೆ ನಿಗದಿ ಆಗಿತ್ತು. ನ್ಯಾಯಾಂಗ ಬಂಧನದಲ್ಲಿದ್ದ ಗೌತಮ್ ಜೊತೆಗೆ ಮತ್ತೊಂದು ಪ್ರಕರಣದ ಆರೋಪಿಯನ್ನೂ ಪೊಲೀಸರು ಪರಪ್ಪನ ಅಗ್ರಹಾರ ಜೈಲಿನಿಂದ ನ್ಯಾಯಾಲಯಕ್ಕೆ ಕರೆ ತಂದಿದ್ದರು’ ಎಂದು ಮೂಲಗಳು ಹೇಳಿವೆ.

‘ಆರೋಪಿಗೆ ಕೈಕೋಳ ಧರಿಸಿಯೇ ಕೋರ್ಟ್‌ಗೆ ಕರೆತರಲಾಗಿತ್ತು. ಬಳಿಕ ಕೋರ್ಟ್ ಸಭಾಂಗಣದಲ್ಲಿ ಕೈಕೋಳ ತೆಗೆಯಲಾಗಿತ್ತು. ವಿಚಾರಣೆ ಮುಗಿಸಿ ಹೊರಬಂದಿದ್ದ ಗೌತಮ್, ಕುಟುಂಬಸ್ಥರನ್ನು ಕಂಡು ಬೇಸರಕ್ಕೆ ಒಳಗಾಗಿದ್ದರು. ಆಗ ಪೊಲೀಸರ ಕಣ್ತಪ್ಪಿಸಿ 5ನೇ ಮಹಡಿಗೆ ತೆರಳಿದ್ದರು. ಅಲ್ಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಮೃತದೇಹ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆತ್ಮಹತ್ಯೆ ಪ್ರಕರಣದ ಸಂಬಂಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಂದನೆ: ಎನ್‌ಸಿಆರ್ ದಾಖಲು

ವಾಹಿನಿಯೊಂದರ ಚರ್ಚೆ ವೇಳೆ ಅವಾಚ್ಯ ಶಬ್ದಗಳಿಂದ ನಿಂದನೆ ಹಾಗೂ ಬೆದರಿಕೆ ಹಾಕಿದ್ದ ಆರೋಪದ ಮೇಲೆ ಹೋರಾಟಗಾರ ಹರೀಶ್ ಬೈರಪ್ಪ ಅವರ ವಿರುದ್ಧ ಎಸ್.ಜೆ.ಪಾರ್ಕ್ ಠಾಣೆ ಪೊಲೀಸರು ಗಂಭೀರ ಸ್ವರೂಪವಲ್ಲದ ಪ್ರಕರಣ(ಎನ್‌ಸಿಆರ್) ದಾಖಲಿಸಿಕೊಂಡಿದ್ದಾರೆ. ವಸಂತ್ ಗಿಳಿಯಾರ್ ನೀಡಿದ ದೂರಿನ ಮೇರೆಗೆ ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡಿದ್ದಾರೆ ಎಂದು ಗೊತ್ತಾಗಿದೆ.

ವಸಂತ್ ಗಿಳಿಯಾರ್, ಅಬ್ದುಲ್ ರಜಾಕ್ ಮತ್ತು ಹರೀಶ್ ಬೈರಪ್ಪ ಅವರು ಗುರುವಾರ ವಾಹಿನಿಯೊಂದರ ಚರ್ಚೆಯಲ್ಲಿ ಭಾಗಿ ಆಗಿದ್ದರು. ಆಗ ಹರೀಶ್ ಬೈರಪ್ಪ ಮತ್ತು ವಸಂತ್ ಗಿಳಿಯಾರ್ ನಡುವೆ ವಾಗ್ವಾದ ನಡೆದಿತ್ತು. ಅದು ವಿಕೋಪಕ್ಕೆ ಹೋದಾಗ ಹರೀಶ್ ಬೈರಪ್ಪ, ವಸಂತ್ ಗಿಳಿಯಾರ್ ಅವರಿಗೆ ನಿಂದಿಸಿ, ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದು ಹೇಳಲಾಗಿದೆ. ಈ ಸಂಬಂಧ ವಸಂತ್ ಗಿಳಿಯಾರ್ ಎಸ್.ಜೆ.ಪಾರ್ಕ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಶಿಕ್ಷಕಿ ಕೂಡಿಹಾಕಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಗೆ ತೆರಳಿದ್ದ ಶಿಕ್ಷಕಿಯೊಬ್ಬರ ಕರ್ತವ್ಯಕ್ಕೆ ಅಡ್ಡಿಪಡಿಸಿ, ಮನೆಯ ಕಾಂಪೌಂಡ್‌ನಲ್ಲಿ ಕೂಡಿಹಾಕಿದ್ದ ಆರೋಪಿಯನ್ನು ಕೊಡಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಂದೀಪ್(30) ಬಂಧಿತ ಆರೋಪಿ. ಶಿಕ್ಷಕಿ ಸುಶೀಲಮ್ಮ ಅವರು ನೀಡಿದ ದೂರಿನ ಮೇಲೆ ಆರೋಪಿ ವಿರುದ್ಧ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿದ್ದ ಆರೋಪದಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು. ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಸುಶೀಲಮ್ಮ ಅವರು ಬುಧವಾರ ಸಂಜೆ ಕೋತಿ ಹೊಸಹಳ್ಳಿ ಬಳಿ ಮನೆ ಮನೆ ಸಮೀಕ್ಷೆಗೆ ತೆರಳಿದ್ದರು. ಆಗ ಆರೋಪಿಯ ಮನೆಗೂ ತೆರಳಿದ್ದರು. ಜಾತಿ ಸಮೀಕ್ಷೆಗೆ ಬಂದಿದ್ದು, ಆಧಾರ್ ಕಾರ್ಡ್ ಸೇರಿ ಇನ್ನಿತರ ದಾಖಲಾತಿ ನೀಡುವಂತೆ ಮನೆಯಲ್ಲಿದ್ದವರ ಬಳಿ ಸುಶೀಲಮ್ಮ ಕೇಳಿದ್ದರು. ಮಾಹಿತಿ ಪಡೆದು ಆನ್‌ಲೈನ್ ಮೂಲಕ ಒಟಿಪಿ ಸಂಖ್ಯೆ ಪಡೆದುಕೊಂಡಿದ್ದರು. ಅದೇ ಸಂದರ್ಭದಲ್ಲಿ ಸಂದೀಪ್ ಮನೆಗೆ ಬಂದಿದ್ದರು. ಶಿಕ್ಷಕಿಯನ್ನು ಪ್ರಶ್ನೆ ಮಾಡಿದ್ದರು. ಸರ್ಕಾರದ ಆದೇಶದಂತೆ ಸಮೀಕ್ಷೆ ನಡೆಸಲು ಬಂದಿರುವುದಾಗಿ ಶಿಕ್ಷಕಿ ಹೇಳಿದ್ದರು ಎಂದು ಪೊಲೀಸರು ಹೇಳಿದರು.

ಸಂದೀಪ್

‘ಗುರುತಿನ ಚೀಟಿ ತೋರಿಸಿದ್ದರೂ ನಂಬದ ವ್ಯಕ್ತಿ, ನೀವು ಯಾವ ಕಂಪನಿಯವರು? ನನ್ನ ತಾಯಿಯಿಂದ ಒಟಿಪಿ ಏಕೆ ಪಡೆದುಕೊಂಡಿದ್ದೀರಿ’ ಎಂಬುದಾಗಿ ಪ್ರಶ್ನೆ ಮಾಡಿದ್ದರು. ಗೇಟ್ ಬಂದ್ ಮಾಡಿ ಕೂಡಿ ಹಾಕಿದ್ದರು. ಕಂಪನಿ ಪ್ರತಿನಿಧಿಗಳನ್ನು ಕರೆಸುವಂತೆ ಸೂಚಿಸಿದ್ದರು. ಅದಾದ ಮೇಲೆ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಮಾಹಿತಿ ನೀಡಿದ್ದೆ. ಅವರು ಸ್ಥಳಕ್ಕೆ ಬಂದು ರಕ್ಷಿಸಿದರು’ ಎಂದು ಶಿಕ್ಷಕಿ ತಿಳಿಸಿದ್ದಾರೆ.

‘ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮನೆಯಲ್ಲಿ ತಾಯಿ ಹಾಗೂ ಮಗ ವಾಸವಿದ್ದರು ಎಂಬುದು ಗೊತ್ತಾಗಿದೆ. ಸಂದೀಪ್ ಗೊರಗುಂಟೆಪಾಳ್ಯ ಬಳಿ ಟೀ ಶಾಪ್ ನಡೆಸುತ್ತಿದ್ದಾರೆ’ ಎಂದು ಈಶಾನ್ಯ ವಿಭಾಗದ ಡಿಸಿಪಿ ವಿ.ಜೆ.ಸಜೀತ್ ತಿಳಿಸಿದರು.

ಜಲಮಂಡಳಿ ಫೋನ್ ಇನ್ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ಅವರ ಅಧ್ಯಕ್ಷತೆಯಲ್ಲಿ ಅ.10ರ ಶುಕ್ರವಾರ ಬೆಳಿಗ್ಗೆ ನಡೆಯಬೇಕಿದ್ದ ನೇರ ಫೋನ್ ಇನ್ ಕಾರ್ಯಕ್ರಮವನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ.

ಸಾರ್ವಜನಿಕರು ತಮ್ಮ ವಲಯ/ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ ಇಳಿಗುಂಡಿಯಿಂದ ತ್ಯಾಜ್ಯ ನೀರು ಹೊರ ಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಕುರಿತು ಜಲಮಂಡಳಿಯ 24*7 ಸಹಾಯವಾಣಿ ಸಂಖ್ಯೆ 1916 ಮೂಲಕ ಪರಿಹರಿಸಿ ಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮತ್ತು
5 ಬೆಂಗಳೂರು ನಗರ ಪಾಲಿಕೆಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ
ಬೆಂಗಳೂರು ನಗರಾಭಿವೃದ್ಧಿ ಸಚಿವರು

ಬಲಿಷ್ಠ ಬೆಂಗಳೂರು ನಿರ್ಮಾಣಕ್ಕೆ ಸರ್ಕಾರದ ದಿಟ್ಟ ಹೆಜ್ಜೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೊದಲ ಸಭೆ

ದಿನಾಂಕ: 10.10.2025, ಶುಕ್ರವಾರ | ಸಮಯ: ಸಂಜೆ 4.00 ಗಂಟೆಗೆ
ಸ್ಥಳ: ಕೆಂಪೇಗೌಡ ಪೌರ ಸಭಾಂಗಣ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಛೇರಿ ಆವರಣ, ಬೆಂಗಳೂರು

ಬೆಂಗಳೂರು ನಗರದ ನಾಗರಿಕರಿಗೆ ಸ್ಪಂದಿಸಲು

ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ

ಶ್ರೀ ಡಿ.ಕೆ. ಶಿವಕುಮಾರ್ ರವರಿಂದ

"ಬೆಂಗಳೂರ ನಡಿಗೆ"

ನಾಗರಿಕರೊಂದಿಗೆ

ಕಾರ್ಯಕ್ರಮ

ಬೆಳಿಗ್ಗೆ 7.00 ರಿಂದ 8.00 ಗಂಟೆ	ಬೆಳಿಗ್ಗೆ 8.00 ರಿಂದ 9.00 ಗಂಟೆ	ಬೆಳಿಗ್ಗೆ 9.00 ರಿಂದ 10.00 ಗಂಟೆ
ನಾಗರಿಕರೊಂದಿಗೆ ನಡಿಗೆ	ನಾಗರಿಕರೊಂದಿಗೆ ಸ್ಪಂದನೆ	ವಿವಿಧ ಸ್ಥಳ ಪರಿಶೀಲನೆ

ಅಕ್ಟೋಬರ್ 11 2025	ಬೆಂಗಳೂರು ಕೇಂದ್ರ ನಗರ ಪಾಲಿಕೆ	ಸ್ಥಳ: ಲಾಲ್ ಬಾಗ್ ಉದ್ಯಾನವನ
ಅಕ್ಟೋಬರ್ 12 2025	ಬೆಂಗಳೂರು ಉತ್ತರ ನಗರ ಪಾಲಿಕೆ	ಸ್ಥಳ: ಜೆ.ಪಿ. ಉದ್ಯಾನವನ (ಮತ್ತಿಕೆರೆ)
ಅಕ್ಟೋಬರ್ 18 2025	ಬೆಂಗಳೂರು ಪೂರ್ವ ನಗರ ಪಾಲಿಕೆ	ಸ್ಥಳ: ವೆಂಗಯ್ಯ ಇಕೋ ಪಾರ್ಕ್ ಟಿ.ಸಿ. ಪಾಳ್ಯ, ಕೆ.ಆರ್. ಪುರಂ
ಅಕ್ಟೋಬರ್ 19 2025	ಬೆಂಗಳೂರು ದಕ್ಷಿಣ ನಗರ ಪಾಲಿಕೆ	ಸ್ಥಳ: ವೀರ ಯೋಧರ ವನ, ಕೋರಮಂಗಲ
ಅಕ್ಟೋಬರ್ 25 2025	ಬೆಂಗಳೂರು ಪಶ್ಚಿಮ ನಗರ ಪಾಲಿಕೆ	ಸ್ಥಳ: ಗಾಂಧಿ ಉದ್ಯಾನವನ, ನಾಗರಬಾವಿ 2ನೇ ಹಂತ
ಅಕ್ಟೋಬರ್ 26 2025	ಬೆಂಗಳೂರು ಕೇಂದ್ರ ನಗರ ಪಾಲಿಕೆ	ಸ್ಥಳ: ಕಬ್ಬನ್ ಉದ್ಯಾನವನ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಮಳೆ: ಕೋಡಿ ಬಿದ್ದ ಕೆರೆಗಳು, ಬೆಳೆ ಹಾನಿ

ಬುಧವಾರ ಮಧ್ಯರಾತ್ರಿಯಿಂದ ಗುರುವಾರ ನಸುಕಿನವರೆಗೆ ವರುಣನ ಆರ್ಭಟ; ಸಿಡಿಲಿಗೆ ಏಳು ಕುರಿಗಳ ಸಾವು

ಪ್ರಜಾವಾಣಿ ವಾರ್ತೆ

ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಹೋಬಳಿ ವ್ಯಾಪ್ತಿಯಲ್ಲಿ ಕಟಾವಿಗೆ ಸಿದ್ಧಗೊಂಡ ಭತ್ತದ ಬೆಳೆ ಗುರುವಾರದ ಮಳೆಗೆ ನೆಲಕಚ್ಚಿದೆ

ಧಾರವಾಡ ಜಿಲ್ಲೆಯ ಅಣ್ಣಿಗೇರಿ ಪಟ್ಟಣದ ಸುರಕೋಡ ಬಡಾವಣೆ ಜಲಾವೃತಗೊಂಡಿದೆ

ಹುಬ್ಬಳ್ಳಿ: ಧಾರವಾಡ, ಬಳ್ಳಾರಿ, ವಿಜಯನಗರ, ಗದಗ ಜಿಲ್ಲೆಯಲ್ಲಿ ಬುಧವಾರ ಮಧ್ಯರಾತ್ರಿಯಿಂದ ಗುರುವಾರ ನಸುಕಿನವರೆಗೆ ವ್ಯಾಪಕ ಮಳೆಯಾಗಿದೆ. ಪರಿಣಾಮ ಬಹುತೇಕ ಕಡೆ ಭತ್ತದ ಬೆಳೆ ನಾಶವಾಗಿದೆ. ಕಟಾವಿಗೆ ಬಂದ ಬೆಳೆಗಳು ಕೊಚ್ಚಿಕೊಂಡು ಹೋಗಿವೆ. ಧಾರವಾಡ ಜಿಲ್ಲೆಯ ಅಣ್ಣಿಗೇರಿಯ ಬೆಂತುರ ರಸ್ತೆಯಲ್ಲಿ ಸಿಡಿಲು ಬಡಿದು ಏಳು ಕುರಿಗಳು ಸಾವನ್ನಪ್ಪಿವೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಸುರಿದ ಮಳೆಗೆ ಪುಣಬಗಟ್ಟ ಗ್ರಾಮದಲ್ಲಿ ಕೆರೆ ಕೋಡಿ ಬಿದ್ದು, 200ಕ್ಕೂ ಅಧಿಕ ಎಕರೆ ಭತ್ತದ ಬೆಳೆ ನಾಶವಾಗಿದೆ. ಕುರೆಮಾಗನಹಳ್ಳಿಯಲ್ಲಿ ಚೆಕ್ ಡ್ಯಾಂ ಭರ್ತಿಯಾಗಿದೆ. ಉಚ್ಚಂಗಿದುರ್ಗ-ಅರಸೀಕೆರೆ ರಸ್ತೆ ಜಲಾವೃತ ಆಗಿದೆ. ಜಂಗಮ ತುಂಬಿಗೆರೆಯಲ್ಲಿ ಹಳ್ಳ ಭರ್ತಿಯಾಗಿ ಕೋಡಿ ಬಿದ್ದಿದೆ. ಕೂಡ್ಲಿಗಿ ಭಾಗದಲ್ಲಿ ಮಳೆಯಿಂದ ಅಗ್ರಹಾರ ಗ್ರಾಮದ ಬಳಿ ಮೆಕ್ಕೆಜೋಳದ ಹೊಲಕ್ಕೆ ನೀರು ನುಗ್ಗಿದೆ. ಹೊಸಪೇಟೆ, ಮರಿಯಮ್ಮನಹಳ್ಳಿ, ಕಮಲಾಪುರದಲ್ಲೂ ಮಳೆಯಾಗಿದೆ.

ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಹೋಬಳಿಯ ಕೆಲ ಗ್ರಾಮಗಳು, ಎಂ.ಸೂಗೂರು, ನಡವಿ, ನಿಟ್ಟೂರು, ಉಡೇಗೋಳ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸುರಿದ ಭಾರಿ ಮಳೆಯಿಂದ ಭತ್ತದ ಗದ್ದೆಗಳಲ್ಲಿ ನೀರು ನಿಂತು, ಕೊಯ್ಲಿಗೆ ಬಂದಿದ್ದ ಬೆಳೆ ನೆಲಕಚ್ಚಿದೆ. 'ಭತ್ತ ನೆಲಕ್ಕೆ ಬಿದ್ದಲ್ಲಿ ಮೊಳಕೆ ಒಡೆಯುವ ಸಾಧ್ಯತೆ ಇದ್ದು, ಒಂದೆರಡು ದಿನ ಬಿಸಿಲು ಬಂದರೆ ಮಾತ್ರ ಕೊಯ್ಯಲು ಸಾಧ್ಯವಾಗುತ್ತದೆ ಇಲ್ಲದಿದ್ದರೆ ಇನ್ನೂ ಹೆಚ್ಚಿನ ನಷ್ಟವಾಗುತ್ತದೆ' ಎಂದು ರೈತರು ತಿಳಿಸಿದರು.

ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣ ಸೇರಿ ತಾಲ್ಲೂಕಿನ ವಿವಿಧೆಡೆ ಬುಧವಾರ ರಾತ್ರಿಯಿಂದ ಸುರಿದ ಭಾರಿ ಮಳೆಗೆ ಗೋವಿನಜೋಳದ ಹೊಲದಲ್ಲಿ ನೀರು ನಿಂತಿದ್ದು, ಸಾಕಷ್ಟು ಪ್ರಮಾಣದಲ್ಲಿ ಬೆಳೆ ಹಾನಿ ಸಂಭವಿಸಿದೆ.

ಧಾರವಾಡ ಜಿಲ್ಲೆಯ ಅಣ್ಣಿಗೇರಿ ತಾಲ್ಲೂಕಿನ ಭದ್ರಾಪುರ ಗ್ರಾಮದಲ್ಲಿ ಎಂಟು ಮನೆಗಳು ಕುಸಿದಿವೆ. ಅಣ್ಣಿಗೇರಿ ಪಟ್ಟಣದ ಸುರಕೋಡ ಬಡಾವಣೆ, ರಾಜರಾಜೇಶ್ವರಿ ನಗರ, ಅಂಬೇಡ್ಕರ್ ನಗರದಲ್ಲಿ ಮಳೆ ನೀರು ಮನೆಗಳಿಗೆ ನುಗ್ಗಿದೆ. ಹುಬ್ಬಳ್ಳಿ ನಗರದಲ್ಲಿ ಮಳೆಯಾಗಿದೆ.

ಕೊಪ್ಪಳ ವರದಿ: ಒಂದು ವಾರದ ಬಿಡುವಿನ ಬಳಿಕ ಜಿಲ್ಲೆಯಲ್ಲಿ ಉತ್ತಮವಾಗಿ ಮಳೆ ಸುರಿದಿದೆ. ಕೊಪ್ಪಳ ಜಿಲ್ಲಾ ಕೇಂದ್ರ, ಕನಕಗಿರಿ, ಕಾರಟಗಿಯಲ್ಲಿ ಬುಧವಾರ ಮಧ್ಯರಾತ್ರಿಯಿಂದ ಗುರುವಾರ ಬೆಳಿಗ್ಗೆ ತನಕ ಮಳೆ ಬಂದಿದೆ.

ನಾಲ್ಕು ಮನೆಗಳಿಗೆ ಹಾನಿ

ದಾವಣಗೆರೆ: ಜಿಲ್ಲೆಯಲ್ಲಿ ಗುರುವಾರ ನಸುಕಿನವರೆಗೆ ಗುಡುಗು ಸಹಿತ ಧಾರಾಕಾರ ಮಳೆಯಾಗಿದ್ದು, ಹಳ್ಳಗಳು ತುಂಬಿ ಹರಿದಿವೆ. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ನಾಲ್ಕು ಮನೆಗಳಿಗೆ ಹಾನಿಯಾಗಿದೆ.

ಬುಧವಾರ ರಾತ್ರಿ ಆರಂಭವಾದ ಮಳೆ, ಗುರುವಾರ ನಸುಕಿನವರೆಗೆ ಸುರಿಯಿತು. ಮಧ್ಯರಾತ್ರಿ ಆರ್ಭಟಿಸಿದ ವರುಣ, ಬಳಿಕ ಸೋನೆಯಂತೆ ಸುರಿಯಿತು. ಮೆಕ್ಕೆಜೋಳ, ರಾಗಿ ಸೇರಿದಂತೆ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾನಿ ಉಂಟಾಗಿದೆ.

ಹರಿಹರ ತಾಲ್ಲೂಕಿನ ಮಲೇಬೆನ್ನೂರು ಹೋಬಳಿ ವ್ಯಾಪ್ತಿಯಲ್ಲಿ ಹಳ್ಳ ಉಕ್ಕಿ ಹರಿದು ಗುಳದಹಳ್ಳಿ- ಸಂಕ್ಲೀಪುರ ಗ್ರಾಮಗಳ ಸಂಪರ್ಕ ಕಡಿತವಾಗಿತ್ತು. ದೇವರಬೆಳಕೆರೆ ಪಿಕಪ್ ಜಲಾಶಯ ಭೋರ್ಗರೆಯುತ್ತಿದೆ. ಭತ್ತದ ಗದ್ದೆ, ತೋಟಗಳು ಜಲಾವೃತವಾಗಿವೆ.

ದಾವಣಗೆರೆಯ ಸರಸ್ವತಿ ನಗರ, ದೇವರಾಜ ಅರಸು ಬಡಾವಣೆ, ನಿಟುವಳ್ಳಿ ಸೇರಿದಂತೆ ಅನೇಕ ಕಡೆ ಮನೆಗಳಿಗೆ ನೀರು ನುಗ್ಗಿತ್ತು. ದಾವಣಗೆರೆ ಮತ್ತು ಜಗಳೂರು ತಾಲ್ಲೂಕುಗಳಲ್ಲಿ ತಲಾ 4 ಸೆಂ.ಮೀ, ಚನ್ನಗಿರಿ, ಹರಿಹರ ತಾಲ್ಲೂಕಿನಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.12	4,282	5,609
ಹಾರಂಗಿ	2,859	2,857.91	1,040	1,600
ಕಬಿನಿ	2,284	2,282.77	891	1,300
ಹೇಮಾವತಿ	2,922	2,916.74	4,497	6,610
ಲಿಂಗನಮಕ್ಕಿ	1,819	1,816.15	3,352	6,891
ಸೂಪಾ (ಮೀ)	564	559.35	1,451.93	4,681.78
ಮಾಣಿ	595	594.08	890	632
ತುಂಗಭದ್ರಾ	1,633	1,625.99	7,970	10,419
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2,175	2,174.86	1,702	2,340
ಭದ್ರಾ *	186	184.1	3,494	4,084
ಆಲಮಟ್ಟಿ (ಮೀ)	519.6	519.60	20,992	20,992
ನಾರಾಯಣಪುರ (ಮೀ)	492.25	492.24	21,000	7,030

* ನೆಲಮಟ್ಟದಿಂದ

'ಹಾಸನ: ಕಾಫಿ ಕೊಯ್ಲಿಗೆ ಕಷ್ಟ'

ಹಾಸನ: ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಯಸಳೂರು, ಹೆತ್ತೂರು ಹೋಬಳಿ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಹೋಬಳಿಯಲ್ಲಿ ಗುರುವಾರ ಧಾರಾಕಾರ ಮಳೆ ಸುರಿದಿದ್ದು, ಅರೇಬಿಕಾ ಕಾಫಿಗೆ ಹೊಡೆತ ಬಿದ್ದಿದೆ. ರೊಬಸ್ಟಾ ಕಾಫಿಗೆ ಕೊಳೆ ರೋಗ ಬರುತ್ತಿದೆ.

'ಮಳೆಯು ಕಾಫಿ ಬೆಳೆಗೆ ಮಾರಕವಾಗಿದೆ. ಕಳೆದ ವಾರದ ಬಿಸಿಲಿಗೆ ಅರೇಬಿಕಾ ಕಾಯಿ ಬಲಿತಿತ್ತು. ಈಗ ಮಳೆಯಾಗಿದ್ದ-ರಿಂದ ಕೂಡಲೇ ಹಣ್ಣಾಗುತ್ತದೆ. ಮಳೆ ಮುಂದುವರಿದರೆ ಕೊಯ್ಲಿಗೆ ಕಷ್ಟವಾಗುತ್ತದೆ' ಎನ್ನುತ್ತಾರೆ ಕಾಫಿ ಬೆಳೆಗಾರ ಎಚ್.ಬಿ ಪವನ್.

ಹಿರೀಸಾವೆಯಲ್ಲಿ ಬುಧವಾರ ರಾತ್ರಿ 9 ಗಂಟೆಯಿಂದ 11ರವರೆಗೆ ಮಳೆಯಾಗಿದ್ದು, ಚರಂಡಿ ವ್ಯವಸ್ಥೆ ಸರಿ ಇಲ್ಲದೆ, ಮನೆಯೊಂದಕ್ಕೆ ನೀರು ನುಗ್ಗಿದೆ. ಹೊಲಗಳಲ್ಲಿ ನೀರು ನಿಂತಿದೆ. ಜಾನುವಾರುಗಳಿಗೆ ಮೇವು ಸಿಗಲಿದೆ ಎನ್ನುವುದು ರೈತರ ನಿರೀಕ್ಷೆ.

ಸುದ್ದಿ 2 ನಿಮಿಷ

ಕಲಬುರಗಿ– ಬೆಂಗಳೂರು 'ಸ್ಟಾರ್' ವಿಮಾನ ಸಂಚಾರ ಸ್ಥಗಿತ

ಕಲಬುರಗಿ: ಇಲ್ಲಿನ ವಿಮಾನ ನಿಲ್ದಾಣದಿಂದ ಕಲಬುರಗಿ ಮತ್ತು ಬೆಂಗಳೂರು ನಡುವೆ ನಿತ್ಯ ಸಂಚರಿಸುತ್ತಿದ್ದ ಸ್ಟಾರ್ ಏರ್ ವಿಮಾನ ಸಂಚಾರ ಸ್ಥಗಿತಗೊಂಡಿದೆ.

'ಅಕ್ಟೋಬರ್ 15ರಿಂದ ಸೇವೆ ನಿಲ್ಲಿಸುವುದಾಗಿ ಸ್ಟಾರ್ ಏರ್ ವಿಮಾನವು ಮಾಹಿತಿ ನೀಡಿದೆ. ಆದರೆ, ಅಕ್ಟೋಬರ್ 8ರಂದು ಕಲಬುರಗಿಯಿಂದ ಹಾರಿದ್ದೇ ಕೊನೆಯ ವಿಮಾನವಾಗಿದೆ' ಎಂದು ಮೂಲಗಳು ತಿಳಿಸಿವೆ.

'ಕಳೆದ ವರ್ಷದಿಂದ ಸ್ಟಾರ್ ಏರ್ ವಿಮಾನವು ಕಲಬುರಗಿ–ಬೆಂಗಳೂರು ನಡುವೆ ನಿತ್ಯ ವಿಮಾನ ಸೇವೆ ಒದಗಿಸುತ್ತಿತ್ತು. ಪ್ರಯಾಣಿಕರ ಕೊರತೆಯ ಕಾರಣದಿಂದ ಕಳೆದೆರಡು ವಾರಗಳಿಂದ ವಾರಕ್ಕೆ ಮೂರು ದಿನಗಳು ಮಾತ್ರವೇ ವಿಮಾನಗಳು ಸಂಚರಿಸಿವೆ. ಅಕ್ಟೋಬರ್ 15ರಿಂದ ವಿಮಾನ ಸೇವೆ ನಿಲ್ಲಿಸುವುದಾಗಿ ಸಂಸ್ಥೆ ಹೇಳಿದೆ' ಎಂದು ಕಲಬುರಗಿ ವಿಮಾನ ನಿಲ್ದಾಣದ ನಿರ್ದೇಶಕ ಸಕಾ ಜ್ಞಾನೇಶ್ವರರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ಟಾರ್ ಏರ್ ಸಂಸ್ಥೆಗೆ ಉಡಾನ್ ಅಡಿಯಲ್ಲಿ ಬೀದರ್, ಶಿವಮೊಗ್ಗ, ನಾಂದೇಡ್‌ಗೆ ಹೊಸ ಮಾರ್ಗಗಳು ಮಂಜೂರಾಗಿವೆ. ಕಲಬುರಗಿಗೆ ಬಳಕೆಯಾಗುತ್ತಿದ್ದ ವಿಮಾನವನ್ನು ಸಂಸ್ಥೆಯು ನಾಂದೇಡ್ ಮಾರ್ಗಕ್ಕೆ ಬದಲಾಯಿಸಲು ಚಿಂತನೆ ನಡೆಸಿದೆ' ಎಂದು ಮೂಲಗಳು ತಿಳಿಸಿವೆ.

ವಸತಿ ಶಾಲೆಯಲ್ಲಿ ಬೆಂಕಿ ಅವಘಡ; ಬಾಲಕ ಸಾವು

ಮಡಿಕೇರಿ: ತಾಲ್ಲೂಕಿನ ಕಾಟಕೇರಿ ಸಮೀಪ ಹರ್‌ಮಂದಿರ್ ವಸತಿ ಶಾಲೆಯಲ್ಲಿ ಗುರುವಾರ ನಸುಕಿನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ 2ನೇ ತರಗತಿ ವಿದ್ಯಾರ್ಥಿ ಪುಷ್ಪಕ್ ಮೃತಪಟ್ಟಿದ್ದಾನೆ. ಉಳಿದ 52 ವಿದ್ಯಾರ್ಥಿಗಳನ್ನು ರಕ್ಷಿಸಲಾಗಿದೆ. ಅಸ್ವಸ್ಥರಾದ ಇಬ್ಬರು ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ನಸುಕಿನ 4.20ಕ್ಕೆ ಹೊಗೆ ಕಾಣಿಸಿಕೊಂಡಿತು. ನಾಲ್ವರು ಮಕ್ಕಳು ಇತರ ಮಕ್ಕಳನ್ನು ಎಬ್ಬಿಸಿದರು. ಮಕ್ಕಳ ಚೀರಾಟದಿಂದ ಎಚ್ಚೆತ್ತ ವಾರ್ಡನ್, ವಿವಿಧ ಕೊಠಡಿಗಳಲ್ಲಿದ್ದ ಮಕ್ಕಳನ್ನು ಹೊರತರಲು ಮುಂದಾದರು. ಅಗ್ನಿಶಾಮಕ ಪಡೆ ಬೆಂಕಿಯನ್ನು ನಂದಿಸುವಷ್ಟರಲ್ಲಿ ಪುಷ್ಪಕ್ ಸಜೀವ ದಹನವಾಗಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ದೆಹಲಿಯ ಉದ್ಯಮಿ ಓಂಕಾರ್‌ಸಿಂಗ್ ಹಾಗೂ ಇತರರು ಇಲ್ಲಿ ಬಡ ವಿದ್ಯಾರ್ಥಿಗಳಿಗಾಗಿ 2019ರಲ್ಲಿ ವಸತಿಶಾಲೆ ತೆರೆದಿದ್ದರು. ಅಗ್ನಿಶಾಮಕ ದಳದಿಂದ ಅನುಮತಿ ಸೇರಿದಂತೆ ಎಲ್ಲ ಬಗೆಯ ಪರವಾನಗಿಗಳನ್ನೂ ಪಡೆದಿದ್ದರು. 53 ಮಕ್ಕಳು ಇಲ್ಲಿದ್ದರು. ಶಾರ್ಟ್ ಸರ್ಕೀಟ್‌ನಿಂದ ಅವಘಡ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಓಂಕಾರಸಿಂಗ್ ಹಾಗೂ ಶಾಲೆಯ ಆಡಳಿತ ಮಂಡಳಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದಿದ್ದಾರೆ. ಬೆಂಕಿಗೆ ನಿಖರ ಕಾರಣ ಗೊತ್ತಾಗಿಲ್ಲ ಎಂದು ಅಗ್ನಿಶಾಮಕ ಅಧಿಕಾರಿ ನಾಗರಾಜ್ ತಿಳಿಸಿದ್ದಾರೆ. 'ಶಾಲೆಗಷ್ಟೇ ಅನುಮತಿ ಪಡೆಯಲಾಗಿತ್ತು. ವಸತಿಗೆ ಅನುಮತಿ ಪಡೆದಿರಲಿಲ್ಲ' ಎಂದು ಡಿಡಿಪಿಐ ಬಸವರಾಜ್ ಹೇಳಿದ್ದಾರೆ.

ಸಮ್ಮೇಳನದಲ್ಲಿ ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಅವರು ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಗುರುತಿನ ಚೀಟಿ ವಿತರಿಸಿದರು.ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

'ಸಹಾಯಧನ ಬಳಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ (ಪಿಎಂಎಫ್‌ಎಂಇ) ಯೋಜನೆಯಡಿ ರೈತ ಉತ್ಪಾದಕ ಸಂಸ್ಥೆಗಳಿಗೆ ಆಹಾರ ಸಂಸ್ಕರಣಾ ಘಟಕ ಸ್ಥಾಪಿಸಲು ನೀಡುವ ಸಹಾಯಧನವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದ ಪುರಭವನದಲ್ಲಿ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ವತಿಯಿಂದ ಗುರುವಾರ ಆಯೋಜಿಸಿದ್ದ 'ರೈತ ಉತ್ಪಾದಕ ಸಂಸ್ಥೆಗಳ ತಾಂತ್ರಿಕ ಸಮ್ಮೇಳನ' ಉದ್ಘಾಟಿಸಿ ಅವರು ಮಾತನಾಡಿದರು.

ರೈತ ಉತ್ಪಾದಕ ಸಂಸ್ಥೆಗಳು (ಎಫ್‌ಪಿಒ), ಸ್ವ-ಸಹಾಯ ಸಂಘ, ಎನ್‌ಜಿಒಗಳಿಗೆ ಆಹಾರ ಸಂಸ್ಕರಣಾ ಘಟಕ ಸ್ಥಾಪನೆಗೆ ₹3 ಕೋಟಿವರೆಗೆ ಸಹಾಯಧನ ಸಿಗಲಿದೆ. ಈ ಕಾರ್ಯಕ್ರಮದಡಿ ಸಂಸ್ಕರಣೆ, ಮೌಲ್ಯವರ್ಧನೆ, ಪ್ರಯೋಗಾಲಯ ಸ್ಥಾಪನೆಯಂಥ ಚಟುವಟಿಕೆ ಕೈಗೊಳ್ಳಬಹುದು ಎಂದರು.

ಐದು ವರ್ಷದಲ್ಲಿ ಪಿಎಂಎಫ್‌ಎಂಇ ಯೋಜನೆಯಡಿ 6,500ಕ್ಕೂ ಹೆಚ್ಚು ಫಲಾನುಭವಿಗಳಿಗೆ ಸಹಾಯಧನ, ಸಾಲ ಸೌಲಭ್ಯ ಒದಗಿಸಲಾಗಿದೆ. ಈ ಸಾಲಿನಲ್ಲಿ ಐದು ಸಾವಿರ ಕಿರು ಆಹಾರ ಸಂಸ್ಕರಣಾ ಘಟಕ ತೆರೆಯುವ ಗುರಿ ಹೊಂದಲಾಗಿದೆ. ರೈತ ಉತ್ಪಾದಕ ಸಂಸ್ಥೆಗಳು, ಸ್ವ-ಸಹಾಯ ಸಂಘಗಳಿಗೆ ಆಹಾರ ಸಂಸ್ಕರಣಾ ಘಟಕ ಸ್ಥಾಪನೆಗಾಗಿ ಶೇ 35ರಷ್ಟು ಸಹಾಯಧನ ಸಿಗಲಿದೆ ಎಂದರು.

ಕೆಪೆಕ್ ಅಧ್ಯಕ್ಷ ಹರೀಶ್, 'ಸಹಾಯಧನಕ್ಕಾಗಿ ಎಫ್‌ಪಿಒಗಳು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ ಕೆಪೆಕ್‌ಗೆ ಸಲ್ಲಿಸಬೇಕು. ವರದಿ ಸಿದ್ಧಪಡಿಸಲು ₹50 ಸಾವಿರ ಸೇವಾ ಶುಲ್ಕವನ್ನು ಜಿಲ್ಲಾ ಸಂಪನ್ಮೂಲ ವ್ಯಕ್ತಿಗೆ ಅಥವಾ ತಜ್ಞರಿಗೆ ನೀಡಲಾಗುತ್ತದೆ. ವರದಿ ಪರಿಶೀಲಿಸಿ, ಬ್ಯಾಂಕ್‌ಗಳಿಗೆ ಕಳುಹಿಸಲಾಗುವುದು' ಎಂದರು.

ಕಾರ್ಯಕ್ರಮದಲ್ಲಿ ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್, ಜಲಾನಯನ ಅಭಿವೃದ್ಧಿ ಇಲಾಖೆ ನಿರ್ದೇಶಕ ಮೊಹಮ್ಮದ್ ಪರ್ವೇಜ್ ಬಂಥನಾಳ್ ಇತರರು ಇದ್ದರು.

ತಡರಾತ್ರಿ ಡಿಸಿಎಂ ಶಿವಕುಮಾರ್ ಸೂಚನೆ; ಸ್ಟುಡಿಯೊ ಬೀಗ ತೆಗೆಸಿದ ಡಿ.ಸಿ

ಮುಗಿದ ಪ್ರಹಸನ: 'ಬಾಸ್' ನಿರಾಳ

ಪ್ರಜಾವಾಣಿ ವಾರ್ತೆ

ರಾಮನಗರ: ಬಿಡದಿಯ ಜಾಲಿವುಡ್ ಸ್ಟುಡಿಯೊಸ್ ಆ್ಯಂಡ್ ಅಡ್ವೆಂಚರ್ಸ್ ಪಾರ್ಕ್‌ನಲ್ಲಿ 'ಬಿಗ್ ಬಾಸ್' ರಿಯಾಲಿಟಿ ಶೋ ನಡೆಯುತ್ತಿರುವ ಸ್ಟುಡಿಯೊ ಪ್ರವೇಶ ದ್ವಾರಕ್ಕೆ ಹಾಕಿದ್ದ ಬೀಗವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ಮೇರೆಗೆ ಜಿಲ್ಲಾಡಳಿತ ಗುರುವಾರ ನಸುಕಿನಲ್ಲಿ ತೆರೆದಿದೆ.

ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಹಾಗೂ ಸಿಬ್ಬಂದಿಯೊಂದಿಗೆ ನಸುಕಿನಲ್ಲಿ 2.30ಕ್ಕೆ ಜಾಲಿವುಡ್‌ಗೆ ಬಂದು ಬೀಗ ತೆಗೆಸಿದರು. ಇದರೊಂದಿಗೆ ಎರಡು ದಿನಗಳ ಹೈಡ್ರಾಮಾ ಅಂತ್ಯಗೊಂಡಿತು.

ಈಗಲ್ಟನ್ ರೆಸಾರ್ಟ್‌ನಲ್ಲಿ ಆಶ್ರಯ ಪಡೆದಿದ್ದ 17 ಸ್ಪರ್ಧಿಗಳು ಬೆಳಗ್ಗೆ ಬಿಗ್ ಬಾಸ್ ಮನೆಗೆ ಮರಳಿದ್ದು, ಶೋ ಮತ್ತೆ ಆರಂಭವಾಗಿದೆ. ಇದರೊಂದಿಗೆ ಆಯೋಜಕರು ನಿರಾಳರಾಗಿದ್ದಾರೆ.

30 ಎಕರೆಯಲ್ಲಿರುವ ಜಾಲಿವುಡ್ ಪಾರ್ಕ್‌ಗೆ ಒಟ್ಟು ನಾಲ್ಕು ದ್ವಾರಗಳಿವೆ. ಆ ಪೈಕಿ 'ಬಿಗ್ ಬಾಸ್' ಚಿತ್ರೀಕರಣ ನಡೆಯುತ್ತಿರುವ ಸ್ಟುಡಿಯೊ ಇರುವ 'ಸಿ' ಪ್ರವೇಶ ದ್ವಾರಕ್ಕೆ ಹಾಕಿದ್ದ ಬೀಗವನ್ನು ಮಾತ್ರ ತೆಗೆಯಲಾಗಿದೆ. ಮುಖ್ಯ ಪ್ರವೇಶ ದ್ವಾರ ಹಾಗೂ ಇತರ ದ್ವಾರಗಳ ಬೀಗ ಇನ್ನೂ ಹಾಗೆಯೇ ಇವೆ.

ಸಾರ್ವಜನಿಕರ ಪ್ರವೇಶ ಸೇರಿದಂತೆ ಪಾರ್ಕ್‌ನಲ್ಲಿ ಬೇರೆ ಯಾವುದೇ ಚಟುವಟಿಕೆಗಳಿಗೆ ಅವಕಾಶ ನೀಡಿಲ್ಲ. ನಿಯಮ ಉಲ್ಲಂಘನೆ ಸರಿಪಡಿಸಿಕೊಳ್ಳಲು ಪಾರ್ಕ್ ಆಡಳಿತ ಮಂಡಳಿಗೆ ಹತ್ತು ದಿನ ಕಾಲಾವಕಾಶ ನೀಡಲಾಗಿದೆ ಎನ್ನಲಾಗಿದೆ.

ಪಾರ್ಕ್ ಕಾರ್ಯಾಚರಣೆಗೆ ಅನುಮತಿ ಪಡೆಯದಿರುವುದು ಸೇರಿ ವಿವಿಧ ನಿಯಮಗಳ ಉಲ್ಲಂಘನೆಗಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚನೆ ಮೇರೆಗೆ ಅ.6ರಂದು ಜಿಲ್ಲಾಡಳಿತ ಪಾರ್ಕ್‌ಗೆ ಬೀಗ ಹಾಕಿತ್ತು. ಬೀಗ ತೆಗೆಸಲು ಜಾಲಿವುಡ್ ಆಡಳಿತ ಮಂಡಳಿ ಎರಡು ದಿನ ಕಸರತ್ತು ನಡೆಸಿತ್ತು.

ಬಿಗ್‌ಬಾಸ್ ನಿರೂಪಕ ಹಾಗೂ ನಟ ಕಿಚ್ಚ ಸುದೀಪ್ ಸ್ಟುಡಿಯೊ ಬೀಗ ತೆಗೆಸಿ, ಶೋ ನಡೆಸಲು ಅವಕಾಶ ಮಾಡಿಕೊಡುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕೋರಿದ್ದರು. ಡಿ.ಕೆ. ಶಿವಕುಮಾರ್ ಸ್ಟುಡಿಯೊ ಬೀಗ ತೆರವುಗೊಳಿಸುವಂತೆ ಅ. 8ರಂದು ರಾತ್ರಿ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದರು. ಈ ಕುರಿತು ರಾತ್ರಿ 11.21ಕ್ಕೆ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಅದಾದ ಮೂರೇ ತಾಸಿನಲ್ಲೇ ಜಿಲ್ಲಾಧಿಕಾರಿ ಜಾಲಿವುಡ್‌ಗೆ ಬಂದು ಬೀಗ ತೆಗೆಸಿದರು.

ಸ್ಟುಡಿಯೊ ಪ್ರವೇಶದ್ವಾರಕ್ಕೆ ಹಾಕಿದ್ದ ಬೀಗವನ್ನು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ತೆಗೆಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್‌. ಶ್ರೀನಿವಾಸ ಗೌಡ ಇದ್ದಾರೆ

ಕನ್ನಡಪರ ಕಾರ್ಯಕರ್ತರ ಪ್ರತಿಭಟನೆ

ಜಾಲಿವುಡ್ ಬೀಗ ತೆರವುಗೊಳಿಸಿರುವುದನ್ನು ಖಂಡಿಸಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಉಪ ಮುಖ್ಯಮಂತ್ರಿ ಮತ್ತು ಜಿಲ್ಲಾಡಳಿತದ ವಿರುದ್ಧ ಪ್ರತಿಭಟನೆ ನಡೆಸಿದರು. ಈ ವೇಳೆ ಪಾರ್ಕ್ ಒಳಕ್ಕೆ ನುಗ್ಗಿದ ಕೆಲವರನ್ನು ಪೊಲೀಸರು ವಶಕ್ಕೆ ಪಡೆದರು.

'ರಾತ್ರೋರಾತ್ರಿ ಬೀಗ ತೆಗೆಸಿ ಬಿಗ್ ಬಾಸ್ ಶೋ ನಡೆಸಲು ಅವಕಾಶ ನೀಡುವ ತುರ್ತು ಏನಿತ್ತು? ನಿಯಮಗಳು ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕು. ಡಿಸಿಎಂ ಈ ವಿಷಯದಲ್ಲಿ ತೋರಿಸಿರುವ ಆಸಕ್ತಿಯನ್ನು ಈಗಾಗಲೇ ಮುಚ್ಚಿರುವ ಕಾರ್ಖಾನೆಗಳ ವಿಷಯದಲ್ಲೂ ತೋರಿಸಲಿ. ಜನರ ಸಮಸ್ಯೆಗಳ ಪರಿಹಾರದಲ್ಲಿ ತೋರಿಸಲಿ' ಎಂದು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಆದೇಶಕ್ಕಿಲ್ಲ ಕಿಮ್ಮತ್ತು

'ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶವನ್ನು ನಾವು ಪಾಲಿಸಿದ್ದು, ನೀವು ಮಂಡಳಿಗೆ ಮನವಿ ಮಾಡಿ' ಎಂದು ಜಾಲಿವುಡ್ ಆಡಳಿತ ಮಂಡಳಿಗೆ ಜಿಲ್ಲಾಧಿಕಾರಿ ಸಲಹೆ ನೀಡಿದ್ದರು. ಆದರೆ, ಡಿಸಿಎಂ ಸೂಚನೆ ಮೇರೆಗೆ, ಸ್ವತಃ ತಾವೇ ಸ್ಥಳಕ್ಕೆ ಹೋಗಿ ಬೀಗ ತೆಗೆಸಿದರು. ಇದರೊಂದಿಗೆ ಮಂಡಳಿ ಆದೇಶಕ್ಕೆ ಕಿಮ್ಮತ್ತು ಇಲ್ಲದಂತಾಯಿತು.

'ಡಿಸಿಎಂ ಅವರು ಸ್ಟುಡಿಯೊ ಬೀಗ ತೆಗೆಸಿ ಬಿಗ್ ಬಾಸ್ ಪುನರಾರಂಭಕ್ಕೆ ಅವಕಾಶ ಕೊಟ್ಟಿರಬಹುದು. ಆದರೆ, ನಾವು ನಮ್ಮ ಆದೇಶಕ್ಕೆ ಬದ್ಧರಾಗಿದ್ದೇವೆ. ನಿಯಮ ಉಲ್ಲಂಘನೆ ಸರಿಪಡಿಸಿ-ಕೊಳ್ಳುವುದಕ್ಕೆ ಜಾಲಿವುಡ್‌ನವರು ಪ್ರಕ್ರಿಯೆಗಳನ್ನು ಮುಗಿಸಿದ ಬಳಿಕವೇ, ಕಾರ್ಯಾಚರಣೆಗೆ ನಾವು ಅನುಮತಿ ನೀಡುತ್ತೇವೆ' ಎಂದು ಮಂಡಳಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ತಡೆಗಟ್ಟಲು ಯೋಜನೆ ರೂಪಿಸಿ

ಒಂದನೇ ಪುಟದಿಂದ...

'ಕಾಯ್ದೆಯ ಉಪ ಕಲಂ ಸೇರ್ಪಡೆಯ ಹಿಂದಿನ ಉದ್ದೇಶವೆಂದರೆ ನಗರ ಪ್ರದೇಶಗಳ ಕ್ರಮಬದ್ಧತೆಯ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದು, ನಾಗರಿಕ ಸೌಲಭ್ಯಗಳನ್ನು ಸರಿಯಾಗಿ ಒದಗಿಸುವುದು ಮತ್ತು ಸಾರ್ವಜನಿಕ ಮೂಲಸೌಕರ್ಯಕ್ಕೆ ಹೊರೆಯಾಗುವ, ನಾಯಿಕೊಡೆಗಳಂತೆ ಹುಟ್ಟಿಕೊಳ್ಳುವ ಅಕ್ರಮ ಬಡಾವಣೆಗಳನ್ನು ನಿಯಂತ್ರಿಸುವುದೇ ಆಗಿದೆ' ಎಂದು ಪೀಠ ವಿವರಿಸಿದೆ.

'ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದ ಬಡಾವಣೆಗಳ ನಿವೇಶನಗಳಿಗೆ ಸಂಬಂಧಿಸಿದಂತೆ ಇ-ಖಾತಾ ನೀಡುವುದನ್ನು ಸರ್ಕಾರದ ಸುತ್ತೋಲೆಗಳು ನಿರ್ದಿಷ್ಟವಾಗಿ ನಿಷೇಧಿಸುತ್ತವೆ' ಎಂಬ ಪಟ್ಟಣ ಪಂಚಾಯಿತಿ ಪರ ವಕೀಲರ ವಾದವನ್ನು ನ್ಯಾಯಪೀಠ ಪುರಸ್ಕರಿಸಿತು. 'ನಗರಾಭಿವೃದ್ಧಿ ಮತ್ತು ಮುಗ್ಧ ಖರೀದಿದಾರರ ಹಕ್ಕುಗಳ ನಡುವೆ ಸಮತೋಲನ ಸಾಧಿಸುವುದೇ ಶಾಸಕಾಂಗದ ಉದ್ದೇಶವಾಗಿದೆ. ಅಂತೆಯೇ, ನಾಗರಿಕ ಮೂಲಸೌಕರ್ಯ ಮತ್ತು ಪಟ್ಟಣಗಳ ಯೋಜಿತ ಬೆಳವಣಿಗೆಗೆ ಧಕ್ಕೆಯಾಗದಂತೆ ನೋಡಿಕೊಳ್ಳುವುದೂ ಅದರ ಹಿಂದಿನ ಆಶಯವಾಗಿದೆ' ಎಂಬುದು ಮನನೀಯ ಎಂದು ನ್ಯಾಯಪೀಠ ಹೇಳಿದೆ.

ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಮಕ್ಕಳ ಸಾವು

ಪ್ರಜಾವಾಣಿ ವಾರ್ತೆ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಮೈಲಾಪುರ ಗ್ರಾಮದ ಬಳಿ ಗುರುವಾರ ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. ಬಲಕುಂದಿ ಗ್ರಾಮದ ನಿವಾಸಿ ಮೂಕಣ್ಣ ಅವರ ಮಕ್ಕಳಾದ ಮಹಾಂಕಾಳಿ (11) ಹಾಗೂ ಶಿವರಾಜ (9) ಮೃತರು.

'ಮೂಕಣ್ಣ ದಂಪತಿ ಮಕ್ಕಳೊಂದಿಗೆ ಹೊಲಕ್ಕೆ ಹೋಗಿದ್ದರು. ಮಧ್ಯಾಹ್ನ ಕೃಷಿ ಹೊಂಡದತ್ತ ತೆರಳಿದ ಇಬ್ಬರು ಮಕ್ಕಳು ನೀರಿನಲ್ಲಿ ಬಿದ್ದು, ಕೂಗತೊಡಗಿದರು. ಅವರಿಬ್ಬರ ರಕ್ಷಣೆಗೆ ಮೂಕಣ್ಣ ಮತ್ತು ಅವರ ಪತ್ನಿ ಪಾರ್ವತಮ್ಮ ರಕ್ಷಿಸಲು ಹೊಂಡಕ್ಕೆ ದುಮುಕಿದರು. ಇವರ ಹಿಂದೆ ಮತ್ತೊಬ್ಬ ಮಗ 15 ವರ್ಷದ ಬೀರಲಿಂಗ ಹೊಂಡಕ್ಕೆ ಹಾರಿದ್ದಾನೆ. ಎಲ್ಲರೂ ಕೂಗುತ್ತಿರುವುದು ಕಂಡು ಸ್ಥಳೀಯರು, ದಂಪತಿ ಮತ್ತು ಮಗನನ್ನು ರಕ್ಷಿಸಿದರು. ಇನ್ನಿಬ್ಬರು ಮಕ್ಕಳನ್ನು ರಕ್ಷಿಸಲು ಸಾಧ್ಯವಾಗಲಿಲ್ಲ' ಎಂದು ತೆಕ್ಕಲಕೋಟೆ ಠಾಣೆ ಪೊಲೀಸರು ತಿಳಿಸಿದ್ದಾರೆ. ಮಕ್ಕಳ ಮೃತದೇಹಗಳನ್ನು ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಹೊರತೆಗೆದರು.

ಹೈಕೋರ್ಟ್ ಸುದ್ದಿಗಳು

ಮುಡಾ: ತನಿಖಾಧಿಕಾರಿ ಬದಲಾವಣೆ ಕೋರಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಪ್ರಕರಣದ ಲೋಕಾಯುಕ್ತ ತನಿಖಾಧಿಕಾರಿ ಬದಲಾಯಿಸಲು ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಈ ಸಂಬಂಧ ಸಿಆರ್‌ಪಿಸಿ ಕಲಂ 156(3)ರ ಅಡಿ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ತಿರಸ್ಕರಿಸಿ ಗುರುವಾರ ಆದೇಶಿಸಿದರು.

ಇದೇ ವೇಳೆ ನ್ಯಾಯಾಧೀಶರು, 'ಸಮಗ್ರ ವರದಿ ಸಲ್ಲಿಸಲು ಹೆಚ್ಚಿನ ಸಮಯ ಕೋರದೆ ಇಂದಿನಿಂದ 2 ತಿಂಗಳ ಒಳಗಾಗಿ ತನಿಖೆಯನ್ನು ಪೂರ್ಣಗೊಳಿಸಿ' ಎಂದು ಲೋಕಾಯುಕ್ತಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ನವೆಂಬರ್ 15ಕ್ಕೆ ಮುಂದೂಡಿದರು. ಲೋಕಾಯುಕ್ತ ಪರ ವಿಶೇಷ ಪ್ರಾಸಿಕ್ಯೂಟರ್ ವೆಂಕಟೇಶ್ ಅರಬಟ್ಟಿ ಹಾಗೂ ಜಾರಿ ನಿರ್ದೇಶ-ನಾಲಯದ ಪರ ಮಧುಕರ ದೇಶಪಾಂಡೆ ಹಾಜರಾಗಿದ್ದರು.

ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಶಾಸಕ ಬೈರತಿ ಬಂಧನ ಅಗತ್ಯ: ಪ್ರಾಸಿಕ್ಯೂಷನ್

'ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಆರೋಪಿಯಾಗಿರುವ ಕೆ.ಆರ್.ಪುರ ಶಾಸಕ ಬೈರತಿ ಬಸವರಾಜ್ ತನಿಖೆಗೆ ಹಾಜರಾದ ವೇಳೆ ಸುಳ್ಳು ಮಾಹಿತಿ ನೀಡಿದ್ದು ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕಿದೆ' ಎಂದು ರಾಜ್ಯ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಅರುಹಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಭಾರತಿ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸ-ಬೇಕು' ಎಂದು ಕೋರಿ ಪ್ರಕರಣದ ಐದನೇ ಆರೋಪಿಯಾಗಿರುವ ಬೈರತಿ ಬಸವರಾಜ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಷನ್‌ನ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಪ್ರಕರಣದಲ್ಲಿ ಹಲವು ಮಹತ್ವದ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಆರೋಪಿ ಬೈರತಿ ಬಸವರಾಜ್ ವಿರುದ್ಧ ಗಂಭೀರ ಸಾಕ್ಷ್ಯಗಳಿವೆ. ಒಂದು ವೇಳೆ ಸಾಕ್ಷ್ಯಾಧಾರಗಳು ಕೋರ್ಟ್‌ಗೆ ತೃಪ್ತಿ ತರದೇ ಹೋದರೆ ಪ್ರಕರಣ ರದ್ದುಪಡಿಸಬಹುದು' ಎಂದರು.

ಇದನ್ನು ಅಲ್ಲಗಳೆದ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ಈ ಪ್ರಕರಣದಲ್ಲಿ ಪೊಲೀಸರು ಅರ್ಜಿದಾರರ ವಿರುದ್ಧ ಕೋಕಾ (ಕರ್ನಾಟಕ ಸಂಘಟಿತ ಅಪರಾಧ ತಡೆ ಕಾಯ್ದೆ–2000) ಕಾಯ್ದೆ ಹೇರಿದ್ದಾರೆ. ಪೊಲೀಸರು ರಾಜಕೀಯ ದ್ವೇಷದಿಂದ ಈ ಕ್ರಮ ಕೈಗೊಂಡಿದ್ದಾರೆ' ಎಂದು ದೂರಿದರು.

'ಪ್ರಕರಣದ ತನಿಖೆಯನ್ನು ಸ್ವತಂತ್ರ ತನಿಖಾ ಸಂಸ್ಥೆಗೆ ವಹಿಸಲು ಕೋರುವ ಬಗ್ಗೆ ಅರ್ಜಿದಾರರು ಚಿಂತಿಸುತ್ತಿದ್ದಾರೆ. ಹೀಗಾಗಿ, ಮಧ್ಯಂತರ ರಕ್ಷಣೆ ತೆರವುಗೊಳಿಸಬಾರದು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅಂತಿಮ ವಿಚಾರಣೆಯನ್ನು ಇದೇ 23ಕ್ಕೆ ನಿಗದಿಪಡಿಸಿತು. ಅಲ್ಲಿಯವರೆಗೂ ಅರ್ಜಿದಾರರಿಗೆ ನೀಡಲಾಗಿರುವ ಬಂಧನದಿಂದ ರಕ್ಷಣೆ ಆದೇಶವನ್ನು ಮುಂದುವರಿಸಿ ಆದೇಶಿಸಿತು.

ವಕ್ಫ್‌ಗೆ ವಿವಾಹ ನೋಂದಣಿ ಅಧಿಕಾರ: ಆದೇಶ ಹಿಂದಕ್ಕೆ

ವಿವಾಹಿತ ಮುಸ್ಲಿಂ ದಂಪತಿಗೆ ವಿವಾಹ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ರಾಜ್ಯ ವಕ್ಫ್ ಮಂಡಳಿಗೆ ನೀಡಲಾಗಿದ್ದ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆದಿದೆ.

'ವಕ್ಫ್ ಮಂಡಳಿಗಳಿಗೆ ಮುಸ್ಲಿಂ ವಿವಾಹಗಳನ್ನು ಕಡ್ಡಾಯವಾಗಿ ನೋಂದಾಯಿಸುವ ಯಾವುದೇ ಶಾಸನಾತ್ಮಕ ಅಧಿಕಾರ ಇಲ್ಲ' ಎಂದು ಆಕ್ಷೇಪಿಸಿ ಎ.ಆಲಂ ಪಾಷ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮೆಮೊ ಸಲ್ಲಿಸಿದ ಸರ್ಕಾರದ ಪರ ವಕೀಲರು, 'ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ 2023ರ ಆಗಸ್ಟ್ 30ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆ' ಎಂದು ವಿವರಿಸಿದರು. ಅದನ್ನು ದಾಖಲಿಸಿಕೊಂಡ ನ್ಯಾಯಪೀಠ ಅರ್ಜಿಯನ್ನು ವಜಾಗೊಳಿಸಿ ಇತ್ಯರ್ಥಪಡಿಸಿತು.

ಪ್ರಜ್ವಲ್ ಪ್ರಕರಣ: ಎಸ್‌ಪಿಪಿ ನೇಮಕವಾಗಿದೆಯೇ?

ಪ್ರಜ್ವಲ್

'ಮನೆಗೆಲಸದ ಮಧ್ಯವಯಸ್ಕ ಮಹಿಳೆಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ ದುಷ್ಕೃತ್ಯಕ್ಕೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಜೀವಾವಧಿ ಕಠಿಣ ಜೈಲು ಶಿಕ್ಷೆ ರದ್ದುಗೊಳಿಸುವಂತೆ ಕೋರಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯಲ್ಲಿ ರಾಜ್ಯ ಸರ್ಕಾರ ವಿಶೇಷ ಪ್ರಾಸಿಕ್ಯೂಟರ್ ನೇಮಕ ಮಾಡಿದೆಯೇ ಇಲ್ಲವೇ ಎಂಬುದನ್ನು ವಿಶದಪಡಿಸಬೇಕು' ಎಂದು ಹೈಕೋರ್ಟ್ ಸರ್ಕಾರಕ್ಕೆ ಸೂಚಿಸಿದೆ.

ಈ ಸಂಬಂಧ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾ.ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ನಿಧನ ವಾರ್ತೆ

ಅನುರಾಧಾ ಧಾರೇಶ್ವರ

ಧಾರವಾಡ: ಇಲ್ಲಿನ ಮಾಳಮಡ್ಡಿಯ ನಿವಾಸಿ, ಆಕಾಶವಾಣಿ ನಿವೃತ್ತ ಉದ್ಘೋಷಕಿ ಅನುರಾಧಾ ಧಾರೇಶ್ವರ (87) ಗುರುವಾರ ನಿಧನರಾದರು. ಅವರಿಗೆ ಪುತ್ರ ಇದ್ದಾರೆ.

ಹುಬ್ಬಳ್ಳಿಯಲ್ಲಿ ಜನಿಸಿದ್ದ ಅನುರಾಧಾ ಅವರು ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಉದ್ಘೋಷಕಿಯಾಗಿ 30 ವರ್ಷ ಕಾರ್ಯ ನಿರ್ವಹಿಸಿದ್ದರು. 'ಓ ಎನ್ನ ದೇಶ ಬಾಂಧವರೇ..' ಹಾಡು, 'ಗೀತರೂಪಕಗಳು', 'ತಿಂಗಳ ಲೋಕದ ಅಂಗಳದಲ್ಲಿ', 'ಕಿತ್ತೂರು ಚನ್ನಮ್ಮ', 'ಮಹಾತ್ಮ ಗಾಂಧಿ' ಗೀತೆಗಳು, ಕೊಂಕಣಿ ಗೀತೆಗಳು ಅವರಿಗೆ ಹೆಸರು ತಂದುಕೊಟ್ಟಿದ್ದವು.

ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನೃತ್ಯ ಸಂಗೀತ ಅಕಾಡೆಮಿ ಪ್ರಶಸ್ತಿ, ಸಂತ ಶಿಶುನಾಳ ಶರೀಫ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಗೆ ಅವರು ಪಾತ್ರರಾಗಿದ್ದರು. ಗಾಯನ ಕ್ಷೇತ್ರದಲ್ಲೇ ಹೆಚ್ಚು ತೊಡಗಿಸಿಕೊಂಡಿದ್ದ ಅವರು ಧಾರವಾಡದ ಕೋಗಿಲೆ ಎಂದೇ ಪ್ರಸಿದ್ಧಿ ಗಳಿಸಿದ್ದರು. ಬಹುಭಾಷಾ ಗಾಯಕಿಯೂ ಆಗಿದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಬಿಎಸ್‌ವೈ ವಿರುದ್ಧದ ಪೋಕ್ಸೊ ಕಾನೂನು ಬಾಹಿರ’

ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಪ್ರಕರಣ

ಹೈಕೋರ್ಟ್ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣವನ್ನು ವಿಚಾರಣೆಗೆ ಪರಿಗಣಿಸಿರುವ ಕ್ರಮ ಕಾನೂನು ಬಾಹಿರ’ ಎಂದು ಯಡಿಯೂರಪ್ಪ ಪರ ವಕೀಲರು ಹೈಕೋರ್ಟ್‌ಗೆ ಪುನರುಚ್ಚರಿಸಿದರು.

‘ನನ್ನ ವಿರುದ್ಧದ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು’ ಎಂದು ಕೋರಿ ಬಿ.ಎಸ್. ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ಐ. ಅರುಣ್ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಯಡಿಯೂರಪ್ಪ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ. ನಾಗೇಶ್, ‘ಹಳೆಯ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಪ್ರಕರಣದಲ್ಲಿ ತನಗೆ ನ್ಯಾಯ ಕೊಡಿಸುವಂತೆ ಕೋರಿ ಸಂತ್ರಸ್ತೆ ಮತ್ತು ಆಕೆಯ ತಾಯಿ ಯಡಿಯೂರಪ್ಪ ಅವರ ಮನೆಗೆ ಹೋಗಿದ್ದರು. ಈ ವೇಳೆಯಲ್ಲಿ ಸಂತ್ರಸ್ತೆ ರೆಕಾರ್ಡ್ ಮಾಡಿರುವ ವಿಡಿಯೊದಲ್ಲಿ ಯಡಿಯೂರಪ್ಪ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ ಎಂಬ ತನಿಖಾಧಿಕಾರಿಗಳ ಆರೋಪ ಆಧಾರರಹಿತ’ ಎಂದು ಪ್ರತಿಪಾದಿಸಿದರು. ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, ಸಮಯ ಕೋರಿದ್ದರಿಂದ ವಿಚಾರಣೆ ಶುಕ್ರವಾರಕ್ಕೆ ಮುಂದೂಡಲಾಯಿತು.

ಮಧ್ಯಸ್ಥಿಕೆ ಅಭಿಯಾನ: 5,575 ಪ್ರಕರಣ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಧಾರವಾಡ: ರಾಜ್ಯದಲ್ಲಿ ನಡೆದ ಮಧ್ಯಸ್ಥಿಕೆ ಅಭಿಯಾನದಲ್ಲಿ 5,575 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಏರ್ಪಡಿಸಿದ ಮಧ್ಯಸ್ಥಿಕೆ ಅಭಿಯಾನದಲ್ಲಿ (ರಾಷ್ಟ್ರಕ್ಕಾಗಿ 90 ದಿನಗಳ ಕಾರ್ಯಾಚರಣೆ- ಜುಲೈ 1ರಿಂದ ಅಕ್ಟೋಬರ್ 6ರವರೆಗೆ) ರಾಜ್ಯದ ಕೋರ್ಟ್‌ಗಳಲ್ಲಿ ಬಾಕಿ ಇರುವ 13,86,837 ಪ್ರಕರಣಗಳ ಪೈಕಿ 76,197 ಪ್ರಕರಣಗಳನ್ನು ಗುರುತಿಸಿ, ಮಧ್ಯಸ್ಥಿಕೆ ಕೇಂದ್ರಗಳಿಗೆ ಕಳುಹಿಸಿಕೊಡಲಾಗಿತ್ತು.

47,080 ಪ್ರಕರಣಗಳನ್ನು ಮಧ್ಯಸ್ಥಿಕೆಗೆ ತೆಗೆದುಕೊಂಡು 5,575 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. 26,144 ಪ್ರಕರಣ ಇತ್ಯರ್ಥವಾಗಿಲ್ಲ. 15,361 ಪ್ರಕರಣಗಳಲ್ಲಿ ಮಧ್ಯಸ್ಥಿಕೆ ವಹಿಸಬೇಕಿದ್ದು, ಪ್ರಕ್ರಿಯೆ ಮಧ್ಯಸ್ಥಿಕೆ ಕೇಂದ್ರಗಳಲ್ಲಿ ಮುಂದುವರಿಯಲಿದೆ.

3,038 ವೈವಾಹಿಕ- ಕೌಟುಂಬಿಕ ದೌರ್ಜನ್ಯ ಪ್ರಕರಣಗಳನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಗೊಳಿಸಲಾಗಿದೆ. 159 ದಂಪತಿ ಒಂದಾಗಿದ್ದಾರೆ. 668 ಚೆಕ್ ಬೌನ್ಸ್ ಕೇಸ್‌ಗಳು, 649 ಪಾಲು ವಿಭಾಗ, 576 ಇತರ ಸಿವಿಲ್ ಪ್ರಕರಣ ವಿಲೇವಾರಿಯಾಗಿವೆ.

ಐದು ವರ್ಷಕ್ಕಿಂತ ಹೆಚ್ಚು ಅವಧಿಯ 177, ಹತ್ತು ವರ್ಷಕ್ಕಿಂತ ಹೆಚ್ಚು ಅವಧಿಯ 23 ಹಾಗೂ ಹದಿನೈದು ವರ್ಷಕ್ಕಿಂತ ಹೆಚ್ಚು ಅವಧಿಯ 6 ಪ್ರಕರಣಗಳನ್ನು ಅಭಿಯಾನದಲ್ಲಿ ಇತ್ಯರ್ಥಗೊಳಿಸಲಾಗಿದೆ. 163 ಪ್ರಕರಣಗಳಲ್ಲಿ ಹಿರಿಯ ನಾಗರಿಕರು ಅಭಿಯಾನದ ಪ್ರಯೋಜನ ಪಡೆದಿದ್ದಾರೆ. ಪ್ರಕರಣಗಳಲ್ಲಿ 1,300 ಮಧ್ಯಸ್ಥಿಕೆಗಾರರು ಪಾಲ್ಗೊಂಡಿದ್ದರು ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ತಿಳಿಸಿರುವುದಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ಎಫ್. ದೊಡ್ಡಮನಿ ತಿಳಿಸಿದ್ದಾರೆ.

ಕಾಶ್ಮೀರ: ಭದ್ರತೆ ಪರಿಶೀಲಿಸಿದ ಶಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪರಿಸ್ಥಿತಿಯ ಪರಿಶೀಲನೆ ನಡೆಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಕೇಂದ್ರಾಡಳಿತ ಪ್ರದೇಶದಾದ್ಯಂತ ಹೆಚ್ಚಿನ ನಿಗಾ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಮಿತ್ ಶಾ

ಹಿಮಪಾತದ ವೇಳೆ ಗಡಿಯಲ್ಲಿ ಭಯೋತ್ಪಾದಕರು ನುಸುಳುವ ಸಾಧ್ಯತೆ ಗಳಿರುವುದರಿಂದ ಕಟ್ಟೆಚ್ಚರವಹಿಸಬೇಕು ಎಂದು ನಿರ್ದೇಶನ ನೀಡಿದರು.

ಈ ಬಗ್ಗೆ ಎಕ್ಸ್ ಮಾಡಿರುವ ಅಮಿತ್ ಶಾ, ‘ಲೆಫ್ಟಿನೆಂಟ್ ಗವರ್ನರ್ ಮತ್ತು ಇತರ ಹಿರಿಯ ಅಧಿಕಾರಿಗಳೊಂದಿಗೆ ಜಮ್ಮು ಮತ್ತು ಕಾಶ್ಮೀರದ ಭದ್ರತೆಯ ಬಗ್ಗೆ ಪರಿಶೀಲಿಸಿದೆ. ಈ ಪ್ರದೇಶದಲ್ಲಿನ ಭಯೋತ್ಪಾದಕ ವ್ಯವಸ್ಥೆಯನ್ನು ದುರ್ಬಲಗೊಳಿಸಲು ನಾವು ಬದ್ಧರಾಗಿದ್ದೇವೆ. ಶಾಂತಿ ಮತ್ತು ಭದ್ರತೆಗೆ ಧಕ್ಕೆ ತರುವ ಯಾವುದೇ ಪ್ರಯತ್ನವನ್ನು ತಡೆಯುವ ಸಂಪೂರ್ಣ ಸ್ವಾತಂತ್ರ್ಯ ನಮ್ಮ ಭದ್ರತಾ ಪಡೆಗಳಿಗಿದೆ’ ಎಂದು ಹೇಳಿದ್ದಾರೆ.

‘ಭಯೋತ್ಪಾದನೆ ಮುಕ್ತ ಜಮ್ಮು ಮತ್ತು ಕಾಶ್ಮೀರ ಎಂಬ ಮೋದಿ ಅವರ ದೂರದೃಷ್ಟಿಯನ್ನು ಸಾಧಿಸಲು ಹೆಚ್ಚಿನ ಜಾಗರೂಕತೆಯಿಂದ ಇರಲು ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡಲು ನಿರ್ದೇಶಿಸಿದೆ. ಭದ್ರತಾ ಪಡೆಗಳ ಪ್ರಯತ್ನದಿಂದ ಪ್ರದೇಶದಲ್ಲಿ ಭಯೋತ್ಪಾದನಾ ಜಾಲವು ದುರ್ಬಲಗೊಂಡಿದೆ’ ಎಂದು ಅವರು ಹೇಳಿದ್ದಾರೆ.

ಪುಣೆಯ ಹಲವೆಡೆ ಎಟಿಎಸ್ ಶೋಧ

ಮುಂಬೈ(ಪಿಟಿಐ): ಮಹಾರಾಷ್ಟ್ರ ಭಯೋತ್ಪಾದಕ ನಿಗ್ರಹ ಪಡೆ (ಎಟಿಎಸ್) ಪುಣೆಯ ಹಲವೆಡೆ ಶೋಧ ಕಾರ್ಯ ನಡೆಸಿತು.

ಐಎಸ್ ಮಾದರಿ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಭಯೋತ್ಪಾದನಾ ಕೃತ್ಯಕ್ಕೆ ಪ್ರೇರೇಪಿಸಿರುವ ಶಂಕಿತ ಆರೋಪಿಗಳ ಪತ್ತೆಗಾಗಿ ಈ ಶೋಧ ನಡೆಯಿತು.

‘ಪುಣೆಯಲ್ಲಿ ನಡೆದಿದ್ದ ಐಎಸ್ ಮಾದರಿಯ ದಾಳಿ ಪ್ರಕರಣಕ್ಕೆ ಸಂಬಂಧಿಸಿದ 19 ಆರೋಪಿಗಳಿಗೆ ಸೇರಿದ ಮನೆ ಮತ್ತು ಕಚೇರಿಗಳಲ್ಲಿ ಎಟಿಎಸ್ ಸಿಬ್ಬಂದಿ ಬುಧವಾರ ರಾತ್ರಿಯಿಂದ ಶೋಧ ನಡೆಸಿತು.

ಗುಪ್ತಚರ ಮಾಹಿತಿಯ ಆಧಾರದಲ್ಲಿ ಪುಣೆ ನಗರದ ಕೊಂಧ್ವಾ, ಖಡಕ್, ಖಿಡ್ಕಿ, ವಾನವಾಡಿ ಮತ್ತು ಭೋಸರಿಗಳಲ್ಲಿ ತನಿಖೆ ನಡೆಸಿ. ಶಂಕಿತರನ್ನು ವಿಚಾರಣೆಗೆ ಒಳಪಡಿಸಲಾಗಿದೆ’ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಅಸ್ಸಾಂ: ಬಿಜೆಪಿಗೆ 17 ಮಂದಿ ರಾಜೀನಾಮೆ

ದಿಬ್ರುಗಢ (ಅಸ್ಸಾಂ): ಅಸ್ಸಾಂನಲ್ಲಿ ಬೋಡೊಲ್ಯಾಂಡ್ ಟೆರಿಟೋರಿಯಲ್ ಕೌನ್ಸಿಲ್ (ಬಿಟಿಸಿ) ಚುನಾವಣೆಯಲ್ಲಿ ಬಿಜೆಪಿಗೆ ಸೋಲಾದ ಬೆನ್ನಲ್ಲೇ ಹಿರಿಯ ನಾಯಕ ರಾಜೆನ್ ಗೊಹೈನ್ ಅವರು 17 ಸದಸ್ಯರೊಂದಿಗೆ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಇಲ್ಲಿನ ನಾಗಾಂವ್ ಕ್ಷೇತ್ರದಿಂದ 4 ಬಾರಿ ಬಿಜೆಪಿ ಸಂಸದರಾಗಿದ್ದ ಹಾಗೂ ಕೇಂದ್ರದ ಮಾಜಿ ಸಚಿವರೂ ಆಗಿದ್ದ ಗೊಹೈನ್, ಪಕ್ಷದ ಪ್ರಸ್ತುತ ನಾಯಕತ್ವದಿಂದ ಗೌರವ ಸಿಗುತ್ತಿಲ್ಲ ಎಂಬ ಕಾರಣ ನೀಡಿ ರಾಜೀನಾಮೆ ನೀಡಿದ್ದಾರೆ. ಅಸ್ಸಾಂನಲ್ಲಿ ಇನ್ನು ಕೆಲವು ತಿಂಗಳಲ್ಲೇ ವಿಧಾನಸಭೆ ಚುನಾವಣೆ ನಡೆಯಲಿರುವಂತೆಯೇ ಈ ಬೆಳವಣಿಗೆ ನಡೆದಿದೆ.

ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

An ISO-9001:2015 & 14001:2015 Company

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂಖ್ಯೆ: 5531, ಬೆಂಗಳೂರು-ಪುಣೆ ಹೆದ್ದಾರಿ, ಬೆಂಗಳೂರು-560 055.

ದೂರವಾಣಿ ಸಂಖ್ಯೆ: 080-22164879, 22164886 ಜಾಲತಾಣ: www.mysoresandal.org ಇ-ಮೇಲ್: ksdl.dgmmtls@gmail.com

ದಿನಾಂಕ: 09.10.2025

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ (https://kppp.karnataka.gov.in/)ದ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2025-26/IND0913	ಫೋರ್ಕ್‌ಲಿಫ್ಟ್ (Forklift)ನ ಖರೀದಿ	1 ಸಂ.	03.10.2025	23.10.2025

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

Email:itstaff_ulb_channarayapatna@yahoo.co.in, Phone:08176-255411

ಸಂ:ಮುಅ/ಪುಸಚ/ಇಂ.ವಿ/ಪುರಸಭಾಎಂಟರ್‌ಪ್ರೈಸಸ್‌ನಿಧಿ/2025-26 ದಿನಾಂಕ:08/10/2025

:ಟೆಂಡರ್ ಪ್ರಕಟಣೆ: : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಪುರಸಭಾ ಎಂಟರ್‌ಪ್ರೈಸಸ್ ಅನುದಾನದಡಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಆಧ್ಯಾದೇಶ 2000ದ ಅನ್ವಯ ಟೆಂಡರನ್ನು ಕರೆಯಲಾಗಿದ್ದು ಗುತ್ತಿಗೆದಾರರು ಇ-ಪ್ರೊಕ್ಯೂರಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:21/10/2025 ಸಂಜೆ 5.30 ಗಂಟೆಯಾಗಿದ್ದು ಕಾಮಗಾರಿಗಳು ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ಪುರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಮತ್ತು https://kppp.karnataka.gov.in ಪಡೆಯಬಹುದು ದೂರವಾಣಿ:08176-254544. ಕಾಮಗಾರಿಗಳ ಇಡೆಂಟ್ ವಿವರ ಕೆಳಕಂಡತಿದೆ:- ಪುರಸಭಾ ಎಂಟರ್‌ಪ್ರೈಸಸ್ ನಿಧಿ 2025-26 ಕ್ರ.ಸಂ.ಕಾಮಗಾರಿ ಹೆಸರು: 1.ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.05 ರ ಸಿ ಎನ್ ಬಾಲಕೃಷ್ಣ ಉದ್ಯಾನವನ ಅಭಿವೃದ್ಧಿ ಕಾಮಗಾರಿ. (DMA/2025-26/OW/WORK_INDENT50140) ಅಂದಾಜು ಮೊತ್ತ 30.00 ಕಾಲಾವಧಿ 6 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು ಕೆ.ಡಬ್ಲ್ಯೂ-2 2.ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.22 ರ ಪುನೀತ್ ರಾಜಕುಮಾರ ಉದ್ಯಾನವನ ಅಭಿವೃದ್ಧಿ ಕಾಮಗಾರಿ ಕಾಮಗಾರಿ. (DMA/2025-26/OW/WORK_INDENT50143) ಅಂದಾಜು ಮೊತ್ತ 30.00 ಕಾಲಾವಧಿ 6 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು ಕೆ.ಡಬ್ಲ್ಯೂ-2 ಸೂಚನೆ:- ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು.

ಸಹಿ/-ಅಧ್ಯಕ್ಷರು, ಪುರಸಭೆ ಚನ್ನರಾಯಪಟ್ಟಣ

ಸಹಿ/- ಮುಖ್ಯಾಧಿಕಾರಿ ಪುರಸಭೆ, ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/661/ಕೆಎಸ್‌ಎಂಸಿಎ/2025-26

ನಗರಸಭಾ ಕಾರ್ಯಾಲಯ, ರಾಮನಗರ

ಬೆಂಗಳೂರು ದಕ್ಷಿಣ ಜಿಲ್ಲೆ - 562159. ದೂರವಾಣಿ ಸಂ.: 080-27271286 e-mail: ka.ramanagara.cmc@gmail.com

ಸಂ.: ನಸರಾ/ತಾ.ವಿ./ಕಿ.ವಿ/ಟೆಂ./ಸಿ.ಆರ್./2025-26 ದಿನಾಂಕ: 09.10.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ರಾಮನಗರ ನಗರಸಭೆಯ ವಿವಿಧ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಲೋಕೋಪಯೋಗಿ ಇಲಾಖೆಯ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದು. ಈ ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ.ಯನ್ನು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 90 ದಿನಗಳವರೆಗೆ ಮಾನ್ಯತೆ ಇರತಕ್ಕದ್ದು.

ಪ್ಯಾಕೇಜ್ ಸಂಖ್ಯೆ	ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ. ಗಳಲ್ಲಿ)	ಕೆಲಸ ಪೂರ್ಣಗೊಳಿಸುವ ಅವಧಿ
1	DMA/2025-26/OW/WORK_INDENT50293	33.00	56,000/-	As per KPPP	60 ದಿನಗಳು
2	DMA/2025-26/OW/WORK_INDENT50057	75.00	1,26,200/-		04 ತಿಂಗಳು

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 23.10.2025 ರಂದು ಸಂಜೆ 5:30 ಗಂಟೆವರೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.10.2025 ರಂದು ಬೆಳಿಗ್ಗೆ 11:30 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 28.10.2025 ರಂದು ಬೆಳಿಗ್ಗೆ 11:00 ಗಂಟೆಗೆ.

ಸಹಿ/- ಪೌರಾಯುಕ್ತರು ನಗರಸಭೆ, ರಾಮನಗರ

DIPR/BSD/384/SA/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸಕಾರದ ಅಧೀನ ಸಂಸ್ಥೆ)

ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು- 560001

ಫೋನ್ ಸಂ. 080-22265383 ವೆಬ್‌ಸೈಟ್: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಡಿಪಿಆರ್-04/1038/2025-26 ದಿನಾಂಕ: 09.10.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಯೋಜನೆಗೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಸಿದ್ಧಪಡಿಸುವುಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ-ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ಹೆಸರು : 1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಸೋಂಪುರ ಕೈಗಾರಿಕಾ ಪ್ರದೇಶ {ದಾಬಸ್‌ಪೇಟೆ 1ನೇ, 2ನೇ, 3ನೇ, 4ನೇ, 5ನೇ, 6ನೇ ಹಂತ ಮತ್ತು ಮಾಚೇನಹಳ್ಳಿ (7ನೇಹಂತ)} ದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರಿನ ಘಟಕ (ಸಿ.ಇ.ಟಿ.ಪಿ) ನಿರ್ಮಾಣದ ಕಾಮಗಾರಿಗೆ ವಿವರವಾದ ಯೋಜನಾ ವರದಿ, ಆರ್ಥಿಕ ವಿಶ್ಲೇಷಣೆ, ಸರ್ವೆ, ನಕ್ಷೆ ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚ ರಚನೆ ಇತ್ಯಾದಿ ತಯಾರಿಸಲು ಸಲಹಾ ಸೇವೆ ಒದಗಿಸುವುದು (3ನೇ ಕರೆ). 2) ಮೈಸೂರು ಜಿಲ್ಲೆ ಕಡಕೋಳ, ತಾಂಡ್ಯ, ಅಡಕನಹಳ್ಳಿ, ಹಿಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರಿನ ಘಟಕ (ಸಿ.ಇ.ಟಿ.ಪಿ) ನಿರ್ಮಾಣದ ಕಾಮಗಾರಿಗೆ ವಿವರವಾದ ಯೋಜನಾ ವರದಿ, ಆರ್ಥಿಕ ವಿಶ್ಲೇಷಣೆ, ಸರ್ವೆ, ನಕ್ಷೆ ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚ ರಚನೆ ಇತ್ಯಾದಿ ತಯಾರಿಸಲು ಸಲಹಾ ಸೇವೆ ಒದಗಿಸುವುದು (3ನೇ ಕರೆ). 3) ಚಾಮರಾಜನಗರ ಜಿಲ್ಲೆ ಬದನಗುಪ್ಪೆ ಕೆಲ್ಲಂಬಳ್ಳಿ 1ನೇ ಮತ್ತು 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರಿನ ಘಟಕ (ಸಿ.ಇ.ಟಿ.ಪಿ) ನಿರ್ಮಾಣದ ಕಾಮಗಾರಿಗೆ ವಿವರವಾದ ಯೋಜನಾ ವರದಿ, ಆರ್ಥಿಕ ವಿಶ್ಲೇಷಣೆ, ಸರ್ವೆ, ನಕ್ಷೆ ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚ ರಚನೆ ಇತ್ಯಾದಿ ತಯಾರಿಸಲು ಸಲಹಾ ಸೇವೆ ಒದಗಿಸುವುದು (3ನೇ ಕರೆ).

- ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.10.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp. karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯ ಅಭಿಯಂತರರು-1 ಕೆ.ಐ.ಎ.ಡಿ.ಬಿ

ವಾ.ಸಾ.ಸಂ.ಇ/ವಾಪ್ರ/3169/ಆಕಾರ್/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರ ಕಛೇರಿ

ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮಂಡ್ಯ.

ದೂರವಾಣಿ : ಫ್ಯಾಕ್ಸ್ 08232-224816.

e mail- kwbeemnd@gmail.com

ಸಂಖ್ಯೆ:-ಕಜಮ/ಕಾಅ/ಮಂಡ್ಯ/ತಾ.ಶಾ/ತಾ.ಸ/ಸ.ಅ/1018/2025-26

ದಿನಾಂಕ:06.10.2025

ಟೆಂಡರ್ ಪ್ರಕಟಣೆ

ಕೆಳಕಂಡ ಕಾಮಗಾರಿಗೆ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ : 01. ಕಾಮಗಾರಿ ಹೆಸರು : ಕೆ.ಪಿ.ಪಿ ಪೋರ್ಟಲ್ ಇಂಡೆಂಟ್ ಸಂಖ್ಯೆ: KUWSDB/2025-26/WS/WORK_INDENT415: 2020-21, 2021-22 ಮತ್ತು 2022-23 ನೇ ಸಾಲಿನ 15ನೇ ಹಣಕಾಸು ಆಯೋಗದ ಮುಕ್ತ ಮತ್ತು ನಿರ್ಬಂಧಿತ ಅನುದಾನಡಿ ಉಳಿತಾಯವಾಗಿರುವ ಮೊತ್ತದಡಿ ಮತ್ತು 2024-25ನೇ ಸಾಲಿನ 15ನೇ ಹಣಕಾಸು ಆಯೋಗದ ನಿರ್ಬಂಧಿತ ಅನುದಾನಡಿ ಶ್ರೀರಾಮ ಪೆಟ್ರೋಲ್ ಬಂಕ್‌ನಿಂದ ಶ್ರವಣಬೆಳಗೊಳ ರಸ್ತೆವರೆಗೆ ಮತ್ತು ಅಗ್ನಿ ಶಾಮಕದ ದಳದ ಮುಂದೆ ಬಿಟ್ಟುಹೋಗಿರುವ ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿ. ಟೆಂಡರ್‌ಗಿಟ್ಟ ಮೊಬಲಗು: ರೂ.18,58,664/-

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರವರು, ಮಂಡ್ಯ ವಿಭಾಗ ಮಂಡ್ಯ ರವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮಂಡ್ಯ.

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/486/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ ಟೆಂಡರ್ ಪ್ರಕಟಣೆ ಸಂಖ್ಯೆ :10/2025-26 ದಿನಾಂಕ : 03.10.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಇ-ಪ್ರಕ್ಯೂರ್‌ಮೆಂಟ್ ವೇದಿಕೆಯುಡಿಯುಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 04 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ. 4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ. 1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 06.10.2025 ರಿಂದ 17.10.2025 ರವರೆಗೆ ಸಂಜೆ 17.30 ಗಂಟೆಗೆ. 2) ಆರ್ಥಿಕ ಬಿಡ್ ತೆರೆಯುವ ದಿನಾಂಕ : 18.10.2025 ರಂದು 17.30 ಗಂಟೆಗೆ (ಕ್ರಮ ಸಂಖ್ಯೆ.1 ರಿಂದ 3). 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18.10.2025 ರಂದು 17.30 ಗಂಟೆಗೆ (ಕ್ರಮ ಸಂಖ್ಯೆ.4). 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority (ಕ್ರಮ ಸಂಖ್ಯೆ.4). 5) ಕಾಲಾವಧಿ : 04 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 5.06 ಲಕ್ಷ ದಿಂದ ರೂ.84.73ಲಕ್ಷಗಳವರೆಗೆ. 7) ಇಎಂಡಿ ಮೊತ್ತ : ರೂ. 6,500/- ರಿಂದ ರೂ.85,000/-

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/- ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.18-10/ ಝೇಂಕಾರ್/2025-26

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು-560001, ಕರ್ನಾಟಕ,

ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321

E-mail: ho@kspcb.gov.in, Website: https://kspcb.karnataka.gov.in

ಮಾನಿಮಂ/324/ಹಿಪಅ/ಗಣಿ/ಪಸಾಸ/2025-26/2844 ದಿನಾಂಕ: 09.10.2025

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಮೆ.ಸ್ಟೆನ್ ಸ್ಲಾಬ್ ಪ್ರೈವೇಟ್ ಲಿಮಿಟೆಡ್, ರವರುಸರ್ವೆ ನಂ.52/5, 52/6, 54/2, 54/3, 54/5, 54/6 & 64/3 ಸೇಬಿನಕಟ್ಟೆ ಗ್ರಾಮ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 30.30 ಎಕರೆ (12.449 ಹೇಕ್ಟರ್) (ಪರಿವರ್ತಿತ ಪಟ್ಟಾ ಭೂಮಿ) ಪ್ರದೇಶದಲ್ಲಿ ವಾರ್ಷಿಕ 1,34,000 ಟನ್ ಉತ್ಪಾದನಾ ಸಾಮರ್ಥ್ಯದ ಪಿಂಕ್ ಗ್ರಾನೈಟ್ ಗಣಿಗಾರಿಕೆ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.09.2006 ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 127MIN 2025, ದಿನಾಂಕ: 10.07.2025 ಹಾಗೂ ಯೋಜನದಾರರು ನೀಡಿದ ನಿವೇದನೆಯ ಪತ್ರ ದಿನಾಂಕ: 31.07.2025ರ ಪ್ರಕಾರ ಮತ್ತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಇವರ ಪತ್ರ ದಿನಾಂಕ: 16.09.2025ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನುಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕಳಕಂಡಂತಿವೆ.

1. ಕಂಪನಿಯ ಹೆಸರು ಮತ್ತು ವಿಳಾಸ : ಶ್ರೀ ಸ್ಟೆನ್ ಸ್ಲಾಬ್ ಪ್ರೈವೇಟ್ ಲಿಮೆಟೆಡ್, ನಂ.10, 2ನೇ ಮಹಡಿ, 5ನೇ ಮುಖ್ಯರಸ್ತೆ, ಕೆ. ಜಿ. ನಗರ, ಬೆಂಗಳೂರು-560013.

2. ಉದ್ದೇಶಿತ ಯೋಜನೆಯ ಸ್ಥಳ : ಸರ್ವೆ ನಂ. 52/5, 52/6, 54/2, 54/3, 54/5, 54/6 & 64/3 ಸೇಬಿನಕಟ್ಟೆ ಗ್ರಾಮ, ಕುಷ್ಟಗಿ ತಾಲ್ಲೂಕು, ಕೊಪ್ಪಳಜಿಲ್ಲೆ.

3. ಉದ್ದೇಶಿತ ಯೋಜನೆಯ ವಿವರ : ವಾರ್ಷಿಕ1,34,000 ಟನ್ ಉತ್ಪಾದನಾ ಸಾಮರ್ಥ್ಯದ ಪಿಂಕ್ ಗ್ರಾನೈಟ್ ಗಣಿಗಾರಿಕೆಯನ್ನು ಒಟ್ಟು 30.30 ಎಕರೆ (12.449 ಹೇಕ್ಟರ್) (ಪರಿವರ್ತಿತ ಪಟ್ಟಾ ಭೂಮಿ) ಪ್ರದೇಶದಲ್ಲಿ ಕೈಗೊಳ್ಳಲು ಉದ್ದೇಶಿಸಿರುತ್ತಾರೆ.

4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : ದಿನಾಂಕ: 11.11.2025 (ಮಂಗಳವಾರ), ಸಮಯ: ಬೆಳ್ಳಿಗೆ 11:00 ಗಂಟೆ, ಸ್ಥಳ : ಯೋಜನಾ ಸ್ಥಳ,ಶ್ರೀ ಸ್ಟೆನ್ ಸ್ಲಾಬ್ ಪ್ರೈವೇಟ್ ಲಿಮೆಟೆಡ್, ಸರ್ವೆ ನಂ. 52/5, 52/6, 54/2, 54/3, 54/5, 54/6 & 64/3 ಸೇಬಿನಕಟ್ಟೆ ಗ್ರಾಮ, ಕುಷ್ಟಗಿ ತಾಲ್ಲೂಕು, ಕೊಪ್ಪಳಜಿಲ್ಲೆ.

6. ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ: (ಅ) ಜಿಲ್ಲಾಧಿಕಾರಿಗಳ ಕಛೇರಿ, ಕೊಪ್ಪಳ ಜಿಲ್ಲೆ, ಕೊಪ್ಪಳ. (ಆ) ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾಪಂಚಾಯತ್, ಕೊಪ್ಪಳಜಿಲ್ಲೆ, ಕೊಪ್ಪಳ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳಜಿಲ್ಲೆ, ಕೊಪ್ಪಳ, (ಈ) ಉಪ ನಿರ್ದೇಶಕರವರಕಾರ್ಯಾಲಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕೊಪ್ಪಳ, (ಉ) ತಹಶೀಲ್ದಾರರ ಕಾರ್ಯಲಯ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ, (ಊ) ಗ್ರಾಮ ಪಂಚಾಯತ್ ಕಾರ್ಯಾಲಯ, ಕಬ್ಬರಗಿ ಗ್ರಾಮ ಪಂಚಾಯತ್, ಕುಷ್ಟಗಿ ತಾಲ್ಲೂಕು, (ಋ) ಪ್ರಾದೇಶಿಕ ಕಛೇರಿ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ, (ಎ) ರಾಜ್ಯ ಮಟ್ಟದ ಪರಿಸರಆಘಾತಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು-560001, (ಏ) ಸಹಾಯಕೇಂದ್ರ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, “ಪರಿಸರ ಭವನ”, ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು-560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ(ಜಿಲ್ಲಾಧಿಕಾರಿಗಳು, ಕೊಪ್ಪಳಜಿಲ್ಲೆ, ಕೊಪ್ಪಳ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: https://kspcb.karnataka.gov.in/ ನಲ್ಲಿ ಪಡೆಯಬಹುದು.

ಸಹಿ/- ಸದಸ್ಯ ಕಾರ್ಯದರ್ಶಿ

ಪಟ್ಟಣ ಪಂಚಾಯತ ಕಾರ್ಯಾಲಯ, ನರೇಗಲ್

ನಂ:ಪಪಂನ/ವಾ.ಪೂ/ವಹಿ/2025-26/ ದಿನಾಂಕ : 04-10-2025

ಪುನಃ ಟೆಂಡರ್ ಪ್ರಕಟಣೆ

ಸನ್ 2025-26ನೇ ಸಾಲಿನ ಎಸ್.ಎಫ್.ಸಿ,15ನೇ ಹಣಕಾಸು ಅನುದಾನದಲ್ಲಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 2000 ರನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಕೆ.ಪಿ.ಪಿ.ಪಿರವರಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ KPP ಮೂಲಕ ಐಟಂವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ತಾಂತ್ರಿಕ ಶಾಖೆಯಲ್ಲಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ಇಂಡೆಂಟ್ ಸಂಖ್ಯೆ:46025/Call-2,45467/Call-2,45205/Call-2,45428/Call-2, 45218/Call-2, 46248/Call-2, 46031/Call-2, 45646/Call-2, 45369/Call-2(CAT-I), 45426/Call-2(ST), 46247/Call-2(SC), 46207/Call-2(CAT-II(A)),46013/Call-2(SC)

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ : 13-10-2025 ಸಂಜೆ 4.30 ಗಂಟೆಯವರೆಗೆ

2) ಟೆಂಡರ್ ತೆರೆಯುವ ದಿನಾಂಕ : 15-10-2025 ಬೆಳಿಗ್ಗೆ 10.30 ಗಂಟೆಗೆ

ಸಹಿ/- ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ನರೇಗಲ್

ವಾ.ಸಾ.ಇ/ಗದಗ/325/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೊಟ್ಟಾರ, ಮಂಗಳೂರು

Tender Notification No:EE/DKPRED/M/Tender-7/ಎಇ-1/ಜೆಇ-1/ಜೆಇ-2/2025-26/1242 ದಿ: 09-10-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿವಿಧ ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವರ್ಷನ್-2 ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದ್ದು, ಈ ಕೆಳಕಂಡಂತಿದೆ.

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30-10-2025 ಸಂಜೆ 4.00 ಗಂಟೆವರೆಗೆ

(2) ಟೆಂಡರ್ ತೆರೆಯುವ ದಿನಾಂಕ: 31-10-2025 ಸಂಜೆ:4.30ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಅಂತರ್‌ಜಾಲ https://kppp.karnataka.gov.in ನಲ್ಲಿ, ಕಛೇರಿ ದೂರವಾಣಿ ಸಂಖ್ಯೆ: 0824-2451281 ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

DIPR/DK/KSMCA/902/ 25-26 Dt. 09.10.2025

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸಂಖ್ಯೆ: ಎಸಿಸಿಟಿಎಸ್/40/2025-26 (ಜೆರಾಕ್ಸ್ ಹೊರಗುತ್ತಿಗೆ ಸಿಜೆಎಂ)

ದಿನಾಂಕ: 25.09.2025

ಇ-ಟೆಂಡರ್ ಪ್ರಕಟಣೆ

ಸದರಿ ಕಚೇರಿಯು “ಚೀಫ್ ಜ್ಯುಡೀಷಿಯಲ್ ಮ್ಯಾಜಿಸ್ಟ್ರೇಟ್‌ರವರ ಕಚೇರಿ, ಬೆಂಗಳೂರು ಗ್ರಾಮೀಣ ಜಿಲ್ಲೆ, 3ನೇ ಮಹಡಿ, ಸಿಜೆಎಂ ನ್ಯಾಯಾಲಯ ಆವರಣ, ನೃಪತುಂಗ ರಸ್ತೆ, ಬೆಂಗಳೂರು, ಇಲ್ಲಿ ಆಪರೇಟರ್ ಜೊತೆಗೆ (ಅಂದರೆ ಕೆಲಸಗಾರರು ಮತ್ತು ಯಂತ್ರದ ಕಾಮಗಾರಿ ಸೇವೆಗಳು) ಪುಟ ಒಂದಕ್ಕೆ ಬೆಲೆ/ದರದ ಪೈಸೆ ಮತ್ತು ರೂಪಾಯಿಗಳ ಆಧಾರದ ಮೇಲೆ ಕಾಪಿಯರ್ ಯಂತ್ರ ಸ್ಥಾಪನೆ ಮಾಡುವ ಮೂಲಕ ಒಂದು ವರ್ಷದ ಅವಧಿಗೆ (ಸೇವೆಯ ಅವಧಿಯನ್ನು ಪ್ರತಿ ವರ್ಷ ನವೀಕರಣದ ಮೇಲೆ ಇನ್ನೂ ಎರಡು ವರ್ಷದ ಅವಧಿಗೆ (ಒಟ್ಟು 3 ವರ್ಷಗಳು) ವಿಸ್ತರಿಸಬಹುದಾಗಿರುತ್ತದೆ) ಫೋಟೋ ಕಾಪಿಯರ್ ಸೇವೆಗಳನ್ನು ಒದಗಿಸಲು” ಅರ್ಹ ಖಾಸಗಿ ಜೆರಾಕ್ಸ್ ಆಪರೇಟರುಗಳಿಂದ ಇ-ಪೋರ್ಟಲ್ https://kppp.karnataka.gov.in/#/portal/Auctions/live ಮೂಲಕ ಇ-ಬಿಡ್ಡಿಂಗ್‌ಗಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಕೆಪಿಪಿಪಿ ನೀಡಿರುವ ಟೆಂಡರ್ ಸಂಖ್ಯೆ: ಹೆಚ್‌ಸಿಕೆ/2025-26/ಎಸ್‌ಇ0062-ಕರೆ-2. ಟೆಂಡರ್‌ನ ಒಟ್ಟಾರೆ ಅಂದಾಜು ಮೊತ್ತ: ವರ್ಷ ಒಂದಕ್ಕೆ ರೂ.6,00,000/-. ಇಎಂಡಿ: ರೂ.12,000/-. ಟೆಂಡರ್ ಪ್ರಸ್ತಾವನೆ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ: 15.10.2025, ಸಂಜೆ 5.00 ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್: 16.10.2025, ಸಂಜೆ 5.01 ಗಂಟೆಗೆ. ಅರ್ಥಿಕ ಬಿಡ್: ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ದೂರವಾಣಿ: 080-22939382. ಇ-ಮೇಲ್: bngrur002@gmail.com

ಸಹಿ/- ಮುಖ್ಯ ಆಡಳಿತಾಧಿಕಾರಿ (ಪ್ರಭಾರ), ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ/3174/ಕೆಎಸ್‌ಎಂಸಿಎ/2025-26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667

ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂ. N/109/2025/999 ದಿನಾಂಕ: 09.10.2025

ಸಾರ್ವಜನಿಕ ಸೂಚನಾ ಪತ್ರ

ವಿಷಯ: ಮುಕ್ತ ಪ್ರವೇಶ ಗ್ರಾಹಕರ ಮೇಲೆ ಹೆಚ್ಚುವರಿ ಸರ್ಚಾರ್ಜ್ ವಿಧಿಸುವ ಎಸ್ಕಾಂಗಳ ಪ್ರಸ್ತಾವನೆಗೆ ಸಂಬಂಧಿಸಿದಂತೆ.

ವಿದ್ಯುತ್ ಕಾಯ್ದೆ, 2003ರ ಸೆಕ್ಷನ್ 42 ಸಹವಾಚಕ ಸುಂಕ ನೀತಿ ನಿಯಮ 8.5.2.4. ರಾಷ್ಟ್ರೀಯ ವಿದ್ಯುತ್ ನೀತಿಯ ನಿಯಮ 5.8.3. KERC (ಮುಕ್ತ ಪ್ರವೇಶಕ್ಕಾಗಿ ನಿಯಮಗಳು ಮತ್ತು ಷರತ್ತುಗಳು) ನಿಯಮಗಳು, 2025. ದಿನಾಂಕ 27.03.2025 ಮತ್ತು ಅಯೋಗದ ಸುಂಕ ಆದೇಶ-2025 ದಿನಾಂಕ 27.03.2025ರಲ್ಲಿನ ಪ್ಯಾರಾ 6.13.6 ಅನುಸಾರವಾಗಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಬೆಸ್ಕಾಂ) ಮುಕ್ತ ಪ್ರವೇಶ ಗ್ರಾಹಕರ ಮೇಲೆ ಹೆಚ್ಚುವರಿ ಸರ್ಚಾರ್ಜ್ ವಿಧಿಸುವ ಪ್ರಸ್ತಾವನೆಗೆ ಅನುಮೋದನೆ ಕೋರಿ ಆಯೋಗದ ಮುಂದೆ ಮೂಲ ಅರ್ಜಿ ಸಂಖ್ಯೆ OP No. 29/2025 ಅನ್ನು ಸಲ್ಲಿಸಿದೆ.

ಬೆಸ್ಕಾಂ ಸಲ್ಲಿಸಿರುವ ಮೂಲ ಅರ್ಜಿಯ ಪ್ರತಿ ರಾಜ್ಯದ ಎಸ್ಕಾಂಗಳ ಮತ್ತು ಆಯೋಗದ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ. (https://kerc.karnataka.gov.in)

ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ, ಹೆಸ್ಕಾಂ ಮತ್ತು ಸೆಸ್ಕ್ ವ್ಯಾಪ್ತಿಗೆ ಒಳಪಡುವ ಜೆನರೇಟರ್‌ಗಳು/ಮುಕ್ತಪ್ರವೇಶ ಗ್ರಾಹಕರು/ಆಸಕ್ತರು ತಮ್ಮ ಆಕ್ಷೇಪಣೆ, ಅಭಿಪ್ರಾಯ ಅಥವಾ ಸಲಹೆಗಳನ್ನು ಈ ಸೂಚನಾ ಪತ್ರವನ್ನು ಪ್ರಕಟಿಸಿದ 30 ದಿನ ಅಥವಾ ಅದಕ್ಕೂ ಮೊದಲು ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ನಂ. 16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052 ಇವರಿಗೆ ಸಲ್ಲಿಸಬಹುದಾಗಿದೆ. ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಸುನಾವಣೆ ದಿನಾಂಕವನ್ನು ಪ್ರತ್ಯೇಕ ಸೂಚನೆ ಮೂಲಕ ತಿಳಿಯಪಡಿಸಲಾಗುವುದು.

ಸಹಿ/- ಕಾರ್ಯದರ್ಶಿ ಕ.ವಿ.ನಿ.ಆ. ಪರವಾಗಿ

DPR/CP/3157/2025-26

OFFICE OF THE COMMISSIONER OF CUSTOMS, CITY CUSTOMS, BENGALURU C.R. BUILDING, QUEEN'S ROAD, BENGALURU-560 001

Phone No. (080) 22866783, 22866253

Email: commrcity-cusblr@nic.in, legal.citycusblr@gov.in

CUS/PROS/MISC/127/2022-Pros Date: 09.10.2025

NOTICE FOR SELECTION OF SPECIAL PUBLIC PROSECUTORS

Applications are hereby invited, in accordance with Section 18(8) of the Bharatiya Nagarik Suraksha Sanhita, 2023, from advocates who have a minimum of ten years of practice experience and are duly registered with the Karnataka State Bar Council, for selection and appointment as Special Public Prosecutors (SPPs) for the Central Board of Indirect Taxes and Customs (CBIC) to handle the cases/ matters brought before the Subordinate Courts/Courts of Session and Hon'ble High Court of Karnataka.

SPPs initially appointed will have the opportunity for the renewal of their appointments, contingent upon recommendations from the respective (Pr.) Commissioner of CGST/Customs or (Pr.) ADG of DGGI/DRI. An annual performance assessment will be conducted after the first 12 months of engagement.

Interested candidates should submit their applications using the prescribed Proforma-A (found in Annexure I to Public Notice No. 09/2025 dated 09.10.2025 on the City Customs Bengaluru website: (https://bangalorecustoms.gov.in/bengaluru-city-customs/#publicnotices)”

Along with the application, candidates should provide their Bio-Data to the Office of the Commissioner of Customs, Bengaluru City Commissionerate, C.R. Building, Queens Road, Bengaluru- 560001. The application may also be submitted through email legal.citycusblr@gov.in.The deadline for submissions is 25th October, 2025, at 06:00 pm. The applicants are required to attend the interview scheduled on 29.10.2025 at 11.00 am at Office of the Commissioner of Customs, Bengaluru City Commissionerate, C.R. Building, Queens Road, Bengaluru 560001.

For detailed qualifications, terms and conditions of engagement, as well as the schedule of fees and allowances, please refer to CBIC (Legal Cell) Instruction dated 29-02-2016 (Reference No. 278A/54/2015-Legal) and the letter dated 25-05-2010 (Reference No. 278A/82/2008-Legal), both issued by CBIC (Legal Cell). These documents are appended as Annexure II & III to Public Notice No. 09/2025 dated 09.10.2025.

Sd/- ADDITITIONAL COMMISSIONER OF CUSTOMS BENGALURU CITY CUSTOMS

ಸೇತುವೆಗಳ ಪುನರ್‌ನಿರ್ಮಾಣಕ್ಕೆ ₹2,000 ಕೋಟಿ

ಕನಕಪುರ ವೈದ್ಯ ಕಾಲೇಜಿಗೆ ₹550 ಕೋಟಿ
11 ಶ್ರಮಿಕ ವಸತಿ ಶಾಲೆಗೆ ₹405 ಕೋಟಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ₹2,000 ಕೋಟಿ ಅಂದಾಜು ವೆಚ್ಚದಲ್ಲಿ ಸೇತುವೆಗಳ ಪುನರ್‌ನಿರ್ಮಾಣ ಮತ್ತು ಪುನಶ್ಚೇತನ ಕಾಮಗಾರಿ ಕೈಗೆತ್ತಿಕೊಳ್ಳುವ ಪ್ರಸ್ತಾವಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ.

ಮೊದಲ ಹಂತದಲ್ಲಿ 39 ಬೃಹತ್ ಸೇತುವೆಗಳ ಪುನರ್ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಒಪ್ಪಿಗೆ ನೀಡಲಾಗಿದೆ. ಇದಕ್ಕೆ ₹1,000 ಕೋಟಿ ವೆಚ್ಚವಾಗಲಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಿಆರ್‌ಎಎಂಸಿ ಅಧ್ಯಯನದಲ್ಲಿ ಗುರುತಿಸಿರುವ ಮತ್ತು ಪ್ರಮುಖ ಸೇತುವೆಗಳ ಪುನರ್ ನಿರ್ಮಾಣ ಮತ್ತು ಪುನಶ್ಚೇತನದ ಅಗತ್ಯವಿದೆ. ಮಳೆ–ಪ್ರವಾಹದಿಂದ ಹಾನಿಗೊಳಗಾದ ಸೇತುವೆಗಳು, ಮಲೆನಾಡು ಮತ್ತು ಕರಾವಳಿ ಭಾಗಗಳಲ್ಲಿ ಸಂಪರ್ಕ ರಹಿತ ಜನವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು ಕಾಲುಸಂಕ ನಿರ್ಮಿಸಲೂ ಒಪ್ಪಿಗೆ ನೀಡಲಾಗಿದೆ ಎಂದರು.

ತಾತಗುಣಿ ಸಾಂಸ್ಕೃತಿಕ ಕೇಂದ್ರಕ್ಕೆ ₹55.33 ಕೋಟಿ

ಕೇಂದ್ರ ಪುರಸ್ಕೃತ ಎಸ್‌ಎಎಸ್‌ಸಿಐ ಯೋಜನೆಯಡಿ ₹99.17 ಕೋಟಿ ಅಂದಾಜು ವೆಚ್ಚದಲ್ಲಿ ಅನುಮೋದನೆಗೊಂಡಿರುವ ಬೆಂಗಳೂರಿನ ತಾತಗುಣಿಯಲ್ಲಿರುವ ರೋರಿಚ್ ಮತ್ತು ದೇವಿಕಾರಾಣಿ ಎಸ್ಟೇಟ್‌ನಲ್ಲಿ ಪರಿಸರ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಕೇಂದ್ರ ಅಭಿವೃದ್ಧಿಪಡಿಸಲು ಮೊದಲ ಹಂತದ ಕಾಮಗಾರಿಗೆ ₹55.33 ಕೋಟಿ ಮೊತ್ತದ ಟೆಂಡರ್ ಕರೆಯಲು ವಿಸ್ತೃತ ಯೋಜನಾ ವರದಿಗೆ ಅನುಮೋದನೆ ನೀಡಲಾಗಿದೆ.

ಪ್ರಮುಖ ತೀರ್ಮಾನಗಳು

- ಕನಕಪುರದಲ್ಲಿ ಹೊಸ ವೈದ್ಯಕೀಯ ಕಾಲೇಜಿಗೆ ಅಗತ್ಯವಿರುವ ಕಾಲೇಜು ಕಟ್ಟಡ, ಹಾಸ್ಟೆಲ್‌ಗಳು, ವಸತಿ ಗೃಹಗಳು ಮತ್ತು ಇತರ ಸೌಲಭ್ಯಗಳ ಕಾಮಗಾರಿಗೆ ₹550 ಕೋಟಿ ಬೇಕಿದ್ದು, ಈ ಮೊತ್ತವನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಭರಿಸಲು ಅನುಮೋದನೆ
- ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಎರಡನೇ ಹಂತದಲ್ಲಿ ₹405.55 ಕೋಟಿ ವೆಚ್ಚದಲ್ಲಿ 11 ಶ್ರಮಿಕ ವಸತಿ ಶಾಲೆಗಳ ಸ್ಥಾಪನೆ
- ಕಾರ್ಮಿಕರ ಕಲ್ಯಾಣ ನಿಧಿಗೆ ವಂತಿಗೆ ಮೊತ್ತವನ್ನು ಸಕಾಲದಲ್ಲಿ ಮತ್ತು ಶೀಘ್ರದಲ್ಲಿ ಜಮೆ ಮಾಡುವುದಕ್ಕೆ ಪೂರಕವಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಮಸೂದೆಗೆ ಒಪ್ಪಿಗೆ
- ₹90.07 ಕೋಟಿ ವೆಚ್ಚದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲುದಾರಿಕೆಯಲ್ಲಿ ‘ದಿಬ್ಬದಿಂದ–ಕಣಿವೆ ಜಲಾನಯನ’ ಕಾರ್ಯಕ್ರಮವನ್ನು ರಾಜ್ಯದ ಆಯ್ದ 15 ತಾಲ್ಲೂಕುಗಳಲ್ಲಿ 39,413 ಹೆಕ್ಟೇರ್ ಪ್ರದೇಶದಲ್ಲಿ ಜಾರಿಗೆ ಅನುಮೋದನೆ
- ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರದಲ್ಲಿರುವ ಭದ್ರತಾ ಕಾರ್ಯಾಚರಣೆ ಕೇಂದ್ರವನ್ನು ನವೀಕರಿಸಲು ಮತ್ತು ಸೈಬರ್ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶಕ್ಕಾಗಿ ₹38.33 ಕೋಟಿ ವೆಚ್ಚದಲ್ಲಿ ಹೊಸ ತಂತ್ರಾಂಶ ಅಳವಡಿಸಲು ಒಪ್ಪಿಗೆ
- 5ನೇ ರಾಜ್ಯ ಹಣಕಾಸು ಆಯೋಗದ ಅವಧಿಯನ್ನು ಇದೇ ನವೆಂಬರ್‌ವರೆಗೆ ವಿಸ್ತರಿಸಲು ಒಪ್ಪಿಗೆ
- ಕೇಂದ್ರ ಪುರಸ್ಕೃತ ಐಸಿಜೆಎಸ್–2.0 ಯೋಜನೆಯಡಿ ಕೇಂದ್ರದ ಗೃಹ ಮಂತ್ರಾಲಯ ಮಂಜೂರು ಮಾಡಿರುವ ₹89.22 ಕೋಟಿಯಲ್ಲಿ ಪೊಲೀಸ್ ಗಣಕ ವಿಭಾಗದ ವತಿಯಿಂದ ಉಪಕರಣಗಳನ್ನು ಖರೀದಿಸಲು ಮತ್ತು ತರಬೇತಿ ಕೈಗೊಳ್ಳಲು ಅನುಮೋದನೆ
- ಬೀದರ್ ಜಿಲ್ಲೆ ಔರಾದ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಒಪ್ಪಿಗೆ

ಹಾಸಿಗೆ, ಮಂಚ ಖರೀದಿಗೆ ₹40 ಕೋಟಿ

ಕಲಬುರಗಿ ಮತ್ತು ಬೆಳಗಾವಿ ವಿಭಾಗದ ಜಿಲ್ಲೆಗಳು, ಮೈಸೂರು ಮತ್ತು ಬೆಂಗಳೂರು ವಿಭಾಗದ ಜಿಲ್ಲೆಗಳಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಅಧೀನದ ವಿದ್ಯಾರ್ಥಿ ನಿಲಯಗಳಿಗೆ ಕಾಯರ್ ಮ್ಯಾಟ್ರೆಸ್ (ಹಾಸಿಗೆ) ಮತ್ತು ಫೈಬರ್ ಪಿಲ್ಲೊ (ದಿಂಬು) ಖರೀದಿಸಲು ₹20 ಕೋಟಿ. ಅಲ್ಲದೇ, ಟೂ ಟಯರ್ ಕಾಟ್‌ಗಳನ್ನು (ಮಂಚ) ಖರೀದಿಸಲು ₹20 ಕೋಟಿ.

- ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಬಹುಮಹಡಿ ಕಟ್ಟಡಗಳಲ್ಲಿ ಸಂಭವಿಸಬಹುದಾದ ಅಗ್ನಿ ಅನಾಹುತ ತಡೆಗಟ್ಟುವ ಉದ್ದೇಶದಿಂದ 52–54 ಮೀಟರ್ ಎತ್ತರಕ್ಕೆ ತಲುಪಬಲ್ಲ ಒಂದು ಏರಿಯಲ್ ಲ್ಯಾಡರ್ ಪ್ಲಾಟ್ ಫಾರಂ ವಾಹನ ಖರೀದಿಗೆ ₹16 ಕೋಟಿ
- ಮಂಗಳೂರು ತಾಲ್ಲೂಕಿನ ದೇರೆಬೈಲ್‌ನ ಬ್ಲೂಬೆರಿ ಹಿಲ್ಸ್ ರಸ್ತೆಯ ಸರ್ವೆ ಸಂಖ್ಯೆ 129 ಮತ್ತು 113 ರಲ್ಲಿನ 3.285 ಎಕರೆ ಭೂಮಿಯಲ್ಲಿ ‘ವಾಣಿಜ್ಯ ಕಚೇರಿ ಟೆಕ್ ಪಾರ್ಕ್’ ಅಭಿವೃದ್ಧಿಪಡಿಸಲು ಒಪ್ಪಿಗೆ
- ಮೈಸೂರು ನಗರದ ಸಿಪಿಸಿ ಪಾಲಿಟೆಕ್ನಿಕ್ ಸಂಸ್ಥೆಯ ಪಾರಂಪರಿಕ ಕಟ್ಟಡದ ನವೀಕರಣ ಹಾಗೂ ಹೊಸ ಪೂರಕ ಕಟ್ಟಡಗಳ ನಿರ್ಮಾಣ ಕಾಮಗಾರಿಗಳನ್ನು ₹70 ಕೋಟಿಯಲ್ಲಿ ಕೈಗೊಳ್ಳಲಾಗುವುದು. ಇದರಲ್ಲಿ ₹10 ಕೋಟಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಭರಿಸಲಾಗುವುದು. ₹60 ಕೋಟಿಯನ್ನು ಬಜೆಟ್‌ನಿಂದ ಒದಗಿಸಲಾಗುವ ಅನುದಾನದಿಂದ ಹಂತ ಹಂತವಾಗಿ ಭರಿಸಲಾಗುವುದು
- ಚಿಂತಾಮಣಿ ನಗರದ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯ ಕಟ್ಟಡ ನವೀಕರಣ ಹಾಗೂ ಆಡಿಟೋರಿಯಂ ಸೇರಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳಿಗೆ ₹50 ಕೋಟಿ. ಇದಕ್ಕೆ ಪರೀಕ್ಷಾ ಪ್ರಾಧಿಕಾರ ₹10 ಕೋಟಿ ಭರಿಸಲಿದೆ. ₹40 ಕೋಟಿ ಬಜೆಟ್‌ನಲ್ಲಿ ಒದಗಿಸಿದ ಅನುದಾನ ಬಳಸಿಕೊಳ್ಳಲಾಗುವುದು

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ವಿಧಾನಪರಿಷತ್ ಸದಸ್ಯ ಶಾಂತಾರಾಮ್ ಸಿದ್ಧಿ ನೇತೃತ್ವದಲ್ಲಿ ಆದಿವಾಸಿ ನಾಯಕರು ಮನವಿ ಪತ್ರ ಸಲ್ಲಿಸಿದರು.

ಪರಿಶಿಷ್ಟ ಪಂಗಡಗಳಲ್ಲೂ ಒಳಮೀಸಲಾತಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಮಾತ್ರ ಒಳಮೀಸಲಾತಿ ಜಾರಿ ಮಾಡಿದೆ. ಪರಿಶಿಷ್ಟ ಪಂಗಡಗಳಿಗೂ ಒಳಮೀಸಲಾತಿ ವಿಸ್ತರಿಸಲು ಅಗತ್ಯ ಕ್ರಮಕೈಗೊಳ್ಳಬೇಕು’ ಎಂದು ಶಾಸಕರ ಭವನದಲ್ಲಿ ಗುರುವಾರ ನಡೆದ ವಿವಿಧ ಬುಡಕಟ್ಟು ಸಮುದಾಯಗಳ ನಾಯಕರ ಸಭೆ ಆಗ್ರಹಿಸಿದೆ.

‘2024ರ ಆಗಸ್ಟ್ 1ರಂದು ಪ್ರಕಟವಾದ ಒಳಮೀಸಲಾತಿ ಕುರಿತ ಐತಿಹಾಸಿಕ ತೀರ್ಪು ಪರಿಶಿಷ್ಟ ಜಾತಿ ಜತೆ ಪರಿಶಿಷ್ಟ ಪಂಗಡದಲ್ಲೂ ಮೀಸಲಾತಿ ವರ್ಗೀಕರಣ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿತ್ತು. ಆದರೆ, ರಾಜ್ಯ ಸರ್ಕಾರ ಅದನ್ನು ಪಾಲಿಸಿಲ್ಲ’ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಸಭೆಯ ಬಳಿಕ ಬುಡಕಟ್ಟು ಸಮುದಾಯಗಳ ನಾಯಕರು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, ಕಾನೂನು ಸಚಿವ ಎಚ್.ಕೆ.ಪಾಟೀಲ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದರು.

‘ಪರಿಶಿಷ್ಟ ಪಂಗಡದಲ್ಲಿ ಮೀಸಲಾತಿ ಜಾರಿಯಲ್ಲಿ ಸಮಸ್ಯೆ ಇದೆ. ಸಣ್ಣ ಬುಡಕಟ್ಟುಗಳು, ಸೂಕ್ಷ್ಮ ಬುಡಕಟ್ಟುಗಳು, ದುರ್ಬಲ ಬುಡಕಟ್ಟುಗಳು ಮತ್ತು ಪ್ರಬಲ ಸಮುದಾಯಗಳು ಒಂದೇ ತಟ್ಟೆಯಲ್ಲಿನ ಊಟವನ್ನು ಹಂಚಿಕೊಳ್ಳುವಂತಾಗಿದೆ. ಸರ್ಕಾರ ಈ ಬಗ್ಗೆ ಮುತುವರ್ಜಿ ವಹಿಸಿ, ಇದಕ್ಕಾಗಿ, ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗ ರಚಿಸಬೇಕು’ ಎಂದು ಒತ್ತಾಯಿಸಿದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಶಾಂತಾರಾಮ್ ಸಿದ್ಧಿ, ಸಮುದಾಯದವರಾದ ಜಡೆಯ ಗೌಡ, ಗಣೇಶ್ ಬೆಟ್ಟಕುರುಬ, ಹಸಲರ ಮುತ್ತಪ್ಪ, ಕುಡಿಯರ ಮಿಟ್ಟು ರಂಜನ್, ಶಿವರಾಜ್ ಯೆರವ, ರಾಜು ಇರುಳಿಗ, ಹಕ್ಕಿಪಿಕ್ಕಿ ಕಾಮರಾಜ್, ತ್ಯಾಗರಾಜು, ಮರಾಠಿ ನಾಯ್ಕ ಸಮುದಾಯದ ಎಚ್.ವಿ.ಚಂದ್ರಶೇಖರ್, ಎಸ್.ಎನ್.ಅಶೋಕ್, ಕೆ.ಎಸ್.ಮಹೇಶ್, ಗೌಡ್ಲು ಚೇತನ್, ಎಂ.ಸಿ.ಯೋಗೀಶ್ ಮತ್ತು ವಾದಿರಾಜ್ ಪಾಲ್ಗೊಂಡಿದ್ದರು.

ಭಾರತದ ಬೆಳವಣಿಗೆಯಲ್ಲಿ ಭಾಗಿಯಾಗಿ: ಪ್ರಧಾನಿ ಕರೆ

ಮುಂಬೈ (ಪಿಟಿಐ): ಭಾರತದ ಬೆಳವಣಿಗೆಯ ಪಯಣದಲ್ಲಿ ಭಾಗಿಯಾಗುವಂತೆ ಜಾಗತಿಕ ಉದ್ಯಮಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಕರೆ ನೀಡಿದರು.

ಜಾಗತಿಕ ಫಿನ್‌ಟೆಕ್ ಉತ್ಸವವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಹಿಂದೆ ಬ್ಯಾಂಕಿಂಗ್ ವ್ಯವಸ್ಥೆಯು ಕೆಲವರಿಗೆ ಮಾತ್ರ ದಕ್ಕುತ್ತಿತ್ತು. ಆದರೆ ಡಿಜಿಟಲ್ ತಂತ್ರಜ್ಞಾನವು ಇದನ್ನು ಸಬಲೀಕರಣದ ಅಸ್ತ್ರವನ್ನಾಗಿ ಪರಿವರ್ತಿಸಿದೆ. ಇಂದು ಡಿಜಿಟಲ್ ಪಾವತಿಗಳು ನಿತ್ಯ ಜೀವನದ ಭಾಗವಾಗಿವೆ. ಇದರ ಶ್ರೇಯವು ಜನಧನ್ ಖಾತೆ, ಆಧಾರ್ ಯೋಜನೆ ಮತ್ತು ಸ್ಮಾರ್ಟ್‌ಫೋನ್‌ಗಳಿಗೆ ಸಲ್ಲಬೇಕು’ ಎಂದರು.

ಫಿನ್‌ಟೆಕ್ ವಲಯದಲ್ಲಿ ಭಾರತ ಹೊಂದಿರುವ ತಾಕತ್ತಿಗೆ ಜಾಗತಿಕ ಮಟ್ಟದಲ್ಲಿ ಮಾನ್ಯತೆ ಸಿಗುತ್ತಿದೆ. ಭಾರತವು ತಂತ್ರಜ್ಞಾನವನ್ನು ಇತರ ದೇಶಗಳ ಜೊತೆ ಹಂಚಿಕೊಳ್ಳುವುದಷ್ಟೇ ಅಲ್ಲದೆ, ಆ ದೇಶಗಳು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವಲ್ಲಿಯೂ ನೆರವಾಗುತ್ತಿದೆ ಎಂದರು.

ದೇಶದ ಫಿನ್‌ಟೆಕ್ ವಲಯವನ್ನು ಶ್ಲಾಘಿಸಿದ ಪ್ರಧಾನಿ, ‘ನಮ್ಮ ದೇಶಿ ತಂತ್ರಜ್ಞಾನವು ಜಾಗತಿಕ ಮಟ್ಟದಲ್ಲಿ ಪ್ರಸ್ತುತವಾಗುತ್ತಿದೆ’ ಎಂದರು.

ಭಾರತವು ಪ್ರಜಾತಂತ್ರದ ತಾಯಿ ಎಂದು ಹೇಳಿದ ಪ್ರಧಾನಿ, ‘ನಾವು ಜನತಂತ್ರದ ಬಗ್ಗೆ ಮಾತನಾಡಿದಾಗ ಅದು ಚುನಾವಣೆಗಳು, ನೀತಿ ನಿರ್ಧಾರಗಳಿಗೆ ಮಾತ್ರ ಸೀಮಿತವಲ್ಲ. ಭಾರತವು ಪ್ರಜಾತಾಂತ್ರಿಕ ಆಶಯವನ್ನು ಆಡಳಿತದ ಬಲಿಷ್ಠ ಆಧಾರಸ್ತಂಭವನ್ನಾಗಿಸಿದೆ. ಇದಕ್ಕೆ ಉತ್ತಮ ಉದಾಹರಣೆ ತಂತ್ರಜ್ಞಾನ’ ಎಂದರು. ಹಿಂದಿನ ದಶಕದಲ್ಲಿ ಭಾರತವು ತಂತ್ರಜ್ಞಾನ ಎಲ್ಲರಿಗೂ ಲಭ್ಯವಾಗುವಂತೆ ಮಾಡಿದೆ. ಇಂದು ಭಾರತವು ತಂತ್ರಜ್ಞಾನದ ವಿಚಾರದಲ್ಲಿ ಎಲ್ಲರನ್ನೂ ಒಳಗೊಳ್ಳುವ ದೇಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್, ಭಾರತ ಮತ್ತು ಬ್ರಿಟನ್ ನಡುವೆ ಜುಲೈನಲ್ಲಿ ಆಗಿರುವ ಮುಕ್ತ ವ್ಯಾಪಾರ ಒಪ್ಪಂದವು ಎರಡೂ ದೇಶಗಳ ಜಿಡಿಪಿಗೆ ಕೊಡುಗೆ ನೀಡಲಿದೆ ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ

ಶೂದ್ರ, ಪ್ರತಿಭಾ ಸೇರಿ ಆರು ಮಂದಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2024ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಗೌರವ ಹಾಗೂ ಸಾಹಿತ್ಯಶ್ರೀ ಪ್ರಶಸ್ತಿಗೆ 15 ಜನರನ್ನು ಆಯ್ಕೆ ಮಾಡಲಾಗಿದೆ.

ಗೌರವ ಪ್ರಶಸ್ತಿಗೆ ಎಂ. ಬಸವಣ್ಣ (ಚಾಮರಾಜನಗರ), ಶೂದ್ರ ಶ್ರೀನಿವಾಸ್, ಪ್ರತಿಭಾ ನಂದಕುಮಾರ್ (ಬೆಂಗಳೂರು), ಡಿ.ಬಿ.ನಾಯಕ್ (ಕಲಬುರಗಿ), ವಿಶ್ವನಾಥ್ ಕಾರ್ನಾಡ್ (ಮುಂಬಯಿ) ಅವರನ್ನು ಆಯ್ಕೆ ಮಾಡಲಾಗಿದೆ.

‘ಸಾಹಿತ್ಯಶ್ರೀ’ ಪ್ರಶಸ್ತಿಗೆ ಪದ್ಮಾಲಯ ನಾಗರಾಜ್ (ಕೋಲಾರ), ಕೆ.ವೈ. ನಾರಾಯಣಸ್ವಾಮಿ (ಬೆಂಗಳೂರು), ಬಿ.ಎಂ ಪುಟ್ಟಯ್ಯ (ಚಿಕ್ಕಮಗಳೂರು), ಬಿ.ಯು.ಸುಮಾ (ತುಮಕೂರು), ಮಮತಾ ಸಾಗರ (ಶಿವಮೊಗ್ಗ), ಸಬಿತಾ ಬನ್ನಾಡಿ (ಉಡುಪಿ), ಅಬ್ದುಲ್ ಹೈ ತೋರಣಗಲ್ (ಬಳ್ಳಾರಿ), ಗುರುಲಿಂಗಪ್ಪ ಧಬಾಲೆ (ಅಕ್ಕಲಕೋಟೆ), ಡಾ.ಎಚ್.ಎಸ್. ಅನುಪಮಾ (ಉತ್ತರ ಕನ್ನಡ), ಅಮರೇಶ ಯತಗಲ್ (ರಾಯಚೂರು) ಅವರನ್ನು ಆಯ್ಕೆ ಮಾಡಲಾಗಿದೆ.

ಗೌರವ ಪ್ರಶಸ್ತಿಯು ₹50 ಸಾವಿರ ನಗದು, ಸಾಹಿತ್ಯಶ್ರೀ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನವು ₹25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

‘ನಗರದಲ್ಲಿ ಗುರುವಾರ ನಡೆದ ಅಕಾಡೆಮಿಯ ಸರ್ವಸದಸ್ಯರ ಸಭೆಯಲ್ಲಿ ಪ್ರಶಸ್ತಿಗಳಿಗೆ ಸಾಹಿತಿಗಳು ಹಾಗೂ ಕೃತಿಗಳನ್ನು ಆಯ್ಕೆ ಮಾಡಲಾಗಿದೆ. ಮೈಸೂರು, ತುಮಕೂರು ಇಲ್ಲವೇ ಬೆಳಗಾವಿಯಲ್ಲಿ ಸದ್ಯವೇ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಅಕಾಡೆಮಿ ಅಧ್ಯಕ್ಷ ಎಲ್. ಎನ್. ಮುಕುಂದರಾಜ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸಾಹಿತ್ಯ ಅಕಾಡೆಮಿಗೆ ಸರ್ಕಾರ ವಾರ್ಷಿಕ ₹80 ಲಕ್ಷ ಅನುದಾನ ಒದಗಿಸುತ್ತಿದ್ದು, ಇದರಲ್ಲೇ ಚಟುವಟಿಕೆ ನಡೆಸುತ್ತಿದ್ದೇವೆ. ಇದಲ್ಲದೇ ಬಜೆಟ್‌ನಲ್ಲಿ ಘೋಷಿಸಿದ ಕನ್ನಡ ಭಾರತಿ 150 ಪುಸ್ತಕ ಪ್ರಕಟಣೆಗೆ ₹50 ಲಕ್ಷ, ಸೌಹಾರ್ದ ಕರ್ನಾಟಕ ಕಾರ್ಯಕ್ರಮಕ್ಕೆ ₹50 ಲಕ್ಷ ಒದಗಿಸಿದ್ದು, ಈ ಕಾರ್ಯ ಚಟುವಟಿಕೆಗಳನ್ನು ರೂಪಿಸುತ್ತಿದ್ದೇವೆ’ ಎಂದು ಹೇಳಿದರು.

2023ನೇ ವರ್ಷದ ಅಕಾಡೆಮಿಯ ದತ್ತಿ ಬಹುಮಾನ

- **ಕಾದಂಬರಿ** (ಚದುರಂಗ ದತ್ತಿ ಬಹುಮಾನ): **ಲತಾ ಗುತ್ತಿ** (ಕೃತಿ: ಚದುರಂಗ)
- **ಲಲಿತ ಪ್ರಬಂಧ** (ವಿ. ಸೀತಾರಾಮಯ್ಯ ಸೋದರಿ ಇಂದಿರಾ ದತ್ತಿ ಬಹುಮಾನ): **ಸುಮಾ ರಮೇಶ್** (ಹಚ್ಚೆ ದಿನ್, ಬೆಚ್ಚಗಿನ ನಗೆಯೊಂದಿಗೆ)
- **ಜೀವನಚರಿತ್ರೆ** (ಸಿಂಪಿ ಲಿಂಗಣ್ಣ ದತ್ತಿ ಬಹುಮಾನ): **ರೂಪ ಹಾಸನ** (ಮಹಾಸಂಗ್ರಾಮಿ ಎಸ್. ಆರ್. ಹಿರೇಮಠ)
- **ಸಾಹಿತ್ಯ ವಿಮರ್ಶೆ** (ಪಿ. ಶ್ರೀನಿವಾಸರಾವ್ ದತ್ತಿ ಬಹುಮಾನ): **ಕಾತ್ಯಾಯಿನಿ ಕುಂಚಿಬೆಟ್ಟು** (ಇರವಿನ ಅರಿವು)
- **ಕಾವ್ಯ ಹಸ್ತಪ್ರತಿ** (ಜಿ. ಶ್ರೀನಿವಾಸರಾಜು ದತ್ತಿ ಬಹುಮಾನ): **ಟಿ. ಜಿ. ಪುಷ್ಪಲತಾ** (ಕೇದಿಗೆ)
- **ಅನುವಾದ:** (ಎಲ್. ಗುಂಡಪ್ಪ ಮತ್ತು ಶಾರದಮ್ಮ ದತ್ತಿ ಬಹುಮಾನ): **ರೋಸಿ ಡಿಸೋಜಾ** (ಹೆಚ್.ಡಿ. ದೇವೇಗೌಡರ ಬದುಕು ಮತ್ತು ದುಡಿಮೆ ಕುರಿತ ನೇಗಿಲ ಗೆರೆಗಳು)
- **ಲೇಖಕರ ಮೊದಲ ಸ್ವತಂತ್ರ ಕೃತಿ** (ಮಧುರಚೆನ್ನ ದತ್ತಿ ಬಹುಮಾನ): **ಅಬ್ಬೂರು ಪ್ರಕಾಶ್** (ಕಣ್ಣ ಕನ್ನಡಿಯಲ್ಲಿ)
- **ವೈಚಾರಿಕ/ಅಂಕಣ ಬರಹ** (ಬಿ.ವಿ. ವೀರಭದ್ರಪ್ಪ ದತ್ತಿ ಬಹುಮಾನ): **ಸುದೇಶ ದೊಡ್ಡಪಾಳ್ಯ** (ಈಶಾನ್ಯದ ದಿಕ್ಕಿನಿಂದ)
- **ಕನ್ನಡದಿಂದ ಇಂಗ್ಲಿಷಿಗೆ ಅನುವಾದ** (ಅಮೆರಿಕನ್ನಡ ದತ್ತಿನಿಧಿ ಬಹುಮಾನ): **ಅನುವಾದಕಿ- ಸುಕನ್ಯಾ ಕನಾರಳ್ಳಿ** (ಲವ್ ಅಂಡ್ ವಾಟರ್ ಫ್ಲೋ ಟುಗೆದರ್)

ವಿಶ್ವನಾಥ್ ಕಾರ್ನಾಡ್ | ಡಿ.ಬಿ. ನಾಯಕ್ | ಪ್ರತಿಭಾ ನಂದಕುಮಾರ್ | ಶೂದ್ರ ಶ್ರೀನಿವಾಸ್ | ಬಸವಣ್ಣ

ಸುದೇಶ ದೊಡ್ಡಪಾಳ್ಯ ಕೃತಿಗೆ ದತ್ತಿ ಬಹುಮಾನ

ಸುದೇಶ ದೊಡ್ಡಪಾಳ್ಯ

‘ಪ್ರಜಾವಾಣಿ’ಯ ಸುದ್ದಿ ಸಂಪಾದಕ ಸುದೇಶ ದೊಡ್ಡಪಾಳ್ಯ ಅವರ ‘ಈಶಾನ್ಯದ ದಿಕ್ಕಿನಿಂದ’ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2023ನೇ ವರ್ಷದ ದತ್ತಿ ಬಹುಮಾನ ಸಂದಿದೆ.

2023ನೇ ವರ್ಷದ ಪುಸ್ತಕ ಬಹುಮಾನ ವಿಜೇತರು

- **ಕಾವ್ಯ: ಲಕ್ಷ್ಮಣ ವಿ.ಎ** (ಕೃತಿ: ಕಾಯಿನ್ ಬೂತ್)
- **ನವಕವಿಗಳ ಪ್ರಥಮ ಸಂಕಲನ: ಬಿ.ಎಂ. ಗುರುನಾಥ** (ನಕ್ಷತ್ರ ತಬ್ಬಿ ಮಲಗಿದ ಹೊತ್ತು)
- **ಕಾದಂಬರಿ: ಗಂಗಪ್ಪ ತಳವಾರ್** (ಧಾವತಿ)
- **ಸಣ್ಣಕತೆ: ಮಾಧವಿ ಭಂಡಾರಿ ಕೆರೆಕೋಣ** (ಗುಲಾಬಿ ಕಂಪಿನ ರಸ್ತೆ)
- **ನಾಟಕ: ಸಾಸ್ವೇಹಳ್ಳಿ ಸತೀಶ್** (ಏಸೂರು ಕೊಟ್ಟರೂ ಈಸೂರು ಕೊಡೆವು)
- **ಲಲಿತ ಪ್ರಬಂಧ: ಸರಸ್ವತಿ ಭೋಸಲೆ** (ಕಾಡತಾವ ನೆನಪ)
- **ಪ್ರವಾಸ ಸಾಹಿತ್ಯ: ಡಿ. ವಿ. ಗುರುಪ್ರಸಾದ್** (ಮಾಯನ್ನರ ಮಾಯಾನಗರಿ ಮೆಕ್ಸಿಕೋದಲ್ಲೊಂದು ಸುತ್ತು)
- **ಜೀವನ ಚರಿತ್ರೆ/ಆತ್ಮಕಥೆ: ಡಾ. ಸಿ. ಚಂದ್ರಪ್ಪ** (ಅಶೋಕ ಸತ್ಯ- ಅಹಿಂಸೆಯ ಮಹಾಶಯ)
- **ಸಾಹಿತ್ಯ ವಿಮರ್ಶೆ: ರಂಗನಾಥ ಕಂಟನಕುಂಟೆ** (ಓದಿನ ಒಕ್ಕಲು)
- **ಮಕ್ಕಳ ಸಾಹಿತ್ಯ: ಮತ್ತೂರು ಸುಬ್ಬಣ್ಣ** (ಮುತ್ತಜ್ಜಿಯ ಅಜ್ಜಿ ಕಥೆಗಳು)
- **ವಿಜ್ಞಾನ ಸಾಹಿತ್ಯ: ಡಾ. ಎಚ್. ಎಸ್. ಮೋಹನ್** (ಕಣ್ಣಿನಲ್ಲಿ ಕಂಡ ಮೃತ್ಯುಬಿಂಬ ಮತ್ತು ಇತರ ವೈದ್ಯಕೀಯ ಲೇಖನಗಳು)
- **ಮಾನವಿಕ: ಪ್ರಕಾಶ ಭಟ್** (ಹಳ್ಳಿಗಳನ್ನು ಕಟ್ಟುವ ಕಷ್ಟಸುಖ)
- **ಸಂಶೋಧನೆ: ಕಾಡುಗೊಲ್ಲ ಬುಡಕಟ್ಟು** (ಮಲ್ಲಿಕಾರ್ಜುನ ಕಲಮರಹಳ್ಳಿ)
- **ಅನುವಾದ:** (ಭಾರತೀಯ ಭಾಷೆಯಿಂದ ಕನ್ನಡಕ್ಕೆ ಅನುವಾದ): **ಜೆ.ಪಿ. ದೊಡಮನಿ** (ಡಾ. ಬಾಬಾಸಾಹೇಬ ಅಂಬೇಡ್ಕರ ಜೀವನ ಚರಿತ್ರೆ)
- **ಅಂಕಣ ಬರಹ/ವೈಚಾರಿಕ ಬರಹ: ದೇವು ಪತ್ತಾರ** (ಈಶಾನ್ಯೆ ಒಡಲು)
- **ಸಂಕೀರ್ಣ: ಸತೀಶ್ ತಿಪಟೂರು** (ಮಣ್ಣಿನ ಬಂಡಿಯಲ್ಲಿ ಪುಕುವೋಕಾ)
- **ಲೇಖಕರ ಮೊದಲ ಸ್ವತಂತ್ರ ಕೃತಿ: ಗೋವಿಂದರಾಜು ಎಂ. ಕಲ್ಲೂರು** (ನಕ್ಷತ್ರಕ್ಕಂಟಿದ ಮುಟ್ಟಿನ ನೆತ್ತರು)

ವೀರೇಂದ್ರಗೆ ಸೇರಿದ 40 ಕೆ.ಜಿ ಚಿನ್ನದ ಗಟ್ಟಿ ಇ.ಡಿ ವಶಕ್ಕೆ

ಒಂದನೇ ಪುಟದಿಂದ...

ಕ್ಯಾಸಿನೊ ಅನ್ನು ಗುತ್ತಿಗೆ ಪಡೆಯಲು ಸಿಕ್ಕಿಂಗೆ ತೆರಳಿದ್ದ ವೇಳೆ ಅಲ್ಲಿಯೇ ಬಂಧಿಸಿ, ಕರೆತರಲಾಗಿತ್ತು. ವೀರೇಂದ್ರ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಈ ಪ್ರಕರಣದಲ್ಲಿ ಶಾಸಕ ವೀರೇಂದ್ರ ಅವರೇ ಪ್ರಮುಖ ಆರೋಪಿ ಎಂದು ಇ.ಡಿ ತಿಳಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಈ ಹಿಂದೆ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯವು 21 ಕೆ.ಜಿ ಬಂಗಾರ, ಚಿನ್ನದ ಗಟ್ಟಿಗಳು, ಚಿನ್ನ, ಬೆಳ್ಳಿ ಆಭರಣಗಳು, ಬ್ಯಾಂಕ್ ಖಾತೆಯಲ್ಲಿದ್ದ ನಗದು ಹಾಗೂ ಐಷಾರಾಮಿ ಕಾರುಗಳನ್ನು ವಶಕ್ಕೆ ಪಡೆದಿತ್ತು. ಇವುಗಳ ಮೌಲ್ಯ ₹103 ಕೋಟಿ ಎಂದು ಅಂದಾಜಿಸಿತ್ತು.

‘ಅಕ್ರಮ ಆನ್‌ಲೈನ್ ಬೆಟ್ಟಿಂಗ್ ವೆಬ್‌ಸೈಟ್‌ಗಳಾದ ‘ಕಿಂಗ್ 567’ ಹಾಗೂ ‘ರಾಜಾ567’ ಕಾರ್ಯಾಚರಣೆಯಲ್ಲಿ ವೀರೇಂದ್ರ ಹಾಗೂ ಅವರ ಸ್ನೇಹಿತರು, ಕುಟುಂಬದ ಸದಸ್ಯರು ಭಾಗಿಯಾಗಿದ್ದರು. ಈ ವೆಬ್‌ಸೈಟ್ ಮೂಲಕ ದೇಶದಾದ್ಯಂತ ಸಾವಿರಾರು ಮಂದಿ ಅಮಾಯಕರಿಗೆ ಮೋಸಮಾಡಿದ್ದರು. ವೀರೇಂದ್ರ ಅವರು ನಿಯಂತ್ರಿಸುತ್ತಿದ್ದ ಬೆಟ್ಟಿಂಗ್ ವೆಬ್‌ಸೈಟ್‌ಗಳ ವಹಿವಾಟು ₹2ಸಾವಿರ ಕೋಟಿಗಿಂತಲೂ ಹೆಚ್ಚಿದೆ’ ಎಂದು ಇ.ಡಿ ತಿಳಿಸಿತ್ತು.

ಗಾಜಾ ಶಾಂತಿ ಯೋಜನೆ: ಟ್ರಂಪ್ ಅಭಿನಂದಿಸಿದ ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಗುರುವಾರ ಮಾತನಾಡಿದ್ದು, ಗಾಜಾದಲ್ಲಿ ಶಾಂತಿ ಸ್ಥಾಪನೆಗಾಗಿ ರೂಪಿಸಿದ ಯೋಜನೆ ಯಶಸ್ವಿಯಾದ ಕಾರಣ ಅವರನ್ನು ಅಭಿನಂದಿಸಿದ್ದಾರೆ.

ನರೇಂದ್ರ ಮೋದಿ

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಅಮೆರಿಕ–ಭಾರತ ವ್ಯಾಪಾರ ಒಪ್ಪಂದದಲ್ಲಿ ಆಗಿರುವ ಪ್ರಗತಿ ಬಗ್ಗೆಯೂ ಅವರೊಂದಿಗೆ ಚರ್ಚಿಸಿದೆ’ ಎಂದು ಹೇಳಿದ್ದಾರೆ.

ಮುಲಾಜಿಲ್ಲದೆ ಒತ್ತುವರಿ ತೆರವು: ಸಿ.ಎಂ

‘ಕೆರೆ ಒತ್ತುವರಿಯನ್ನು ರೈತರೇ ಬಿಟ್ಟುಕೊಡಬೇಕು; ಹೂಳನ್ನು ಜಮೀನಿಗೆ ಬಳಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವ ರೈತರು, ತಾವಾಗಿಯೇ ಅದನ್ನು ಬಿಟ್ಟುಕೊಡಬೇಕು. ಇಲ್ಲದಿದ್ದರೆ ಮುಲಾಜಿಲ್ಲದೆ ತೆರವು ಮಾಡಲಾಗುತ್ತದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು.

ಸಣ್ಣ ನೀರಾವರಿ ಇಲಾಖೆ ಆಯೋಜಿಸಿದ್ದ ‘ನೀರಿದ್ದರೆ ನಾಳೆ– ಜಲವೇ ಜಗದ ಜೀವಾಳ’ ಜಾಗೃತಿ ಕಾರ್ಯಕ್ರಮಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದಲ್ಲಿ 37 ಲಕ್ಷ ಕೊಳವೆಬಾವಿಗಳು ಅಧಿಕೃತವಾಗಿವೆ. ಇದಲ್ಲದೆ, ಅನಧಿಕೃತವಾಗಿ ಇನ್ನಷ್ಟು ಲಕ್ಷ ಕೊಳವೆಬಾವಿಗಳಿವೆ. ರಾಷ್ಟ್ರದ ಸರಾಸರಿಗಿಂತ (ಶೇಕಡ 60) ಶೇ 8ರಷ್ಟು ಹೆಚ್ಚು ಅಂತರ್ಜಲ ರಾಜ್ಯದಲ್ಲಿ ಬಳಕೆಯಾಗುತ್ತಿದೆ. ಹೀಗಾಗಿ, ನೀರಿನ ಬಳಕೆ, ರಕ್ಷಣೆ ಹಾಗೂ ಅಂತರ್ಜಲ ವೃದ್ಧಿಸುವ ಬಗ್ಗೆ ಹೆಚ್ಚಿನ ಕ್ರಮವಾಗಬೇಕಿದೆ ಎಂದು ಹೇಳಿದರು.

236 ತಾಲ್ಲೂಕುಗಳಲ್ಲಿ 144 ತಾಲ್ಲೂಕುಗಳು ಮಾತ್ರ ಅಂತರ್ಜಲ ಮಟ್ಟದಲ್ಲಿ ಸುರಕ್ಷಿತ ವರ್ಗದಲ್ಲಿವೆ. 44 ತಾಲ್ಲೂಕುಗಳಲ್ಲಿ ಅತಿ ಬಳಕೆ, 14 ತಾಲ್ಲೂಕು ಕ್ಲಿಷ್ಟಕರ, 33 ತಾಲ್ಲೂಕು ಅರೆ ಕ್ಲಿಷ್ಟಕರ ವರ್ಗದಲ್ಲಿವೆ. ಈ ಕಾರಣಕ್ಕೇ ಕೋಲಾರ ಮತ್ತು ಚಿಕ್ಕಬಳ್ಳಾಪುರದ ಕೆರೆಗಳನ್ನು ತುಂಬಿಸುವ ಕೆ.ಸಿ. ವ್ಯಾಲಿ ಯೋಜನೆ ಜಾರಿ ಮಾಡಲಾಯಿತು. ಇದರಿಂದ ಅಲ್ಲಿ, 200 ಅಡಿ– 300 ಅಡಿಗೆ ನೀರು ಸಿಗುವಂತಾಗಿದೆ. ಈ ಮೊದಲು 2000 ಅಡಿಯಷ್ಟು ಕೊರೆಯಬೇಕಾಗಿತ್ತು ಎಂದರು.

‘ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಅಂತರ್ಜಲ ವೃದ್ಧಿಗೆ ಸಾವಿರಾರು ಕೋಟಿ ಖರ್ಚು ಮಾಡಿದ್ದೇವೆ. ಇದರಿಂದ ಅಂತರ್ಜಲ ಉತ್ತಮವಾಗಿ ವೃದ್ಧಿಯಾಗಿದೆ. ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಏಷ್ಯಾದಲ್ಲೇ ಮೊದಲು. ಹೊರ ರಾಜ್ಯ, ದೇಶದವರಲ್ಲೇ ಬಂದು ಮೆಚ್ಚುಗೆ ಸೂಚಿಸುತ್ತಿದ್ದಾರೆ. ಆದರೆ, ಇಲ್ಲಿನ ಕೆಲವರು ಇನ್ನೂ ವಿರೋಧ ವ್ಯಕ್ತಪಡಿಸುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ಹೇಳಿದರು.

ಜಲತಜ್ಞ ರಾಜೇಂದ್ರ ಸಿಂಗ್ ಅವರು ಮಾತನಾಡಿ, ‘ಅಂತರ್ಜಲ ಮಟ್ಟ ಅಭಿವೃದ್ಧಿಯಲ್ಲಿ ಕರ್ನಾಟಕ ರಾಜ್ಯ ಮೊದಲ ಸ್ಥಾನದಲ್ಲಿದೆ. ತೃತೀಯ ಹಂತದ ಸಂಸ್ಕರಣೆ ಮಾಡಿ, ಕೆರೆ ಹಾಗೂ ಅಂತರ್ಜಲ ಮರುಪೂರಣಕ್ಕೆ ಕ್ರಮ ಕೈಗೊಂಡರೆ, ಎಲ್ಲರಿಗೂ ಮಾದರಿಯಾಗಬಹುದು’ ಎಂದು ಹೇಳಿದರು.

ಸಣ್ಣ ನೀರಾವರಿ ಇಲಾಖೆಯ ರಾಯಭಾರಿ, ನಟ ವಶಿಷ್ಠ ಸಿಂಹ ಮಾತನಾಡಿ, ‘ನೀರಿನ ಬಗ್ಗೆ ನಿಷ್ಕಾಳಜಿ ತೋರಿದ ಪರಿಣಾಮ ನಾವು ಅಭಾವ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಮುಂಬರುವ ಪೀಳಿಗೆಗೆ ಆಸ್ತಿಯಲ್ಲದೆ, ನೀರಿನ ಸಂರಕ್ಷಣೆಯ ಮೂಲಕ ಮಹತ್ವದ ಕೊಡುಗೆ ನೀಡಬೇಕಾಗಿದೆ’ ಎಂದರು.

ಸಚಿವರಾದ ಎಚ್.ಕೆ.ಪಾಟೀಲ, ಈಶ್ವರ್ ಖಂಡ್ರೆ, ಎಚ್.ಸಿ. ಮಹದೇವಪ್ಪ ಉಪಸ್ಥಿತರಿದ್ದರು.

‘ನೀರಿದ್ದರೆ ನಾಳೆ ಜಲವೇ ಜಗದ ಜೀವಾಳ’ ಜಾಗೃತಿ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ಚಾಲನೆ ನೀಡಿದರು. ಎಚ್. ಸಿ. ಮಹದೇವಪ್ಪ, ಎಚ್. ಕೆ. ಪಾಟೀಲ, ರಾಜೇಂದ್ರ ಸಿಂಗ್, ಎನ್. ಎಸ್. ಬೋಸರಾಜು, ಡಿ.ಕೆ. ಶಿವಕುಮಾರ್ ಭಾಗಿಯಾಗಿದ್ದರು ಪ್ರಜಾವಾಣಿ ಚಿತ್ರ

‘ನೆರೆ ರಾಜ್ಯದವರು ಸಹಕರಿಸಲಿ’

‘ನಮ್ಮ ನೆರೆ ರಾಜ್ಯದವರಾದ ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ, ಗೋವಾ ಹಾಗೂ ತಮಿಳುನಾಡಿನವರು ನೀರಾವರಿ ಯೋಜನೆಗಳಿಗೆ ಸಹಕರಿಸಬೇಕು. ನಾವು ಎಲ್ಲರಿಗೂ ಅನುಕೂಲವಾಗುವಂತೆ ಯೋಜನೆಗಳನ್ನು ರೂಪಿಸಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಶಿಕ್ಷಣ, ಉದ್ಯೋಗ ಎಂದು ಎಲ್ಲ ರಾಜ್ಯದವರೂ ನಮ್ಮ ರಾಜ್ಯದಲ್ಲಿ ಬಂದು ನೆಲಸಿದ್ದಾರೆ. ಅವರನ್ನು ನಾವು ಸ್ವಾಗತ ಮಾಡುತ್ತಿದ್ದೇವೆ. ಅವರಿಗೆಲ್ಲ ಸೌಲಭ್ಯ ನೀಡುತ್ತಿದ್ದೇವೆ. ಇದನ್ನೆಲ್ಲ ಅರಿತು ನಮ್ಮ ಯೋಜನೆಗಳಿಗೆ ನೆರವಾಗಬೇಕು’ ಎಂದರು.

‘ಪ್ರತಿ ವರ್ಷ ಸಾವಿರ ಕೆರೆಗೆ ನೀರು’

‘ರಾಜ್ಯದಲ್ಲಿ ಪ್ರತಿ ವರ್ಷ 1,018 ಕೆರೆಗಳ 25 ಲಕ್ಷ ಎಕರೆಯಲ್ಲಿ ನೀರು ತುಂಬಿಸಲಾಗುತ್ತಿದೆ. ಅಂತರ್ಜಲ ಇಲಾಖೆ ಮೂಲಕ 2,714 ಪ್ರದೇಶಗಳಲ್ಲಿ ಪ್ರತಿ ಆರು ಗಂಟೆಗೊಮ್ಮೆ ಅಂತರ್ಜಲದ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ’ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

‘ಡಿಸೆಂಬರ್ ವೇಳೆಗೆ 41,849 ಕೆರೆಗಳ ಒತ್ತುವರಿ ತೆರವುಗೊಳಿಸಲಾಗುತ್ತದೆ. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಬಂದ ಮೇಲೆ ಎಂಟು ಸಾವಿರಕ್ಕೂ ಅಧಿಕ ಸಣ್ಣ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿ ಅಂತರ್ಜಲ ಹೆಚ್ಚಿಸಲು ಕ್ರಮ ತೆಗೆದುಕೊಂಡಿದ್ದೇವೆ’ ಎಂದು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ಈ ಸಾರ್ವಜನಿಕ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು, ಸೀಗೆಹಳ್ಳಿ ಗ್ರಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ವಿಳಾಸದಲ್ಲಿರುವ ಸರ್ವೆ ನಂ. 23 ರಲ್ಲಿ ಸಂಯೋಜಿತ 1 ಎಕರೆ – 25 ಗುಂಟಾ (ಒಂದು ಎಕರೆ – ಇಪ್ಪತ್ತೈದು ಗುಂಟಾ) ವಿಸ್ತೀರ್ಣವುಳ್ಳ ಜಮೀನನ್ನು (“ಸದರಿ ಜಮೀನು”) ಅದರ ಪ್ರಸಕ್ತ ಮಾಲೀಕರಾದ, ಡಿಎಸ್‌ಆರ್ ಪ್ರೈಮ್ ಡೆವಲಪರ್ಸ್ ಎಲ್‌ಎಲ್‌ಪಿ (“ಮಾಲೀಕರು”) ಇವರಿಂದ ಭೋಗ್ಯಕ್ಕೆ ಪಡೆದುಕೊಳ್ಳಲು ಉದ್ದೇಶಿಸಿದ್ದು, ಸದರಿ ಸ್ವತ್ತಿನ ಚಕ್ಕುಬಂದಿ ಕೆಳಗಿನಂತಿರುತ್ತದೆ:
ಉತ್ತರ: ಸರ್ವೆ ನಂ. 24 ರಲ್ಲಿನ ಖಾಸಗಿ ಸ್ವತ್ತು,
ದಕ್ಷಿಣ: ಸರ್ವೆ ನಂ. 23 ರಲ್ಲಿನ ಖಾಸಗಿ ಸ್ವತ್ತು
ಪೂರ್ವ: ಸರ್ವೆ ನಂ. 23 ರಲ್ಲಿನ ಜಮೀನು
ಪಶ್ಚಿಮ: ರಸ್ತೆ
ಸದರಿ ಸಾರ್ವಜನಿಕ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಈ ಮೇಲಿನ ವಾಸ್ತವ ಅಂಶಗಳಿಗೆ ಅನುಗುಣವಾಗಿ, ಮೇಲ್ಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ಸಂಸ್ಥೆ ಸೇರಿದಂತೆ, ಯಾವುದೇ ಬ್ಯಾಂಕ್, ಹಣಕಾಸು ಸಂಸ್ಥೆ, ಕ್ರೆಡಿಟ್ ಸೊಸೈಟ ಅಥವಾ ಇನ್ಯಾವುದೇ ಮೂರನೇ ಪಕ್ಷಗಾರರಿಗೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಕ್ಲೇಮ್ ಅಥವಾ ಹಿತಾಸಕ್ತಿಗಳಿದ್ದಲ್ಲಿ ಅಥವಾ ಮೇಲೆ ತಿಳಿಸಿರುವಂತಹ ನಮ್ಮ ಕಕ್ಷಿದಾರರ ಉದ್ದೇಶಿತ ವ್ಯವಹಾರಕ್ಕೆ ಯಾವುದೇ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ವ್ಯಕ್ತಿ/ಸಂಸ್ಥೆ ಸೇರಿದಂತೆ, ಯಾವುದೇ ಬ್ಯಾಂಕ್, ಹಣಕಾಸು ಸಂಸ್ಥೆ, ಕ್ರೆಡಿಟ್ ಸೊಸೈಟ ಅಥವಾ ಇನ್ಯಾವುದೇ ಮೂರನೇ ಪಕ್ಷಗಾರರಿಗೆ ತಿಳಿದಿರುವಂತೆ ಯಾವುದೇ ಮಾರಾಟ, ವಿನಿಮಯ, ಅಸೈನ್‌ಮೆಂಟ್, ಉಡುಗೊರೆ, ಪರವಾನಿಗೆ, ಟೆನೆನ್ಸಿ, ಅನುವಂಶಿಕ, ಬಾಕಿ ವ್ಯಾಜ್ಯ, ಸ್ವಾಧೀನತೆ, ಗುತ್ತಿಗೆ/ಒಪ್ಪಂದ, ಅಭಿವೃದ್ಧಿ ಹಕ್ಕುಗಳು, ಪಾಲುದಾರಿಕೆ, ಕುಟುಂಬ ವ್ಯವಸ್ಥೆ/ ಇತ್ಯರ್ಥ, ಯಾವುದೇ ಕಾನೂನುಬದ್ಧ ನ್ಯಾಯಾಲಯ/ ನ್ಯಾಯಾಧಿಕರಣದ ಡಿಕ್ರಿ ಅಥವಾ ಆದೇಶ, ಅಡಮಾನ, ಲೀನ್, ಹೈಪೊಥಿಕೇಶನ್, ಚಾರ್ಜ್, ಋಣಭಾರ, ಸರ್ಕಾರಿ ಅಥವಾ ಇನ್ನಾವುದೇ ಸಂಸ್ಥೆಯ ಸ್ವಾಧೀನತೆ, ನಿರ್ಬಂಧ ಅಥವಾ ಸದರಿ ಜಮೀನಿಗೆ ಸಂಬಂಧಿಸಿದಂತೆ ಇನ್ನಾವುದೇ ಅಡೆತಡೆಗಳ ಕುರಿತಂತೆ ಮಾಹಿತಿ ಇದ್ದಲ್ಲಿ, ಅಂತಹವರು ಸದರಿ ಸಾರ್ವಜನಿಕ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ, ಕೆಳಕಂಡ ಸಹಿದಾರರಿಗೆ ದಾಖಲಾತಿ ಪುರಾವೆಗಳ ಸಮೇತ ಮಾಹಿತಿ ನೀಡಬೇಕೆಂದು ಕೋರಲಾಗಿದೆ, ಇದಕ್ಕೆ ತಪ್ಪಿದಲ್ಲಿ, ಸದರಿ ಜಮೀನಿಗೆ ಸಂಬಂಧಿಸಿದಂತೆ ಅಂತಹ ಯಾವುದೇ ಅನ್ಯರ ಹಕ್ಕು, ಅಧಿಕಾರ, ಹಿತಾಸಕ್ತಿ, ಪಾಲು, ಕ್ಲೇಮ್ ಅಥವಾ ಯಾವುದೇ ಸ್ವರೂಪದ ಡಿಮಾಂಡ್‌ಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ ಮತ್ತು ಇಲ್ಲಿ ಉಲ್ಲೇಖಿಸಲಾಗಿರುವ ಜಮೀನಿನ ಮಾಲೀಕರು ಮಾತ್ರ ಸಂಬಂಧಿತ ಶುದ್ಧ, ಸ್ಪಷ್ಟ, ವ್ಯಾಪಾರಯೋಗ್ಯ ಮತ್ತು ವರ್ಗಾವಣೆ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿ ಹೊಂದಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ಸದರಿ ಜಮೀನಿಗೆ ಸಂಬಂಧಿಸಿದಂತೆ, ಭವಿಷ್ಯದಲ್ಲಿನ ಯಾವುದೇ ಒಪ್ಪಂದ/ವ್ಯವಹಾರಕ್ಕೆ ಯಾವುದೇ ಅಡೆತಡೆಗಳಿರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ.

ದಿನಾಂಕ: 10–10–2025

ಅರ್ಣವ್ ಸಾಹ್ನಿ
ಇಮೇಲ್: arnav.sahni@amsshardul.com
ಮೊಬೈಲ್ ನಂ. 7428295219
ಶಾರ್ದೂಲ್ ಅಮರಚಂದ್ ಮಂಗಲದಾಸ್ ಅಮರಚಂದ್ ಟವರ್ಸ್, 216, ಓಖ್ಲಾ ಕೈಗಾರಿಕಾ ವಸಾಹತು, ಹಂತ 3, ನವದೆಹಲಿ–110020, ಭಾರತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ. 'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

ಪ್ರವಾಸ

Travel

03.11.2025 ಭುವನೇಶ್ವರ್, ಕೊಲ್ಕತ್ತಾ, 25.11.2025 ನೈಮಿಶರಣ್ಯ, ಅಯೋಧ್ಯಾ, ಪ್ರಯಾಗ್‌ರಾಜ್, ಗಯಾ, ಕಾಶಿ, 01.12.2025 ಗುಜರಾತ್, ಮಧ್ಯಪ್ರದೇಶ್ (4ಜ್ಯೋತಿರ್ಲಿಂಗ) ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755

6 ದಿನಗಳು ದುಬೈ, 6 ದಿನಗಳು ಬಾಲಿ, 7 ದಿನಗಳು ಜಪಾನ್ ನಾಲ್ಕು ದಿನಗಳು ಲಂಕಾವಿ ಭಟ್ ಟ್ರಾವೆಲ್ಸ್ 9844037295/ 9844166555

DH
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಜಿ.ವಿ. ನಾಗರಾಜ್
ವಕೀಲರು, (Ex Binny)
ಜನನ: 27/8/44 ನಿಧನ: 01/10/2025
ದಿ: 11.10.2025 ರಂದು ಬೆಳಗ್ಗೆ 8:30 ನಂತರ
ಜಿ.ಆರ್. ಜಾನಕಿ ನಾಗರಾಜ್ (Ex BEL) ಮತ್ತು ಕುಟುಂಬ. 9611137344

ಎರಡನೇ ವರ್ಷದ ಚಿರಸ್ಮರಣೆ

ಶ್ರೀ ಆರ್. ನರಸಿಂಹಮೂರ್ತಿ (ಪರಪ್ಪ)
ಸಂಸ್ಥಾಪಕರು : ದಿ ಚಿನ್ನ ಸಿಲ್ಕ್ಸ್ ಮತ್ತು ಎನ್.ಎಂ. ಆರ್. ಸಿಲ್ಕ್ಸ್, ಯುನಿಟಿ ಬಿಲ್ಡಿಂಗ್, ಜೆ.ಸಿ. ರಸ್ತೆ, ಬೆಂಗಳೂರು
“ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷವಾದರೂ ನಿಮ್ಮ ಸವಿನೆನಪು ಸದಾ ಹಸಿರಾಗಿರುತ್ತದೆ, ನೀವು ತೋರಿದ ಬೆಳಕಿನಲ್ಲೆ ಮುನ್ನಡೆಯುತ್ತಿರುವ”
ಸದ ನಿಮ್ಮ ನೆನಪಿನಲ್ಲಿರುವ
ಶ್ರೀಮತಿ ಮತ್ತು ಶ್ರೀ ಎನ್. ಮೇಘರಾಜ್ ಕುಟುಂಬದವರು

19ನೇ ವರ್ಷದ ಪುಣ್ಯಸ್ಮರಣೆ

ಕೆ.ವಿ. ಪ್ರಕಾಶ್
ಮರಣ: 10–10–2006
ನಿಮ್ಮ ಸವಿನೆನಪು, ಆದರ್ಶಗಳು ಸದಾ ನಮಗೆ ಮಾರ್ಗದರ್ಶನ, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ಪತ್ನಿ–ಮಂಜುಳ
ಮಕ್ಕಳು–ಪವನ್ ಪಿ., ಬಾಲಾಜಿ ಪಿ.

22ನೇ ಸವಿನೆನಪು



ಶ್ರೀ ಎಂ.ಆರ್. ರಾಮಯ್ಯನವರು
(30.06.1937 - 10.10.2003)
ITI, Ex-KPCCI Secretary (Labour Cell)

“ಬದುಕಿನ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿ, ನಮಗೂ ಸವಾಲುಗಳನ್ನು ನಿಭಾಯಿಸಲು ಮಾರ್ಗದರ್ಶನ ಮತ್ತು ಚೈತನ್ಯ ತುಂಬಿದ ನೀವು ನಮ್ಮ ಮನಗಳಲ್ಲಿ ನಿತ್ಯ ನೂತನ ನಿರಂತರ ಹಾಗೂ ಅಮರ”

ಶ್ರೀಮತಿ ವೈ. ಶಾಂತಮ್ಮನವರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು
ನಾಗರಭಾವಿ, ಬೆಂಗಳೂರು–72

ಚಿಟಿಕೆ ಸುದ್ದಿ

ರನ್‌ ವೇದಿಂದ ಜಾರಿದ ವಿಮಾನ

ಮೊಹಮ್ಮದಾಬಾದ್‌ನಲ್ಲಿ ನಿಯಂತ್ರಣ ತಪ್ಪಿ ಪೊದೆಗೆ ನುಗ್ಗಿದ ವಿಮಾನ

ಫರೂಖಾಬಾದ್ (ಪಿಟಿಐ): ಉತ್ತರ ಪ್ರದೇಶದ ಮೊಹಮ್ಮದಾಬಾದ್‌ನಲ್ಲಿ ಖಾಸಗಿ ವಿಮಾನವೊಂದು ಹಾರಾಟ ಆರಂಭಿಸುವ ಸಂದರ್ಭದಲ್ಲಿ ನಿಯಂತ್ರಣ ಕಳೆದುಕೊಂಡು ರನ್‌ವೇ ಪಕ್ಕದ ಪೊದೆಯತ್ತ ಜಾರಿದೆ. ಅದೃಷ್ಟವಶಾತ್ ವಿಮಾನದಲ್ಲಿದ್ದ ಎಲ್ಲ ಪ್ರಯಾಣಿಕರು ಹಾಗೂ ಪೈಲಟ್‌ಗಳು ಪ್ರಾಣಪಾಯದಿಂದ ಪಾರಾಗಿದ್ದಾರೆ.

ಜಿಲ್ಲಾಡಳಿತದ ಅಧಿಕಾರಿಗಳು ಈ ಕುರಿತು ಮಾಹಿತಿ ನೀಡಿದ್ದು, 'ಜೆಟ್ ಸರ್ವೀಸ್ ಏವಿಯೇಷನ್ ಪ್ರೈವೇಟ್ ಲಿಮಿಟೆಡ್‌ಗೆ ಸೇರಿದ ವಿಟಿ–ಡಿಇಝಡ್ ವಿಮಾನವು ಬೆಳಿಗ್ಗೆ 10.30ಕ್ಕೆ ಹಾರಾಟ ಆರಂಭಿಸುವ ಸಮಯದಲ್ಲಿ ನಿಯಂತ್ರಣ ತಪ್ಪಿ, ರನ್‌ ವೇದಿಂದ ಜಾರಿ, ಪಕ್ಕದ ಪೊದೆಯತ್ತ ಉರುಳಿದೆ ಎಂದಿದ್ದಾರೆ.

ಜಿಲ್ಲೆಯ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿರುವ ಬೀರ್ ಫ್ಯಾಕ್ಟರಿಯೊಂದರ ವ್ಯವಸ್ಥಾಪಕ ನಿರ್ದೇಶಕರು ನಿರ್ಮಾಣ ಕಾಮಗಾರಿ ಪರಿಶೀಲಿಸಲು ಈ ಜೆಟ್‌ನಲ್ಲಿ ಬಂದಿದ್ದರು. ಅವರೂ ಸೇರಿದಂತೆ ಎಲ್ಲಾ ಪ್ರಯಾಣಿಕರು ಹಾಗೂ ಪೈಲಟ್ಗಳು ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಐ ದುರ್ಬಳಕೆ: ಆಯೋಗ ಎಚ್ಚರಿಕೆ

ನವದೆಹಲಿ: ಬಿಹಾರ ವಿಧಾನಸಭೆ ಚುನಾವಣೆ ವೇಳೆ ಸಾಮಾಜಿಕ ಮಾಧ್ಯಮಗಳಲ್ಲಿ ಮಾಹಿತಿಯನ್ನು ತಿರುಚಲು ಅಥವಾ ತಪ್ಪು ಮಾಹಿತಿ ಹರಡಲು 'ಡೀಪ್‌ಫೇಕ್' ಸೃಷ್ಟಿಗೆ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ತಂತ್ರಜ್ಞಾನ ಬಳಸದಂತೆ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗ ಸೂಚನೆ ನೀಡಿದೆ.

ನವೆಂಬರ್ 6 ಮತ್ತು 11ರಂದು ನಡೆಯುವ ಚುನಾವಣೆ ಸಂಬಂಧ ಆಯೋಗ ಮಾದರಿ ನೀತಿ ಸಂಹಿತೆ ಹೊರಡಿಸಿದೆ. ಇದರಲ್ಲಿ ಸಾಮಾಜಿಕ ಮಾಧ್ಯಮ ಸೇರಿದಂತೆ ಅಂತರ್ಜಾಲಗಳಲ್ಲಿ ಅಭ್ಯರ್ಥಿಗಳು, ರಾಜಕೀಯ ಪಕ್ಷಗಳು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಿಳಿಸಲಾಗಿದೆ.

'ಹಾಲ್': ಹಲವು ದೃಶ್ಯಗಳಿಗೆ ಸಿಬಿಎಫ್‌ಸಿ ಆಕ್ಷೇಪ

ತಿರುವನಂತಪುರ: ಶೇಯಿನ್ ನಿಗಂ ನಟನೆಯ ಮಲಯಾಳ ಚಲನಚಿತ್ರ 'ಹಾಲ್'ನಲ್ಲಿ ಆಕ್ಷೇಪಾರ್ಹ ದೃಶ್ಯಗಳಿವೆ ಎಂಬ ಕಾರಣಕ್ಕೆ ಪ್ರಮಾಣಪತ್ರ ನೀಡಲು ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ನಿರಾಕರಿಸಿದೆ.

ದನದ ಮಾಂಸದ ಬಿರಿಯಾನಿ ಸೇವನೆ ಮತ್ತು ಪರ್ದಾ ಧರಿಸಿರುವ ಮಹಿಳೆ ರ್‍ಯಾಪ್ ನೃತ್ಯ ಮಾಡುವ ದೃಶ್ಯಗಳು ಹಾಗೂ 'ಧ್ವಜ ಪ್ರಣಾಮ'ಕ್ಕೆ ಸಂಬಂಧಿಸಿದ ಹೇಳಿಕೆ ಇರುವುದಕ್ಕೆ ಸಿಬಿಎಫ್‌ಸಿ ಆಕ್ಷೇಪ ವ್ಯಕ್ತಪಡಿಸಿದೆ. ಸುಮಾರು 15 ದೃಶ್ಯಗಳಿಗೆ ಕತ್ತರಿ ಹಾಕುವಂತೆ ಸೂಚಿಸಿದೆ.

ಚಿತ್ರದ ನಿರ್ಮಾಪಕರಾದ ಜೆವಿಜೆ ಪ್ರೊಡಕ್ಷನ್ಸ್, ಸಿಬಿಎಫ್‌ಸಿ ನಿರ್ಧಾರವನ್ನು ಪ್ರಶ್ನಿಸಿ ಕೇರಳ ಹೈಕೋರ್ಟ್ ಮೊರೆ ಹೋಗಿದೆ. ಅರ್ಜಿಯ ವಿಚಾರಣೆ ಮಂಗಳವಾರ ನಡೆಯಲಿದೆ.

ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡಬೇಕು: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಲೈಂಗಿಕ ಶಿಕ್ಷಣ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

'ಪ್ರೌಢಾವಸ್ಥೆಗೆ ತಲುಪಿದಾಗ ಆಗುವ ದೈಹಿಕ ಬದಲಾವಣೆಗಳ ಬಗ್ಗೆ ಹದಿಹರೆಯದವರಿಗೆ ಅರಿವು ಮೂಡಿಸಲು ಪ್ರೌಢಶಾಲೆಗಳಲ್ಲಿ ಲೈಂಗಿಕ ಶಿಕ್ಷಣವು ಪಠ್ಯಕ್ರಮದ ಭಾಗವಾಗಿರಬೇಕು' ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಅಲೋಕ್ ಆರಾಧೆ ಅವರ ಪೀಠ ಹೇಳಿದೆ.

'ಮಕ್ಕಳಿಗೆ ಒಂಬತ್ತನೇ ತರಗತಿಯಿಂದ ಅಲ್ಲ, ಅದಕ್ಕೂ ಮುನ್ನವೇ ಲೈಂಗಿಕ ಶಿಕ್ಷಣ ನೀಡಬೇಕು ಎಂದು ನಾವು ಅಭಿಪ್ರಾಯಪಟ್ಟಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಅಗತ್ಯ ಕ್ರಮ ವಹಿಸಬೇಕು. ಪ್ರೌಢಾವಸ್ಥೆಯ ನಂತರ ದೇಹದಲ್ಲಿ ಆಗುವ ಬದಲಾವಣೆಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕಾಳಜಿ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಬೇಕು' ಎಂದು ತಿಳಿಸಿದೆ.

ಪೋಕ್ಸೊ ಕಾಯ್ದೆಯಡಿ ಪ್ರಕರಣ ಎದುರಿಸುತ್ತಿರುವ 15 ವರ್ಷದ ಬಾಲಕನಿಗೆ ಜಾಮೀನು ಮಂಜೂರು ಮಾಡುವಾಗ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಭಾರತ– ಬ್ರಿಟನ್: ರಕ್ಷಣಾ ಬಂಧ ಇನ್ನಷ್ಟು ಎತ್ತರಕ್ಕೆ

ಕಿಯರ್ ಸ್ಟಾರ್ಮರ್ –ನರೇಂದ್ರ ಮೋದಿ ಮಾತುಕತೆ: ದ್ವಿಪಕ್ಷೀಯ ಸಂಬಂಧ, ವಾಯು ರಕ್ಷಣಾ ಸಹಕಾರದ ಬಗ್ಗೆ ಚರ್ಚೆ

ಪ್ರಜಾವಾಣಿ ವಾರ್ತೆ

ಮುಂಬೈ: ಸೇನಾ ತರಬೇತಿಯಲ್ಲಿ ಸಹಕಾರ, ಸಶಸ್ತ್ರ ಪಡೆಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿ, ಕಡಲ ವಿದ್ಯುತ್ ವ್ಯವಸ್ಥೆಗಳ ಅಭಿವೃದ್ಧಿ, ವಾಯು ರಕ್ಷಣಾ ವ್ಯವಸ್ಥೆ ಬಲಪಡಿಸುವಿಕೆ, ಗಡಿ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದೂ ಸೇರಿದಂತೆ ರಕ್ಷಣಾ ಮತ್ತು ಭದ್ರತಾ ಸಂಬಂಧಗಳನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಭಾರತ ಮತ್ತು ಬ್ರಿಟನ್ ನಡುವೆ ಗುರುವಾರ ಮಾತುಕತೆ ನಡೆಯಿತು.

ಎರಡು ದಿನಗಳ ಭಾರತ ಪ್ರವಾಸದಲ್ಲಿರುವ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ನೇತೃತ್ವದ ನಿಯೋಗ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ನಿಯೋಗದ ಸದಸ್ಯರ ನಡುವೆ ಇಲ್ಲಿನ ರಾಜಭವನದಲ್ಲಿ ಗುರುವಾರ ವಿವಿಧ ಕ್ಷೇತ್ರಗಳ ಸಂಬಂಧ ವೃದ್ಧಿ ಕುರಿತು ಪರಸ್ಪರ ಚರ್ಚೆ ನಡೆಯಿತು.

ಅಲ್ಲದೆ, ಜುಲೈನಲ್ಲಿ ಉಭಯ ದೇಶಗಳ ನಡುವೆ ನಡೆದ ಮುಕ್ತ ವ್ಯಾಪಾರ ಒಪ್ಪಂದ ಅಥವಾ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದವನ್ನು (ಸಿಇಟಿಎ) ಇನ್ನಷ್ಟು ಎತ್ತರಕ್ಕೆ ಒಯ್ಯುವ ನಿಟ್ಟಿನಲ್ಲಿ ಸಂವಾದ ನಡೆಯಿತು. ಅಲ್ಲದೆ ಜಂಟಿ ಆರ್ಥಿಕ ಮತ್ತು ವ್ಯಾಪಾರ ಸಮಿತಿಯನ್ನು (ಜೆಇಟಿಸಿಒ) ಮರುಸ್ಥಾಪಿಸುವ ನಿಯಮಗಳಿಗೆ ಸಹಿ ಹಾಕಲಾಯಿತು.

ಮುಂಬೈನಲ್ಲಿ ಗುರುವಾರ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್, ನರೇಂದ್ರ ಮೋದಿ ಪರಸ್ಪರ ಶುಭಾಶಯ ಕೋರಿದರು —ಪಿಟಿಐ ಚಿತ್ರ

ರಾಜಭವನದಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆಗಳ ಜತೆಗೆ ಮೋದಿ ಮತ್ತು ಸ್ಟಾರ್ಮರ್ ಅವರು ಭಾರತ–ಬ್ರಿಟನ್ ಸಿಇಒ ವೇದಿಕೆ ಮತ್ತು ಗ್ಲೋಬಲ್ ಫಿನ್‌ಟೆಕ್ ಉತ್ಸವದಲ್ಲೂ ಜಂಟಿಯಾಗಿ ಮಾತುಕತೆ ನಡೆಸಿದರು. ಈ ವೇಳೆ ಮೋದಿ ಅವರ ಜತೆಗೆ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಭಾಗವಹಿಸಿದ್ದರು. ಸ್ಟಾರ್ಮರ್ ಅವರ ಜತೆಗೆ ವ್ಯವಹಾರ ಮತ್ತು ವ್ಯಾಪಾರ ಕಾರ್ಯದರ್ಶಿ ಪೀಟರ್ ಕೈಲ್, ಹೂಡಿಕೆ ಸಚಿವ ಜೇಸನ್ ಸ್ಟಾಕ್‌ವುಡ್ ಹಾಜರಿದ್ದರು.

ಉಭಯ ದೇಶಗಳ ಸಶಸ್ತ್ರ ಪಡೆಗಳ ನಡುವಿನ ಜಂಟಿ ಸಮರಾಭ್ಯಾಸ, ತರಬೇತಿ ಮತ್ತು ಸಾಮರ್ಥ್ಯ ಹೆಚ್ಚಿಸುವ ಕುರಿತು ಎರಡೂ ನಾಯಕರು ಸಮ್ಮತಿ ಸೂಚಿಸಿದರು. 'ನಮ್ಮ ನಡುವಿನ ರಕ್ಷಣಾ ಸಹಕಾರ ಆಳವಾಗಿದೆ. ರಕ್ಷಣಾ ಸಲಕರಣೆಗಳ ಸಹ ಉತ್ಪಾದನೆಯ ಜತೆಗೆ ರಕ್ಷಣಾ ಕೈಗಾರಿಕೆಗಳನ್ನು ಸಂಪರ್ಕಿಸುವತ್ತ ಮುಂದೆ ಸಾಗುತ್ತಿದ್ದೇವೆ' ಎಂದು ಮೋದಿ ವಿವರಿಸಿದರು.

ಇಂಡೊ–ಪೆಸಿಫಿಕ್‌ನಲ್ಲಿ ಕಡಲ ಭದ್ರತಾ ಸಹಯೋಗ ವೃದ್ಧಿಸಲು ಎರಡೂ ದೇಶಗಳ ನಾಯಕರು ಬದ್ಧತೆ ವ್ಯಕ್ತಪಡಿಸಿದರು. ಜತೆಗೆ ಪ್ರಾದೇಶಿಕ ಕಡಲ ಭದ್ರತಾ ಕೇಂದ್ರ ಸ್ಥಾಪನೆಗೂ ಸಮ್ಮತಿಸಿದರು.

ತರಬೇತಿ ಮತ್ತು ಶಿಕ್ಷಣ ಸಂಬಂಧ ವೃದ್ಧಿಸುವ ನಿಟ್ಟಿನಲ್ಲಿ ಏರ್ಪಟ್ಟ ಒಪ್ಪಂದದಿಂದಾಗಿ ಭಾರತೀಯ ವಾಯುಪಡೆಯವರಿಗೆ ಬ್ರಿಟನ್‌ನ ರಾಯಲ್ ಏರ್‌ಫೋರ್ಸ್‌ನಲ್ಲಿ ತರಬೇತಿಯ ಅವಕಾಶ ದೊರೆಯಲಿದೆ. ಅಲ್ಲದೆ ಹಗುರ ಮತ್ತು ಬಹುಪಾತ್ರ ಕ್ಷಿಪಣಿ ವ್ಯವಸ್ಥೆಗಳ ಪೂರೈಕೆ ಮುಂದುವರಿಸುವ ಕುರಿತು ಒಪ್ಪಂದವನ್ನು ಉಭಯ ನಾಯಕರು ಘೋಷಿಸಿದರು.

ಭಾರತೀಯ ನೌಕಾ ವೇದಿಕೆಗಳಿಗೆ ಕಡಲ ವಿದ್ಯುತ್ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲು ಸಹಕಾರ ನೀಡುವ ಒಪ್ಪಂದವನ್ನು ಅಂತಿಮಗೊಳಿಸುವ ಕುರಿತು ಈ ವೇಳೆ ಚರ್ಚೆ ನಡೆಯಿತು.

ಬೆಂಗಳೂರಿಗೆ ಲ್ಯಾಂಕಾಸ್ಟರ್ ವಿ.ವಿ ಕ್ಯಾಂಪಸ್

ಮುಂಬೈ: ಬ್ರಿಟನ್‌ನ ಪ್ರತಿಷ್ಠಿತ ಲ್ಯಾಂಕಾಸ್ಟರ್ ವಿಶ್ವವಿದ್ಯಾಲಯವು ಬೆಂಗಳೂರಿನಲ್ಲಿ ತನ್ನ ಕ್ಯಾಂಪಸ್ ತೆರೆಯಲಿದೆ. ಭಾರತ ಮತ್ತು ಬ್ರಿಟನ್ ನಡುವೆ ಶೈಕ್ಷಣಿಕ ಸಂಬಂಧ ವೃದ್ಧಿಸುವ ನಿಟ್ಟಿನಲ್ಲಿ ಈ ಐತಿಹಾಸಿಕ ನಿರ್ಧಾರ ಹೊರಬಿದ್ದಿದೆ.

ಬ್ರಿಟನ್‌ನ ಒಂಬತ್ತು ವಿಶ್ವವಿದ್ಯಾಲಯಗಳು ಭಾರತದ ವಿವಿಧೆಡೆ ತಮ್ಮ ಕ್ಯಾಂಪಸ್‌ಗಳನ್ನು ತೆರೆಯಲಿದ್ದು, ಶೈಕ್ಷಣಿಕ, ಸಂಶೋಧನೆ ಮತ್ತು ನಾವಿನ್ಯತೆಗೆ ಪ್ರೋತ್ಸಾಹ ನೀಡಲಿವೆ. ಭಾರತ ಪ್ರವಾಸದಲ್ಲಿರುವ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ನಿಯೋಗದ ನಡುವೆ ನಡೆದ ಮಾತುಕತೆಯ ಬಳಿಕ ಈ ನಿರ್ಧಾರ ಪ್ರಕಟವಾಗಿದೆ.

'ಇದು ತುಂಬಾ ಸಂತೋಷದ ವಿಷಯವಾಗಿದೆ' ಎಂದು ಪ್ರಧಾನಿ ಮೋದಿ ಪ್ರತಿಕ್ರಿಯಿಸಿದ್ದಾರೆ.

ಕಾಯಂ ಸದಸ್ಯತ್ವಕ್ಕೆ ಬೆಂಬಲ

ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವಕ್ಕಾಗಿ ಭಾರತದ ಕಾನೂನುಬದ್ಧ ಬೇಡಿಕೆಗಳಿಗೆ ಬ್ರಿಟನ್ ಬೆಂಬಲ ನೀಡುತ್ತದೆ ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ತಿಳಿಸಿದರು.

'ಭಾರತವು ಜಾಗತಿಕ ಪಾಲುದಾರ ದೇಶ. ಕಾಮನ್‌ವೆಲ್ತ್, ಜಿ–20ಯಲ್ಲಿ ನಾವು ಒಟ್ಟಿಗೆ ಕುಳಿತುಕೊಳ್ಳುತ್ತೇವೆ. ಅದೇ ರೀತಿ ಭದ್ರತಾ ಮಂಡಳಿಯಲ್ಲೂ ಭಾರತ ತನ್ನ ಸರಿಯಾದ ಸ್ಥಾನ ಪಡೆಯುವುದನ್ನು ನೋಡಲು ಬಯಸುತ್ತೇವೆ' ಎಂದು ಹೇಳಿದರು.

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಖಂಡನೆ

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ 2025ರ ಏಪ್ರಿಲ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಕಠಿಣ ಪದಗಳಲ್ಲಿ ಖಂಡಿಸಿದರು.

ಜಾಗತಿಕವಾಗಿ ನಿಷೇಧಿಸಲಾದ ಭಯೋತ್ಪಾದಕರು, ಸಂಘಟನೆಗಳು ಮತ್ತು ಅವರ ಪ್ರಾಯೋಜಕರ ವಿರುದ್ಧ ನಿರ್ಣಾಯಕ ಮತ್ತು ಸಂಘಟಿತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಉಭಯ ನಾಯಕರು ಪ್ರತಿಪಾದಿಸಿದರು. ಅಲ್ಲದೆ ಈ ನಿಟ್ಟಿನಲ್ಲಿ ಸಹಕಾರವನ್ನು ಬಲಪಡಿಸಲು ಬದ್ಧತೆಯನ್ನೂ ವ್ಯಕ್ತಪಡಿಸಿದರು.

ಭಯೋತ್ಪಾದನೆಗೆ ಶೂನ್ಯ ಸಹಿಷ್ಣುತೆ, ವಿಶ್ವಸಂಸ್ಥೆಯ ಚಾರ್ಟರ್ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ತಕ್ಕಂತೆ ಸಮಗ್ರ ಮತ್ತು ನಿರಂತರವಾಗಿ ಭಯೋತ್ಪಾದನೆಯನ್ನು ಎದುರಿಸಲು ಅಂತರರಾಷ್ಟ್ರೀಯ ಪ್ರಯತ್ನಗಳನ್ನು ಸಂಘಟಿಸಬೇಕು ಎಂದೂ ಕರೆ ನೀಡಿದರು

'ಬ್ರಿಟನ್ ಜತೆ ದ್ವಿಗುಣ ವ್ಯಾಪಾರ'

ಮುಂಬೈ: ಭಾರತವು ಬ್ರಿಟನ್ ನಡುವೆ ಈಗಿರುವ ₹4.97 ಲಕ್ಷ ಕೋಟಿ (56 ಬಿಲಿಯನ್ ಡಾಲರ್) ಮೊತ್ತದ ವ್ಯಾಪಾರವನ್ನು 2030ರ ವೇಳೆಗೆ ದ್ವಿಗುಣಗೊಳಿಸುವ ಯೋಜನೆ ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಘೋಷಿಸಿದರು.

ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರ ಜತೆಗಿನ ವ್ಯಾಪಾರ ಮಾತುಕತೆಗಳ ಬಳಿಕ ಅವರು ಈ ಮಾಹಿತಿ ನೀಡಿದರು. ಈ ಮೂಲಕ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೆಸರನ್ನು ಉಲ್ಲೇಖಿಸದೇ ಟೀಕಿಸಿದರು. ಟ್ರಂಪ್ ಅವರು ಇತ್ತೀಚೆಗೆ ಭಾರತದ್ದು 'ಸತ್ತ ಆರ್ಥಿಕತೆ' ಎಂದು ಜರಿದಿದ್ದರು.

'ಭಾರತ– ಬ್ರಿಟನ್ ದ್ವಿಪಕ್ಷೀಯ ಸಂಬಂಧ ಈಗ ಇನ್ನಷ್ಟು ವೃದ್ಧಿಯಾಗಿದೆ. ವ್ಯಾಪಾರ ಒಪ್ಪಂದಗಳ ಪರಿಣಾಮ ನಮ್ಮ ಈ ಗುರಿ 2030ಕ್ಕೂ ಮೊದಲೇ ಸಾಧಿಸಬಹುದು ಎಂಬ ವಿಶ್ವಾಸವಿದೆ' ಎಂದು ಅವರು ಹೇಳಿದರು. ಭಾರತ– ಬ್ರಿಟನ್ ಸಿಇಒ ವೇದಿಕೆ ಮತ್ತು 'ಗ್ಲೋಬಲ್ ಫಿನ್‌ಟೆಕ್' ಉತ್ಸವದಲ್ಲಿ ಅವರು ಮಾತನಾಡಿದರು.

ಪಕ್ಷಗಳಲ್ಲಿ ಗರಿಗೆದರಿದ ಚಟುವಟಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನವೆಂಬರ್‌ನಲ್ಲಿ ಎರಡು ಹಂತಗಳಲ್ಲಿ ಮತದಾನ ನಡೆಯಲಿರುವ ಬಿಹಾರದಲ್ಲಿ ರಾಜಕೀಯ ಚಟುವಟಿಕೆ ಗುರುವಾರ ತೀವ್ರಗೊಂಡಿತು.

ಆಡಳಿತಾರೂಢ ಎನ್‌ಡಿಎ ವಿರುದ್ಧ ಕಾಂಗ್ರೆಸ್ ಆರೋಪ ಪಟ್ಟಿ ಬಿಡುಗಡೆ ಮಾಡಿತು. ಯುವಜನರಿಗೆ ಸರ್ಕಾರಿ ಉದ್ಯೋಗ ನೀಡುವ ಹೊಸ ಘೋಷಣೆಯನ್ನು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಮಾಡಿದರು. ಚುನಾವಣಾ ತಂತ್ರಜ್ಞ ಪ್ರಶಾಂತ್ ಕಿಶೋರ್ ಅವರ ಜನ ಸುರಾಜ್ ಪಕ್ಷವು ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿತು.

ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಶುಕ್ರವಾರದಿಂದ ಆರಂಭವಾಗಲಿದೆ. ಪ್ರಮುಖ ಬಣಗಳಾದ ಎನ್‌ಡಿಎ ಹಾಗೂ ಇಂಡಿಯಾ ಮೈತ್ರಿಕೂಟಗಳು ಸೀಟು ಹಂಚಿಕೆಯ ಕಸರತ್ತಿನಲ್ಲಿ ತೊಡಗಿವೆ. ಇದೇ ವೇಳೆ, ಜನ ಸುರಾಜ್ ಪಕ್ಷವು 51 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಗೊಳಿಸಿತು. ಮೀಸಲು ಕ್ಷೇತ್ರದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಪಕ್ಷ ಟಿಕೆಟ್ ನೀಡಿದೆ. ಪಟ್ಟಿ ಬಿಡುಗಡೆ ಮಾಡಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಉದಯ್ ಸಿಂಗ್, 'ಮುಂದಿನ ಪಟ್ಟಿ ಎರಡು–ಮೂರು ದಿನಗಳಲ್ಲಿ ಬಿಡುಗಡೆ ಆಗಲಿದೆ' ಎಂದರು. ಆದರೆ, ಪ್ರಶಾಂತ್ ಕಿಶೋರ್ ಕಣಕ್ಕಿಳಿಯಲಿದ್ದಾರೆಯೇ ಎಂಬುದನ್ನು ಬಹಿರಂಗಪಡಿಸಲಿಲ್ಲ.

ಒಂದು ವೇಳೆ ಸ್ಪರ್ಧಿಸುವ ಮನಸ್ಸು ಮಾಡಿದರೆ ಕಾರ್ಗಹರ್‌ನಿಂದ (ಅವರ ಹುಟ್ಟಿದ ಊರು) ಕಣಕ್ಕಿಳಿಯುವೆ ಎಂದು ಪ್ರಶಾಂತ್ ಕಿಶೋರ್ ಈ ಹಿಂದೆ ಹೇಳಿದ್ದರು. ಈ ಕ್ಷೇತ್ರದಲ್ಲಿ ಭೋಜ್‌ಪುರಿ ಗಾಯಕ ರಿತೇಶ್ ಪಾಂಡೆ ಅವರನ್ನು ಹುರಿಯಾಳುವನ್ನಾಗಿ ಮಾಡಿದೆ.

ತೇಜಸ್ವಿ ಭರವಸೆ: ರಾಜ್ಯದಲ್ಲಿ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ, '20 ತಿಂಗಳೊಳಗೆ ಪ್ರತಿ ಮನೆಗೂ ಸರ್ಕಾರಿ ಉದ್ಯೋಗವಿರುವ ಸದಸ್ಯರನ್ನು ಹೊಂದುವಂತೆ ಖಚಿತಪಡಿಸಿಕೊಳ್ಳಲು ನಾವು 20 ದಿನಗಳಲ್ಲಿ ಒಂದು ಕಾಯ್ದೆ ತರುತ್ತೇವೆ' ಎಂದು ತೇಜಸ್ವಿ ಯಾದವ್ ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದರು.

ಬಿಹಾರ ವಿಧಾನಸಭಾ ಚುನಾವಣೆಯ ಪೂರ್ವಭಾವಿಯಾಗಿ ಗುರುವಾರ ಪಟ್ನಾದಲ್ಲಿ ಚುನಾವಣಾ ಅಧಿಕಾರಿಗಳಿಗೆ ತರಬೇತಿ ನಡೆಯಿತು — ಪಿಟಿಐ ಚಿತ್ರ

ಕಾಂಗ್ರೆಸ್ ಚಾರ್ಜ್‌ಶೀಟ್

ಏತನ್ಮಧ್ಯೆ, ಕಾಂಗ್ರೆಸ್‌ನ ಹಿರಿಯ ನಾಯಕರಾದ ಜೈರಾಮ್ ರಮೇಶ್, ಅಶೋಕ್ ಗೆಹಲೋತ್, ಭೂಪೇಶ್ ಸಿಂಗ್ ಬಘೇಲ್ ಮತ್ತು ಅಧೀರ್ ರಂಜನ್ ಚೌಧರಿ ಅವರು 42 ಪುಟಗಳ ಚಾರ್ಜ್‌ಶೀಟ್ ಬಿಡುಗಡೆ ಮಾಡಿ ಎನ್‌ಡಿಎ ಬಿಹಾರಕ್ಕೆ ವಿನಾಶ ತಂದಿದೆ ಎಂದು ಆರೋಪಿಸಿದರು.

ಬಿಹಾರ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸುಪ್ರೀಂ ಸೂಚನೆ

'ಮತದಾರರಿಗೆ ನೆರವಾಗಿ'

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯಿಂದ ಕೈಬಿಡಲಾದ 3.66 ಲಕ್ಷ ಮತದಾರರಿಗೆ ಚುನಾವಣಾ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಲು ನೆರವಾಗುವಂತೆ ಬಿಹಾರ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ (ಬಿಎಸ್‌ಎಲ್‌ಎಸ್‌ಎ) ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.

ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಪ್ರಕ್ರಿಯೆಯನ್ನು ನ್ಯಾಯಾಲಯಕ್ಕೆ ಎಳೆತಂದ ಬಳಿಕ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ದೂರುಗಳೊಂದಿಗೆ ನಮ್ಮ ಬಳಿ ಬರಲಿವೆ ಎಂದು ನಿರೀಕ್ಷಿಸಿದ್ದೆವು. ಆದರೆ, ಅವರು (ರಾಜಕೀಯ ಪಕ್ಷಗಳು) ತೃಪ್ತರಾಗಿರುವಂತೆ ತೋರುತ್ತಿದೆ ಎಂದು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ಹೇಳಿದೆ.

ಎಸ್‌ಐಆರ್ ಬಳಿಕ ಪಟ್ಟಿಯಿಂದ ಕೈಬಿಡಲಾಗಿರುವ ಮತದಾರರ ಮೇಲ್ಮನವಿಗಳನ್ನು ನಿಗದಿತ ಸಮಯದೊಳಗೆ ಕೈಗೆತ್ತಿಕೊಳ್ಳುವುದನ್ನು ಅಕ್ಟೋಬರ್ 16ರಂದು ನಡೆಯುವ ಮುಂದಿನ ವಿಚಾರಣೆ ವೇಳೆ ನಿರ್ಧರಿಸಲಾಗುವುದು ಎಂದಿದೆ.

ಮೇಲ್ಮನವಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಮತದಾರರಿಗೆ ನೆರವಾಗಲು ಎಲ್ಲಾ ಜಿಲ್ಲಾ ಮಟ್ಟದ ಘಟಕಗಳಿಗೆ ನಿರ್ದೇಶನ ನೀಡುವಂತೆ ಪೀಠವು ಬಿಎಸ್‌ಎಲ್‌ಎಸ್‌ಎಗೆ ಸೂಚಿಸಿದೆ.

ಮತದಾರರಿಗೆ ಮೇಲ್ಮನವಿ ಸಲ್ಲಿಸಲು ಸಹಾಯ ಮಾಡಲು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಸ್ವಯಂಸೇವಕರ ಪಟ್ಟಿಯನ್ನು ಬಿಡುಗಡೆ ಮಾಡಲಿದೆ ಎಂದು ಪೀಠವು ಹೇಳಿದೆ.

'ಎಲ್ಲರಿಗೂ ಮೇಲ್ಮನವಿ ಸಲ್ಲಿಸಲು ನ್ಯಾಯಯುತ ಅವಕಾಶ ನೀಡಬೇಕೆಂದು ನಾವು ಬಯಸುತ್ತೇವೆ. ಅವರ ಹೆಸರುಗಳನ್ನು ಪಟ್ಟಿಯಿಂದ ಏಕೆ ಹೊರಗಿಡಲಾಗಿದೆ ಎಂಬುದರ ಕುರಿತ ವಿವರವಾದ ಕಾರಣಗಳನ್ನು ಒಳಗೊಂಡ ಆದೇಶದ ಪ್ರತಿ ಎಲ್ಲರೂ ಹೊಂದಿರಬೇಕು. ಅದು ಒಂದು ಸಾಲಿನ ನಿಗೂಢ ಆದೇಶವಾಗಿರಬಾರದು' ಎಂದಿದೆ.

ತಮ್ಮ ಹೆಸರನ್ನು ಏಕೆ ಕೈಬಿಡಲಾಗಿದೆ ಎಂಬುದರ ಕುರಿತು ಚುನಾವಣಾ ಆಯೋಗದಿಂದ ಆದೇಶ ಬಂದಿಲ್ಲ ಎಂದು ಹೇಳಿ ಯಾವುದೇ ಮತದಾರ ಇದುವರೆಗೂ ನ್ಯಾಯಾಲಯದ ಮುಂದೆ ಬಂದಿಲ್ಲ ಎಂಬುದನ್ನು ಹಿರಿಯ ವಕೀಲ ರಾಕೇಶ್ ದ್ವಿವೇದಿ ಪೀಠದ ಗಮನಕ್ಕೆ ತಂದರು.

ಎಸ್‌ಐಆರ್ ಬಳಿಕ ಸಿದ್ಧಪಡಿಸಲಾದ ಅಂತಿಮ ಮತದಾರರ ಪಟ್ಟಿಯಿಂದ ತೆಗೆದು ಹಾಕಲಾದ 3.66 ಲಕ್ಷ ಮತದಾರರ ಕುರಿತ ವಿವರಗಳನ್ನು ಸಲ್ಲಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿತ್ತು.

ಅಜರ್‌ಬೈಜಾನ್ ಅಧ್ಯಕ್ಷರೆದುರು ತಪ್ಪು ಒಪ್ಪಿಕೊಂಡ ಪುಟಿನ್

ವಿಮಾನ ಪತನಕ್ಕೆ ನಾವೇ ಕಾರಣ

ಮಾಸ್ಕೊ (ಎಪಿ/ಎಎಫ್‌ಪಿ): 'ಕಳೆದ ಡಿಸೆಂಬರ್‌ನಲ್ಲಿ ಸಂಭವಿಸಿದ್ದ ಅಜರ್‌ಬೈಜಾನ್ ವಿಮಾನ ಪತನದಲ್ಲಿ ನಮ್ಮ ಪಾತ್ರವಿದೆ' ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಇದೇ ಮೊದಲ ಬಾರಿಗೆ ಗುರುವಾರ ಒಪ್ಪಿಕೊಂಡಿದ್ದಾರೆ. ಈ ಹಿಂದೆ ಅವರು ಈ ಘಟನೆಯನ್ನು 'ದುರಂತ' ಎಂದು ಕರೆದು ಕ್ಷಮೆಯಾಚಿಸಿದ್ದರೇ ಹೊರತು ತಪ್ಪೊಪ್ಪಿಕೊಂಡಿರಲಿಲ್ಲ.

ತಜಕಿಸ್ತಾನದಲ್ಲಿ ನಡೆಯುತ್ತಿರುವ ರಷ್ಯಾ–ಸೆಂಟ್ರಲ್ ಏಷ್ಯಾ ಶೃಂಗಸಭೆಯಲ್ಲಿ ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಆಲಿಯೇವ್ ಅವರೊಂದಿಗಿನ ಭೇಟಿಯ ವೇಳೆ ಪುಟಿನ್ ಅವರು ದುರಂತದಲ್ಲಿನ ತಮ್ಮ ದೇಶದ ಪಾತ್ರವನ್ನು ಒಪ್ಪಿಕೊಂಡಿದ್ದಾರೆ. 67 ಪ್ರಯಾಣಿಕರನ್ನು ಹೊತ್ತಿದ್ದ ವಿಮಾನವು ಕಜಕಸ್ತಾನದಲ್ಲಿ ಪತನಗೊಂಡಿತ್ತು. ಘಟನೆಯಲ್ಲಿ 38 ಮಂದಿ ಮೃತಪಟ್ಟಿದ್ದರು.

'ಉಕ್ರೇನ್ ಡ್ರೋನ್‌ಗಳನ್ನು ಗುರಿಯಾಗಿಸಿ ನಾವು ಎರಡು ಕ್ಷಿಪಣಿ ನಿಯೋಜಿಸಿದ್ದೆವು. ಆದರೆ, ವಿಮಾನಕ್ಕೆ ತುಸು ಹತ್ತಿರದಲ್ಲಿಯೇ ಆ ಕ್ಷಿಪಣಿಗಳು ಸ್ಫೋಟಗೊಂಡವು. ನಮ್ಮ ಕ್ಷಿಪಣಿಗಳು ನೇರವಾಗಿ ನಿಮ್ಮ ವಿಮಾನಕ್ಕೆ ಹೊಡೆದಿಲ್ಲ. ಹಾಗೇನಾದರೂ ಆಗಿದ್ದರೆ ವಿಮಾನವು ಅಲ್ಲಿಯೇ ಸ್ಫೋಟಗೊಳ್ಳುತ್ತಿತ್ತು' ಎಂದು ಆಲಿಯೇವ್ ಅವರಿಗೆ ಪುಟಿನ್ ವಿವರಿಸಿದರು.

'ನಮ್ಮ ನೆಲದಲ್ಲಿಯೇ ವಿಮಾನ ಇಳಿಸಿ ಎಂದು ನಾವು ಪೈಲಟ್‌ಗೆ ಹೇಳಿದೆವು. ಆದರೆ, ಅವರು ತಮ್ಮ ದೇಶದಲ್ಲಿಯೇ ವಿಮಾನ ಇಳಿಸಲು ಯತ್ನಿಸಿದರು. ಆಮೇಲೆ ಕಜಕಸ್ತಾನದಲ್ಲಿ ಅದು ಪತನಗೊಂಡಿತು. ಪರಿಹಾರ ನೀಡುವ ಸಂಬಂಧ ರಷ್ಯಾವು ಎಲ್ಲ ರೀತಿಯ ಸಹಕಾರ ಒದಗಿಸಲು ಸಿದ್ಧವಿದೆ' ಎಂದರು.

'ವಿಮಾನ ದುರಂತಕ್ಕೆ ರಷ್ಯಾವೇ ಕಾರಣ' ಎಂದು ಆಲಿಯೇವ್ ಅವರು ಈ ಹಿಂದೆ ಆರೋಪಿಸಿದ್ದರು. ಘಟನೆಯ ಸಂಪೂರ್ಣ ವಿವರ ನೀಡಿದ ಬಳಿಕ ಆಲಿಯೇವ್ ಅವರು ಪುಟಿನ್ ಅವರಿಗೆ ಗುರುವಾರ ಧನ್ಯವಾದ ತಿಳಿಸಿದರು. 'ಪಕ್ಷಿಯನ್ನು ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ವಿಮಾನ ಅಪಘಾತವಾಗಿದೆ' ಎಂದು ಈ ಹಿಂದೆ ರಷ್ಯಾ ವಾಯು ಸಂಚಾರ ಸಂಸ್ಥೆ ಹೇಳಿತ್ತು.

ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಆಲಿಯೇವ್ ಅವರನ್ನು ರಷ್ಯಾ ಅಧ್ಯಕ್ಷ ಪುಟಿನ್ ಅವರು ಗುರುವಾರ ಭೇಟಿ ಮಾಡಿ ಚರ್ಚಿಸಿದರು —ಎಎಫ್‌ಪಿ ಚಿತ್ರ

'ಸುಪ್ರೀಂ' ನಡೆಗೆ ಸಂತರ ಟೀಕೆ

ನವದೆಹಲಿ(ಪಿಟಿಐ): ವಿವಿಧ ರಾಜ್ಯಗಳು ರೂಪಿಸಿರುವ ಮತಾಂತರ ವಿರೋಧಿ ಕಾಯ್ದೆಗಳಿಗೆ ತಡೆ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಿರುವ ಸುಪ್ರೀಂ ಕೋರ್ಟ್ ನಡೆಯನ್ನು ಸಾಧು–ಸಂತರ ಸಂಘಟನೆಗಳು ಗುರುವಾರ ಪ್ರಶ್ನಿಸಿವೆ.

'ಇಂತಹ ಕಾಯ್ದೆಗಳನ್ನು ರೂಪಿಸಿರುವುದು ರಾಜ್ಯ ಸರ್ಕಾರಗಳು. ಹೀಗಾಗಿ, ಈ ಕಾಯ್ದೆಗಳನ್ನು ಪ್ರಶ್ನಿಸಿ ಸಲ್ಲಿಕೆಯಾಗುವ ಮೇಲ್ಮನವಿಗಳ ವಿಚಾರಣೆಯನ್ನು ಮೊದಲು ಆಯಾ ಹೈಕೋರ್ಟ್‌ಗಳು ನಡೆಸುವುದಕ್ಕೆ ಅವಕಾಶ ನೀಡಬೇಕು' ಎಂದು ಸಂಘಟನೆಗಳು ಪ್ರತಿಪಾದಿಸಿವೆ.

ಜಂಟಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ, ಅಖಿಲ ಭಾರತ ಸಂತ ಸಮಿತಿಯ ಪ್ರಧಾನ ಕಾರ್ಯದರ್ಶಿ ಸ್ವಾಮಿ ಜಿತೇಂದ್ರನಾಥ ಸರಸ್ವತಿ ಮಹಾರಾಜ್,'ಚುನಾಯಿತ ಜನಪ್ರತಿನಿಧಿಗಳು ಕಾಯ್ದೆಗಳನ್ನು ರೂಪಿಸಬೇಕೇ ಅಥವಾ ನ್ಯಾಯಾಧೀಶರೇ ಎಂಬ ಬಗ್ಗೆ ದೇಶದಾದ್ಯಂತ ಸಾರ್ವಜನಿಕ ಚರ್ಚೆ ಆರಂಭಿಸಲಾಗುವುದು' ಎಂದು ಘೋಷಿಸಿದರು. ಈ ಕುರಿತು ಜನರು ಮತ್ತು ಸಾಂವಿಧಾನಿಕ ವ್ಯವಸ್ಥೆ ಒಳಗೇ ತೀರ್ಮಾನಿಸಬೇಕು' ಎಂದರು.

ಸಂಪುಟ ಪುನರ್‌ರಚನೆಯ ಸದ್ದು

ಒಂದನೇ ಪುಟದಿಂದ...

ಈ ವಿಷಯ ಚರ್ಚೆಯ ಮುನ್ನೆಲೆಗೆ ಬಂದಾಗಲೆಲ್ಲ, ಮುಖ್ಯಮಂತ್ರಿ ಬದಲಾವಣೆ ಕುರಿತಂತೆ ಯಾರೂ ಬಹಿರಂಗ ಹೇಳಿಕೆ ನೀಡದಂತೆ ಹೈಕಮಾಂಡ್ ಹಲವು ಬಾರಿ ಎಚ್ಚರಿಕೆ ನೀಡುತ್ತಲೇ ಇದೆ. ಆದರೆ, ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಬೆಂಬಲಿಗರು ಹೇಳಿಕೆ ನೀಡುವುದನ್ನು ನಿಲ್ಲಿಸಿಲ್ಲ.

ಸಂಪುಟ ಪುನರ್ ರಚನೆ ಕುರಿತು ಪ್ರತಿಕ್ರಿಯಿಸಿರುವ ಬಹುತೇಕ ಸಚಿವರು 'ಈ ವಿಚಾರ ಹೈಕಮಾಂಡ್ ಮತ್ತು ಮುಖ್ಯಮಂತ್ರಿಗೆ ಬಿಟ್ಟದ್ದು' ಎಂದಿದ್ದಾರೆ. ಸಚಿವ ಎನ್. ಚಲುವರಾಯಸ್ವಾಮಿ, 'ಸ್ಥಾನ ಬಿಟ್ಟು ಕೊಡಬೇಕಂದರೆ ಬಿಟ್ಟುಕೊಡಲೇ ಬೇಕಾಗುತ್ತದೆ. ಸಚಿವ ಸ್ಥಾನದ ಆಕಾಂಕ್ಷಿಗಳು ಹಲವರಿದ್ದಾರೆ. ಹಿರಿಯ ನಾಯಕರೂ ಇದ್ದಾರೆ' ಎಂದರು.

ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಡಿ.ಕೆ. ಶಿವಕುಮಾರ್ ಪರ ಅವರ ಆಪ್ತರಾದ ಮಾಗಡಿ ಶಾಸಕ ಎಚ್‌.ಸಿ. ಬಾಲಕೃಷ್ಣ, ಕುಣಿಗಲ್ ಶಾಸಕ ಡಾ. ರಂಗನಾಥ್, ರಾಮನಗರ ಶಾಸಕ ಎಚ್‌.ಎ. ಇಕ್ಬಾಲ್ ಹುಸೇನ್ ಆಗಾಗ ಧ್ವನಿ ಎತ್ತುತ್ತಲೇ ಇದ್ದಾರೆ.

ಕೊಪ್ಪಳದಲ್ಲಿ ಗುರುವಾರ ಮಾತನಾಡಿದ ಇಕ್ಬಾಲ್ ಹುಸೇನ್, 'ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಹಿಂದೆಯೂ ಹೇಳಿದ್ದೆ, ಈಗಲೂ ಅದನ್ನೇ ಪುನರುಚ್ಚರಿಸುತ್ತೇನೆ' ಎಂದರು. ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ, 'ಸಚಿವ ಸಂಪುಟ ವಿಸ್ತರಣೆ ಮಾಡಿ ಹೊಸಬರಿಗೆ ಅವಕಾಶ ಕೊಡಬೇಕು ಎನ್ನುವ ಬೇಡಿಕೆಯಿದೆ. ನಾನೂ ಸಚಿವ ಸ್ಥಾನದ ಆಕಾಂಕ್ಷಿ' ಎಂದು ತಮ್ಮ ಇಂಗಿತ ಹಂಚಿಕೊಂಡರು. ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ, 'ಈ ಹಿಂದೆ ಮಾತು ಕೊಟ್ಟವರಿಗೆ ಸಚಿವ ಸ್ಥಾನ ಕೊಡಬಹುದು. ಕೋಲಾರ ಭಾಗದಲ್ಲಿ ಬಲಗೈ ಸಮುದಾಯಕ್ಕೆ ಸಚಿವ ಸ್ಥಾನ ನೀಡಿಲ್ಲ. ನಾನು ಹಿರಿಯ ಶಾಸಕ ಮತ್ತು ಆಕಾಂಕ್ಷಿ ಕೂಡಾ' ಎಂದಿದ್ದಾರೆ.

'ಮಾಹಿತಿ ಇಲ್ಲ'

ಒಂದನೇ ಪುಟದಿಂದ...

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಈ ವಿಚಾರದಲ್ಲಿ ನಾನು ಮಾತನಾಡುವುದಿಲ್ಲ. ನನ್ನ ಜೊತೆ ಈ ವಿಚಾರ ಚರ್ಚೆ ಮಾಡಿದರೆ ನಾನು ನನ್ನ ಸಲಹೆ ನೀಡುತ್ತೇನೆ. ಈ ವಿಚಾರವಾಗಿ ಅನಗತ್ಯ ಚರ್ಚೆ ಮಾಡಿ ಗೊಂದಲ ಸೃಷ್ಟಿಸಬೇಡಿ ಎಂದು ನಿಮ್ಮಲ್ಲಿ (ಮಾಧ್ಯಮ) ಮನವಿ ಮಾಡುತ್ತೇನೆ' ಎಂದರು.

ಮುಖ್ಯಮಂತ್ರಿಯವರು ಔತಣಕೂಟ ಆಯೋಜಿಸಿರುವ ಬಗ್ಗೆ ಕೇಳಿದಾಗ, 'ಅದರಲ್ಲಿ ತಪ್ಪೇನಿದೆ? ಒಟ್ಟಿಗೆ ಸೇರಿ ಊಟ ಮಾಡಿ, ಸಾಕಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡುವುದು ಸಹಜ' ಎಂದರು.

ನೇಪಾಳ: ಜೆನ್–ಝಿ ಪ್ರತಿಭಟನಾಕಾರರ ಬಂಧನ

ಕಠ್ಮಂಡು (ಪಿಟಿಐ): ಪದಚ್ಯುತ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಮತ್ತು ಹಿಂದಿನ ಗೃಹ ಸಚಿವ ರಮೇಶ್ ಲೇಖಕ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ಇಲ್ಲಿನ ಮೈತಿಘರ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಡಾ. ನಿಕೋಲಸ್ ಭುಸಲ್ ಸೇರಿದಂತೆ 'ಜೆನ್–ಝಿ' ಗುಂಪಿಗೆ ಸೇರಿದ 18 ಹೋರಾಟಗಾರರನ್ನು ನೇಪಾಳ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಹಂಗರಿಯ ಲೇಖಕ ಲಾಸ್ಲೊಗೆ ನೊಬೆಲ್ ಸಾಹಿತ್ಯ ಪುರಸ್ಕಾರ



ಲಾಸ್ಲೊ

ಸ್ಟಾಕ್‌ಹೋಮ್ (ಎಪಿ): ಹಂಗರಿಯ ಲೇಖಕ ಲಾಸ್ಲೊ ಕ್ರಾಸ್ನಾಹೊರ್ಕೈ ಅವರಿಗೆ ಈ ಸಾಲಿನ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ದೊರೆತಿದೆ.

ಅವರು ಸರಳ ವಾಕ್ಯಗಳ ಮೂಲಕ, ತಮಾಷೆಯ ವಿವರಣೆಯೊಂದಿಗೆ ತತ್ವಜ್ಞಾನವನ್ನು ಹೇಳುವ ವಿಶಿಷ್ಟ ಕಾದಂಬರಿ ರಚನೆಯ ಮೂಲಕ ಗಮನ ಸೆಳೆದಿದ್ದಾರೆ. ಅರ್ನೆಸ್ಟ್ ಹೆಮ್ಮಿಂಗ್‌ವೆ, ಆಲ್ಬರ್ಟ್ ಕಮು ಹಾಗೂ ಟೋನಿ ಮಾರಿಸನ್ ಅವರ ಸಾಹಿತ್ಯಿಕ ಶ್ರೇಷ್ಠ ಕೃತಿಗಳ ಹೆಜ್ಜೆ ಗುರುತುಗಳನ್ನು ಅನುಕರಿಸುವ ಮೂಲಕ ಪ್ರತಿಷ್ಠಿತ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಸ್ವೀಡಿಶ್ ಅಕಾಡೆಮಿ ನೊಬೆಲ್ ಸಮಿತಿಯು ಸಾಹಿತ್ಯ ಪ್ರಶಸ್ತಿಯನ್ನು 117 ಬಾರಿ ಒಟ್ಟು 121 ಮಂದಿಗೆ ನೀಡಿದೆ. ಕಳೆದ ವರ್ಷ ದಕ್ಷಿಣ ಕೊರಿಯಾದ ಲೇಖಕ ಹಾನ್ ಕಂಗ್ ಅವರಿಗೆ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಸಂದಿತ್ತು.

2025ರ ನೊಬೆಲ್ ಪ್ರಶಸ್ತಿ ವಿಭಾಗದಲ್ಲಿ ವೈದ್ಯಕೀಯ, ಭೌತಶಾಸ್ತ್ರ, ರಸಾಯನಶಾಸ್ತ್ರ ವಿಭಾಗದಲ್ಲಿ ಈಗಾಗಲೇ ಘೋಷಿಸಲಾಗಿದೆ. ಶುಕ್ರವಾರ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಘೋಷಿಸಲಾಗುತ್ತದೆ. ಅರ್ಥಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ಸೋಮವಾರ ಘೋಷಿಸಲಾಗುತ್ತದೆ.

ಅಲ್ಫ್ರೆಡ್ ನೊಬೆಲ್ ಅವರ ನಿಧನ ಹೊಂದಿದ ದಿನವಾದ ಡಿಸೆಂಬರ್ 10ರಂದು ಪ್ರಶಸ್ತಿಯ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು 11 ಸ್ವೀಡಿಶ್ ಕ್ರೊನೊರ್ (₹10.66 ಕೋಟಿ ನಗದು) ಹಾಗೂ 18 ಕ್ಯಾರೆಟ್ ಚಿನ್ನದ ಪದಕ, ಪ್ರಮಾಣಪತ್ರ ಹೊಂದಿರಲಿದೆ.

2027ರ ವಿಧಾನಸಭಾ ಚುನಾವಣೆಗೆ ಬಿಎಸ್‌ಪಿ ಏಕಾಂಗಿಯಾಗಿ ಸ್ಪರ್ಧೆ, ಬಿಜೆಪಿ ಬಗ್ಗೆ ಮೃದು ಧೋರಣೆ

ಉತ್ತರ ಪ್ರದೇಶ: ಮಾಯಾವತಿ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರಪ್ರದೇಶದ ಚುನಾವಣಾ ರಾಜಕಾರಣದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಡುತ್ತಿರುವ ಬಿಎಸ್‌ಪಿ ನಾಯಕಿ ಮಾಯಾವತಿ ಅವರು ಗುರುವಾರ ಪಕ್ಷದ ಅಪಾರ ಕಾರ್ಯಕರ್ತರೊಂದಿಗೆ ಬೃಹತ್ ರ್‍ಯಾಲಿ ನಡೆಸಿದರು.

ಬಿಎಸ್‌ಪಿ ಸಂಸ್ಥಾಪಕ ಕಾನ್ಶಿರಾಮ್ ಅವರ ಪುಣ್ಯಸ್ಮರಣೆ ಅಂಗವಾಗಿ ಹಮ್ಮಿಕೊಂಡಿದ್ದ ರ್‍ಯಾಲಿಯಲ್ಲಿ ಎಸ್‌ಪಿ, ಕಾಂಗ್ರೆಸ್ ಹಾಗೂ ದಲಿತ ನಾಯಕ ಚಂದ್ರಶೇಖರ್ (ರಾವಣ್) ವಿರುದ್ಧ ಮಾಯಾವತಿ ವಾಗ್ದಾಳಿ ನಡೆಸಿದರು. ಆದರೆ ಬಿಜೆಪಿ ಬಗ್ಗೆ ಮೃದು ಧೋರಣೆ ಅನುಸರಿಸಿದರು.

2027ರ ವಿಧಾನಸಭೆ ಚುನಾವಣೆಯಲ್ಲಿ ಬಿಎಸ್‌ಪಿ ಏಕಾಂಗಿಯಾಗಿ ಸ್ಪರ್ಧೆ ಮಾಡಲಿದೆ ಎಂದು ರ್‍ಯಾಲಿಯಲ್ಲಿ ಘೋಷಿಸಿದ ಮಾಯಾವತಿ, ವೇದಿಕೆಯಲ್ಲಿದ್ದ ಸೋದರಳಿಯ ಆಕಾಶ್ ಆನಂದ್ ಅವರನ್ನು ಬಿಎಸ್‌ಪಿ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿರುವುದಾಗಿ ಪ್ರಕಟಿಸಿದರು.

ಮತಪತ್ರಕ್ಕೆ ಮಾಯಾವತಿ ಆಗ್ರಹ: 'ನಮ್ಮ ಪಕ್ಷದ ಪರಂಪರಾಗತ ದಲಿತ ಮತಗಳನ್ನು ನಮ್ಮಿಂದ ದೂರ ಮಾಡುವ ಷಡ್ಯಂತ್ರ ನಡೆದಿದೆ. ಮುಂಬರುವ ಚುನಾವಣೆಗಳನ್ನು ಮತಪತ್ರಗಳನ್ನು ಬಳಸಿ ನಡೆಸಬೇಕು' ಎಂದು ಮಾಯಾವತಿ ಆಗ್ರಹಿಸಿದರು.

ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಹೆಸರು ಹೇಳದೇ ಟೀಕಿಸಿದ ಮಾಯಾವತಿ, ' ಪಿಡಿಎ(ಹಿಂದುಳಿದ, ದಲಿತ, ಅಲ್ಪಸಂಖ್ಯಾತ) ಸೂತ್ರದ ಮೂಲಕ ರಾಜ್ಯದ ಜನರನ್ನು ಮೂರ್ಖರನ್ನಾಗಿಸಲು ಸಮಾಜವಾದಿ ಪಕ್ಷ ಯತ್ನಿಸುತ್ತಿದೆ. ಅಧಿಕಾರದಲ್ಲಿದ್ದಾಗ ಕಾನ್ಶಿರಾಮ್ ಅವರನ್ನು ಒಂದು ದಿನವೂ ಅದು ಸ್ಮರಿಸಲಿಲ್ಲ' ಎಂದರು.

'ಕಾಂಗ್ರೆಸ್‌ನವರು ಅಂಬೇಡ್ಕರ್‌ಗೆ ಅಗೌರವ ತೋರಿದರು. ಈಗ ಸಂವಿಧಾನದ ಹೆಸರಿನಲ್ಲಿ ನಾಟಕ ಆಡುತ್ತಿದ್ದಾರೆ' ಎಂದು ಮಾಯಾವತಿ ಟೀಕಿಸಿದರು.

2012ರಲ್ಲಿ ಅಧಿಕಾರ ಕಳೆದುಕೊಂಡಿದ್ದ ಬಿಎಸ್‌ಪಿ, 2022ರ ವಿಧಾನಸಭೆ ಚುನಾವಣೆಯಲ್ಲಿ ಒಂದೇ ಒಂದು ಸ್ಥಾನ ಗೆದ್ದಿತ್ತು. 2024ರ ಲೋಕಸಭೆ ಚುನಾವಣೆಯಲ್ಲಿ ಖಾತೆ ತೆರೆಯಲೂ ಆಗಿರಲಿಲ್ಲ.

ಬಿಎಸ್‌ಪಿ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಅಪಾರ ಸಂಖ್ಯೆಯ ಕಾರ್ಯಕರ್ತರು – ಪಿಟಿಐ ಚಿತ್ರ

ಸರಣಿ ಜಯದ ತವಕದಲ್ಲಿ ಗಿಲ್ ಬಳಗ

ನವದೆಹಲಿಯಲ್ಲಿ ಎರಡನೇ ಟೆಸ್ಟ್: ಸಾಯಿ ಸುದರ್ಶನ್‌ಗೆ ಲಯಕ್ಕೆ ಮರಳುವ ಒತ್ತಡ

• ಸಿದ್ಧಿಕಿರಣ್

ನವದೆಹಲಿ: ರೋಜರ್ ಫೆಡರರ್ ಮತ್ತು ಆ್ಯಂಡಿ ರಾಡಿಕ್ ಅವರು ಗ್ರ್ಯಾನ್‌ಸ್ಲಾಮ್ ಟೆನಿಸ್ ಪಂದ್ಯಗಳಲ್ಲಿ ಅಥವಾ ಫೈನಲ್‌ನಲ್ಲಿ ಮುಖಾಮುಖಿಯಾದಾಗಲೆಲ್ಲ ಫಲಿತಾಂಶ ನಿರೀಕ್ಷಿತವೇ ಆಗಿರುತ್ತಿತ್ತು. ಸ್ವಿಟ್ಜರ್‌ಲೆಂಡ್‌ನ ಫೆಡರರ್ ಅವರು ಅಮೆರಿಕದ ಆ್ಯಂಡಿಯನ್ನು ಎದುರಿಸಿದ ಎಂಟು ಪಂದ್ಯಗಳು ಮತ್ತು ಮೂರು ಫೈನಲ್‌ಗಳಲ್ಲಿ ಪಾರಮ್ಯ ಮೆರೆದವರು. ಟೆನಿಸ್ ಅಂಗಣದಲ್ಲಿ ಇಂತಹ ಹಲವು ಉದಾಹರಣೆಗಳು ಗಮನಸೆಳೆಯುತ್ತವೆ.

ಕ್ರಿಕೆಟ್‌ನಲ್ಲಿ ಭಾರತ ತಂಡವು ಅಂತಹ ಪ್ರಾಬಲ್ಯವನ್ನು ಪಾಕಿಸ್ತಾನ ತಂಡದ ಎದುರು ಐಸಿಸಿ ವಿಶ್ವಕಪ್ ಟೂರ್ನಿಗಳಲ್ಲಿ ಹೊಂದಿದೆ. ಏಕದಿನ ಮತ್ತು ಟಿ20 ವಿಶ್ವಕಪ್‌ಗಳಲ್ಲಿ ಭಾರತ ಮೇಲುಗೈ ಸಾಧಿಸಿದ್ದೇ ಹೆಚ್ಚು. ಇನ್ನು ಟೆಸ್ಟ್ ಮಾದರಿಯಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಭಾರತದ್ದು 'ಅಧಿಕಾರಯುತ' ಜಯದ ಓಟ ನಿರಂತರವಾಗಿದೆ.

2002ರಲ್ಲಿ ಜಮೈಕಾದ ಸಬೀನಾ ಪಾರ್ಕ್‌ನಲ್ಲಿ ವಿಂಡೀಸ್ ಟೆಸ್ಟ್ ಜಯಿಸಿತ್ತು. ಅದರ ನಂತರ 26 ಟೆಸ್ಟ್‌ಗಳಲ್ಲಿ ಭಾರತ 16 ಜಯಿಸಿದೆ. ಉಳಿದವು ಡ್ರಾ ಆಗಿವೆ. ಭಾರತದ ನೆಲದಲ್ಲಿ ವಿಂಡೀಸ್ ನಿರಾಶೆ ಇನ್ನೂ ಆಳವಾಗಿದೆ. 1994ರಲ್ಲಿ ವಿಂಡೀಸ್ ಭಾರತದಲ್ಲಿ ಗೆದ್ದಿದ್ದು ಕೊನೆಯದು. ಅಲ್ಲಿಂದ ಇಲ್ಲಿಯವರೆಗೂ ಭಾರತದ ನೆಲದಲ್ಲಿ ಕೆರಿಬಿಯನ್ ಪಡೆ ಜಯದ ಮುಖವನ್ನೇ ನೋಡಿಲ್ಲ.

ಶುಕ್ರವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ವಿಂಡೀಸ್ ಎದುರು ಮೂರು ದಿನಗಳಲ್ಲಿಯೇ ಜಯಿಸುವುದೇ ಎಂಬ ಕುತೂಹಲವಷ್ಟೇ ಈಗ ಉಳಿದಿದೆ. ಏಕೆಂದರೆ; ಅಹಮದಾಬಾದಿನಲ್ಲಿ ನಡೆದಿದ್ದ ಮೊದಲ

ರೋಸ್ಟನ್ ಚೇಸ್

ಪಂದ್ಯದಲ್ಲಿ ಭಾರತ ತಂಡವು ಇನಿಂಗ್ಸ್ ಮತ್ತು 140 ರನ್‌ಗಳಿಂದ ಗೆದ್ದಿತ್ತು. ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತ್ತು.

ಮುಂದಿನ ತಿಂಗಳು ದಕ್ಷಿಣ ಆಫ್ರಿಕಾ ಎದುರು ನಡೆಯಲಿರುವ ಸರಣಿ ಆಡಲಿರುವ ಭಾರತ ತಂಡಕ್ಕೆ ವಿಂಡೀಸ್ ಎದುರಿನ ಪಂದ್ಯಗಳು ಪೂರ್ವಾಭ್ಯಾಸದ ಕಣಗಳಾಗಿವೆ. ಕೆಲವು ಆಟಗಾರರಿಗೆ ಲಯ ಕಂಡುಕೊಳ್ಳಲು ವಿಂಡೀಸ್ ಎದುರಿನ ಸರಣಿಯಲ್ಲಿ ಅವಕಾಶ ನೀಡಲಾಗುತ್ತಿದೆ. ಅದರಲ್ಲೂ ಮೂರನೇ ಕ್ರಮಾಂಕದ ಬ್ಯಾಟರ್ ಸ್ಥಾನವನ್ನು ತುಂಬಲು ಹೆಚ್ಚು ಗಮನ ನೀಡಲಾಗುತ್ತಿದ್ದು ಸಾಯಿ ಸುದರ್ಶನ್ ಅವರು ತಮ್ಮ ಪ್ರತಿಭೆ ಮೆರೆಯಲು ಅವಕಾಶಗಳನ್ನು ನೀಡಲಾಗಿದೆ. ಆದರೆ ತಮಿಳುನಾಡಿನ 23 ವರ್ಷದ ಬ್ಯಾಟರ್ ಪದೇ ಪದೇ ವೈಫಲ್ಯ ಅನುಭವಿಸುತ್ತಿದ್ದಾರೆ. ದೇಶದ

ಭಾರತ ತಂಡದ ಆಟಗಾರ ಕೆ.ಎಲ್. ರಾಹುಲ್ –ಪಿಟಿಐ ಚಿತ್ರಗಳು

ಭಾರತ ತಂಡದ ನಾಯಕ ಶುಭಮನ್ ಗಿಲ್ ಮತ್ತು ಕೋಚ್ ಗೌತಮ್ ಗಂಭೀರ್

ರಾಜಧಾನಿಯ ಅಂಗಳದಲ್ಲಿ ತಮ್ಮ ಸಾಮರ್ಥ್ಯ ತೋರುವ ಮೂಲಕ ಟೀಕಾಕಾರರ ಬಾಯಿ ಮುಚ್ಚಿಸುವ ಸವಾಲು ಅವರ ಮುಂದಿದೆ.

ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರೂ ಲಯಕ್ಕೆ ಮರಳಬೇಕಿದೆ. ಇಂಗ್ಲೆಂಡ್ ಪ್ರವಾಸದಲ್ಲಿ ಅವರು ಎರಡು ಶತಕ ಮತ್ತು ಎರಡು ಅರ್ಧಶತಕ ದಾಖಲಿಸಿದ್ದರು. ಒಟ್ಟು 411 ರನ್‌ಗಳನ್ನು ಪೇರಿಸಿದ್ದರು. ದುಲೀಪ್ ಟ್ರೋಫಿಯಲ್ಲಿ 4 ಮತ್ತು 64 ರನ್ ಮಾತ್ರ ಗಳಿಸಿದ್ದರು. ಅಹಮದಾಬಾದ್ ಟೆಸ್ಟ್‌ನಲ್ಲಿಯೂ 36 ರನ್ ಮಾತ್ರ ಗಳಿಸಿದ್ದರು. ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡುವ ತಂಡದಲ್ಲಿಯೂ ಸ್ಥಾನ ಪಡೆದಿರುವ ಯಶಸ್ವಿ ಲಯಕ್ಕೆ ಮರಳಬೇಕಿದೆ.

ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರಿಗೂ ಉತ್ತಮ ಅವಕಾಶಗಳು ಸಿಗುತ್ತಿವೆ. ನಾಯಕ ಶುಭಮನ್ ಗಿಲ್ ಕೂಡ ತಮ್ಮ ಬ್ಯಾಟಿಂಗ್ ಲಯವನ್ನು ಕಂಡುಕೊಳ್ಳುವ ಭರವಸೆ ಮೂಡಿಸಿದ್ದಾರೆ. ಮೊದಲ ಟೆಸ್ಟ್‌ನಲ್ಲಿ ಅವರು ಕೆ.ಎಲ್. ರಾಹುಲ್ ಜೊತೆಗೆ ಚೆಂದದ ಜೊತೆಯಾಟವಾಡಿದ್ದರು.

ಭಾರತ ತಂಡವು ಯಾವುದೇ ಬದಲಾವಣೆ ಇಲ್ಲದೇ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚು. ಆದರೆ ಇದು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಸರಣಿಯಾಗಿರುವುದರಿಂದ ಯಾವುದೇ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಆದ್ದರಿಂದ ಪೂರ್ಣ ಪಾಯಿಂಟ್ಸ್ ಗಳಿಸುವತ್ತಲೇ ಗಿಲ್ ಬಳಗದ ಚಿತ್ತವಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಸ್ಟಾರ್ ಆ್ಯಪ್

ಚೆಸ್: ಪ್ರಶಸ್ತಿ ಸನಿಹಕ್ಕೆ ಮೂವರು

ಮೈಸೂರು: ನಿವಾನ್ ರಾಘವೇಂದ್ರ, ಯು.ಡಿ. ಆಕಾಂಕ್ಷ್ ಹಾಗೂ ಎಸ್. ವಿಶ್ವಜಿತ್ ಅವರು ಇಲ್ಲಿ ನಡೆದಿರುವ 'ರೋಟರಿ ಬೃಂದಾವನ 16 ವರ್ಷದೊಳಗಿನವರ ಮುಕ್ತ ರೇಟಿಂಗ್ ಚೆಸ್ ಟೂರ್ನಿ'ಯಲ್ಲಿ ಪ್ರಶಸ್ತಿ ಸನಿಹಕ್ಕೆ ತಲುಪಿದ್ದು, ಇನ್ನೆರಡು ಸುತ್ತಿನ ಆಟ ಬಾಕಿ ಉಳಿದಿದೆ.

ಬುಧವಾರ ಎಂಟನೇ ಸುತ್ತಿನ ಅಂತ್ಯಕ್ಕೆ ಈ ಮೂವರು ತಲಾ 7 ಅಂಕಗಳೊಂದಿಗೆ ಜಂಟಿ ಅಗ್ರಸ್ಥಾನ ಪಡೆದರು. ಟೂರ್ನಿಯ ಆರಂಭದಿಂದಲೂ ಸ್ಥಿರ ಪ್ರದರ್ಶನ ನೀಡುತ್ತ ಬಂದಿರುವ ನಿವಾನ್ ಏಳನೇ ಸುತ್ತಿನ ಹಣಾಹಣಿಯಲ್ಲಿ ಆರುಷ್ ಭಟ್‌ರನ್ನು ಮುಖಾಮುಖಿಯಾಗಿದ್ದು, ಪಂದ್ಯ ಡ್ರಾನಲ್ಲಿ ಅಂತ್ಯ ಕಂಡಿತು. ಎಂಟನೇ ಸುತ್ತಿನಲ್ಲಿ ನಿವಾನ್, ಪಿ. ಅಭಿನವರನ್ನು ಮಣಿಸಿ ಮುನ್ನಡೆ ಕಾಯ್ದುಕೊಂಡರು.

12ರಂದು ಟ್ರಯಲ್ಸ್

ಬೆಂಗಳೂರು: ಭಾರತ ಡಾಜ್‌ಬಾಲ್ ಫೆಡರೇಷನ್‌ನ ಆಶ್ರಯದಲ್ಲಿ ನವೆಂಬರ್ 1ರಿಂದ 3ರವರೆಗೆ ನಡೆಯಲಿರುವ 3ನೇ ಜೂನಿಯರ್ (ಬಾಲಕರು, ಬಾಲಕಿಯರು ಮತ್ತು ಮಿಶ್ರ) ರಾಷ್ಟ್ರೀಯ ಡಾಜ್‌ಬಾಲ್ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡಗಳ ಆಯ್ಕೆಗಾಗಿ ಕರ್ನಾಟಕ ರಾಜ್ಯ ಡಾಜ್‌ಬಾಲ್ ಸಂಸ್ಥೆಯು ಟ್ರಯಲ್ಸ್ ಆಯೋಜಿಸಿದೆ.

ಇದೇ 12ರಂದು ಬೆಳಿಗ್ಗೆ 8 ಗಂಟೆಯಿಂದ ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯ ಯಲಚೇನಹಳ್ಳಿಯ ಡಾಜ್‌ಬಾಲ್ ಒಳಾಂಗಣ ಕ್ರೀಡಾಂಗಣದಲ್ಲಿ ಟ್ರಯಲ್ಸ್ ನಡೆಯಲಿದೆ. 19 ವರ್ಷದೊಳಗಿನವರು (2006 ನವೆಂಬರ್ 4ರ ನಂತರ ಜನಿಸಿದವರು) ಪಾಲ್ಗೊಳ್ಳಬಹುದು. ಮಾಹಿತಿಗೆ ಮೊಬೈಲ್: 9620821242, 9900581178 ಸಂಪರ್ಕಿಸಬಹುದು.

ಭಾರತಕ್ಕೆ ಭೇಟಿ ನೀಡಿರುವ ಯುಕೆ ಪ್ರಧಾನಮಂತ್ರಿ ಸ್ಟಾರ್ಮರ್, ಪಿಎಂ ಮೋದಿಯವರನ್ನು ಭೇಟಿಯಾಗಿದ್ದಾರೆ!

ಶ್ರೀರಾಮ್, ಋತ್ವಿಕ್ ಅತ್ಯಧಿಕ ಮೌಲ್ಯ

ಮುಂಬೈ(ಪಿಟಿಐ) : ಶ್ರೀರಾಮ್ ಬಾಲಾಜಿ ಮತ್ತು ಋತ್ವಿಕ್ ಬೊಲ್ಲಿಪಲ್ಲಿ ಅವರು ಗುರುವಾರ ನಡೆದ ಟೆನಿಸ್ ಪ್ರೀಮಿಯರ್ ಲೀಗ್ (ಟಿಪಿಎಲ್) ಹರಾಜು ಪ್ರಕ್ರಿಯೆ ಯಲ್ಲಿ ತಲಾ ₹12 ಲಕ್ಷ ಮೌಲ್ಯ ಗಳಿಸಿದರು. ಕ್ರಮವಾಗಿ ಗುಡಗಾಂವ್ ಗ್ರ್ಯಾಂಡ್ ಸ್ಲ್ಯಾಮರ್ಸ್ ಮತ್ತು ಚೆನ್ನೈ ಸ್ಮ್ಯಾಷರ್ಸ್ ತಂಡಗಳಿಗೆ ಸೇರ್ಪಡೆಯಾದರು. ಹರಾಜು ಪ್ರಕ್ರಿಯೆಯಲ್ಲಿ ಗರಿಷ್ಠ ಮೌಲ್ಯ ಪಡೆದ ಆಟಗಾರರಾದರು.

ಅಹಮದಾಬಾದಿನಲ್ಲಿ ಡಿಸೆಂಬರ್ 9 ರಿಂದ 14ರವರೆಗೆ ಟಿಪಿಎಲ್ ನಡೆಯಲಿದೆ.

ಕರ್ನಾಟಕದ ರೋಹನ್ ಬೋಪಣ್ಣ ನಾಯಕತ್ವದ ಎಸ್.ಜಿ. ಪೈಪರ್ಸ್ ಬೆಂಗಳೂರು ತಂಡವು ಸ್ಟಾರ್ ಆಟಗಾರ್ತಿ ಶ್ರೀವಲ್ಲಿ ಬಮಿಡಿಪಾಟಿ ಅವರನ್ನು ಸೇರ್ಪಡೆ ಮಾಡಿಕೊಂಡಿತು. ಈಚೆಗೆ ನಡೆದ ಬಿಲ್ಲಿ ಜೀನ್ ಕಿಂಗ್ ಕಪ್ (ಏಷ್ಯಾ/ಒಸಿನಿಯಾ) ಒಂದನೇ ಗುಂಪಿನಲ್ಲಿ ಶ್ರೀವಲ್ಲಿ ಪ್ರಶಸ್ತಿ ಜಯಿಸಿದ್ದರು.

'ರೋಹನ್ ಬೋಪಣ್ಣ, ಶ್ರೀವಲ್ಲಿ ಮತ್ತು ರಾಮಕುಮಾರ್ ರಾಮನಾಥನ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಂಡಿರುವುದು ಸಂತೋಷವಾಗಿದೆ. ಟೆನಿಸ್‌ನ ಉನ್ನತ ದರ್ಜೆಯ ಆಟಗಾರರು ಇರುವ ತಂಡ ನಮ್ಮದು' ಎಂದು ಎಸ್.ಜಿ. ಪೈಪರ್ಸ್ ತಂಡದ ಮಾಲೀಕತ್ವ ಹೊಂದಿರುವ ಎಸ್ ಗುಪ್ತಾ ಸ್ಪೋರ್ಟ್ಸ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮಹೇಶ್ ಭೂಪತಿ ಹೇಳಿದ್ದಾರೆ.

ಬೆಂಗಳೂರು ತಂಡವು ಶ್ರೀವಲ್ಲಿ ಅವರಿಗೆ ₹ 8.60 ಲಕ್ಷ ಹಾಗೂ ರಾಮಕುಮಾರ್ ಅವರಿಗೆ ₹ 7.20 ಲಕ್ಷ ನೀಡಿ ಖರೀದಿಸಿತು. ಹಾಲಿ ಚಾಂಪಿಯನ್ ಹೈದರಾಬಾದ್ ಸ್ಟ್ರೈಕರ್ಸ್ ತಂಡವು ಆರ್ಥರ್ ರಿಂಡರ್‌ಕನೆಚ್ ನಾಯಕತ್ವ ಹೊಂದಿದೆ. ಫ್ರಾನ್ಸ್‌ನ ಕ್ಯಾರೊಲ್ ಮಾನೆಟ್ (₹10.60ಲಕ್ಷ) ಮತ್ತು ವಿಷ್ಣುವರ್ಧನ್ (₹6 ಲಕ್ಷ) ಅವರನ್ನು ಖರೀದಿಸಿತು. ಟೂರ್ನಿಯಲ್ಲಿ ರಾಜಸ್ಥಾನ ರೇಂಜರ್ಸ್, ಗುಜರಾತ್ ಪ್ಯಾಂಥರ್ಸ್, ಜಿ.ಎಸ್. ಡೆಲ್ಲಿ ಏಸಸ್, ಗುಡಗಾಂವ್ ಗ್ರ್ಯಾಂಡ್ ಸ್ಲ್ಯಾಮರ್ಸ್, ಯಶ್ ಮುಂಬೈ ಈಗಲ್ಸ್, ಚೆನ್ನೈ ಸ್ಮ್ಯಾಷರ್ಸ್, ಎಸ್.ಜಿ.ಪೈಪರ್ಸ್ ಬೆಂಗಳೂರು ಹಾಗೂ ಹೈದರಾಬಾದ್ ಸ್ಟ್ರೈಕರ್ ತಂಡಗಳು ಆಡಲಿವೆ

ನದೀನ್, ಟ್ರಯಾನ್ ಆಲ್‌ರೌಂಡ್ ಆಟ • ರಿಚಾ ಘೋಷ್‌ಗೆ ತಪ್ಪಿದ ಶತಕ

ದಕ್ಷಿಣ ಆಫ್ರಿಕಾಕ್ಕೆ ಮಣಿದ ಭಾರತ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ವಿಶಾಖಪಟ್ಟಣಂ (ಪಿಟಿಐ): ನದೀನ್ ಡಿ ಕ್ಲರ್ಕ್ (ಔಟಾಗದೇ 89; 52ಕ್ಕೆ2) ಮತ್ತು ಕ್ಲೊಯೆ ಟ್ರಯಾನ್ (49; 32ಕ್ಕೆ 3) ಅವರ ಆಲ್‌ರೌಂಡ್ ಆಟದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಗುರುವಾರ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ರೋಚಕ ಹಣಾಹಣಿಯಲ್ಲಿ ಮೂರು ವಿಕೆಟ್‌ಗಳಿಂದ ಭಾರತ ತಂಡವನ್ನು ಮಣಿಸಿತು.

ಎಸಿಎ–ವಿಡಿಸಿಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ನೀಡಿದ್ದ 252 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಹರಿಣ ಪಡೆ ಏಳು ಎಸೆತಗಳು ಬಾಕಿ ಇರುವಂತೆ ಗುರಿ ತಲುಪಿ ಸಂಭ್ರಮಿಸಿತು. ಸತತ ಎರಡು ಪಂದ್ಯ ಗೆದ್ದಿದ್ದ ಆತಿಥೇಯ ತಂಡಕ್ಕೆ ಇದು ಮೊದಲ ಸೋಲಾಗಿದೆ.

ಭಾರತದ ಬೌಲರ್‌ಗಳ ದಾಳಿಗೆ ನಿಯಮಿತವಾಗಿ ವಿಕೆಟ್‌ಗಳು ಉರುಳುತ್ತಿದ್ದರೂ ಆರಂಭಿಕ ಆಟಗಾರ್ತಿ, ನಾಯಕಿ ಲಾರಾ ವೊಲ್ವಾರ್ಟ್ (70;111ಎ, 4x8) ಅವರು ಆಕರ್ಷಕ ಅರ್ಧಶತಕ ಬಾರಿಸಿ ತಂಡಕ್ಕೆ ಆಸರೆಯಾದರು. ನ್ಯೂಜಿಲೆಂಡ್ ವಿರುದ್ಧ ಶತಕ ಬಾರಿಸಿದ್ದ ತಾಜ್ಮಿನ್ ಬ್ರಿಟ್ಸ್ ಅವರು ಖಾತೆ ತೆರೆಯುವ ಮುನ್ನ ಪೆವಿಲಿಯನ್ ಸೇರಿಕೊಂಡರು. ನಂತರ ಬಂದ ಸುನೆ ಲೂಸ್ (5), ಮರೈಝನ್ ಕಾಪ್ (20), ಅನೆಕ್ ಬಾಷ್ (1) ಮತ್ತು ಸಿನಾಲೊ ಜಾಫ್ತಾ (14) ಅವರೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ.

ಒಂದು ಹಂತದಲ್ಲಿ 142 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡು ಸೋಲಿನ ಹಾದಿಯಲ್ಲಿದ್ದ ತಂಡಕ್ಕೆ ಟ್ರಯಾನ್ ಮತ್ತು ನದೀನ್ ಅವರು ಮಹತ್ವದ ಚೇತರಿಕೆ ನೀಡಿದರು. ಅವರು ಏಳನೇ ವಿಕೆಟ್ ಜೊತೆಯಾಟದಲ್ಲಿ 69 (60ಎ) ರನ್ ಸೇರಿಸಿ ಪಂದ್ಯದ ಚಿತ್ರಣವನ್ನೇ ಬದಲಿಸಿದರು.

ಗೆಲುವಿಗೆ 41 ರನ್ ಬೇಕಿದ್ದಾಗ ಟ್ರಯಾನ್ ಅವರನ್ನು ಸ್ನೇಹ ರಾಣಾ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿ, ಭಾರತದ ಪಾಳಯದಲ್ಲಿ ಸಂಭ್ರಮ ಮೂಡಿಸಿದರೂ ಅದು ಹೆಚ್ಚು ಹೊತ್ತು ಇರಲಿಲ್ಲ. ನಂತರದಲ್ಲಿ ನದೀನ್ ಬಿರುಸಿನ ಆಟವಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ದಕ್ಷಿಣ ಆಫ್ರಿಕಾ 48.5 ಓವರ್‌ಗಳಲ್ಲಿ 7 ವಿಕೆಟ್‌ಗೆ 252 ರನ್ ಗಳಿಸಿತು. ಇದರೊಂದಿಗೆ ಮೂರು ಪಂದ್ಯಗಳಲ್ಲಿ ಎರಡನೇ ಜಯದೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಭಾರತ ಮೂರನೇ ಸ್ಥಾನದಲ್ಲಿದೆ.

ರಿಚಾ ಮಿಂಚು: ಇದಕ್ಕೂ ಮೊದಲು ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಎಂಟನೇ ಕ್ರಮಾಂಕದ ಬ್ಯಾಟರ್ ರಿಚಾ ಘೋಷ್ (94;77ಎ, 4x11, 6x4) ಅವರ ದಿಟ್ಟ ಆಟದಿಂದಾಗಿ ಭಾರತ ತಂಡವು 49.5 ಓವರ್‌ಗಳಲ್ಲಿ 251 ರನ್ ಗಳಿಸಿತು.

ಅಗ್ರಕ್ರಮಾಂಕದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡುವಲ್ಲಿ ವಿಫಲರಾದರು. ಕಳೆದೆರಡೂ ಪಂದ್ಯಗಳಲ್ಲಿ ಮಿಂಚಿ ತಂಡಕ್ಕೆ ಆಸರೆಯಾಗಿದ್ದ ದೀಪ್ತಿ ಶರ್ಮಾ (4; 14ಎ) ಅವರನ್ನು ಕಟ್ಟಿಹಾಕುವಲ್ಲಿಯೂ ದಕ್ಷಿಣ ಆಫ್ರಿಕಾ ಬೌಲರ್‌ಗಳು ಸಫಲರಾದರು. ಆದರೆ ರಿಚಾ ಮಾತ್ರ ತಮ್ಮ ಮೇಲಿನ ವಿಶ್ವಾಸವನ್ನು ಉಳಿಸಿಕೊಂಡರು. ಅವರಿಗೆ ಸ್ನೇಹ ರಾಣಾ (33; 24ಎ, 4X6) ಕೂಡ ಉತ್ತಮ ಜೊತೆ ನೀಡಿದರು.

ಇದರಿಂದಾಗಿ 102 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿದ್ದ ಭಾರತ ತಂಡವು ಹೋರಾಟದ ಮೊತ್ತ ಗಳಿಸಲು ಸಾಧ್ಯವಾಯಿತು. ರಿಚಾ ಮತ್ತು ರಾಣಾ ಎಂಟನೇ ವಿಕೆಟ್ ಜೊತೆಯಾಟದಲ್ಲಿ 88 ರನ್ ಸೇರಿಸಿದರು. ಈ ಹಾದಿಯಲ್ಲಿ ರಿಚಾ ಅವರು ಕೇವಲ ಆರು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಆದರೆ ಏಕದಿನ ಕ್ರಿಕೆಟ್‌ನಲ್ಲಿ ಒಂದು ಸಾವಿರ ರನ್ ಗಳಿಸಿದವರ ಕ್ಲಬ್‌ಗೆ ಸೇರ್ಪಡೆಯಾದರು.

ಇಂದಿನ ಪಂದ್ಯ	
ಬಾಂಗ್ಲಾದೇಶ Vs ನ್ಯೂಜಿಲೆಂಡ್	ಮಧ್ಯಾಹ್ನ 3
ಲೈವ್	ಸ್ಟಾರ್ ಸ್ಪೋರ್ಟ್ಸ್

ರಿಚಾ ತಮ್ಮ ಏಳನೇ ಅರ್ಧಶತಕ ದಾಟಿದ ನಂತರ ರನ್ ವೇಗ ಹೆಚ್ಚಿಸಿದರು. ಒಂದು ಹಂತದಲ್ಲಿ 200 ರನ್ ಮೊತ್ತ ಗಳಿಸುವುದೇ ಕಷ್ಟಕರ ಎಂಬಂತಿದ್ದ ಪರಿಸ್ಥಿತಿಯನ್ನು ರಿಚಾ ಬದಲಾಯಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 49.5 ಓವರ್‌ಗಳಲ್ಲಿ 251 (ಪ್ರತಿಕಾ ರಾವಲ್ 37, ಸ್ಮೃತಿ ಮಂದಾನ 23, ಅಮನ್ಜೋತ್ ಕೌರ್ 13, ರಿಚಾ ಘೋಷ್ 94, ಸ್ನೇಹ ರಾಣಾ 33, ಮರೈಝನ್ ಕಾಪ್ 45ಕ್ಕೆ2, ನದೀನ್ ಡಿ ಕ್ಲರ್ಕ್ 52ಕ್ಕೆ2, ನಾನಕುಲುಲೆಕೊ ಮ್ಲಾಬಾ 46ಕ್ಕೆ2, ಕ್ಲೊಯಿ ಟ್ರಯನ್ 32ಕ್ಕೆ3). ದಕ್ಷಿಣ ಆಫ್ರಿಕಾ: 48.5 ಓವರ್‌ಗಳಲ್ಲಿ 7 ವಿಕೆಟ್‌ಗೆ 252 (ಲಾರಾ ವೊಲ್ವಾರ್ಟ್ 70, ಕ್ಲೊಯೆ ಟ್ರಯಾನ್ 49, ನದೀನ್ ಡಿ ಕ್ಲರ್ಕ್ ಔಟಾಗದೇ 84; ಕ್ರಾಂತಿ ಗೌಡ್ 59ಕ್ಕೆ 2, ಸ್ನೇಹ ರಾಣಾ 47ಕ್ಕೆ 2). ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 3 ವಿಕೆಟ್‌ಗಳ ಗೆಲುವು. ಪಂದ್ಯದ ಆಟಗಾರ್ತಿ: ನದೀನ್ ಡಿ ಕ್ಲರ್ಕ್

ವಿನೂ ಮಂಕಡ್: ಕೆಎಸ್‌ಸಿಎಗೆ ಜಯ

ಡೆಹ್ರಾಡೂನ್: ಸಿ. ವೈಭವ್ (ಅಜೇಯ 56; 45ಎ, 4X6) ಅರ್ಧಶತಕ ಮತ್ತು ವೈಭವ ಶರ್ಮಾ (21ಕ್ಕೆ5) ಪಂಚಗೊಂಚಲು ವಿಕೆಟ್ ಸಾಧನೆಯಿಂದಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ತಂಡವು ವಿನೂ ಮಂಕಡ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಹೈದರಾಬಾದ್ ಕ್ರಿಕೆಟ್ ಸಂಸ್ಥೆ ಎದುರು 28 ರನ್‌ಗಳಿಂದ ಜಯಿಸಿತು.

ಗುರುವಾರ ಬೆಳಗಿನ ಜಾವ ಮಳೆ ಸುರಿದ ಕಾರಣ ಮೈದಾನವು ತೇವಗೊಂಡಿತ್ತು. ಆದ್ದರಿಂದ ಪಂದ್ಯ ವಿಳಂಬವಾಗಿ ಆರಂಭವಾಯಿತು. ಆದ್ದರಿಂದ ಪ್ರತಿ ಇನಿಂಗ್ಸ್‌ಗೆ 28 ಓವರ್ ನಿಗದಿಪಡಿಸಲಾಯಿತು. ಮೊದಲು ಬ್ಯಾಟಿಂಗ್ ಮಾಡಿದ ಕೆಎಸ್‌ಸಿಎ ತಂಡವು ರಿಹಾನ್ ಮೊಹಮ್ಮದ್ (46 ರನ್) ಮತ್ತು ವೈಭವ ಆಟದ ಬಲದಿಂದ 7 ವಿಕೆಟ್‌ಗಳಿಗೆ 167 ರನ್ ಗಳಿಸಿತು. ಅದಕ್ಕುತ್ತರವಾಗಿ ಹೈದರಾಬಾದ್ ತಂಡವು 28 ಓವರ್‌ಗಳಲ್ಲಿ 9 ವಿಕೆಟ್‌ಗೆ 139 ರನ್ ಗಳಿಸಲಷ್ಟೇ ಶಕ್ತವಾಯಿತು. ವೈಭವ್ ಶರ್ಮಾ ಬೌಲಿಂಗ್ ಮುಂದೆ ಹೈದರಾಬಾದ್ ಕುಸಿಯಿತು.

ಸಂಕ್ಷಿಪ್ತ ಸ್ಕೋರು: ಕೆಎಸ್‌ಸಿಎ: 28 ಓವರ್‌ಗಳಲ್ಲಿ 7ಕ್ಕೆ167 (ರಿಹಾನ್ ಮೊಹಮ್ಮದ್ 46, ಸಿ. ವೈಭವ್ ಔಟಾಗದೇ 56, ಪ್ರೇಮ್ ಗೋನಿ 50ಕ್ಕೆ2, ವಿ. ಯಶವೀರ್ 36ಕ್ಕೆ4) ಹೈದರಾಬಾದ್ ಕ್ರಿಕೆಟ್ ಸಂಸ್ಥೆ: 28 ಓವರ್‌ಗಳಲ್ಲಿ 9ಕ್ಕೆ139 (ಆದಿತ್ಯ ಜವಾಜಿ 22, ಅಲಂಕೃತ್ ರಪೊಲೆ 27, ಸಾಯಿ ಶರಣ್ 20, ವೈಭವ್ ಶರ್ಮಾ 21ಕ್ಕೆ5, ಬಿ.ಆರ್. ರತನ್ 31ಕ್ಕೆ2) ಫಲಿತಾಂಶ: ಕೆಎಸ್‌ಸಿಎಗೆ 28 ರನ್ ಜಯ (ಮಳೆಯಿಂದಾಗಿ ಮೈದಾನ ತೇವಗೊಂಡ ಕಾರಣ ಪಂದ್ಯ ಆರಂಭ ವಿಳಂಬವಾಯಿತು. ಅದರಿಂದಾಗಿ ಪ್ರತಿ ಇನಿಂಗ್ಸ್‌ಗೆ 28 ಓವರ್ ನಿಗದಿಪಡಿಸಲಾಯಿತು).

ಬ್ಯಾಡ್ಮಿಂಟನ್: ಪದಕ ಖಚಿತಪಡಿಸಿಕೊಂಡ ಭಾರತ

ಗುವಾಹಟಿ (ಪಿಟಿಐ): ಆತಿಥೇಯ ಭಾರತ ತಂಡವು ಸುಮಾರು ಮೂರು ಗಂಟೆಗಳ ಸೆಣಸಾಟದಲ್ಲಿ ಕೊರಿಯಾ ತಂಡವನ್ನು ಸೋಲಿಸಿ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಮಿಶ್ರ ತಂಡ ವಿಭಾಗದಲ್ಲಿ ಸೆಮಿಫೈನಲ್ ತಲುಪಿತು. ಆ ಮೂಲಕ ಈ ಚಾಂಪಿಯನ್‌ಷಿಪ್‌ನ ಇತಿಹಾಸದಲ್ಲಿ ಮೊದಲ ಸಲ ಬಾರಿ ಪದಕವನ್ನು ಖಚಿತಪಡಿಸಿಕೊಂಡಿತು.

ಭಾರತ ತಂಡ, ಇಲ್ಲಿ ಗುರುವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 44–45, 45–30, 45–33 ರಿಂದ ಜಯಗಳಿಸಿತು. ಭಾರತ ಸೆಮಿಫೈನಲ್ ನಲ್ಲಿ ಏಷ್ಯನ್ 19 ವರ್ಷದೊಳಗಿನವರ ಮಿಶ್ರ ಟೀಮ್ ಚಾಂಪಿಯನ್ ಇಂಡೊನೇಷ್ಯಾವನ್ನು ಎದುರಿಸಲಿದೆ. ಇಂಡೊನೇಷ್ಯಾ ಇನ್ನೊಂದು ಪಂದ್ಯದಲ್ಲಿ 45–35, 45–35 ರಿಂದ ಚೀನಾ ತೈಪಿ ತಂಡವನ್ನು ಮಣಿಸಿತು.

ಕೊರಿಯಾ ಡಬಲ್ಸ್‌ನಲ್ಲಿ ಪ್ರಬಲವಾಗಿರುವ ಕಾರಣ, ಭಾರತ ತಂಡ ಸಿಂಗಲ್ಸ್ ಫಲಿತಾಂಶವನ್ನು ನೆಚ್ಚಿಕೊಂಡಂತೆ ಇತ್ತು. ಅದಕ್ಕೆ ತಕ್ಕಂತೆ ತಂತ್ರಗಾರಿಕೆ ರೂಪಿಸಿ ಗೆಲ್ಲುವಲ್ಲಿ ಸಫಲವಾಯಿತು.

ಎಎಫ್‌ಸಿ ಅರ್ಹತಾ ಪಂದ್ಯ: ಭಾರತಕ್ಕೆ ತಪ್ಪಿದ ಸೋಲು

ಸಿಂಗಪುರ ವಿರುದ್ಧ ಪಂದ್ಯ ಡ್ರಾ

ಸಿಂಗಪುರ (ಪಿಟಿಐ): ಹತ್ತು ಮಂದಿ ಆಟಗಾರರಿಗೆ ಸೀಮಿತಗೊಂಡ ಭಾರತ ತಂಡವು ಪಂದ್ಯ ಮುಗಿಯುವ ಹಂತದಲ್ಲಿದ್ದಾಗ ಸಿಂಗಪುರ ಆಟಗಾರನೊಬ್ಬನ ರಕ್ಷಣಾ ಲೋಪದಿಂದ ಗೋಲು ಗಳಿಸಿ ಸೋಲಿನಿಂದ ಬಚಾವಾಯಿತು. ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಪಂದ್ಯದಲ್ಲಿ ಗುರುವಾರ ಸಿಂಗಪುರ ಎದುರು 1–1 ಡ್ರಾ ಮಾಡಿಕೊಳ್ಳುವಲ್ಲಿ ಈ ಗೋಲು ಆಸರೆಯಾಯಿತು.

ಈ ಡ್ರಾ ಕಾರಣ, ಏಷ್ಯನ್ ಕಪ್ ಪ್ರಧಾನ ಟೂರ್ನಿಗೆ ಅರ್ಹತೆ ಗಳಿಸುವ ಭಾರತ ತಂಡದ ಕ್ಷೀಣ ಆಸೆ ಜೀವಂತವಾಗಿದೆ.

'ಸಿ' ಗುಂಪಿನ ಈ ಪಂದ್ಯದ ಮೊದಲಾರ್ಧದ ಕೊನೆಯ ಕ್ಷಣದಲ್ಲಿ ('ಸ್ಟಾಪೇಜ್ ಅವಧಿ'ಯ ಮೊದಲ ನಿಮಿಷ) ಇಖ್ಸಾನ್ ಫಂದಿ ಗಳಿಸಿದ ಗೋಲಿನಿಂದಾಗಿ ಸಿಂಗಪುರ ಮುನ್ನಡೆ ಗಳಿಸಿತು. ಆದರೆ 90ನೇ ನಿಮಿಷ ಸಿಂಗಪುರದ ಜೋರ್ಡನ್ ಎಮಾವಿವ್ ಎಸಗಿದ ಪ್ರಮಾದ ದುಬಾರಿಯಾಯಿತು. ರಹೀಮ್ ಅಲಿ ಹೊಡೆದ ಗೋಲಿನಿಂದ ಭಾರತ ನಿಟ್ಟುಸಿರುಬಿಟ್ಟಿತು.

ಆಟಗಾರರನ್ನು ಶಿಬಿರಕ್ಕೆ ಬಿಟ್ಟುಕೊಡಲು ಕ್ಲಬ್‌ಗಳಿಂದಾದ ವಿಳಂಬ, ಗೊಂದಲಗಳ ಪರಿಣಾಮ ಭಾರತ ತಂಡ ಕೇವಲ ಒಂದು ವಾರವಷ್ಟೇ ಒಟ್ಟಾಗಿ ತರಬೇತಿ ಪಡೆಯಲು ಸಾಧ್ಯವಾಗಿತ್ತು.

ಖಾಲಿದ್ ಜಮೀಲ್ ತರಬೇತಿಯ ತಂಡಕ್ಕೆ ಈ ಪಂದ್ಯದಲ್ಲಿ ವಿರಾಮದ ನಂತರ ಮತ್ತೊಂದು ಹಿನ್ನಡೆಯಾಯಿತು. ರಕ್ಷಣೆ ಆಟಗಾರ ಸಂದೇಶ್ ಜಿಂಗಾನ್ ಅವರು ಎರಡನೇ 'ಹಳದಿ ಕಾರ್ಡ್' ದರ್ಶನದಿಂದಾಗಿ 47ನೇ ನಿಮಿಷ ಹೊರನಡೆಯಬೇಕಾಯಿತು. ಹೀಗಾಗಿ ತಂಡ ಹತ್ತು ಆಟಗಾರರೊಂದಿಗೆ ಉಳಿದ ಅವಧಿ ಆಡಬೇಕಾಯಿತು.

ಭಾರತ ಮೂರು ಪಂದ್ಯಗಳಿಂದ ಎರಡು ಪಾಯಿಂಟ್ಸ್ ಗಳಿಸಿದೆ. ಈ ಮೊದಲು ಬಾಂಗ್ಲಾದೇಶ ವಿರುದ್ಧ ಗೋಲಿಲ್ಲದೇ ಡ್ರಾ ಸಾಧಿಸಿದ್ದ ಗುರ್‌ಪ್ರೀತ್ ಸಿಂಗ್ ಸಂಧು ಬಳಗವು, ಹಾಂಗ್‌ಕಾಂಗ್ ತಂಡಕ್ಕೆ 0–1 ಗೋಲಿನಿಂದ ಮಣಿದಿತ್ತು. ಹೀಗಾಗಿ 2027ರ ಪ್ರಧಾನ ಸುತ್ತಿಗೆ ತಲುಪುವ ಸವಾಲಿನ ಹಾದಿ ಕಠಿಣವಾಗಿದ್ದರೂ ಬತ್ತಿಹೋಗಿಲ್ಲ. ಗುಂಪಿನಲ್ಲಿ ಮೊದಲ ಸ್ಥಾನ ಗಳಿಸುವ ತಂಡ ಮಾತ್ರ ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಗೆ ಅರ್ಹತೆ ಪಡೆಯಲಿದೆ.

ಈ ಎರಡೂ ತಂಡಗಳು ಇದೇ 14ರಂದು ಮಡಗಾಂವ್‌ನಲ್ಲಿ ನಡೆಯುವ 'ರಿಟರ್ನ್ ಲೆಗ್'ನಲ್ಲಿ ಮುಖಾಮುಖಿಯಾಗಲಿವೆ.

ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು ಎಕ್ಸ್ ಚಿತ್ರ

ಬೆಂಗಾಲ್‌ಗೆ ರೋಚಕ ಜಯ

ಚೆನ್ನೈ: ಬೆಂಗಾಲ್ ವಾರಿಯರ್ಸ್ ತಂಡ ರೋಮಾಂಚಕ ಪಂದ್ಯದಲ್ಲಿ ಪ್ರಬಲ ದಬಂಗ್ ಡೆಲ್ಲಿ ಕೆಸಿ ತಂಡವನ್ನು 37–36 ರಿಂದ ಸೋಲಿಸಿ ವೀರೋಚಿತ ರೀತಿಯಲ್ಲಿ ಗೆಲುವಿನ ಹಳಿಗೆ ಮರಳಿತು. ಪ್ರೊ ಕಬಡ್ಡಿ ಲೀಗ್‌ನ ಈ ಪಂದ್ಯದಲ್ಲಿ ನಾಯಕ ದೇವಾಂಕ್ ದಲಾಲ್ (12 ಅಂಕ) ಅವರ 'ಸೂಪರ್ ಟೆನ್' ಮತ್ತು ಆಶಿಶ್ ಮಲಿಕ್ ಅವರ ಹೈಫೈ ಸಾಧನೆ ಬೆಂಗಾಲ್ ಕೈಹಿಡಿಯಿತು.

ಇದು ಬೆಂಗಾಲ್‌ಗೆ ನಾಲ್ಕನೇ ಗೆಲುವು. ಆಶು ಮಲಿಕ್ ಅವರ ಗೈರು ಡೆಲ್ಲಿ ತಂಡವನ್ನು ಕಾಡಿತು. ಡೆಲ್ಲಿ ತಂಡಕ್ಕೆ 13 ಪಂದ್ಯಗಳಲ್ಲಿ ಇದು ಎರಡನೇ ಸೋಲು. 22 ಅಂಕ ಗಳಿಸಿರುವ ಡೆಲ್ಲಿ ತಂಡ ಅಗ್ರಸ್ಥಾನದಲ್ಲೇ ಇದೆ.

ಪಂದ್ಯ ಹೆಚ್ಚು ಕಮ್ಮಿ ಸಮಸಮನಾಗಿಯೇ ಸಾಗಿತು. ಅನುರಾಗ್ ಕುಮಾರ್ ಅವರ ಸೂಪರ್ ಟ್ಯಾಕಲ್ ಮತ್ತು ಮತ್ತು ಪ್ರತೀಕ್ ಅವರ ಟ್ಯಾಕಲ್‌ನಿಂದ ಎದುರಾಳಿಯನ್ನು ಆಲೌಟ್ ಮಾಡಿದ್ದರಿಂದ ವಿರಾಮದ ವೇಳೆ ಬೆಂಗಾಲ್ ತಂಡ 19–18ರಲ್ಲಿ ಒಂದು ಪಾಯಿಂಟ್ ಮುನ್ನಡೆ ಸಾಧಿಸಿತ್ತು. ನಂತರವೂ ಈ ಅಲ್ಪ ಮುನ್ನಡೆಯನ್ನು ಬೆಂಗಾಲ್ ಕಾಪಾಡಿಕೊಂಡಿತು.

ತೀವ್ರ ಹೋರಾಟದ ಇನ್ನೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 41–39 ರಿಂದ ಯುಪಿ ಯೋಧಾಸ್ ತಂಡವನ್ನು ಮಣಿಸಿತು. ಜೈಂಟ್ಸ್ ಪರ ನಾಯಕ ರಾಕೇಶ್ (20 ಅಂಕ) ಮತ್ತು ಯೋಧಾಸ್ ಪರ ಗುಮನ್ ಸಿಂಗ್ (14) ಉತ್ತಮವಾಗಿ ಆಡಿದರು.

ಶುಕ್ರವಾರದ ಪಂದ್ಯಗಳು
ಗುಜರಾತ್ ಜೈಂಟ್ಸ್– ದಬಂಗ್ ಡೆಲ್ಲಿ (ರಾತ್ರಿ 8); ಬೆಂಗಾಲ್ ವಾರಿಯರ್ಸ್–ಯು ಮುಂಬಾ (ರಾತ್ರಿ 9)

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಿಚಾ ದಿಟ್ಟ ಆಟ
ವಿಶಾಖಪಟ್ಟಣದಲ್ಲಿ ಗುರುವಾರ ನಡೆದ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡದ ಎದುರು 94 ರನ್ ಗಳಿಸಿದ ಭಾರತದ ರಿಚಾ ಘೋಷ್

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

₹20 ಕೋಟಿ ಸಮಗ್ರ ಯೋಜನೆ ಸಿದ್ಧ 3
'ನಮಗಿದು ಮುಗಿದ ಅಧ್ಯಾಯ' 2

ಅಕ್ಕಿ ಜತೆ ಬೇಳೆ, ಅಡುಗೆ ಎಣ್ಣೆ

'ಇಂದಿರಾ ಆಹಾರ ಕಿಟ್': ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತ್ಯೋದಯ ಅನ್ನ ಯೋಜನೆ ಮತ್ತು ಬಿಪಿಎಲ್ ಕುಟುಂಬಗಳ ಪಡಿತರ ಫಲಾನುಭವಿಗಳಿಗೆ ಇನ್ನು ಮುಂದೆ 'ಅನ್ನ ಭಾಗ್ಯ'ದ ಐದು ಕೆ.ಜಿ ಅಕ್ಕಿ ಜತೆಗೆ 'ಇಂದಿರಾ ಆಹಾರ ಕಿಟ್' ನೀಡಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ.



ಎಚ್‌.ಕೆ.ಪಾಟೀಲ

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು, 'ಇಂದಿರಾ ಆಹಾರ ಕಿಟ್'ನಲ್ಲಿ ತೊಗರಿಬೇಳೆ, ಅಡುಗೆ ಎಣ್ಣೆ, ಸಕ್ಕರೆ ಮತ್ತು ಉಪ್ಪು ಇರಲಿವೆ' ಎಂದು ವಿವರಿಸಿದರು.

ಅಂತ್ಯೋದಯ ಅನ್ನ ಯೋಜನೆ (ಎಎವೈ) ಮತ್ತು ಬಿಪಿಎಲ್ (ಪಿಎಚ್‌ಎಚ್) ಕುಟುಂಬಗಳಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪ್ರತಿ ಫಲಾನುಭವಿಗೆ 5 ಕೆ.ಜಿ. ಅಕ್ಕಿ ಜತೆಗೆ, ರಾಜ್ಯ ಸರ್ಕಾರದ 'ಅನ್ನಭಾಗ್ಯ' ಯೋಜನೆಯಡಿ ಹೆಚ್ಚುವರಿಯಾಗಿ 5 ಕೆ.ಜಿ ಅಕ್ಕಿ ಅಥವಾ ಗೋಧಿ, ರಾಗಿ, ಜೋಳ ಸೇರಿಸಿ ಒಟ್ಟು 10 ಕೆ.ಜಿ ಆಹಾರ ಧಾನ್ಯ ವಿತರಿಸಲಾಗುತ್ತಿತ್ತು. ರಾಜ್ಯದ ಪಾಲಿನ ಅಕ್ಕಿ ಬದಲು ದ್ವಿದಳ ಧಾನ್ಯ, ಅಡುಗೆ ಎಣ್ಣೆ ಮತ್ತಿತರ ವಸ್ತುಗಳನ್ನು ವಿತರಿಸಲಾಗುವುದು ಎಂದು ತಿಳಿಸಿದರು.

ರಾಜ್ಯ ಸರ್ಕಾರ ಪ್ರತಿ ಫಲಾನುಭವಿಗೆ 10 ಕೆ.ಜಿ ಅಕ್ಕಿ ವಿತರಿಸುತ್ತಿದೆ. ಇದರಿಂದ ಕೆಲವು ಕುಟುಂಬಗಳು ತಿಂಗಳಿಗೆ 40 ರಿಂದ 50 ಕೆ.ಜಿ ಅಕ್ಕಿ ಪಡೆಯುತ್ತಿವೆ. ಇದು ಕುಟುಂಬದ ಅಗತ್ಯಕ್ಕಿಂತಲೂ ಹೆಚ್ಚಾಗಿದೆ. ಈ ರೀತಿ ಹೆಚ್ಚುವರಿಯಾದ ಅಕ್ಕಿಯು ಬೇರೆ ಉದ್ದೇಶಗಳಿಗೆ ದುರುಪಯೋಗವಾಗುತ್ತಿದೆ. ಆದ್ದರಿಂದ ಇಂದಿರಾ ಆಹಾರ ಕಿಟ್ ಒದಗಿಸಲು ತೀರ್ಮಾನಿಸಲಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಅನ್ನಭಾಗ್ಯ ಯೋಜನೆಯ ಅಕ್ಕಿಯು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ಪ್ರಕರಣಗಳು ವರದಿಯಾಗಿವೆ. ಆದ್ದರಿಂದ, ಹೆಚ್ಚುವರಿ ಅಕ್ಕಿ ನೀಡುವುದರ ಬದಲಿಗೆ ಸಮತೋಲಿತ ಆರೋಗ್ಯ ನೀಡುವ ಆಹಾರದ ಕಿಟ್ ನೀಡುವುದು ಸೂಕ್ತ. ಇದರಿಂದ ಅಕ್ಕಿಯ ದುರುಪಯೋಗ ತಡೆಯಲು ಸಾಧ್ಯ ಎಂಬ ಅಭಿಪ್ರಾಯ ಸಚಿವ ಸಂಪುಟ ಸಭೆಯಲ್ಲಿ ವ್ಯಕ್ತವಾಯಿತು ಎಂದು ಹೇಳಿದರು.

'ಅನ್ನಭಾಗ್ಯ' ಯೋಜನೆಯಲ್ಲಿ ವಿತರಿಸಲಾಗುವ ಅಕ್ಕಿಯಿಂದ ಕೇವಲ ಕಾರ್ಬೋಹೈಡ್ರೇಟ್ ಮಾತ್ರ ದೊರೆಯುತ್ತಿದೆ. ಆದರೆ ವ್ಯಕ್ತಿಯ ಆರೋಗ್ಯಕ್ಕೆ ಅಗತ್ಯವಿರುವ ಕೊಬ್ಬಿನಾಂಶ, ಪ್ರೋಟೀನ್ ಸಿಗುತ್ತಿಲ್ಲ. ಉತ್ತಮ ಆರೋಗ್ಯದ ದೃಷ್ಟಿಯಿಂದ ಎಲ್ಲಾ ಪೌಷ್ಟಿಕಾಂಶಗಳನ್ನು ಒಳಗೊಂಡ ಸಮತೋಲಿತ ಆಹಾರ ಒದಗಿಸುವ ಧಾನ್ಯಗಳನ್ನು ಕಿಟ್ ಮೂಲಕ ಒದಗಿಸುವುದು ಸರ್ಕಾರದ ಉದ್ದೇಶ ಎಂದರು.

ಪಡಿತರದಾರರು ಅಕ್ಕಿ, ಗೋಧಿ ಬಿಟ್ಟು ಇತರೆ ಆಹಾರ ಧಾನ್ಯಗಳನ್ನು ತಮ್ಮ ಸ್ವಂತ ವೆಚ್ಚದಲ್ಲಿ ಖರೀದಿಸುತ್ತಿದ್ದಾರೆ. ಒಂದು ಕುಟುಂಬಕ್ಕೆ ಸರಿ ಸುಮಾರು ₹500 ರಿಂದ ₹1,000ದ ವರೆಗೆ ವೆಚ್ಚವಾಗುತ್ತಿದೆ. ಸರ್ಕಾರ ಆಹಾರ ಕಿಟ್ ವಿತರಿಸುವುದರಿಂದ ಸುಮಾರು 1.26 ಕೋಟಿ ಕಾರ್ಡುದಾರರಿಂದ ತಿಂಗಳಿಗೆ ₹630 ಕೋಟಿ ಉಳಿತಾಯವಾಗಲಿದೆ ಎಂದು ಪಾಟೀಲ ಹೇಳಿದರು.

ಎಷ್ಟು ಸದಸ್ಯರಿರುವ ಕುಟುಂಬಕ್ಕೆ ಎಷ್ಟರ ಪ್ರಮಾಣದಲ್ಲಿ ತೊಗರಿ, ಅಡುಗೆ ಎಣ್ಣೆ, ಸಕ್ಕರೆ ಸಿಗಲಿದೆ ಎಂಬ ಮಾಹಿತಿ ಸರ್ಕಾರದ ಅಧಿಕೃತ ಆದೇಶ ಹೊರಬಿದ್ದ ಬಳಿಕವಷ್ಟೇ ಖಚಿತವಾಗಲಿದೆ.

ಕಿಟ್‌ನಲ್ಲಿರುವುದೆಷ್ಟು? *

2 ಕೆ.ಜಿ	1 ಲೀಟರ್	1 ಕೆ.ಜಿ	1 ಕೆ.ಜಿ
ತೊಗರಿಬೇಳೆ	ಅಡುಗೆ ಎಣ್ಣೆ	ಸಕ್ಕರೆ	ಉಪ್ಪು

*ಒಂದು ಕುಟುಂಬವನ್ನು ಒಂದು ಯುನಿಟ್ ಎಂದು ಪರಿಗಣಿಸಿ ಇಷ್ಟು ಪ್ರಮಾಣ ನಿಗದಿ ಮಾಡಲಾಗಿದೆ. ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಇದು ವ್ಯತ್ಯಾಸವಾಗಲಿದೆ.

ಕುಟುಂಬದ ಗಾತ್ರದಂತೆ ಕಿಟ್

ಒಂದು ಕುಟುಂಬದಲ್ಲಿ ಒಬ್ಬರು ಅಥವಾ ಇಬ್ಬರಿದ್ದರೆ ತಲಾ ಅರ್ಧ ಕೆ.ಜಿ ಆಹಾರ ಪದಾರ್ಥಗಳ ಕಿಟ್, ಮೂರು–ನಾಲ್ಕು ಸದಸ್ಯರಿದ್ದರೆ ತಲಾ ಒಂದೊಂದು ಕೆ.ಜಿ ಕಿಟ್, ಐದಕ್ಕಿಂತ ಹೆಚ್ಚು ಸದಸ್ಯರಿದ್ದರೆ ತಲಾ ಒಂದೂವರೆ ಕೆ.ಜಿ ಕಿಟ್ ವಿತರಿಸಲಾಗುತ್ತದೆ. ರಾಜ್ಯದಲ್ಲಿ 1,26,15,815 ಪಡಿತರ ಕಾರ್ಡ್‌ಗಳು ಇವೆ. ಕಿಟ್‌ನಿಂದ 4,48,62,192 ಫಲಾನುಭವಿ ಗಳಿಗೆ ಅನುಕೂಲ ಆಗಲಿದೆ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಒಂದು ದಿನ ವೇತನ ಸಹಿತ ಮುಟ್ಟಿನ ರಜೆ



ಸರ್ಕಾರಿ ಕಚೇರಿಗಳು, ಗಾರ್ಮೆಂಟ್ಸ್, ಬಹುರಾಷ್ಟ್ರೀಯ ಕಂಪನಿಗಳು, ಮಾಹಿತಿ ತಂತ್ರಜ್ಞಾನ ಕಂಪನಿಗಳು ಮತ್ತು ಇತರ ಎಲ್ಲ ಖಾಸಗಿ ಕೈಗಾರಿಕೆಗಳು ಸೇರಿ ಎಲ್ಲ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಪ್ರತಿ ತಿಂಗಳು ಒಂದು ದಿನ ವೇತನ ಸಹಿತ ಮುಟ್ಟಿನ ರಜೆ ನೀಡುವ ಮಹತ್ವದ ನಿರ್ಣಯವನ್ನು ಸರ್ಕಾರ ಕೈಗೊಂಡಿದೆ.

ಈ ಉದ್ದೇಶಕ್ಕಾಗಿ 'ಋತುಚಕ್ರ ರಜೆ ನೀತಿ–2025'ಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಮುಟ್ಟಿನ ಆರೋಗ್ಯವನ್ನು ಮಹಿಳೆಯರ ಹಕ್ಕುಗಳು ಮತ್ತು ಕೆಲಸದ ಸ್ಥಳದ ಕಲ್ಯಾಣದ ಮೂಲಭೂತ ಅಂಶವೆಂದು ಪರಿಗಣಿಸಿ ಅದರ ಮಹತ್ವವನ್ನು ಗುರುತಿಸಿದೆ. ಋತುಚಕ್ರ ರಜೆ ನೀತಿಯು ಮಹಿಳೆಯರು ಯಾವುದೇ ಕಳಂಕ ಅಥವಾ ಪರಿಣಾಮಗಳ ಭಯವಿಲ್ಲದೆ ತಮ್ಮ ಆರೋಗ್ಯಕ್ಕೆ ಆದ್ಯತೆ ನೀಡಬಹುದಾದ ಸಹಾಯಕ ವಾತಾವರಣವನ್ನು ಸೃಷ್ಟಿಸಲು ಸಕ್ರಿಯ ಹೆಜ್ಜೆಯಾಗಿದೆ ಎಂದು ಪಾಟೀಲ ಹೇಳಿದರು

ಮುಟ್ಟಿನ ರಜೆಗೆ ನಿರ್ದಿಷ್ಟವಾಗಿ ಯಾವುದೇ ಕಾನೂನು ಇಲ್ಲದಿದ್ದರೂ ಹಲವಾರು ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಕಂಪನಿಗಳು ತಮ್ಮ ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ರಜೆ ನೀಡುವ ನೀತಿಗಳನ್ನು ಅಳವಡಿಸಿಕೊಂಡಿವೆ ಎಂದು ಹೇಳಿದರು.

ದೇವಿ ದರ್ಶನ

ಪ್ರಜಾವಾಣಿ ಚಿತ್ರ



ಹಾಸನದ ಹಾಸನಾಂಬ ದೇಗುಲದ ಗರ್ಭಗುಡಿಯ ಬಾಗಿಲನ್ನು ಗುರುವಾರ ಮಧ್ಯಾಹ್ನ ಶಾಸ್ತ್ರೋಕ್ತವಾಗಿ ತೆರೆಯಲಾಯಿತು

ಬಾಲಕಿ ಮೇಲೆ ಅತ್ಯಾಚಾರ, ಕೊಲೆ

ಬಲೂನ್ ಮಾರಲು ಬಂದಿದ್ದಾಗ ಘಟನೆ • ಶಂಕಿತ ವಶಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ವಸ್ತುಪ್ರದರ್ಶನ ಮೈದಾನದ ಬಳಿ ದಸರಾದಲ್ಲಿ ಬಲೂನ್ ಮಾರಾಟ ಮಾಡಲು ಬಂದಿದ್ದ ಕಲಬುರಗಿ ಜಿಲ್ಲೆಯ ಕುಟುಂಬವೊಂದರ ಬಾಲಕಿಯನ್ನು (10) ಅಪಹರಿಸಿ, ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದ್ದು, ಮೃತದೇಹವು ಸಮೀಪದ ಚರಂಡಿಯಲ್ಲಿ ದೊರಕಿದೆ. ಶಂಕೆಯ ಮೇರೆಗೆ ನಜರಾಬಾದ್ ಠಾಣೆ ಪೊಲೀಸರು ಸಿದ್ದಲಿಂಗಪುರದ ನಿವಾಸಿ ಕಾರ್ತಿಕ್ (31) ಎಂಬಾತನನ್ನು ವಶಕ್ಕೆ ಪಡೆದಿದ್ದಾರೆ. ಪೋಷಕರ ದೂರು ಆಧರಿಸಿ ಕೊಲೆ ಮತ್ತು ಪೋಕ್ಸೊ ಪ್ರಕರಣ ದಾಖಲಾಗಿದೆ.

ಇಪ್ಪತ್ತು ದಿನಗಳ ಹಿಂದೆ ನಗರಕ್ಕೆ ಬಂದಿದ್ದ ಕುಟುಂಬದವರು, ಬುಧವಾರ ರಾತ್ರಿ ಚಾಮುಂಡಿ ಬೆಟ್ಟದಲ್ಲಿ ತೆಪ್ಪೋತ್ಸವ ಮುಗಿದ ಕಾರಣ, ವ್ಯಾಪಾರ ಮುಗಿಸಿ ಗುರುವಾರ ಬೆಳಿಗ್ಗೆ ಊರಿಗೆ ಹಿಂದಿರುಗಲು ಸಿದ್ಧವಾಗಿದ್ದರು.

'ಶಂಕಿತನು ಬಾಲಕಿಯನ್ನು ಕೊಲೆ ಮಾಡಿದ ಬಳಿಕ, ವಸ್ತುಪ್ರದರ್ಶನ ಮೈದಾನದ ವಾಹನ ಪಾರ್ಕಿಂಗ್ ಸ್ಥಳದ ಹಿಂಭಾಗವಿರುವ ಚರಂಡಿ ಬಳಿ

ಬಾಲಕಿಯ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದ ಶಂಕಿತ ಆರೋಪಿ ಕಾರ್ತಿಕ್ ತಡರಾತ್ರಿ ರಸ್ತೆಯಲ್ಲಿ ತೆರಳುತ್ತಿದ್ದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ

ಮೃತದೇಹ ಎಸೆದು ಪರಾರಿಯಾಗಿದ್ದ, ಆಕೆಯ ಕಿವಿ, ಕೆನ್ನೆ, ಗಲ್ಲ ಕತ್ತರಿಸಲ್ಪಟ್ಟಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'ದೊಡ್ಡಕೆರೆ ಮೈದಾನದ ಬಳಿಯ ಇಟ್ಟಿಗೆಗೂಡಿನ ಮಾನಸರ ರಸ್ತೆಯಲ್ಲಿ ಬಾಲಕಿಯ ಕುಟುಂಬ ಟೆಂಟ್ ಹಾಕಿ ನೆಲಸಿತ್ತು. ಬುಧವಾರ ರಾತ್ರಿ 12ಕ್ಕೆ ವ್ಯಾಪಾರ ಮುಗಿಸಿ ಬಂದು ಊಟ ಮಾಡಿ, ಟೆಂಟ್‌ನಲ್ಲಿ ತಂದೆಯೊಂದಿಗೆ ಮಲಗಿದ್ದಳು. ಗುರುವಾರ ಮುಂಜಾನೆ 4ಕ್ಕೆ ಮಳೆ ಬಂದಾಗ, ಟೆಂಟ್‌ನಲ್ಲಿದ್ದವರು ಬೇರೆ ಸ್ಥಳಕ್ಕೆ ತೆರಳಲು ಎದ್ದಾಗ ಬಾಲಕಿ ನಾಪತ್ತೆಯಾಗಿದ್ದು ಗೊತ್ತಾಯಿತು. ಹುಡುಕಾಟ ನಡೆಸಿದಾಗ ಬೆಳಿಗ್ಗೆ 6.30ರ ವೇಳೆಗೆ, ಟೆಂಟ್‌ನಿಂದ 50 ಮೀ ದೂರದಲ್ಲಿ ವಿವಸ್ತ್ರಗೊಂಡ ಸ್ಥಿತಿಯಲ್ಲಿ ಬಾಲಕಿಯ ಶವ ಪತ್ತೆಯಾಯಿತು' ಎಂದು ಮಾಹಿತಿ ನೀಡಿದರು.

ಪೋಷಕರು ತಮಗೆ ಪರಿಚಯವಿದ್ದ ಆಟೊ ಚಾಲಕ ಮುಬಾರಕ್ ನೆರವಿನೊಂದಿಗೆ ನಜರಾಬಾದ್ ಠಾಣೆಗೆ ತೆರಳಿ ಮಾಹಿತಿ ನೀಡಿದರು. ಸ್ಥಳಕ್ಕೆ ಡಿಸಿಪಿಗಳಾದ ಆರ್.ಎನ್. ಬಿಂದು ಮಣಿ, ಕೆ.ಎಸ್. ಸುಂದರ್ ರಾಜ್ ಭೇಟಿ ನೀಡಿದರು. ಶ್ವಾನ ದಳ ತಂಡ ಪರಿಶೀಲನೆ ನಡೆಸಿತು. ಎಲ್ಲಾ ವ್ಯಾಪಾರಿಗಳನ್ನು ಸಿಎಆರ್ ಮೈದಾನಕ್ಕೆ ಕರೆದೊಯ್ದು ವಿಚಾರಣೆ ನಡೆಸಲಾಯಿತು.

'ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಗಳನ್ನು ಪರಿಶೀಲಿಸಿದಾಗ ಶಂಕಿತನ ಚಲನವಲನಗಳು ಪತ್ತೆಯಾಗಿವೆ. ಕಾರ್ತಿಕ್ ಈ ಹಿಂದೆ ಪ್ರಕರಣವೊಂದರಲ್ಲಿ 2 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದ. ಮದ್ಯ ವ್ಯಸನಿಯಾಗಿ ತಿರುಗಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಗುಣಮಟ್ಟ ತಪಾಸಣೆ: ರಾಷ್ಟ್ರವ್ಯಾಪಿ ಅಭಿಯಾನ

ನವದೆಹಲಿ(ಪಿಟಿಐ): ಕೆಮ್ಮಿನ ಸಿರಪ್‌ಗಳ ಪರೀಕ್ಷೆ ಹಾಗೂ ಅವುಗಳ ತಯಾರಕರ ಕುರಿತು ರಾಷ್ಟ್ರವ್ಯಾಪಿ ತಪಾಸಣೆಗೆ ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಮುಂದಾಗಿದೆ ಎಂದು ಮೂಲಗಳು ಗುರುವಾರ ಹೇಳಿವೆ.

ಕೆಮ್ಮಿನ ಸಿರಪ್ ತಯಾರಕ ಕಂಪನಿಗಳ ಪಟ್ಟಿಯನ್ನು ಒದಗಿಸುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸಿಡಿಎಸ್‌ಸಿಒ ಸೂಚನೆಯನ್ನೂ ನೀಡಿದೆ.

'ಕಲುಷಿತ' ಕೆಮ್ಮಿನ ಸಿರಪ್ ಸೇವನೆಯಿಂದ ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಮಕ್ಕಳ ಸಾವು ಸಂಭವಿಸಿರುವ ಬಗ್ಗೆ ಆರೋಪಗಳು ಕೇಳಿಬಂದ ಕಾರಣ, ಸಿಡಿಎಸ್‌ಸಿಒ ಈ ಅಭಿಯಾನ ಕೈಗೊಂಡಿದೆ.

ಸೂಚನೆ ನೀಡಿದ್ದ ಡಿಸಿಜಿಐ: 'ಕಲುಷಿತ' ಕೆಮ್ಮಿನ ಸಿರಪ್ ಸೇವಿಸಿ ಮಕ್ಕಳು ಮೃತಪಟ್ಟಿರುವ ಆರೋಪಗಳು ಕೇಳಿ ಬಂದ ಬೆನ್ನಲ್ಲೇ, ಭಾರತೀಯ ಔಷಧ ಮಹಾನಿಯಂತ್ರಕ (ಡಿಸಿಜಿಐ) ಸಂಸ್ಥೆಯು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಔಷಧ ನಿಯಂತ್ರಕರಿಗೆ ಬುಧವಾರ ಕೆಲವು ಸೂಚನೆಗಳನ್ನು ನೀಡಿತ್ತು.

2

ಮತ್ತಿಬ್ಬರು ಮಕ್ಕಳ ಸಾವು: ಮೃತರ ಸಂಖ್ಯೆ 22ಕ್ಕೆ ಏರಿಕೆ

ಛಿಂದ್ವಾಡ(ಮಧ್ಯಪ್ರದೇಶ): 'ಕಲುಷಿತ' ಕೆಮ್ಮಿನ ಸಿರಪ್ ಸೇವಿಸಿದ್ದರಿಂದ ಮೂತ್ರಪಿಂಡ ಸೋಂಕು ಕಾಣಿಸಿಕೊಂಡು ರಾಜ್ಯದ ಇಬ್ಬರು ಮಕ್ಕಳು ನಾಗ್ಪುರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಇದರೊಂದಿಗೆ, ಕೆಮ್ಮಿನ ಸಿರಪ್ ಸೇವನೆ ಜೊತೆ ನಂಟಿನ ಮಕ್ಕಳ ಸಾವಿನ ಸಂಖ್ಯೆ 22ಕ್ಕೆ ಏರಿದಂತಾಗಿದೆ. ಬುಧವಾರ ಸಂಜೆ ವಿಶಾಲ್(5) ಹಾಗೂ ತಡರಾತ್ರಿ ಮಯಂಕ್ ಸೂರ್ಯವಂಶಿ (4) ಮೃತಪಟ್ಟರು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಧೀರೇಂದ್ರ ಸಿಂಗ್ ನೇತ್ರಿ ಹೇಳಿದ್ದಾರೆ. ಮೃತ ಮಕ್ಕಳು ಛಿಂದ್ವಾಢ ಜಿಲ್ಲೆ ಪರಾಸಿಯಾ ಪಟ್ಟಣದವರಾಗಿದ್ದರು.

ರಂಗನಾಥನ್ ಬಂಧನ

'ಕೋಲ್ಡ್ರಿಫ್' ಕೆಮ್ಮಿನ ಸಿರಪ್ ತಯಾರಿಸುವ ಕಂಪನಿ ಸ್ರೇಸನ್ ಫಾರ್ಮಾಸ್ಯುಟಿಕಲ್ಸ್‌ನ ಮಾಲೀಕ ಡಾ.ಜಿ.ರಂಗನಾಥನ್ ಅವರನ್ನು ಮಧ್ಯಪ್ರದೇಶ ಪೊಲೀಸರು ಚೆನ್ನೈನಲ್ಲಿ ಗುರುವಾರ ನಸುಕಿನಲ್ಲಿ ಬಂಧಿಸಿದ್ದಾರೆ.

ನಾಗ್ಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಮೋಹನ್ ಯಾದವ್, ರಂಗನಾಥನ್ ಅವರ ಬಂಧನವನ್ನು ಖಚಿತಪಡಿಸಿದರು.

2

3 ತಿಂಗಳಲ್ಲಿ ಅರ್ಜಿ ಇತ್ಯರ್ಥಕ್ಕೆ ನಿರ್ದೇಶನ

ನವದೆಹಲಿ: ಬೇಲೆಕೇರಿ ಬಂದರಿನಲ್ಲಿ ಜಪ್ತಿ ಮಾಡಿರುವ ಅದಿರನ್ನು ಬಿಡುಗಡೆ ಮಾಡುವ ಸಂಬಂಧದ ಪ್ರಕರಣದ ವಿಚಾರಣೆಯನ್ನು ಮೂರು ತಿಂಗಳಲ್ಲಿ ಮುಗಿಸಬೇಕು ಎಂದು ಕರ್ನಾಟಕ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ವಿವರ 3

ಒತ್ತೆಯಾಳುಗಳ ಬಿಡುಗಡೆಗೆ ಒಪ್ಪಿಗೆ

ಕೈರೊ (ಎಪಿ/ಎಎಫ್‌ಪಿ): ಗಾಜಾದಲ್ಲಿ ಮೊದಲ ಹಂತದ ಶಾಂತಿ ಸ್ಥಾಪನೆ ಯೋಜನೆ ಜಾರಿಗೆ ಇಸ್ರೇಲ್ ಮತ್ತು ಹಮಾಸ್ ಬಂಡುಕೋರ ಸಂಘಟನೆ ಗುರುವಾರ ಒಪ್ಪಿಗೆ ಸೂಚಿಸಿವೆ.

ಶಾಂತಿ ಒಪ್ಪಂದದ ಪ್ರಕಾರ ಹಮಾಸ್ ತನ್ನ ಬಳಿಯಿರುವ ಉಳಿದ ಎಲ್ಲ 20 ಜೀವಂತ ಒತ್ತೆಯಾಳುಗಳನ್ನು ಬಿಡುಗಡೆಗೊಳಿಸಲಿದ್ದು, ಅದಕ್ಕೆ ಪ್ರತಿಯಾಗಿ ಇಸ್ರೇಲ್ ನೂರಾರು ಪ್ಯಾಲೆಸ್ಟೀನಿಯನ್ ಕೈದಿಗಳನ್ನು ಬಿಡುಗಡೆ ಮಾಡಲಿದೆ. ಒಪ್ಪಂದದ ಭಾಗವಾಗಿ ಗಾಜಾದ ಕೆಲವು ಪ್ರದೇಶಗಳಿಂದ ಇಸ್ರೇಲ್ ತನ್ನ ಸೇನೆಯನ್ನು ಹಿಂತೆಗೆದುಕೊಳ್ಳಲಿದೆ.

ಗಾಜಾದಲ್ಲಿ ಯುದ್ಧ ಕೊನೆಗೊಳಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 20 ಅಂಶಗಳ ಯೋಜನೆಯನ್ನು ಮುಂದಿಟ್ಟಿದ್ದರು. ಶಾಂತಿ ಸ್ಥಾಪನೆ ಯೋಜನೆಯ ಮೊದಲ ಹಂತದ ಜಾರಿಗೆ ಈಜಿಪ್ಟ್ ರಾಜಧಾನಿ ಕೈರೊದ ಶರ್ಮ್ ಎಲ್ ಶೇಖ್‌ನಲ್ಲಿ ಇಸ್ರೇಲ್ ಮತ್ತು ಹಮಾಸ್ ನಿಯೋಗದ ನಡುವೆ ಮೂರು ದಿನಗಳಿಂದ ನಡೆದ ಮಾತುಕತೆ ಕೊನೆಗೂ ಫಲಪ್ರದವಾಗಿದೆ.

2

ಬೆಳ್ಳಿ ಧಾರಣೆ ₹6 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಚಿನ್ನದ ಬೆಲೆ ಯಥಾಸ್ಥಿತಿಯಲ್ಲಿದೆ.

ಬೆಳ್ಳಿ ದರ ಕೆ.ಜಿಗೆ ₹6 ಸಾವಿರ ಹೆಚ್ಚಳವಾಗಿ, ₹1.63 ಲಕ್ಷದಂತೆ ಮಾರಾಟವಾಗಿದೆ. ಅಕ್ಟೋಬರ್ 6ರಂದು ಬೆಳ್ಳಿ ದರ ಕೆ.ಜಿಗೆ ₹7,400ರಷ್ಟು ಹೆಚ್ಚಳವಾಗಿತ್ತು. ಒಂದೇ ವಾರದಲ್ಲಿ ಎರಡನೇ ಬಾರಿಗೆ ತೀವ್ರ ಪ್ರಮಾಣದಲ್ಲಿ ಬೆಲೆ ಏರಿಕೆ ಆಗಿದೆ.

ವಿವರ 6

‘ನಮಗಿದು ಮುಗಿದ ಅಧ್ಯಾಯ’

ಶೂ ಎಸೆಯಲು ಯತ್ನಿಸಿದ್ದು ಆಘಾತ ತಂದಿದೆ: ಸಿಜೆಐ ಗವಾಯಿ

ನವದೆಹಲಿ/ಠಾಣೆ (ಪಿಟಿಐ): ‘ಆ ವಕೀಲನು ನನ್ನ ಮೇಲೆ ಶೂ ಎಸೆಯಲು ಯತ್ನಿಸಿದ್ದು ನನಗೆ ಮತ್ತು ನನ್ನ ಸಹೋದರ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿಗೆ ಆಘಾತ ತಂದಿತು. ಆದರೆ, ಈಗ ಅದೊಂದು ಮುಗಿದುಹೋದ ಅಧ್ಯಾಯ’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಅಭಿಪ್ರಾಯಪಟ್ಟರು.

ಅರ್ಜಿಯೊಂದರ ವಿಚಾರಣೆ ಸಂದರ್ಭದಲ್ಲಿ ಶೂ ಎಸೆಯಲು ಯತ್ನಿಸಿದ ಘಟನೆ ಕುರಿತು ವಕೀಲರು ಮತ್ತು ಸಿಜೆಐ ನಡುವೆ ಪುಟ್ಟ ಸಂಭಾಷಣೆಗೆ ನ್ಯಾಯಾಲಯದ ಸಭಾಂಗಣವು ಗುರುವಾರ ಸಾಕ್ಷಿಯಾಯಿತು.

ಸಿಜೆಐ ಗವಾಯಿ ಅವರೊಂದಿಗೆ ಪೀಠದಲ್ಲಿದ್ದ ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಅವರು ಮೊದಲಿಗೆ ಈ ವಿಚಾರವನ್ನು ಪ್ರಸ್ತಾಪಿಸಿದರು. ‘ವಕೀಲನ ಕುರಿತಾಗಿ ತೆಗೆದುಕೊಂಡ ನಿರ್ಧಾರ ಸೂಕ್ತವಾಗಲಿಲ್ಲ. ನನಗೆ ಈ ಬಗ್ಗೆ ಆಕ್ಷೇಪಗಳಿವೆ’ ಎಂದರು. ‘ಇದು ಖಂಡಿತ ತಮಾಷೆಯ ವಿಚಾರವಾಗಿರಲಿಲ್ಲ. ಸುಪ್ರೀಂ ಕೋರ್ಟ್‌ಗೆ ಅವಮಾನ ಮಾಡುವಂತ ಕೆಲಸ ಇದು. ಆತನ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲೇಬೇಕಿತ್ತು’ ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ದನಿ ಗೂಡಿಸಿ, ‘ಇದು ಕ್ಷಮಿಸಲಾಗದ ವರ್ತನೆ. ಆದರೆ, ಘಟನೆ ನಡೆದಾಗ ಸಿಜೆಐ ಅವರು ನಡೆದುಕೊಂಡಿದ್ದು ಮಾತ್ರ ಅವರ ಘನತೆಗೆ ತಕ್ಕುದಾಗಿತ್ತು’ ಎಂದರು.

‘ಇಂಥ ಆಘಾತಕಾರಿ ವಿಚಾರದ ಬಗ್ಗೆ ಹೆಚ್ಚು ಚರ್ಚೆ ಮಾಡುವುದು ಬೇಡ. ವಿಚಾರಣೆಯನ್ನು ಮುಂದುವರಿಸೋಣ’ ಎಂದು ನ್ಯಾಯಾಲದ ಸಭಾಂಗಣದಲ್ಲಿಯೇ ಇದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ಅವರಿಗೆ ಹೇಳಿದರು. ಈ ಬಳಿಕ ಸಿಜೆಐ ಗವಾಯಿ ಅವರು ಮತ್ತೊಮ್ಮೆ ಮಾತಿಗಿಳಿದು, ‘ನಮಗೆ ಇದೊಂದು ಮರೆತುಹೋದ ಅಧ್ಯಾಯ’ ಎನ್ನುತ್ತಾ ವಿಚಾರಣೆಯನ್ನು ಮುಂದುವರಿಸಿದರು.

> ಸಿಜೆಐ ಮೇಲೆ ದಾಳಿ ಬಳಿಕ ಸಾಮಾಜಿಕ ಜಾಲತಾಣಗಳಲ್ಲಿ ಅವರ ವಿರುದ್ಧ ಬೆದರಿಕೆಗಳು ಬಂದವು. ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲಾಗಲಿಲ್ಲ. ಇದು ಯೋಜನಾಬದ್ಧವಾದ ಪಿತೂರಿ
>
> **ಅರವಿಂದ ಕೇಜ್ರಿವಾಲ್,** ಎಎಪಿ ಮುಖ್ಯಸ್ಥ

ಆಕ್ಷೇಪಾರ್ಹ ವಿಡಿಯೊ: ಪ್ರಕರಣ

ಸಿಜೆಐ ಗವಾಯಿ ಅವರ ಕುರಿತು ಆಕ್ಷೇಪಾರ್ಹ ವಿಚಾರಗಳಿರುವ ಎಐ ವಿಡಿಯೊ ಹಂಚಿಕೊಂಡ ಮಾಡಿದ ನವಿ ಮುಂಬೈನ ಪನ್‌ವೇಲ್ ನಿವಾಸಿಯೊಬ್ಬರ ವಿರುದ್ಧ ಪೊಲೀಸರು ಭಾರತೀಯ ನ್ಯಾಯ ಸಂಹಿತೆ ಮತ್ತು ಎಸ್‌ಟಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಗಳಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಪನ್‌ವೇಲ್ ಪ್ರದೇಶದ ವ್ಯಕ್ತಿಯೊಬ್ಬರು ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೊವನ್ನು ಗಮನಿಸಿ ಪೊಲೀಸರಿಗೆ ಮಂಗಳವಾರ ದೂರು ನೀಡಿದ್ದಾರೆ. ಎಲ್ಲ ಜಾಲತಾಣ ಮಾಧ್ಯಮಗಳಿಂದ ಈ ವಿಡಿಯೊವನ್ನು ತೆಗೆದು ಹಾಕುವಂತೆ ಪೊಲೀಸರು ವಿವಿಧ ಜಾಲತಾಣ ವೇದಿಕೆಗಳಿಗೆ ಸೂಚಿಸಿದ್ದಾರೆ.

ರಾಕೇಶ್ ಸದಸ್ಯತ್ವ ರದ್ದು

ಸಿಜೆಐ ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ಅವರ ಸದಸ್ಯತ್ವವನ್ನು ತಕ್ಷಣದಿಂದಲೇ ಜಾರಿ ಬರುವಂತೆ ರದ್ದು ಮಾಡಲಾಗಿದೆ ಎಂದು ಸುಪ್ರೀಂ ಕೋರ್ಟ್ ವಕೀಲರ ಸಂಘ ಹೇಳಿದೆ. ಭಾರತೀಯ ವಕೀಲ ಪರಿಷತ್ತು ಕೂಡ ಇವರ ಪರವಾನಗಿಯನ್ನು ರದ್ದು ಮಾಡಿದೆ.

‘ರಾಕೇಶ್ ಅವರು ಎಸಗಿದ್ದು ಗಂಭೀರವಾದ, ಖಂಡನೀಯ, ಅಶಿಸ್ತಿನ ಮತ್ತು ಹದ್ದುಮೀರಿದ ವರ್ತನೆಯಾಗಿದೆ. ಇಂಥ ವರ್ತನೆಯು ನ್ಯಾಯಾಂಗ ಸ್ವಾತಂತ್ರ್ಯದ ಮೇಲಿನ ನೇರ ದಾಳಿ. ವೃತ್ತಿಪರವಾಗಿರುವ ನೀತಿ, ಶಿಷ್ಟಾಚಾರವನ್ನು ಈ ಕೃತ್ಯವು ಉಲ್ಲಂಘಿಸುತ್ತದೆ ಮತ್ತು ಸುಪ್ರೀಂ ಕೋರ್ಟ್‌ನ ಘನತೆಗೆ ಕುಂದು ತರುತ್ತದೆ’ ಎಂದು ಸಂಘ ಕಟು ಮಾತುಕಗಳಲ್ಲಿ ಹೇಳಿದೆ.

ಪ್ರಜಾವಾಣಿ ದೀಪಾವಳಿ 2025ಕಥೆ - ಕವನ ಸ್ಪರ್ಧೆ ಫಲಿತಾಂಶ ಪ್ರಕಟ

ದಯಾನಂದಗೆ ಕಥಾ, ಲಕ್ಷ್ಮಣ ವಿ.ಎ.ಗೆ ಕವನ ಪ್ರಶಸ್ತಿ

ಬೆಂಗಳೂರು: 2025ನೇ ಸಾಲಿನ ಪ್ರತಿಷ್ಠಿತ ‘ಪ್ರಜಾವಾಣಿ ದೀಪಾವಳಿ ಕಥೆ ಮತ್ತು ಕವನ ಸ್ಪರ್ಧೆ’ಯ ಫಲಿತಾಂಶ ಪ್ರಕಟವಾಗಿದೆ. ದಯಾನಂದ ಅವರ ಕಥೆ ‘ಹಾತೆಮರಿಗೆ ಹಾರುವುದ ಕಲಿಸಲು ರೆಕ್ಕೆಯೇ ಬೇಕಿಲ್ಲ’ ಹಾಗೂ ಡಾ.ಲಕ್ಷ್ಮಣ ವಿ.ಎ. ಅವರ ಕವನ ‘ಬಾಳಿಕೆ’ ಆಯಾ ಸ್ಪರ್ಧೆಯಲ್ಲಿ ಮೊದಲ ಬಹುಮಾನವನ್ನು ಪಡೆದುಕೊಂಡಿವೆ.

ಕಥಾಸ್ಪರ್ಧೆಯಲ್ಲಿ ಪ್ರಸಾದ್ ಶೆಣೈ ಆರ್.ಕೆ. ಅವರ ‘ಗುಡು ಗುಡು ಗೊಮ್ಮಟದೇವ’ ಹಾಗೂ ಮಹಾದೇವ ಹಡಪದ ಅವರ ‘ತಾಯಿಪುರಾಣ’ ಕಥೆಗಳು ಕ್ರಮವಾಗಿ ಎರಡು ಮತ್ತು ಮೂರನೇ ಬಹುಮಾನಕ್ಕೆ ಭಾಜನವಾಗಿವೆ. ಬಿ.ಶ್ರೀನಿವಾಸ ಅವರ ‘ಶವಪೆಟ್ಟಿಗೆ’, ಜಿ.ಸಿ.ರವಿ ಅವರ ‘ಕೈ ಹಿಡಿದು ನಡೆಸೆನ್ನ ತಂದೆ’, ಇಂದ್ರಕುಮಾರ್ ಎಚ್.ಬಿ. ಅವರ ‘ಸುತ್ತಿಹುದು ಸುಳಿಯಿಹುದು ಸತ್ತಿಹುದು ಸತಾಯಿಸುತಿಹುದು’, ಎಂ.ಎಸ್. ಶೇಖರ್ ಅವರ ‘ವರಹಾ ಪ್ರಸಂಗ’ ಹಾಗೂ ವಿಕಾಸ್ ನೇಗಿಲೋಣಿ ಅವರ ‘ಅಂತಿಮ ಯಾತ್ರೆ’ ಕಥೆಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ.

ಕವನ ಸ್ಪರ್ಧೆಯಲ್ಲಿ ಟಿ.ಎಚ್. ಲವಕುಮಾರ ಅವರ ‘ಹರಾಜು’ ಮತ್ತು ಪಿ.ನಂದಕುಮಾರ್ ಅವರ ‘ಕಲ್ಯಾಣ ಮುಡಿದಿದೆ ಮುತ್ತಿನುಂಗುರ ಸಾಲು’ ಕವನಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ. ಸ್ಮಿತಾ ಅಮೃತರಾಜ್ ಸಂಪಾಜೆ ಅವರ ‘ಸ್ಥಿತಿ’, ದೀಪ್ತಿ ಭದ್ರಾವತಿ ಅವರ ‘ಒಂದು ಭೇಟಿ ಎಷ್ಟು ಕಷ್ಟ’, ರೇಣುಕಾ ರಮಾನಂದ ಅವರ ‘ತುಲಾಭಾರ’, ಸದಾಶಿವ ಸೊರಟೂರು ಅವರ ‘ವ್ಯಾಕರಣ ಸುಳ್ಳು ಹೇಳಬಾರದು’ ಹಾಗೂ ಶಂಕರ್ ಸಿಹಿಮೊಗ್ಗೆ ಅವರ ‘ಅರ್ಥ’ ಕವಿತೆಗಳು ತೀರ್ಪುಗಾರರ ಮೆಚ್ಚುಗೆ ಗಳಿಸಿವೆ.

ಸಾಹಿತಿ ಪ್ರೊ.ಸಬಿಹಾ ಭೂಮಿಗೌಡ ಹಾಗೂ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರು ಕಥಾಸ್ಪರ್ಧೆಯ ತೀರ್ಪುಗಾರರಾಗಿದ್ದರು. ಕವಿ ವಿಕ್ರಮ ವಿಸಾಜಿ ಹಾಗೂ ಕವಯತ್ರಿ ಗೀತಾ ವಸಂತ ಅವರು ಕವನ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ❖

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2025

ಬಹುಮಾನದ ವಿವರ

ಕಥಾ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನ ಪಡೆದ ಕಥೆಗಳಿಗೆ ಕ್ರಮವಾಗಿ ₹20 ಸಾವಿರ, ₹15 ಸಾವಿರ ಹಾಗೂ ₹10 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ಲಭಿಸಲಿದೆ. ಕವನ ಸ್ಪರ್ಧೆ ಮೊದಲ ಮೂರು ಸ್ಥಾನ ಪಡೆದ ಕವನಗಳಿಗೆ ಕ್ರಮವಾಗಿ ₹5,000, ₹3,000 ಹಾಗೂ ₹2,500 ನಗದು ಹಾಗೂ ಪ್ರಶಸ್ತಿ ಪತ್ರ ದೊರೆಯಲಿದೆ.

ಕಥಾ ಸ್ಪರ್ಧೆ

ದಯಾನಂದ

ಪ್ರಸಾದ್ ಶೆಣೈ ಆರ್.ಕೆ.

ಮಹಾದೇವ ಹಡಪದ

ಕವನ ಸ್ಪರ್ಧೆ

ಡಾ.ಲಕ್ಷ್ಮಣ ವಿ.ಎ.


ಟಿ.ಎಚ್.ಲವಕುಮಾರ

ಪಿ.ನಂದಕುಮಾರ್

ತೀರ್ಪುಗಾರರ ಮಾತು

ಇಲ್ಲಿನ ಕಥೆಗಳ ಓದು, ಸಮಕಾಲೀನ ಸಮಾಜದ ವಿದ್ಯಮಾನಗಳಿಗೆ ನಮ್ಮನ್ನು ಮುಖಾಮುಖಿಯಾಗಿಸುತ್ತ, ಆ ಬೆಳವಣಿಗೆಗಳಲ್ಲಿ ನಮ್ಮ ಜವಾಬ್ದಾರಿಯನ್ನು ಪ್ರಶ್ನಿಸುವಂತೆ, ಸಾಮಾಜಿಕ ಸ್ವಾಸ್ಥ್ಯಕ್ಕೆ ನಮ್ಮ ಕೊಡುಗೆ ಏನಾಗಿರಬೇಕೆಂಬ ವಿಚಾರದಲ್ಲಿ ಸೂಕ್ಷ್ಮಜ್ಞರನ್ನಾಗಿಸುತ್ತದೆ

ಪ್ರೊ.ಸಬಿಹಾ ಭೂಮಿಗೌಡ, ಕಥಾಸ್ಪರ್ಧೆ ವಿಭಾಗ

ಹೆಚ್ಚು ಕಡಿಮೆ ಒಂದು ದಶಕದಿಂದೀಚೆಗೆ ಕನ್ನಡದಲ್ಲಿ ಕಥೆ ಕಾದಂಬರಿಗಳ ಸುಗ್ಗಿಯನ್ನೇ ಕಾಣುತ್ತಿದ್ದೇವೆ. ಹೊಸ ತಲೆಮಾರಿನ ಕಥನಕಾರರು ಕಥೆ, ಕಾದಂಬರಿ ಪ್ರಕಾರಗಳ ದಿಗಂತವನ್ನು ಅಚ್ಚರಿ ಎನಿಸುವಂತೆ ವಿಸ್ತರಿಸುತ್ತಿದ್ದಾರೆ.



ಅಗ್ರಹಾರ ಕೃಷ್ಣಮೂರ್ತಿ, ಕಥಾಸ್ಪರ್ಧೆ ವಿಭಾಗ

ಕೆಲವು ಕವಿತೆಗಳ ಒಳ ಬಿಕ್ಕುಗಳು, ಹೇಳಿಕೊಳ್ಳಲಾರದ ಸಂಕಟಗಳು, ಸಮಾಜದ ಒಳರಚನೆಗಳಲ್ಲಿ ಅಡಗಿರುವ ಹಿಂಸೆಯ ನೆಲೆಗಳು ಸೂಕ್ಷ್ಮವಾದ ಹೊಸ ನುಡಿಗಟ್ಟಿನಲ್ಲಿ ಕಾವ್ಯದ ಅನುಭವವಾಗಿ ರೂಪುಗೊಂಡಿದ್ದವು. ಕೊನೆಗೆ ಅವು ಪುಟಗಳಲ್ಲಿ ಮುಗಿದರೂ ಮನಸ್ಸಿನಲ್ಲಿ ಬೆಳೆಯತೊಡಗಿದವು.

ವಿಕ್ರಮ ವಿಸಾಜಿ, ಕವನಸ್ಪರ್ಧೆ ವಿಭಾಗ

ಇತ್ತೀಚೆಗೆ ಬಹುಮಾನ ಗೆಲ್ಲುವ ಹುಕಿಗೆ ಬಿದ್ದಂತ ಬರವಣಿಗೆಗಳು ಹೆಚ್ಚುತ್ತಿವೆ. ಹೀಗೆ ಬರೆದರೆ ಗಮನಸೆಳೆಯಬಹುದೆಂಬ ‘ಪ್ಯಾಟರ್ನ್’ ಒಂದನ್ನು ರೂಪಿಸಿಕೊಳ್ಳಲಾಗುತ್ತಿದೆ. ಆ ಸವಕಲು ಜಾಡಿನಲ್ಲಿ ನಡೆಯುವ ಕಾವ್ಯ ಜೀವಾಂತಃಕರಣವನ್ನು ಸೋಕದೇ ರೆಡಿಮೇಡ್ ಹೂವಿನಂತೆ ಕಂಗೊಳಿಸುತ್ತದೆ.

ಗೀತಾ ವಸಂತ, ಕವನಸ್ಪರ್ಧೆ ವಿಭಾಗ

ಕೇರಳ ವಿಧಾನಸಭೆ ಅಧಿವೇಶನದಲ್ಲಿ ಅಶಿಸ್ತಿನ ವರ್ತನೆ

ಮೂವರು ‘ಕೈ’ ಶಾಸಕರ ಅಮಾನತು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಅಶಿಸ್ತಿನ ವರ್ತನೆ ಹಾಗೂ ಮಾರ್ಷಲ್‌ಗಳ ಮೇಲೆ ಹಲ್ಲೆ ಮಾಡಿದ ಆರೋಪಗಳ ಮೇಲೆ ಕಾಂಗ್ರೆಸ್ ಪಕ್ಷದ ಮೂವರು ಶಾಸಕರನ್ನು ಕೇರಳ ವಿಧಾನಸಭೆಯ ಪ್ರಸಕ್ತ ಅಧಿವೇಶನದಿಂದ ಗುರುವಾರ ಅಮಾನತುಗೊಳಿಸಲಾಗಿದೆ.

ಶಾಸಕರಾದ ರೋಜಿ ಎಂ.ಜಾನ್, ಎಂ.ವಿನ್ಸೆಂಟ್ ಹಾಗೂ ಸನೀಶ್ ಕುಮಾರ್ ಜೋಸೆಫ್ ಅಮಾನತುಗೊಂಡಿರುವ ಶಾಸಕರು.

ಈ ಘಟನೆ ವೇಳೆ, ಮುಖ್ಯ ಮಾರ್ಷಲ್ ಅವರಿಗೆ ಗಾಯಗಳಾಗಿವೆ. ಸಂಸದೀಯ ವ್ಯವಹಾರಗಳ ಸಚಿವ ಎಂ.ಬಿ.ರಾಜೇಶ್ ಅವರು ಮಂಡಿಸಿದ ಗೊತ್ತುವಳಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಶಬರಿಮಲೆ ದೇವಸ್ಥಾನದಲ್ಲಿನ ಚಿನ್ನ ಕಳುವು ವಿಚಾರವಾಗಿ ವಿಧಾನಸಭೆಯಲ್ಲಿ ನಡೆಯುತ್ತಿರುವ ಜಟಾಪಟಿಯಿಂದಾಗಿ ಸತತ ನಾಲ್ಕನೇ ದಿನವೂ ಕಲಾಪಕ್ಕೆ ಅಡ್ಡಿಯುಂಟಾಯಿತು.

ಕಲಾಪ ಆರಂಭಗೊಳ್ಳುತ್ತಿದ್ದಂತೆಯೇ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಅವರು ವಿಷಯ ಪ್ರಸ್ತಾಪಿಸಿ, ‘ದೇವಸ್ವಂ ಸಚಿವ ವಿ.ಎನ್.ವಾಸವನ್ ಅವರು ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ, ಕಲಾಪ ನಡೆಸಲು ಕಾಂಗ್ರೆಸ್ ನೇತೃತ್ವದ ವಿಪಕ್ಷ ಪಾಳಯ ಯುಡಿಎಫ್ ಅವಕಾಶ ನೀಡುವುದಿಲ್ಲ’ ಎಂದರು.

ಇದರ ಬೆನ್ನಲ್ಲೇ, ವಿರೋಧ ಪಕ್ಷಗಳ ಶಾಸಕರು ವಿಧಾನಸಭಾಧ್ಯಕ್ಷರ ಪೀಠದ ಮುಂದೆ ಜಮಾಯಿಸಿ, ಘೋಷಣೆಗಳನ್ನು ಕೂಗಲು ಆರಂಭಿಸಿದರು. ಘೋಷಣಾ ವಾಕ್ಯಗಳಿರುವ ಬ್ಯಾನರ್‌ಗಳನ್ನು ಹಿಡಿದು ಪ್ರತಿಭಟಿಸಿದರು.

ಆಗ, ವಿಪಕ್ಷಗಳ ಶಾಸಕರ ಹಿಡಿದಿರುವ ಬ್ಯಾನರ್‌ಗಳನ್ನು ವಶಪಡಿಸಿಕೊಳ್ಳುವಂತೆ ವಿಧಾನಸಭಾಧ್ಯಕ್ಷ ಎ.ಎನ್. ಶಂಸೀರ್ ಅವರು ಮಾರ್ಷಲ್‌ಗಳಿಗೆ ಸೂಚಿಸಿದರು. ಇದು, ಸದನದಲ್ಲಿ ಗದ್ದಲಕ್ಕೆ ಕಾರಣವಾಯಿತು. ಬಳಿಕ ಕೆಲ ಕಾಲ ಕಲಾಪವೂ ಸ್ಥಗಿತಗೊಂಡಿತು.

ಮತ್ತೆ ಕಲಾಪ ಆರಂಭಗೊಂಡಾಗ ಮಾತನಾಡಿದ ವಿಧಾನಸಭಾಧ್ಯಕ್ಷ ಶಂಸೀರ್, ‘ಗಲಾಟೆ ವೇಳೆ, ವಿರೋಧ ಪಕ್ಷಗಳ ಶಾಸಕರು ನಡೆಸಿದ ಹಲ್ಲೆಯಿಂದಾಗಿ ಮುಖ್ಯ ಮಾರ್ಷಲ್ ಅವರಿಗೆ ಗಾಯಗಳಾಗಿವೆ’ ಎಂದು ಸದನಕ್ಕೆ ತಿಳಿಸಿದರು.

ನಂತರ, ಮೂವರು ಕಾಂಗ್ರೆಸ್ ಶಾಸಕರನ್ನು ಪ್ರಸಕ್ತ ಅಧಿವೇಶನದಿಂದ ಅಮಾನತುಗೊಳಿಸಬೇಕು ಎಂಬ ಗೊತ್ತುವಳಿಯನ್ನು ಸಚಿವ ರಾಜೇಶ್ ಮಂಡಿಸಿದರು. ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಿರಾಧಾರ: ಇನ್ನೊಂದೆಡೆ, ವಿರೋಧ ಪಕ್ಷಗಳ ಶಾಸಕರು, ಕಲಾಪವನ್ನು ಬಹಿಷ್ಕರಿಸಿದ್ದಕ್ಕೂ ಸದನ ಸಾಕ್ಷಿಯಾಯಿತು.

ತಮ್ಮನ್ನು ಅಮಾನತುಗೊಳಿಸಿರುವ ಕ್ರಮಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಶಾಸಕರು, ‘ಮಾರ್ಷಲ್‌ಗಳ ಮೇಲೆ ಹಲ್ಲೆ ಮಾಡಿದ್ದೇವೆ ಎಂಬ ಆರೋಪ ನಿರಾಧಾರ’ ಎಂದು ಹೇಳಿದ್ದಾರೆ.

ರಾಜತಾಂತ್ರಿಕ ವಜಾ

ವಾಷಿಂಗ್ಟನ್ (ಎಪಿ): ಕಮ್ಯುನಿಸ್ಟ್ ಪಕ್ಷದೊಂದಿಗೆ ನಂಟು ಹೊಂದಿದ್ದಾರೆ ಎನ್ನಲಾದ ಚೀನಾದ ಮಹಿಳೆಯೊಬ್ಬರನ್ನು ಪ್ರೀತಿಸುತ್ತಿದ್ದ ಕಾರಣಕ್ಕೆ ಅಮೆರಿಕದ ರಾಜತಾಂತ್ರಿಕರೊಬ್ಬರನ್ನು ವಜಾಗೊಳಿಸಲಾಗಿದೆ.

ಗುಣಮಟ್ಟ ತಪಾಸಣೆ: ರಾಷ್ಟ್ರವ್ಯಾಪಿ ಅಭಿಯಾನ

ಒಂದನೇ ಪುಟದಿಂದ...

‘ಔಷಧೀಯ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವುದಕ್ಕೂ ಮುನ್ನ, ಅವುಗಳ ತಯಾರಿಕೆಗೆ ಬಳಸುವ ಕಚ್ಚಾಪದಾರ್ಥಗಳ ಪರಿಶೀಲನೆ ಹಾಗೂ ತಯಾರಿಕೆ ವೇಳೆ ನಿರ್ದಿಷ್ಟ ಪ್ರಕ್ರಿಯೆ ಪಾಲನೆ ಮಾಡಲಾಗುತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು’ ಎಂದು ಡಿಸಿಜಿಐ ಸೂಚನೆ ನೀಡಿತ್ತು.

‘ಕೆಲ ಕಂಪನಿಗಳು ಕೆಮ್ಮಿನ ಸಿರಪ್ ತಯಾರಿಸುವ ವೇಳೆ, ಸಿರಪ್‌ನ ಪ್ರತಿ ಬ್ಯಾಚ್‌ಗೆ ಸಂಬಂಧಿಸಿ ಬಳಸುವ ರಾಸಾಯನಿಕ ಪದಾರ್ಥಗಳ ಪರೀಕ್ಷೆ ನಡೆಸದಿರುವುದು ತಪಾಸಣೆ ವೇಳೆ ಕಂಡುಬಂದಿದೆ’ ಎಂದೂ ಹೇಳಿತ್ತು.

> ಮಕ್ಕಳ ಸಾವುಗಳ ವಿಚಾರವಾಗಿ ಕಾಂಗ್ರೆಸ್ ಪಕ್ಷ ಟೀಕೆ ಮಾಡುತ್ತಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ರಾಹುಲ್ ಗಾಂಧಿ ಅವರು ತಮಿಳುನಾಡಿಗೆ ಹೋಗಿ ಖುದ್ದಾಗಿ ಪರಿಶೀಲಿಸಲಿ.
>
> **ಮೋಹನ್ ಯಾದವ್**, ಮಧ್ಯಪ್ರದೇಶ ಮುಖ್ಯಮಂತ್ರಿ

ರಂಗನಾಥನ್ ಬಂಧನ

ಒಂದನೇ ಪುಟದಿಂದ...

‘ರಂಗನಾಥನ್ ಅವರನ್ನು ಚೆನ್ನೈನ ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಲಾಗುವುದು. ಟ್ರಾನ್ಸಿಟ್ ರಿಮ್ಯಾಂಡ್ ಪಡೆದು, ಪರಾಸಿಯಾಕ್ಕೆ ಕರೆದುಕೊಂಡು ಬರಲಾಗುವುದು’ ಎಂದು ಡಿಎಸ್‌ಪಿ ಜಿತೇಂದ್ರ ಸಿಂಗ್ ಜಾಟ್ ಹೇಳಿದ್ದಾರೆ. ಶ್ರೇಸನ್ ಫಾರ್ಮಾಸ್ಯುಟಿಕಲ್ಸ್‌ನ ಕೆಲ ದಾಖಲೆಗಳನ್ನು ಕೂಡ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಲೋಪಗಳು?

- ಔಷಧೀಯ ಉತ್ಪನ್ನಗಳ ತಯಾರಿಕೆಗೆ ಸಂಬಂಧಿಸಿ ಮಾರ್ಗಸೂಚಿಗಳನ್ನು ಯಾವ ರಾಜ್ಯವೂ ಈ ಮಾರ್ಗಸೂಚಿಗಳನ್ನು ಪಾಲನೆ ಮಾಡಿಲ್ಲ
- ಔಷಧೀಯ ಉತ್ಪನ್ನಗಳ ತಯಾರಿಕೆಗೆ ಪರವಾನಗಿ ನೀಡುವ ಮತ್ತು ನಿಯಂತ್ರಣವನ್ನು ಶಿಸ್ತುಬದ್ಧಗೊಳಿಸಲು ‘ನ್ಯಾಷನಲ್ ಡ್ರಗ್ಸ್ ಲೈಸೆನ್ಸಿಂಗ್ ಸಿಸ್ಟಮ್’ (ಒಎನ್‌ಡಿಎಲ್‌ಎಸ್) ಅನ್ನು ರೂಪಿಸಲಾಗಿದೆ. ಈ ವರೆಗೆ 18 ರಾಜ್ಯಗಳ ಔಷಧ ನಿಯಂತ್ರಣ ಪ್ರಾಧಿಕಾರಗಳು ಮಾತ್ರ ಈ ವ್ಯವಸ್ಥೆಯನ್ನು ಅನುಸರಿಸುತ್ತಿವೆ

‘ತಮಿಳುನಾಡು ಸರ್ಕಾರ ಸಹಕರಿಸುತ್ತಿಲ್ಲ’

ಭೋಪಾಲ್/ನಾಗ್ಪುರ: ಕೆಮ್ಮಿನ ಸಿರಪ್ ಸೇವಿಸಿ 22 ಮಕ್ಕಳ ಮೃತಪಟ್ಟಿರುವ ಕುರಿತು ಮಧ್ಯಪ್ರದೇಶ ಸರ್ಕಾರ ಕೈಗೊಂಡಿರುವ ತನಿಖೆಗೆ ತಮಿಳುನಾಡು ಸರ್ಕಾರ ಸಹಕರಿಸುತ್ತಿಲ್ಲ ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಹೇಳಿದರು.

ನಾಗ್ಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೋಲ್ಡ್ರಿಫ್ ಕೆಮ್ಮಿನ ಸಿರಪ್‌ಗೆ ಸಂಬಂಧಿಸಿ ತಮಿಳುನಾಡಿನ ಔಷಧ ನಿಯಂತ್ರಕರು ಸಮರ್ಪಕ ವರದಿ ಸಲ್ಲಿಸುವುದನ್ನು ನಾವು ನಿರೀಕ್ಷಿಸುತ್ತಿದ್ದೇವೆ’ ಎಂದರು.

‘ಯಾರನ್ನೂ ರಕ್ಷಿಸುವ ಪ್ರಶ್ನೆ ಇಲ್ಲ’: ನಾಗ್ಪುರಕ್ಕೆ ತೆರಳುವ ಮುನ್ನ ಭೋಪಾಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಮೋಹನ್ ಯಾದವ್, ‘ಕಲುಷಿತಗೊಂಡಿತ್ತು ಎನ್ನಲಾದ ಕೆಮ್ಮಿನ ಸಿರಪ್ ಸೇವಿಸಿ ಮಕ್ಕಳು ಮೃತಪಟ್ಟಿದ್ದಾರೆ. ಮಕ್ಕಳ ಜೀವದ ಜೊತೆ ಚೆಲ್ಲಾಟವಾಡುತ್ತಿರುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಈ ವಿಚಾರದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ’ ಎಂದರು. .

ಭೇಟಿ: ನಾಗ್ಪುರದ ಎಐಐಎಂಎಸ್, ನ್ಯೂ ಹೆಲ್ತ್ ಸಿಟಿ ಆಸ್ಪತ್ರೆ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಆರೋಗ್ಯ ವಿಚಾರಿಸಿದ ಯಾದವ್, ನಂತರ ಕುಟುಂಬಸ್ಥರೊಂದಿಗೆ ಮಾತನಾಡಿ, ಧೈರ್ಯ ಹೇಳಿದರು.

ಕೆಮ್ಮಿನ ಮೂರು ಸಿರಪ್ ತಯಾರಿಕೆ ಸ್ಥಗಿತಕ್ಕೆ ಆದೇಶ

ನವದೆಹಲಿ(ಪಿಟಿಐ): ಕೋಲ್ಡ್ರಿಫ್, ರೆಸ್ಪಿಫ್ರೆಶ್ ಟಿಆರ್ ಹಾಗೂ ರಿಲೈಫ್ ಕೆಮ್ಮಿನ ಸಿರಪ್‌ಗಳನ್ನು ಮಾರುಕಟ್ಟೆಗಳಿಂದ ವಾಪಸು ತರಿಸಿಕೊಳ್ಳಲಾಗಿದೆ ಹಾಗೂ ಈ ಸಿರಪ್‌ಗಳ ತಯಾರಿಕೆಯನ್ನು ನಿಲ್ಲಿಸುವಂತೆ ಸಂಬಂಧಿಸಿದ ಕಂಪನಿಗಳಿಗೆ ಆದೇಶಿಸಲಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಗೆ (ಡಬ್ಲುಎಚ್‌ಒ) ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ ತಿಳಿಸಿದೆ.

ಇವುಗಳ ಪೈಕಿ ಯಾವ ಸಿರಪ್‌ಅನ್ನು ಕೂಡ ಇತರ ದೇಶಗಳಿಗೆ ರಫ್ತು ಮಾಡಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಗೆ ಸಿಡಿಎಸ್‌ಸಿಒ ಬುಧವಾರ ತಿಳಿಸಿದೆ. ಮಕ್ಕಳ ಸಾವಿಗೆ ಕಾರಣವಾಗಿದೆ ಎನ್ನಲಾದ ಕೆಮ್ಮಿನ ಸಿರಪ್‌ಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗಿದೆಯೇ ಎಂಬ ಮಾಹಿತಿ ನೀಡುವಂತೆ ವಿಶ್ವ ಆರೋಗ್ಯ ಸಂಸ್ಥೆಯು ಭಾರತಕ್ಕೆ ಸೂಚಿಸಿತ್ತು. ಹೀಗಾಗಿ ಈ ಮಾಹಿತಿ ಒದಗಿಸಲಾಗಿದೆ ಎಂದು ಮೂಲಗಳು ಹೇಳಿವೆ. ಮಧ್ಯಪ್ರದೇಸ ಹಾಗೂ ರಾಜಸ್ಥಾನದಲ್ಲಿ ಸಂಭವಿಸಿದ ಮಕ್ಕಳ ಸಾವುಗಳ ಕುರಿತು ಇತ್ತೀಚೆಗೆ ಭಾರತದ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿವೆ. ಹೀಗಾಗಿ, ಈ ಕುರಿತು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದೂ ಡಬ್ಲುಎಚ್‌ಒ ಹೇಳಿದೆ.

ಚಿಟಿಕೆ ಸುದ್ದಿ

47 ಭಾರತೀಯ ಮೀನುಗಾರರ ಬಂಧನ

ಕೊಲಂಬೊ (ಪಿಟಿಐ): ಜಲ ಗಡಿ ಉಲ್ಲಂಘಿಸಿ ಮೀನುಗಾರಿಕೆ ನಡೆಸಿದ ಆರೋಪದಲ್ಲಿ ಭಾರತದ 47 ಮೀನುಗಾರರನ್ನು ಶ್ರೀಲಂಕಾದ ನೌಕಾಪಡೆ ಗುರುವಾರ ಬಂಧಿಸಿದೆ.

‘ಶ್ರೀಲಂಕಾದ ಉತ್ತರ ಕರಾವಳಿಯ ತಲೈಮನ್ನಾರ್ ಪ್ರದೇಶದಲ್ಲಿ ಗಸ್ತು ತಿರುಗುವಾಗ ಭಾರತೀಯ ಮೀನುಗಾರರು ಜಲ ಗಡಿ ಉಲ್ಲಂಘಿಸಿ ಮೀನುಗಾರಿಕೆ ನಡೆಸುತ್ತಿರುವುದು ಕಂಡುಬಂದಿದೆ, ದೋಣಿಗಳೊಂದಿಗೆ ಅವರನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆಗಾಗಿ ಮೀನುಗಾರಿಕೆ ತನಿಖಾಧಿಕಾರಿಗೆ ಹಸ್ತಾಂತರಿಸಲಾಗಿದೆ’ ಎಂದು ಶ್ರೀಲಂಕಾದ ನೌಕಾಪಡೆ ಪ್ರಕಟಣೆ ತಿಳಿಸಿದೆ. ಭಾರತ–ಶ್ರೀಲಂಕಾ ದ್ವಿಪಕ್ಷೀಯ ಸಂಬಂಧದಲ್ಲಿ ಮೀನುಗಾರರ ಸಮಸ್ಯೆಯು ಸವಾಲಾಗಿಯೇ ಮುಂದುವರಿದಿದೆ. ಜಲ ಗಡಿ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಇತ್ತೀಚೆಗೆ ಶ್ರೀಲಂಕಾದ ನೌಕಾಪಡೆ ಸಿಬ್ಬಂದಿ ಭಾರತೀಯ ಮೀನುಗಾರರತ್ತ ಗುಂಡಿನ ದಾಳಿ ನಡೆಸಿದ್ದರು. ತಿಂಗಳ ಹಿಂದಷ್ಟೇ ಜಾಫ್ನಾದಲ್ಲಿ 12 ಭಾರತೀಯ ಮೀನುಗಾರರನ್ನು ಅಲ್ಲಿನ ನೌಕಾಪಡೆ ಬಂಧಿಸಿತ್ತು.

ನಮ್ಮ ದಾಳಿಗಳಿಂದ ರಷ್ಯಾದಲ್ಲಿ ಅನಿಲ ಕೊರತೆ: ಝೆಲೆನ್‌ಸ್ಕಿ

ಝೆಲೆನ್‌ಸ್ಕಿ

ಕೀವ್ (ಎಪಿ): ‘ಹೊಸದಾಗಿ ಅಭಿವೃದ್ಧಿಪಡಿಸಿರುವ ದೂರಗಾಮಿ ಕ್ಷಿಪಣಿ ಮತ್ತು ಡ್ರೋನ್‌ಗಳ ದಾಳಿಯಿಂದಾಗಿ ರಷ್ಯಾದಲ್ಲಿ ತೀವ್ರ ಅನಿಲ ಕೊರತೆ ಉಂಟಾಗುತ್ತಿದೆ. ಜೊತೆಗೆ, ನಮ್ಮ ದೇಶದ ಡೊನೆಟ್‌ಸ್ಕ್‌ನ ಪೂರ್ವದಲ್ಲಿರುವ ಪ್ರದೇಶವೊಂದನ್ನು ವಶಪಡಿಸಿಕೊಳ್ಳಲು ಬಂದಿದ್ದ ರಷ್ಯಾದ ವಿಮಾನವನ್ನೂ ನಾವು ಹೊಡೆದುರುಳಿಸಿದ್ದೇವೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದರು.

‘ನಮ್ಮ ಹೊಸ ಕ್ಷಿಪಣಿ ಹಾಗೂ ಡ್ರೋನ್‌ಗಳು ರಷ್ಯಾಕ್ಕೆ ನಷ್ಟವನ್ನುಂಟು ಮಾಡಿವೆ. ರಷ್ಯಾದ ಸಮುದ್ರದ ತಟದಲ್ಲಿರುವ ತೈಲ ಘಟಕದ ಮೇಲೆಯೂ ನಾವು ದಾಳಿ ನಡೆಸಿದ್ದೇವೆ. ಇದು ನಮಗೆ ದೊರೆತ ಅತಿ ದೊಡ್ಡ ಯಶಸ್ಸು’ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

‘ನಮಗಿರುವ ಮಾಹಿತಿ ಪ್ರಕಾರ, ನಮ್ಮ ದಾಳಿ ನಂತರ ರಷ್ಯಾದ ಶೇ 20ರಷ್ಟು ತೈಲ ಪೂರೈಕೆಯು ನಷ್ಟವಾಗಿದೆ. ರಷ್ಯಾವು ಚೀನಾ ಮತ್ತು ಬೆಲರೂಸ್‌ನ ಸಿಕ್ಸ್‌ಪೋಲ್ಡ್ ಕಂಪನಿಯಿಂದ ಅನಿಲವನ್ನು ಆಮದು ಮಾಡಿಕೊಳ್ಳುತ್ತಿದೆ. ಇದಕ್ಕಾಗಿ ಆಮದು ಸುಂಕವನ್ನು ತೆಗೆದು ಹಾಕಿದೆ’ ಎಂದರು.

ಗಾಜಾ: ಒತ್ತೆಯಾಳುಗಳ ಬಿಡುಗಡೆಗೆ ಒಪ್ಪಿಗೆ

ಟ್ರಂಪ್ ಶಾಂತಿ ಸೂತ್ರ; ಮೊದಲ ಹಂತ ಜಾರಿಗೆ ಹಮಾಸ್– ಇಸ್ರೇಲ್ ಸಹಮತ

ಒಂದನೇ ಪುಟದಿಂದ...

ಶಾಂತಿ ಯೋಜನೆ ಜಾರಿಗೆ ಎರಡೂ ಕಡೆಯವರು ಒಪ್ಪಿಕೊಂಡಿರುವುದಾಗಿ ಟ್ರಂಪ್ ಘೋಷಿಸಿದ್ದಾರೆ. ‘ನಮ್ಮ ಶಾಂತಿ ಯೋಜನೆಯ ಮೊದಲ ಹಂತದ ಅನುಷ್ಠಾನಕ್ಕೆ ಇಸ್ರೇಲ್ ಮತ್ತು ಹಮಾಸ್ ಸಹಮತ ವ್ಯಕ್ತಪಡಿಸಿವೆ ಎಂದು ಘೋಷಿಸಲು ನನಗೆ ತುಂಬಾ ಹೆಮ್ಮೆಯಾಗುತ್ತಿದೆ’ ಎಂದು ಅವರು ‘ಟ್ರುತ್ ಸೋಷಿಯಲ್’ನಲ್ಲಿ ಬರೆದುಕೊಂಡಿದ್ದಾರೆ.

ಟ್ರಂಪ್ ಅವರ ಶಾಂತಿ ಯೋಜನೆಯ ಇತರ ಕೆಲವು ಅಂಶಗಳ ಜಾರಿ ಬಗ್ಗೆ ಅನಿಶ್ಚಿತತೆ ಮುಂದುವರಿದಿದೆ. ಹಮಾಸ್ ಸದಸ್ಯರು ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗಬೇಕು ಮತ್ತು ಗಾಜಾದ ಆಡಳಿತವನ್ನು ನೋಡಿಕೊಳ್ಳುವವರು ಯಾರು – ಮುಂತಾದ ಪ್ರಮುಖ ಆಂಶಗಳ ಬಗ್ಗೆ ಯಾವುದೇ ತೀರ್ಮಾನ ಹೊರಬಿದ್ದಿಲ್ಲ.

ಆದರೆ, ಶಾಂತಿ ಯೋಜನೆಯ ಮೊದಲ ಹಂತದ ಜಾರಿಗೆ ಸಹಮತ ಮೂಡಿರುವುದು ಎರಡು ವರ್ಷಗಳಿಂದ ನಡೆಯುತ್ತಿರುವ ಯುದ್ಧಕ್ಕೆ ಅಂತ್ಯ ಹಾಡುವ ನಿಟ್ಟಿನಲ್ಲಿ ಇಟ್ಟಿರುವ ಪ್ರಮುಖ ಹೆಜ್ಜೆ ಎಂದು ವಿಶ್ಲೇಷಿಸಲಾಗಿದೆ.

ಸುಮಾರು 2,000 ಪ್ಯಾಲೆಸ್ಟೀನಿಯನ್ ಕೈದಿಗಳಿಗೆ ಬದಲಾಗಿ ಏಕಕಾಲದಲ್ಲಿ 20 ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಹಮಾಸ್‌ನ ಮೂಲವೊಂದು ತಿಳಿಸಿದೆ. ಜೀವಾವಧಿ ಶಿಕ್ಷೆಗೆ ಒಳಗಾಗಿರುವ 250 ಮಂದಿ ಹಾಗೂ ಯುದ್ಧ ಆರಂಭವಾದ ಬಳಿಕ ಇಸ್ರೇಲ್ ಬಂಧಿಸಿರುವ 1,700 ಪ್ಯಾಲೆಸ್ಟೀನಿಯರು ಬಿಡುಗಡೆಯಾಗಲಿದ್ದಾರೆ ಎಂದು ಹೇಳಿದೆ.

ಒಪ್ಪಂದಕ್ಕೆ ಸಹಿ ಬಿದ್ದ 72 ಗಂಟೆಗಳ ಒಳಗೆ ವಿನಿಮಯ ಪ್ರಕ್ರಿಯೆ ನಡೆಯಲಿದೆ. ‘ಒಪ್ಪಂದದ ಅನುಷ್ಠಾನಕ್ಕೆ ಸಂಪುಟ ಸಭೆ ಅನುಮೋದನೆ ದೊರೆತ ನಂತರವೇ 72 ಗಂಟೆಗಳ ಕೌಂಟ್‌ಡೌನ್ ಪ್ರಾರಂಭವಾಗುತ್ತದೆ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿ ತಿಳಿಸಿದೆ.

2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿಯೊಂದಿಗೆ ಯುದ್ಧ ಆರಂಭಗೊಂಡಿತ್ತು.

ಗಾಜಾ ಪಟ್ಟಿಯ ದಾರ್ ಅಲ್ ಬಲಾದಲ್ಲಿರುವ ಶುಹದಾ ಅಲ್ ಅಕ್ಸಾ ಆಸ್ಪತ್ರೆಯ ಬಳಿ ಪ್ಯಾಲೆಸ್ಟೀನಿಯನ್ ಮಕ್ಕಳು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

> ಎಲ್ಲ ಒತ್ತೆಯಾಳುಗಳು ಸೋಮವಾರ ಬಿಡುಗಡೆ ಆಗಲಿದ್ದಾರೆ. ಗಾಜಾದ ಕೆಲವು ಪ್ರದೇಶಗಳಿಂದ ಇಸ್ರೇಲ್ ತನ್ನ ಸೇನೆಯನ್ನು ಹಿಂತೆಗೆದುಕೊಳ್ಳಲಿದೆ
>
> **ಡೊನಾಲ್ಡ್ ಟ್ರಂಪ್,** ಅಮೆರಿಕದ ಅಧ್ಯಕ್ಷ

ಪ್ರಮುಖ ಅಂಶಗಳು

- ಒತ್ತೆಯಾಳುಗಳು ಬಿಡುಗಡೆಯಾಗಲಿರುವ ಸುದ್ದಿ ತಿಳಿಯುತ್ತಿದ್ದಂತೆಯೇ ಟೆಲ್ ಅವೀವ್‌ನ ‘ಹಾಸ್ಟೇಜ್ ಸ್ಕ್ವೇರ್’ ಬಳಿ ಸಂಭ್ರಮಿಸಿದ ಸಾವಿರಾರು ಮಂದಿ, ಖಾನ್ ಯೂನಿಸ್‌ನ ನಾಸೆರ್ ಆಸ್ಪತ್ರೆ ಬಳಿ ಪ್ಯಾಲೆಸ್ಟೀನಿಯರಿಂದ ಸಂಭ್ರಮಾಚರಣೆ
- ಶಾಂತಿ ಸೂತ್ರಕ್ಕೆ ಒಪ್ಪಿಗೆ ಸೂಚಿಸಿದ ಬಳಿಕವೂ ಗಾಜಾ ಮೇಲೆ ಮುಂದುವರಿದ ಇಸ್ರೇಲ್ ದಾಳಿ
- ಮಾತುಕತೆಗೆ ಮಧ್ಯಸ್ಥಿಕೆ ವಹಿಸಿದ ಕತಾರ್, ಈಜಿಪ್ಟ್ ಮತ್ತು ಟರ್ಕಿಯ ನಾಯಕರಿಗೆ ಕೃತಜ್ಞತೆ ಸಲ್ಲಿಸಿದ ಡೊನಾಲ್ಡ್ ಟ್ರಂಪ್
- ಇಸ್ರೇಲ್ ಬಿಡುಗಡೆಗೊಳಿಸಬೇಕಾದ ಕೈದಿಗಳ ಪಟ್ಟಿ ನೀಡಿದ ಹಮಾಸ್
- ಪಶ್ಚಿಮ ಏಷ್ಯಾದಲ್ಲಿ ಶಾಶ್ವತವಾಗಿ ಶಾಂತಿ ನೆಲೆಸುವ ಆಶಯ ವ್ಯಕ್ತಪಡಿಸಿದ ವಿಶ್ವದ ವಿವಿಧ ದೇಶಗಳ ನಾಯಕರು

ನಡೆಯದ ನೇರ ಮಾತುಕತೆ

ಕೈರೊದಲ್ಲಿ ನಡೆದ ಮೂರು ದಿನಗಳ ಮಾತುಕತೆ ವೇಳೆ ಹಮಾಸ್ ಮತ್ತು ಇಸ್ರೇಲ್ ನಿಯೋಗಗಳ ಸದಸ್ಯರು ಪರಸ್ಪರ ಭೇಟಿಯಾಗಲಿಲ್ಲ. ಎರಡೂ ನಿಯೋಗಗಳಿಗೆ ಪ್ರತ್ಯೇಕ ಕೊಠಡಿ ಮೀಸಲಿಡಲಾಗಿತ್ತು. ಈಜಿಪ್ಟ್ ಮತ್ತು ಕತಾರ್‌ನ ಸಂಧಾನಕಾರರು ಮಾತುಕತೆಗೆ ಮಧ್ಯಸ್ಥಿಕೆ ವಹಿಸಿದ್ದರು. ಶಾಂತಿ ಯೋಜನೆಗೆ ಎರಡೂ ಕಡೆಯವರು ಒಪ್ಪಿಗೆ ಸೂಚಿಸಿದ ಬಳಿಕ ಸಂಧಾನಕಾರರು ಪರಸ್ಪರ ಅಭಿನಂದಿಸಿದ ದೃಶ್ಯಗಳನ್ನು ಸ್ಥಳೀಯ ಸುದ್ದಿ ವಾಹಿನಿ ‘ಅಲ್–ಖಹೆರಾ’ ಪ್ರಸಾರ ಮಾಡಿದೆ.

ನೊಬೆಲ್ ಶಾಂತಿ ಪುರಸ್ಕಾರ: ಸಾಧ್ಯತೆ ಕ್ಷೀಣ– ತಜ್ಞರ ವಿಶ್ಲೇಷಣೆ

ಪ್ರಶಸ್ತಿಗಾಗಿ ಹಾತೊರೆಯುತ್ತಿರುವ ಟ್ರಂಪ್

ಸ್ಟಾವಂಗರ್/ನಾರ್ವೆ (ಎಪಿ): ‘ಪ್ರಪಂಚದ ಏಳು ಯುದ್ಧಗಳನ್ನು ಕೊನೆಗೊಳಿಸಿದ್ದಕ್ಕಾಗಿ ತಮಗೇ ನೊಬೆಲ್ ಶಾಂತಿ ಪ್ರಶಸ್ತಿ ಸಿಗಬೇಕು’ ಎಂದು ಪುನರುಚ್ಚರಿಸುತ್ತಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಶುಕ್ರವಾರ ಪ್ರಕಟವಾಗುವ ಈ ಪ್ರತಿಷ್ಠಿತ ಪ್ರಶಸ್ತಿಗಾಗಿ ಹಾತೊರೆಯುತ್ತಿದ್ದಾರೆ.

ಟ್ರಂಪ್

ಇತ್ತೀಚೆಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲೂ ಇದೇ ವಿಷಯ ಪ್ರಸ್ತಾಪಿಸಿದ್ದ ಟ್ರಂಪ್, ‘ಎಲ್ಲರೂ ನನಗೇ ನೊಬೆಲ್ ಶಾಂತಿ ಪ್ರಶಸ್ತಿ ಸಿಗಬೇಕೆಂದು ಬಯಸುತ್ತಿದ್ದಾರೆ’ ಎಂದು ಹೇಳಿದ್ದರು.

ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಸ್ವಯಂ ನಾಮನಿರ್ದೇಶನ ಮಾಡುವಂತಿಲ್ಲ. ಈ ಬಾರಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಪಾಕಿಸ್ತಾನ ಸರ್ಕಾರ ಟ್ರಂಪ್ ಹೆಸರನ್ನು ನಾಮನಿರ್ದೇಶನ ಮಾಡಿವೆ. ಹಾಗೆ ನೋಡಿದರೆ, 2018ರಿಂದ ಹಲವು ಬಾರಿ ಟ್ರಂಪ್ ಹೆಸರನ್ನು ನೊಬೆಲ್ ಪ್ರಶಸ್ತಿಗಾಗಿ ಅಮೆರಿಕದಿಂದ ಮತ್ತು ಹೊರ ದೇಶಗಳಿಂದ ನಾಮನಿರ್ದೇಶನ ಮಾಡಲಾಗಿದೆ. ಆದರೆ, ಈ ಬಾರಿಯೂ ಟ್ರಂಪ್ ಅವರಿಗೆ ಪ್ರಶಸ್ತಿ ಸಿಗುವ ಸಾಧ್ಯತೆಗಳು ತುಂಬಾ ಕಡಿಮೆ ಎನ್ನುತ್ತಾರೆ ನೊಬೆಲ್ ಪ್ರಶಸ್ತಿ ವಿಶ್ಲೇಷಕರು.

ಇತ್ತೀಚಿನ ವರ್ಷಗಳಲ್ಲಿ ಟ್ರಂಪ್ ನಡೆಸಿರುವ ಕೆಲವು ಗಮನಾರ್ಹ ವಿದೇಶಾಂಗ ನೀತಿ ಮಧ್ಯಸ್ಥಿಕೆಗಳನ್ನೇ ನೊಬೆಲ್ ಶಾಂತಿ ಪುರಸ್ಕಾರಕ್ಕಾಗಿ ಪ್ರಮುಖ ಅಂಶವಾಗಿ ಪ್ರಸ್ತಾಪಿಸಲಾಗಿದೆ. ಆದರೆ, ಇವೆಲ್ಲವೂ ವೈಯಕ್ತಿಕ ಮಟ್ಟದ ಸಾಧನೆಗಳು. ನೊಬೆಲ್ ಪ್ರಶಸ್ತಿ ನೀಡುವ ರಾಯಲ್ ಸ್ವೀಡಿಶ್ ಅಕಾಡೆಮಿಯು ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನಗಳನ್ನು ಪುರಸ್ಕರಿಸುವಾಗ ಪ್ರಮುಖವಾಗಿ ವ್ಯಕ್ತಿ ಅಥವಾ ಸಂಸ್ಥೆಗಳ ಪ್ರಯತ್ನದಿಂದ ‘ಶಾಂತಿಯು ಎಷ್ಟು ದೀರ್ಘಾವಧಿವರೆಗೆ ನೆಲೆಸಿದೆ ಮತ್ತು ಅಂತರರಾಷ್ಟ್ರೀಯ ಭ್ರಾತೃತ್ವಕ್ಕೆ ಇದರ ಕೊಡುಗೆ ಏನು ಎನ್ನುವ ಅಂಶವನ್ನೇ ಮುಖ್ಯವಾಗಿ ಪರಿಶೀಲಿಸುತ್ತದೆ’ ಎನ್ನುವುದು ವಿಶ್ಲೇಷಕರ ವಾದ.

‘ತೆರೆಮರೆಯಲ್ಲಿದ್ದುಕೊಂಡು ಶಾಂತಿಗಾಗಿ ಸದ್ದಿಲ್ಲದೆ ಶ್ರಮಿಸುವ ವ್ಯಕ್ತಿ ಮತ್ತು ಸಂಸ್ಥೆಗಳನ್ನೇ ಈ ಪ್ರಶಸ್ತಿಗಾಗಿ ಆಯ್ಕೆ ಮಾಡಲಾಗುತ್ತದೆ. ಈ ಸಾಲಿನಲ್ಲಿ ನಿಲ್ಲುವ ಅಪಾರ ಸಂಖ್ಯೆಯ ‘ಉನ್ನತ ಮಟ್ಟದ ನಾಮನಿರ್ದೇಶನ’ಗಳ ನಡುವೆ, ಟ್ರಂಪ್ ಹೆಸರನ್ನು ನಾರ್ವೆ ಸಂಸತ್ತು ನೇಮಿಸಿರುವ ಐವರು ಸದಸ್ಯರನ್ನು ಒಳಗೊಂಡಿರುವ ನೊಬೆಲ್ ಸಮಿತಿಯು ಪರಿಗಣಿಸುವ ಸಾಧ್ಯತೆ ಕ್ಷೀಣ ಎನ್ನುತ್ತಾರೆ ತಜ್ಞರು.

2009ರಲ್ಲಿ ಆಗಿನ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಅವರಿಗೆ ಪ್ರಶಸ್ತಿ ನೀಡಿದ್ದಕ್ಕಾಗಿ ನೊಬೆಲ್ ಸಮಿತಿಯು ತೀವ್ರ ಟೀಕೆ ಎದುರಿಸಿತ್ತು ಎನ್ನುವುದನ್ನೂ ತಜ್ಞರು ಬೊಟ್ಟು ಮಾಡಿ ತೋರಿಸುತ್ತಾರೆ.

ಶಾಂತಿಗೆ ವಿರುದ್ಧದ ನಿಲುವು

ಟ್ರಂಪ್ ಅನುಸರಿಸಿಕೊಂಡು ಬರುತ್ತಿರುವ ಐಎಂಎಫ್, ಡಬ್ಲ್ಯುಟಿಒ ಸೇರಿದಂತೆ ಬಹುಪಕ್ಷೀಯ ಸಂಸ್ಥೆಗಳ ಬಗೆಗಿನ ತಿರಸ್ಕಾರ, ಜಾಗತಿಕ ಹವಾಮಾನ ವೈಪರೀತ್ಯದ ಬಗೆಗಿನ ನಿರ್ಲಕ್ಷ್ಯ ಕೂಡ ನೊಬೆಲ್ ಶಾಂತಿ ಪ್ರಶಸ್ತಿಯ ಆಶಯಕ್ಕೇ ವಿರುದ್ಧವಾಗಿವೆ. ‘ಭಾರತ–ಪಾಕಿಸ್ತಾನ, ಥಾಯ್ಲೆಂಡ್ – ಕಾಂಬೋಡಿಯಾ, ರವಾಂಡ – ಕಾಂಗೊ ಗಣರಾಜ್ಯ ಸೇರಿ 7 ಯುದ್ಧಗಳನ್ನು ಕೊನೆಗೊಳಿಸಿದ್ದೇನೆ’ ಎನ್ನುವ ಟ್ರಂಪ್, ಇದರಲ್ಲಿ ಶೇ 60ರಷ್ಟು ಯುದ್ಧಗಳು ‘ವ್ಯಾಪಾರ’ದ ಕಾರಣಕ್ಕಾಗಿಯೇ ಕೊನೆಗೊಂಡವು ಎನ್ನುತ್ತಿದ್ದಾರೆ ಹಾಗಾದರೆ ಇದರಲ್ಲಿ ಶಾಂತಿಯ ಆಶಯ ಎಲ್ಲಿದೆ ಎನ್ನುತ್ತಾರೆ ವಿಶ್ಲೇಷಕರು.

ಇಬ್ಬರು ಡ್ರಗ್ ಇನ್‌ಸ್ಪೆಕ್ಟರ್‌ಗಳ ಅಮಾನತು

ಚೆನ್ನೈ (ಪಿಟಿಐ): ಚೆನ್ನೈ (ಪಿಟಿಐ): ‘ಹಲವು ಮಕ್ಕಳ ಸಾವಿಗೆ ಕಾರಣವಾಗಿರುವ ‘ಕೋಲ್ಡ್‌ರಿಫ್’ ಎಂಬ ಕೆಮ್ಮಿನ ಸಿರಪ್‌ನ ಕಲಬೆರಕೆಯಲ್ಲಿ ಕರ್ತವ್ಯಲೋಪ ಎಸಗಿದ ಇಬ್ಬರು ಡ್ರಗ್ ಇನ್‌ಸ್ಪೆಕ್ಟರ್‌ಗಳನ್ನು ಅಮಾನತುಗೊಳಿಸಲಾಗಿದೆ. ಫಾರ್ಮಾ ಕಂಪನಿಯನ್ನು ಶಾಶ್ವತವಾಗಿ ಮುಚ್ಚಲಾಗಿದೆ’ ಎಂದು ತಮಿಳುನಾಡು ಆರೋಗ್ಯ ಸಚಿವ ಮಾ ಸುಬ್ರಹ್ಮಣಿಯನ್ ತಿಳಿಸಿದ್ದಾರೆ.

‘ಕಳೆದೆರಡು ವರ್ಷದಲ್ಲಿ ಶ್ರೇಸನ್ ಫಾರ್ಮಾಸ್ಯುಟಿಕಲ್ ಕಂಪನಿಯ ತಯಾರಿಕ ಕೇಂದ್ರಕ್ಕೆ ತೆರಳಿ ಏಕೆ ಪರೀಕ್ಷೆ ನಡೆಸಿರಲಿಲ್ಲ ಎಂದು ನೋಟಿಸ್ ನೀಡಲಾಗಿತ್ತು, ಬಳಿಕ ಅವರನ್ನು ಅಮಾನತುಗೊಳಿಸಲಾಗಿದೆ’ ಎಂದು ಹೇಳಿದ್ದಾರೆ.

‘ಕೆಮ್ಮಿನ ಸಿರಪ್‌ನಲ್ಲಿ ಕಲಬೆರಕೆಯಾಗಿರುವುದನ್ನು ತಮಿಳುನಾಡು ಮೊದಲು ಖಚಿತಪಡಿಸಿ, ನಂತರ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಮಾಹಿತಿ ನೀಡಿತ್ತು. ಇದಾದ ಬಳಿಕ ಮಧ್ಯಪ್ರದೇಶ, ಒಡಿಶಾ, ಪುದುಚೇರಿಗೂ ಮಾಹಿತಿ ನೀಡಲಾಗಿತ್ತು’ ಎಂದು ತಿಳಿಸಿದ್ದಾರೆ.

‘ಅಕ್ಟೋಬರ್ 3ರಂದೇ ಕೆಮ್ಮಿನ ಸಿರಪ್ ತಯಾರಿಕೆಯನ್ನು ಸ್ಥಗಿತಗೊಳಿಸಿದ್ದು, ಕಂಪನಿಯ ಉತ್ಪಾದನಾ ಲೈಸೆನ್ಸ್ ಅನ್ನು ತಾತ್ಕಲಿಕವಾಗಿ ಹಿಂದಕ್ಕೆ ಪಡೆಯಲಾಗಿತ್ತು. ಅ.7ರಂದು ರಂಗನಾಥನ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಅ.8ರಂದು ಬಂಧಿಸಿದ್ದೇವೆ’ ಎಂದು ಮಾಹಿತಿ ನೀಡಿದ್ದಾರೆ.

‘ವಿಸ್ತೃತ ತನಿಖೆ ಮುಂದುವರಿದಿದ್ದು, ಫಾರ್ಮಾ ಕಂಪನಿಯನ್ನು ಶಾಶ್ವತವಾಗಿ ಮುಚ್ಚಲು ಕ್ರಮ ಕೈಗೊಳ್ಳಲಾಗುವುದು. ಮುಂದಿನ ಮೂರು ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದಿದ್ದಾರೆ.

ಕೋಲ್ಡ್ರಿಫ್‌ನಲ್ಲಿ ಕಲಬೆರಕೆಯಾಗಿರುವುದು ಖಚಿತಪಡುತ್ತಿದ್ದಂತೆಯೇ, ರಾಜ್ಯದಾದ್ಯಂತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದನ್ನು ನಿಷೇಧಿಸಿದ್ದೆವು.

ಸಿಬಿಐ ತನಿಖೆ ಕೋರಿ ಪಿಐಎಲ್

ನವದೆಹಲಿ (ಪಿಟಿಐ): ಕಲಬೆರಕೆ ಕೆಮ್ಮಿನ ಸಿರಪ್‌ನಿಂದ ಮಕ್ಕಳು ಮೃತಪಟ್ಟ ಬೆನ್ನಲ್ಲೇ, ಔಷಧ ಸುರಕ್ಷತೆ ವಿಧಾನದಲ್ಲಿ ವ್ಯವಸ್ಥಿತ ಸುಧಾರಣೆ ಹಾಗೂ ಸಾವಿನ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐನಿಂದ ವಿಸ್ತೃತ ತನಿಖೆ ನಡೆಸಲು ಆದೇಶ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆಗೆ ಸುಪ್ರೀಂಕೋರ್ಟ್ ಒಪ್ಪಿಗೆ ಸೂಚಿಸಿದೆ.

ತುರ್ತು ವಿಚಾರಣೆ ನಡೆಸುವಂತೆ ಕೋರಿ ವಕೀಲ ವಿಶಾಲ್ ತಿವಾರಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ಉಜ್ಜಲ್ ಭುಯಾನ್, ಕೆ. ವಿನೋದ್ ಚಂದ್ರನ್ ಅವರಿದ್ದ ನ್ಯಾಯಪೀಠವು ಅಂಗೀಕರಿಸಿ, ಅಕ್ಟೋಬರ್ 10ರಂದು ಅರ್ಜಿ ವಿಚಾರಣೆ ನಡೆಸುವುದಾಗಿ ತಿಳಿಸಿತು.

ಮಕ್ಕಳ ಸಾವಿಗೆ ಸಂಬಂಧಿಸಿದ ಬಾಕಿ ಉಳಿದ ಎಲ್ಲ ಎಫ್‌ಐಆರ್ ಹಾಗೂ ತನಿಖೆಯನ್ನು ಸಿಬಿಐಗೆ ವರ್ಗಾಯಿಸಬೇಕು. ಪ್ರಕರಣದ ತನಿಖೆಯು ನ್ಯಾಯಸಮ್ಮತ ಹಾಗೂ ಏಕರೂಪವಾಗಿರುವುದಂತೆ ನೋಡಲು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿಗೆ ತನಿಖೆಯ ಮೇಲುಸ್ತುವಾರಿ ವಹಿಸಬೇಕು ಎಂದು ಪಿಐಎಲ್ ಅರ್ಜಿಯಲ್ಲಿ ಕೋರಲಾಗಿದೆ.

ಚಟಿಕೆ ಸುದ್ದಿ

ಮೆಹಬೂಬಸಾಬ್, ಪಲ್ಲವಿಗೆ ಪ್ರಶಸ್ತಿ


ಮೆಹಬೂಬಸಾಬ್

ಎಂ.ಡಿ.ಪಲ್ಲವಿ

ಧಾರವಾಡ: ನಗರದ ಕಲಾ ಸಂವಹನ ಟ್ರಸ್ಟ್ ನೀಡುವ ಸಿತಾರ್ ಮಾಂತ್ರಿಕ ಉಸ್ತಾದ್ ಹಮೀದ್ ಖಾನ್ ಸಂಗೀತ ಸಾಧಕ ಪ್ರಶಸ್ತಿಗೆ ಗಾಯಕಿ ಎಂ.ಡಿ. ಪಲ್ಲವಿ ಹಾಗೂ ಸಿತಾರ್ ಮಾಂತ್ರಿಕ ಉಸ್ತಾದ್ ಹಮೀದ್ ಖಾನ್ ವಾದ್ಯ ನಿರ್ಮಾತೃ ಪ್ರಶಸ್ತಿಗೆ ಸಿತಾರ್ ವಾದ್ಯ ತಯಾರಕ ಮೆಹಬೂಬಸಾಬ್ ಸತಾರಮೇಕರ್ ಆಯ್ಕೆಯಾಗಿದ್ದಾರೆ.

'ಎರಡೂ ಪುರಸ್ಕಾರಗಳು ತಲಾ ₹ 25 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿವೆ. ಉಸ್ತಾದ್ ಹಮೀದ್ ಖಾನ್ ಅವರ ಐದನೇ ಸ್ಮರಣೆ ಪ್ರಯುಕ್ತ ನಗರದ ಸೃಜನಾ ರಂಗಮಂದಿರದಲ್ಲಿ ಅಕ್ಟೋಬರ್ 12ರಂದು ನಡೆಯುವ ಸಂಗೀತೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಪ್ರಕಟಣೆ ತಿಳಿಸಿದೆ.

'ಕುಟುಂಬದ ವಿರುದ್ಧ ಟೀಕೆ: ಕಾನೂನು ಹೋರಾಟ'

ಬಾಲಚಂದ್ರ ಜಾರಕಿಹೊಳಿ

ಬೆಳಗಾವಿ: 'ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ಮಾಧ್ಯಮ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ನಮ್ಮ ಕುಟುಂಬದ ವಿರುದ್ಧ ಟೀಕೆಗಳು ವ್ಯಕ್ತವಾಗುತ್ತಿವೆ. ಟೀಕಿಸುವವರ ವಿರುದ್ಧ ದೀಪಾವಳಿ ಹಬ್ಬದ ನಂತರ ಕಾನೂನು ಹೋರಾಟ ನಡೆಸುತ್ತೇವೆ' ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಇಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಮ್ಮ ವಿರುದ್ಧ ನೀಡಲಾದ ಹೇಳಿಕೆಗಳು ಒಳ್ಳೆಯ ಅಭಿರುಚಿಯಿಂದ ಕೂಡಿಲ್ಲ. ಚುನಾವಣೆಗಳಲ್ಲಿ ಗೆದ್ದರೂ–ಸೋತರೂ, ಅದು ವೈಯಕ್ತಿಕ ದಾಳಿಗೆ ಬಳಕೆ ಆಗಬಾರದು' ಎಂದು ಮಾಜಿ ಸಂಸದ ರಮೇಶ ಕತ್ತಿ ಹೆಸರು ಉಲ್ಲೇಖಿಸದೆ ಪರೋಕ್ಷವಾಗಿ ತಿಳಿಸಿದರು.

'ಯಾರ ವಿರುದ್ಧವಾದರೂ ಹೇಳಿಕೆ ನೀಡುವಾಗ ಮಿತಿ ಇರಬೇಕು. ವ್ಯಕ್ತಿಗಳು ಮತ್ತು ಕುಟುಂಬಗಳ ವಿರುದ್ಧ ಹೇಳಿಕೆ ನೀಡುವವರು ಕೀಳುಮಟ್ಟಕ್ಕೆ ಇಳಿಯಬಾರದು. ರಾಜಕೀಯ ಹೇಳಿಕೆಗಳ ವಿಷಯದಲ್ಲಿ ಹಗುರವಾಗಿ ಮಾತನಾಡಬಾರದು' ಎಂದರು.

ನಾಪತ್ತೆಯಾಗಿದ್ದ ಪುರಸಭೆ ನೌಕರ ಬೆಳಗಾವಿಯಲ್ಲಿ ಪತ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಕುಮಟಾದ ಪುರಸಭೆ ಮುಖ್ಯಾಧಿಕಾರಿ ಎಂ.ಆರ್.ಸ್ವಾಮಿ ಅವರ ಕಿರುಕುಳದ ಬಗ್ಗೆ ಪತ್ರ ಬರೆದು ನಾಪತ್ತೆಯಾಗಿದ್ದ ಕಂದಾಯ ಅಧಿಕಾರಿ, ಭಟ್ಕಳ ನಿವಾಸಿ ವೆಂಕಟೇಶ ಆರ್. ಗುರುವಾರ ಬೆಳಗಾವಿಯಲ್ಲಿ ಪತ್ತೆಯಾಗಿದ್ದಾರೆ.

'ಪತ್ತೆಗೆ ಕಾರ್ಯಾಚರಣೆ ಆರಂಭಿಸುತ್ತಿದ್ದಂತೆ ವೆಂಕಟೇಶ್ ಅವರು ತಮ್ಮ ತಾಯಿಗೆ ಕರೆ ಮಾಡಿ, ಬೆಳಗಾವಿಯಲ್ಲಿ ಸಂಬಂಧಿಕರೊಬ್ಬರ ಮನೆಯಲ್ಲಿ ಇರುವುದಾಗಿ ಮಾಹಿತಿ ನೀಡಿದರು. ಅವರನ್ನು ಪತ್ತೆ ಮಾಡಿದ ಬೆಳಗಾವಿ ಪೊಲೀಸರು, ಠಾಣೆಗೆ ಕರೆಸಿಕೊಂಡಿದ್ದಾರೆ. ಅವರನ್ನು ಭಟ್ಕಳಗೆಕ್ಕೆ ಕರೆತರಲು ಸ್ಥಳೀಯ ಪೊಲೀಸರು ತೆರಳಿದ್ದಾರೆ' ಎಂದು ಭಟ್ಕಳ ಶಹರ ಠಾಣೆ ಪೊಲೀಸರು ತಿಳಿಸಿದ್ದಾರೆ.

3 ತಿಂಗಳಲ್ಲಿ ಅರ್ಜಿ ಇತ್ಯರ್ಥಕ್ಕೆ ನಿರ್ದೇಶನ

ಅಕ್ರಮ ಗಣಿಗಾರಿಕೆ– ಅದಿರು ಜಪ್ತಿ ಪ್ರಕರಣ 15 ವರ್ಷಗಳಿಂದ ಬಾಕಿ ಇರುವ ವ್ಯಾಜ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ
- ಅದಿರು ಬಿಡುಗಡೆಗೆ ಮನವಿ
- ಮತ್ತೆ ವಿಚಾರಣೆ ಸೂಕ್ತ: ಕೋರ್ಟ್

ನವದೆಹಲಿ: ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿ ಬಂದರಿನಲ್ಲಿ ಜಪ್ತಿ ಮಾಡಿರುವ ಅದಿರನ್ನು ಬಿಡುಗಡೆ ಮಾಡುವ ಸಂಬಂಧದ ಪ್ರಕರಣದ ವಿಚಾರಣೆಯನ್ನು ಮೂರು ತಿಂಗಳಲ್ಲಿ ಮುಗಿಸಬೇಕು ಎಂದು ಕರ್ನಾಟಕ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್‌ಗೆ ನಿರ್ದೇಶನ ನೀಡಿದೆ.

ಹೈಕೋರ್ಟ್‌ನ ಧಾರವಾಡ ಪೀಠದ ಆದೇಶ ಪ್ರಶ್ನಿಸಿ ವಲಯ ಅರಣ್ಯ ಅಧಿಕಾರಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಹಾಗೂ ಉಜ್ಜಲ್ ಭುಯಾನ್ ಪೀಠವು, '2009–10ರ ಅವಧಿಯಲ್ಲಿ ಈ ಅದಿರನ್ನು ಜಪ್ತಿ ಮಾಡಲಾಗಿತ್ತು. ಪುರಾವೆಗಳ ಆಧಾರದಲ್ಲಿ ಹೈಕೋರ್ಟ್ ತನ್ನದೇ ಆದ ನಿರ್ಧಾರ ತೆಗೆದುಕೊಳ್ಳಲಿದೆ. ಜಪ್ತಿ ಮಾಡಿರುವ ಅದಿರಿನ ಮಾಲೀಕತ್ವದ ಬಗ್ಗೆ ನಾವು ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

ಬೇಲೆಕೇರಿ ಬಂದರಿನಿಂದ ಭಾರಿ ಪ್ರಮಾಣದ ಅದಿರು ನಾಪತ್ತೆಯಾದ ಪ್ರಕರಣದಲ್ಲಿ ಬಂದರು ಸೇವಾ ಕಂಪನಿಗಳಾದ ರಾಜ್‌ಮಹಲ್ ಸಿಲ್ಕ್ಸ್ ಸೇರಿದಂತೆ ನಾಲ್ಕು ಕಂಪನಿಗಳು ಸರ್ಕಾರದ ಬೊಕ್ಕಸಕ್ಕೆ ಭಾರಿ ನಷ್ಟ ಉಂಟು ಮಾಡಿವೆ ಎಂದು ಸುಪ್ರೀಂ ಕೋರ್ಟ್ ನೇಮಿಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ವರದಿ ನೀಡಿತ್ತು. ಬಂದರಿನಲ್ಲಿ 9.06 ಲಕ್ಷ ಟನ್ ಅಕ್ರಮ ಅದಿರನ್ನು ಜಪ್ತಿ ಮಾಡಲಾಗಿತ್ತು.

ಈ ಅದಿರನ್ನು ಬಿಡುಗಡೆ ಮಾಡಬೇಕು ಎಂದು ಕೋರಿ ರಾಜ್‌ಮಹಲ್ ಸಿಲ್ಕ್ಸ್ ಕಂಪನಿಯು ವಿಚಾರಣಾ ನ್ಯಾಯಾಲಯದ ಮೊರೆ ಹೋಗಿತ್ತು. ಜಪ್ತಿ ಮಾಡಿರುವ ಅದಿರು ತಮ್ಮ ಕಂಪನಿಗೆ ಸೇರಿದ್ದು ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ನೀಡುವಲ್ಲಿ ಕಂಪನಿ ವಿಫಲವಾಗಿದೆ ಎಂಬ ಕಾರಣ ನೀಡಿ ವಿಚಾರಣಾ ನ್ಯಾಯಾಲಯವು ಈ ಅರ್ಜಿ ತಿರಸ್ಕರಿಸಿತ್ತು. ವಶಪಡಿಸಿಕೊಂಡ ಕಬ್ಬಿಣದ ಅದಿರನ್ನು ಬಿಡುಗಡೆ ಮಾಡುವಂತೆ ಹೈಕೋರ್ಟ್ ನಿರ್ದೇಶನ ನೀಡಿತ್ತು.

ಕಂಪನಿ ಪರ ವಾದ ಮಂಡಿಸಿದ್ದ ವಕೀಲರು, 'ಅಕ್ರಮ ಗಣಿಗಾರಿಕೆ ಪ್ರಕರಣದ ಬಗ್ಗೆ ತನಿಖಾ ಸಂಸ್ಥೆಯು ಮುಕ್ತಾಯದ ವರದಿ ಸಲ್ಲಿಸಿದೆ. ವಶಪಡಿಸಿಕೊಂಡ ಸರಕುಗಳ ಮಾಲೀಕತ್ವದ ಬಗ್ಗೆ ಯಾವುದೇ ವಿವಾದ ಇಲ್ಲ. ಈ ಅದಿರು ಬಿಡುಗಡೆ ಮಾಡಬೇಕು' ಎಂದು ಕೋರಿದರು.

'ವಿಚಾರಣಾ ನ್ಯಾಯಾಲಯದ ಆದೇಶವು ವಿಕೃತವಾಗಿದ್ದರೆ, ಈ ಬಗ್ಗೆ ಹೈಕೋರ್ಟ್ ತನ್ನ ಅಭಿಪ್ರಾಯ ವ್ಯಕ್ತಪಡಿಸಬೇಕಿತ್ತು. ಆದರೆ, ಹೈಕೋರ್ಟ್ ಈ ಕೆಲಸ ಮಾಡಿಲ್ಲ. ಹೀಗಾಗಿ, ಹೈಕೋರ್ಟ್ ಮತ್ತೆ ವಿಚಾರಣೆ ನಡೆಸುವುದು ಸೂಕ್ತ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಗಣಿ ಅಕ್ರಮ: ಕೃಷ್ಣ ರಾವು ವಸೂಲಾತಿ ಆಯುಕ್ತ

ಬೆಂಗಳೂರು: ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದ ಗಳಿಸಿದ ಸ್ವತ್ತು ವಶಪಡಿಸಿಕೊಳ್ಳಲು ಮತ್ತು ಜಪ್ತಿಗಾಗಿ ನಿವೃತ್ತ ಐಎಎಸ್ ಅಧಿಕಾರಿ ಜಿ.ವಿ. ಕೃಷ್ಣರಾವು ಅವರನ್ನು ವಸೂಲಾತಿ ಆಯುಕ್ತರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ರಾವು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿಕೊಳ್ಳಲಾಗಿದ್ದು, ಮುಂದಿನ ಆದೇಶದವರೆಗೆ ಅವರು ಈ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ರಾಜ್ಯದಲ್ಲಿ ಲೆಕ್ಕಕ್ಕೇ ಸಿಗದಷ್ಟು ಗುತ್ತಿಗೆದಾರರು, ಸಾಗಣೆದಾರರು, ರಫ್ತುದಾರರು, ದಾಸ್ತಾನುದಾರರು, ಖರೀದಿದಾರರು ಮತ್ತು ಇತರ ಮಧ್ಯವರ್ತಿಗಳು ಅಕ್ರಮ ಗಣಿಗಾರಿಕೆ ಚಟುವಟಿಕೆ, ಸಂಘಟಿತ ಅಪರಾಧ, ವ್ಯವಸ್ಥಿತ ಒಳಸಂಚಿನ ಮೂಲಕ ಅಕ್ರಮವಾಗಿ ಸ್ವತ್ತು ಗಳಿಸಿದ್ದಾರೆ.

ಹೀಗೆ ಅಕ್ರಮವಾಗಿ ಸಂಪಾದಿಸಿದ ಆಸ್ತಿಯನ್ನು ವಶಪಡಿಸಿಕೊಳ್ಳಲು ವಸೂಲಾತಿ ಆಯುಕ್ತರನ್ನು ನೇಮಿಸಬೇಕು ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಅದರಂತೆ ರೂಪಿಸಿದ್ದ ಕಾಯ್ದೆಗೆ ಅನುಗುಣವಾಗಿ ಈ ನೇಮಕಾತಿ ಮಾಡಲಾಗಿದೆ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಕೃಷ್ಣರಾವು ಅವರಿಗೆ ಮೂಲ ವೇತನ, ತುಟ್ಟಿ ಭತ್ಯೆ, ಮನೆ ಬಾಡಿಗೆ ಸೇರಿ ಮಾಸಿಕ ಒಟ್ಟು ₹ 2,95,256 ವೇತನ ನಿಗದಿಪಡಿಸಲಾಗಿದೆ.

'ಕಡ್ಡಾಯವಾಗಿ ನಾಡಗೀತೆ ಗಾಯನ ಅನುಷ್ಠಾನಗೊಳಿಸಿ'

ಪ್ರಜಾವಾಣಿ ವಾರ್ತೆ

ಪುರುಷೋತ್ತಮ ಬಿಳಿಮಲೆ

ಬೆಂಗಳೂರು: 'ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಿರುವ ಆದೇಶವನ್ನು ಅನುಷ್ಠಾನ ಮಾಡಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದ್ದಾರೆ. 'ರಾಷ್ಟ್ರಕವಿ ಕುವೆಂಪು ಅವರು ರಚಿಸಿದ 'ಜಯ ಭಾರತ ಜನನಿಯ ತನುಜಾತೆ' ಶೀರ್ಷಿಕೆಯ ನಾಡಗೀತೆಯನ್ನು, ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ದೈನಂದಿನ ಚಟುವಟಿಕೆಗಳು ಆರಂಭವಾಗುವ ಮುನ್ನ ಹಾಡುವುದನ್ನು ಕಡ್ಡಾಯಗೊಳಿಸಿ 20 ವರ್ಷಗಳೇ ಸಂದಿವೆ. ಈ ಆದೇಶ ಸಮರ್ಪಕ ಅನುಷ್ಠಾನ ಆಗದಿರುವುದು ವಿಷಾದನೀಯ' ಎಂದಿದ್ದಾರೆ.

'ರಾಷ್ಟ್ರೀಯ ಏಕತೆಯನ್ನು ಅತ್ಯಂತ ಸುಂದರವಾಗಿ ಅಭಿವ್ಯಕ್ತಿಸಿರುವ ಈ ನಾಡಗೀತೆ, ಇಂದಿಗೂ ನಮ್ಮ ಉಸಿರಾಗದಿರುವುದು ನಮ್ಮ ವ್ಯವಸ್ಥೆಯ ಸೋಲು ಎನ್ನದೆ ವಿಧಿಯಿಲ್ಲ. ವಿಶೇಷವಾಗಿ ಖಾಸಗಿ ಶಾಲೆಗಳು ನಾಡಗೀತೆಗೆ ಯಾವುದೇ ಮಾನ್ಯತೆಯನ್ನು ನೀಡದೆ ಅನಿಯಂತ್ರಿತ ಆಡಳಿತವನ್ನು ನಡೆಸುತ್ತಿದ್ದು, ಇದನ್ನು ಗಂಭೀರವಾಗಿ ಪರಿಗಣಿಸುವಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಕಠಿಣ ನಿರ್ದೇಶನ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ರಾಜ್ಯದಲ್ಲಿರುವ ಯಾವುದೇ ಪಠ್ಯಕ್ರಮದ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ, ನಾಡಗೀತೆಯನ್ನು ಕಡ್ಡಾಯವಾಗಿ ಹಾಡುವ ಸ್ವನಿಯಂತ್ರಿತ ವ್ಯವಸ್ಥೆಯನ್ನು ರೂಪಿಸಲು ಕ್ರಮವಹಿಸಬೇಕು' ಎಂದು ಒತ್ತಾಯಿಸಿದ್ದಾರೆ.

ವೀರೇಂದ್ರ ಬ್ಯಾಂಕ್ ಖಾತೆಗಳ ಪರಿಶೀಲನೆ

ಚಿತ್ರದುರ್ಗ: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶಾಸಕ ಕೆ.ಸಿ. ವೀರೇಂದ್ರ (ಪಪ್ಪಿ) ಅವರ ಬ್ಯಾಂಕ್ ಖಾತೆಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ)ದ ಅಧಿಕಾರಿಗಳು ಗುರುವಾರ ಪರಿಶೀಲಿಸಿದರು.

ವೀರೇಂದ್ರ ಅವರ ಹುಟ್ಟೂರು ಚಳ್ಳಕೆರೆ ನಗರದಲ್ಲಿರುವ ಫೆಡರಲ್ ಬ್ಯಾಂಕ್ ಹಾಗೂ ಕೋಟಕ್ ಮಹೀಂದ್ರ ಬ್ಯಾಂಕ್ ಶಾಖೆಗೆ ಮೂವರು ಅಧಿಕಾರಿಗಳು ತೆರಳಿ ವ್ಯವಹಾರದ ವಿವರ ಪಡೆದರು ಎಂದು ಮೂಲಗಳು ತಿಳಿಸಿವೆ.

ಬೆಳಿಗ್ಗೆ 10.30ಕ್ಕೆ ಪರಿಶೀಲನೆ ಆರಂಭಿಸಿದ ಇ.ಡಿ ಅಧಿಕಾರಿಗಳು ಮಧ್ಯಾಹ್ನದವರೆಗೂ ತಪಾಸಣೆ ನಡೆಸಿದರು. ಬ್ಯಾಂಕ್ ಬಳಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಲಂಚ: ಎಂಜಿನಿಯರ್ ಬಂಧನ

ಗಜೇಂದ್ರಗಡ: ಪಟ್ಟಣದಲ್ಲಿ ಕಾಮಗಾರಿ ಬಿಲ್ ಪಾವತಿಸಲು ಗುತ್ತಿಗೆದಾರರಿಂದ ₹3 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಲೋಕೋಪಯೋಗಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಮಹೇಶ ರಾಠೋಡ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಯಾದಗಿರಿ ಜಿಲ್ಲೆಯ ದ್ವಿತೀಯ ದರ್ಜೆ ಗುತ್ತಿಗೆದಾರ ಶರಣಪ್ಪ ಸಾಬಣ್ಣ ಅವರು ರೋಣ ತಾಲ್ಲೂಕಿನ ₹34 ಲಕ್ಷ ಮೌಲ್ಯದ ಕಾಮಗಾರಿಯನ್ನು ಆನ್‌ಲೈನ್ ಮೂಲಕ ಗುತ್ತಿಗೆ ಪಡೆದು 6 ತಿಂಗಳ ಹಿಂದೆಯೆ ಪೂರ್ಣಗೊಳಿಸಿದ್ದಾರೆ. ಕಾಮಗಾರಿ ಬಿಲ್ ಪಾವತಿಗೆ ಲೋಕೋಪಯೋಗಿ ಇಲಾಖೆಯ ಎಇಇ ಮಹೇಶ ರಾಠೋಡ ₹4.60 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂಬ ದೂರಿನ ಆಧಾರದ ಮೇಲೆ ಕಾರ್ಯಾಚರಣೆ ನಡೆಸಿದೆವು. ₹ 3 ಲಕ್ಷ ಮುಂಗಡವಾಗಿ ಹಣ ಪಡೆಯುತ್ತಿದ್ದ ಆರೋಪದ ಮೇಲೆ ಬಂಧಿಸಲಾಯಿತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆಯನ್ನು ಧಾರವಾಡದ ಲೋಕಾಯುಕ್ತ ಎಸ್‌ಪಿ ಎಸ್.ಟಿ. ಸಿದ್ದಲಿಂಗಪ್ಪ ಅವರ ಮಾರ್ಗದರ್ಶನದಲ್ಲಿ ಗದಗ ಉಪಾಧೀಕ್ಷಕ ವಿಜಯ ಬಿರಾದಾರ ಅವರ ನೇತೃತ್ವದಲ್ಲಿ ನಡೆಯಿತು.

ತೋಟಗಾರಿಕೆ ಬೆಳೆಗೆ ₹25000 ನೀಡಿದ್ದೆವು: ಬೊಮ್ಮಾಯಿ

'ರಾಜ್ಯ ಸರ್ಕಾರವು ಕೇಂದ್ರದ ದುಪ್ಪಟ್ಟು ಪರಿಹಾರ ನೀಡಲಿ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಉತ್ತರ ಕರ್ನಾಟಕದಲ್ಲಿನ ಪ್ರವಾಹ ಪರಿಸ್ಥಿತಿ ಕುರಿತು ಮಾಜಿ ಸಿಎಂ ಪ್ರತಿಕ್ರಿಯೆ
- 'ಪರಿಹಾರ: ನಮ್ಮ ಮಾದರಿ ಅನುಸರಿಸಲಿ
- ನವೆಂಬರ್ ಕ್ರಾಂತಿ; ಅವರ ಆಂತರಿಕ ವಿಚಾರ


ಬೊಮ್ಮಾಯಿ

ಬೆಂಗಳೂರು: ಉತ್ತರ ಕರ್ನಾಟಕದ ವಿವಿಧೆಡೆ ಉಂಟಾಗಿರುವ ಪ್ರವಾಹ ಸಂತ್ರಸ್ತರಿಗೆ ಕೇಂದ್ರ ಸರ್ಕಾರ ನೀಡುವ ಪರಿಹಾರದ ಎರಡು ಪಟ್ಟು ಮೊತ್ತವನ್ನು ರಾಜ್ಯ ಸರ್ಕಾರ ನೀಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಪ್ರವಾಹ ಆದಾಗ 63 ಹೊಸ ಗ್ರಾಮಗಳನ್ನೇ ಕಟ್ಟಿಸಿದ್ದರು. ಎರಡನೇ ಬಾರಿ ಪ್ರವಾಹ ಉಂಟಾದಾಗ ಸುಮಾರು ಮೂರು ಲಕ್ಷ ಮನೆಗಳನ್ನು ಮತ್ತು ₹5 ಲಕ್ಷದಂತೆ ಪರಿಹಾರವನ್ನು ನೀಡಿದ್ದೆವು. ನಾನು ಮುಖ್ಯಮಂತ್ರಿಯಾಗಿದ್ದಾಗ ಕೇಂದ್ರ ಸರ್ಕಾರ ನೀಡುವ ಪರಿಹಾರದ ಎರಡುಪಟ್ಟು ನೀಡಿದ್ದೆವು. ಪ್ರತಿ ಎಕರೆಗೆ ಒಣ ಬೇಸಾಯಕ್ಕೆ ₹ 13 ಸಾವಿರ, ನೀರಾವರಿಗೆ ₹ 18 ಸಾವಿರ, ತೋಟಗಾರಿಕೆ ಬೆಳೆಗಳಿಗೆ ₹ 25 ಸಾವಿರ ಪರಿಹಾರ ನೀಡಲಾಗಿತ್ತು. ಏಳು ಲಕ್ಷ ರೈತರು ಈ ಪರಿಹಾರ ಪಡೆದಿದ್ದರು. ಇದೇ ಮಾದರಿಯನ್ನು ಈಗಿನ ಸರ್ಕಾರ ಅನುಸರಿಸಲಿ' ಎಂದು ಒತ್ತಾಯಿಸಿದರು.

ಬಿಗ್‌ಬಾಸ್ ವಿವಾದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, 'ಎಷ್ಟು ದಿನದಿಂದ ಸಮಸ್ಯೆ ಇದೆ? ಈಗ್ಯಾಕೆ ಈ ಕ್ರಮ ಕೈಗೊಂಡಿದ್ದಾರೆ ಎನ್ನುವ ಪ್ರಶ್ನೆ ಮೂಡಿದೆ. ಬಿಗ್‌ಬಾಸ್ ಕಾರ್ಯಕ್ರಕ್ಕೆ ಅನುಮತಿ ಕೊಡಿಸುವ ಮೂಲಕ ಡಿ.ಕೆ. ಶಿವಕುಮಾರ್ ಇದರಲ್ಲಿ ತಮ್ಮ ಪಾತ್ರ ಇಲ್ಲ ಎನ್ನುವುದನ್ನು ಸಾಬೀತುಪಡಿಸುವ ಪ್ರಯತ್ನ ಮಾಡಿದ್ದಾರೆ' ಎಂದು ಹೇಳಿದರು.

'ನವೆಂಬರ್‌ನಲ್ಲಿ ಏನಾಗುತ್ತದೆ ಎಂಬುದು ಕಾಂಗ್ರೆಸ್‌ನ ಆಂತರಿಕ ವಿಚಾರ. ಕಾಂಗ್ರೆಸ್‌ನ ಶಾಸಕರು, ಸಚಿವರ ನಡುವೆ ಗೊಂದಲ ಇದೆ. ಮುಖ್ಯಮಂತ್ರಿಯಾಗಿ ಮುಂದುವರಿಯುವುದಾಗಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಅವರು ಮುಂದುವರಿಯುವುದಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಕ್ರಾಂತಿ ನವೆಂಬರ್‌ನಲ್ಲಿ ಆಗುತ್ತದಾ? ಡಿಸೆಂಬರ್‌ನಲ್ಲಿ ಆಗುತ್ತದಾ ಎಂಬುದನ್ನು ಕಾದು ನೋಡಬೇಕು' ಎಂದು ತಿಳಿಸಿದರು.

ತೆರೆದ ಗರ್ಭಗುಡಿಯ ಬಾಗಿಲು: ದರ್ಶನ ನೀಡಿದ ಹಾಸನಾಂಬೆ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯ ಅಧಿದೇವತೆ ಹಾಸನಾಂಬ ದೇಗುಲದ ಗರ್ಭಗುಡಿಯ ಬಾಗಿಲನ್ನು ಗುರುವಾರ ಮಧ್ಯಾಹ್ನ 12.21ಕ್ಕೆ ವಿಧ್ಯುಕ್ತವಾಗಿ ತೆರೆಯಲಾಯಿತು. ವರ್ಷಕ್ಕೊಮ್ಮೆ ನಡೆಯುವ ದೇವಿಯ ದರ್ಶನಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

ತಳವಾರ ವಂಶಸ್ಥ ನರಸಿಂಹರಾಜ್ ಅರಸು ಅವರು, ವಿಶೇಷ ಪೂಜೆ ಸಲ್ಲಿಸಿ, ಮೂರು ಸುತ್ತು ಪ್ರದಕ್ಷಿಣೆ ಹಾಕಿದ ಬಳಿಕ ಬನ್ನಿ, ಬಾಳೆ ಕಂದನ್ನು ವಿಶೇಷ ಖಡ್ಗದಲ್ಲಿ ಕತ್ತರಿಸಿದರು. ನಂತರ ಅರ್ಚಕರು ಗರ್ಭಗುಡಿಯ ಬಾಗಿಲು ತೆರೆದರು.

ದೇಗುಲದ ಸುತ್ತಲೂ ಪೊಲೀಸ್ ಬಿಗಿ ಭದ್ರತೆ ಏರ್ಪಡಿಸಿದ್ದು, ಮೊದಲ ದಿನ ಸ್ಥಳೀಯರು ದರ್ಶನಕ್ಕೆ ಪರದಾಡಿದರು. ಸೇವೆಗೆ ನಿಯೋಜನೆಗೊಂಡ ಸಿಬ್ಬಂದಿ, ಮಾಧ್ಯಮದವರಿಗಷ್ಟೇ ಅವಕಾಶ ನೀಡಿದ್ದರಿಂದ ಸ್ಥಳೀಯರು ಆಕ್ರೋಶಗೊಂಡು, ದೇಗುಲದ ಎದುರು ಪ್ರತಿಭಟಿಸಿದರು. ಶಾಸಕರು, ಸಚಿವರು ಸೇರಿ ಆಡಳಿತದ ವಿರುದ್ಧ ಘೋಷಣೆ ಕೂಗಿದರು.

ನಂತರ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, 'ಈ ಬಾರಿ ಸಾಮಾನ್ಯ ಜನ ಸುಲಲಿತವಾಗಿ ದರ್ಶನ ಮಾಡಬೇಕು ಎಂಬುದಷ್ಟೇ ನಮ್ಮ ಉದ್ದೇಶ. ಅದಕ್ಕಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಗಣ್ಯರ ದರ್ಶನಕ್ಕೆ ಸಮಯ ನಿಗದಿಪಡಿಸಿದ್ದು, ನಂತರ ಯಾವುದೇ ಗಣ್ಯರಿಗೆ ಅವಕಾಶ ನೀಡುವುದಿಲ್ಲ' ಎಂದರು.

ಮೊದಲ ದಿನ ಕೆಲವೇ ಜನರಿಗೆ ದರ್ಶನ ಲಭ್ಯವಾಯಿತು. ಸುಣ್ಣ–ಬಣ್ಣ ಬಳಿದು, ದೇವಿಗೆ ಆಭರಣ ತೊಡಿಸಿ, ಅಲಂಕಾರ ಮಾಡುವ ಉದ್ದೇಶದಿಂದ ಮಧ್ಯಾಹ್ನ 1.30ಕ್ಕೆ ಮತ್ತೆ ಗರ್ಭಗುಡಿಯ ಬಾಗಿಲು ಮುಚ್ಚಲಾಯಿತು. 'ಶುಕ್ರವಾರ ಬೆಳಿಗ್ಗೆ 7 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ದರ್ಶನಕ್ಕೆ ಅವಕಾಶ ನೀಡಲಾಗಿದೆ. ಅ.11 ರಿಂದ ಅ.22 ರವರೆಗೆ ನಿರಂತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ' ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ತುಮಕೂರು ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್ ಹಾಜರಿದ್ದರು.

ಕೇಂದ್ರಕ್ಕೆ ಕರ್ನಾಟಕ ಕುರುಬರ ಸಮಾಜ ಸಂಘ ಆಗ್ರಹ

'ಕುರುಬರನ್ನು ಎಸ್‌.ಟಿ. ಪಟ್ಟಿಗೆ ಸೇರಿಸಿ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪಟ್ಟಿಗೆ ಸೇರಲು ಅರ್ಹತೆ ಹೊಂದಿದ್ದಾರೆ: ಕುರುಬರ ಮುಕುಡಪ್ಪ
- ಸೌಲಭ್ಯ ಕಿತ್ತುಕೊಂಡವರು ವಾಲ್ಮೀಕಿ ಜನಾಂಗದವರು ಎಂದು ಆರೋಪ
- ಕುರುಬರು ಮೂಲ ನಿವಾಸಿಗಳು: ಪ್ರತಿಪಾದನೆ

ಬೆಂಗಳೂರು: 'ರಾಜ್ಯದ ಎಲ್ಲ ಕುರುಬರನ್ನು ಕೂಡಲೇ ಪರಿಶಿಷ್ಟ ಪಂಗಡಗಳ (ಎಸ್.ಟಿ) ಪಟ್ಟಿಗೆ ಸೇರಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಬೇಕು' ಎಂದು ಕರ್ನಾಟಕ ಕುರುಬರ (ಕುರುಮನ್ಸ್) ಸಮಾಜ ಸಂಘ ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಗೌರವಾಧ್ಯಕ್ಷ ಕುರುಬರ ಮುಕುಡಪ್ಪ, 'ಎಸ್‌.ಟಿ. ಪಟ್ಟಿಗೆ ಕುರುಬರ ಸೇರ್ಪಡೆಗೆ ಸಂಬಂಧಿಸಿದಂತೆ, 2020ರ ಸೆಪ್ಟೆಂಬರ್‌ನಲ್ಲಿ ಕಾಗಿನೆಲೆ ಪೀಠಾಧಿಪತಿ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ಆಗ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಅವರನ್ನು ಒಳಗೊಂಡ ನಿಯೋಗ ನವದೆಹಲಿಯಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿತ್ತು. ಈ ಸಂಬಂಧ ಬುಡಕಟ್ಟು ವ್ಯವಹಾರಗಳ ಖಾತೆ ರಾಜ್ಯ ಸಚಿವೆ ರೇಣುಕಾ ಸಿಂಗ್, ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರನ್ನು ಭೇಟಿ ಮಾಡಲಾಗಿತ್ತು. ರಾಜ್ಯದಲ್ಲಿ ಎಸ್‌.ಟಿ. ಪಟ್ಟಿಗೆ ಸೇರ್ಪಡೆಯಾಗುವ ಅರ್ಹತೆಯನ್ನು ಕುರುಬರು ಹೊಂದಿದ್ದಾರೆ' ಎಂದು ಹೇಳಿದರು.

'ವಾಲ್ಮೀಕಿ ಜನಾಂಗಕ್ಕಿಂತ ಮೊದಲೇ ಎಸ್‌.ಟಿ.ಗೆ ಸೇರುವ ಅರ್ಹತೆ ಹೊಂದಿದ್ದರೂ ಸೇರದಿರುವುದು ದುರಂತ. ಈಗ ಹೋರಾಟ ಅನಿವಾರ್ಯವಾಗಿದೆ. ಈ ಹಿಂದೆ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಕುರುಬರನ್ನು ಎಸ್‌.ಟಿ. ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕೆಲ ಮಾಹಿತಿಗಳನ್ನು ಕಳೆದ ತಿಂಗಳು ಕೇಳಿದೆ. ರಾಜ್ಯ ಸರ್ಕಾರವು ಎಲ್ಲ ಕುರುಬರನ್ನು ಎಸ್‌.ಟಿ. ಪಟ್ಟಿಗೆ ಸೇರಿಸಲು ಕೇಂದ್ರಕ್ಕೆ ಅಗತ್ಯ ಮಾಹಿತಿ ನೀಡಬೇಕು' ಎಂದರು.

'ಕುರುಬರು ದೇಶದ ಮೂಲ ನಿವಾಸಿಗಳು. ಜೇನು ಕುರುಬ, ಕಾಡು ಕುರುಬ, ಸೋಲಿಗ, ಇಳುವರ, ಕೊಡಗಿನ ಕುರುಬರು ಪರಿಶಿಷ್ಟ ಪಂಗಡದಲ್ಲಿ ಮೊದಲೇ ಇದ್ದರು. ಅವರು ಎಸ್‌.ಟಿ.ಯಲ್ಲಿ ಪಡೆಯುತ್ತಿದ್ದ ಸೌಲಭ್ಯವನ್ನು ಕಿತ್ತುಕೊಂಡವರು ವಾಲ್ಮೀಕಿ ಜನಾಂಗದವರು' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂತೋಷ ಗೌಡಪ್ಪನವರ, ವಸಂತ ಬಿಷ್ಟಣ್ಣನವರ್, ಬಿ. ದಯಾನಂದ ಮೂರ್ತಿ, ಶಿವಪ್ಪ ಪೂಜಾರಿ, ಎನ್. ಮಂಜುನಾಥ್ ಅವರು ಉಪಸ್ಥಿತರಿದ್ದರು.

ಬೋನಾಳ ಪಕ್ಷಿಧಾಮದ ಸಂರಕ್ಷಣೆ, ಪರಿಸರ ಪ್ರವಾಸೋದ್ಯಮಕ್ಕೆ ಇಂಬು

₹20 ಕೋಟಿ ಸಮಗ್ರ ಯೋಜನೆ ಸಿದ್ಧ

ಮಲ್ಲಿಕಾರ್ಜುನ ನಾಲವಾರ

ಯಾದಗಿರಿ: ರಾಜ್ಯದ ಎರಡನೇ ದೊಡ್ಡ ಪಕ್ಷಿಧಾಮವಾಗಿರುವ ಸುರಪುರ ಸಮೀಪದ ಬೋನಾಳ ಪಕ್ಷಿಧಾಮದಲ್ಲಿನ ಜೀವವೈವಿಧ್ಯದ ಸಂರಕ್ಷಣೆ, ಸಮಗ್ರ ಅಭಿವೃದ್ಧಿ ಹಾಗೂ ಪರಿಸರ ಪ್ರವಾಸೋದ್ಯಮದ ಹಿತದೃಷ್ಟಿಯಿಂದ ಯಾದಗಿರಿ ಪ್ರಾದೇಶಿಕ ಅರಣ್ಯ ವಿಭಾಗವು ₹ 20 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದೆ.

ಬೋನಾಳ ಪಕ್ಷಿಧಾಮ 676 ಎಕರೆ ಪ್ರದೇಶದಲ್ಲಿ ವಿಸ್ತರಿಸಿಕೊಂಡಿದ್ದು, ಜಲಮೂಲದ ಸುತ್ತಲೂ ವಿಶಾಲವಾದ ಕೃಷಿ ಭೂಮಿ ಮತ್ತು ಕಲ್ಲಿನ ಬಂಡೆಗಳ ಬೆಟ್ಟಗಳಿಂದ ಕೂಡಿದೆ. ದೇಶ ವಿದೇಶಗಳಿಂದ ಸಾವಿರಾರು ಸಂಖ್ಯೆಯ ನಾನಾ ಬಗೆಯ ಪಕ್ಷಿಗಳು ಸಂತಾನೋತ್ಪತ್ತಿಗಾಗಿ ಇಲ್ಲಿಗೆ ಬರುತ್ತಿದ್ದವು. ಮಾನವನ ಅತಿಯಾದ ಹಸ್ತಕ್ಷೇಪ, ಆಹಾರ ಲಭ್ಯತೆಯ ಕೊರತೆಯಂತಹ ಹಲವು ಕಾರಣಗಳಿಂದ ಅವುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ.

ಇದನ್ನು ಮನಗಂಡಿರುವ ಪ್ರಾದೇಶಿಕ ಅರಣ್ಯ ವಿಭಾಗವು 2030ರ ವರೆಗೆ ಹಂತ– ಹಂತವಾಗಿ ಅಭಿವೃದ್ಧಿಪಡಿಸುವ ಯೋಜನೆ ಹಾಕಿಕೊಂಡಿದೆ. ಪಕ್ಷಿಗಳ ಆವಾಸಸ್ಥಾನ ಮತ್ತು ಸುತ್ತಲಿನ ಪರಿಸರ ವ್ಯವಸ್ಥೆಯ ನಿರ್ವಹಣೆಗೆ ₹6.35 ಕೋಟಿ, ಪ್ರವಾಸಿಗರ ಸ್ನೇಹಿ ಮೂಲಸೌಕರ್ಯಗಳಿಗೆ ₹ 10.75 ಕೋಟಿ ಹಾಗೂ ಸಿಬ್ಬಂದಿ ನೇಮಕಕ್ಕೆ ₹ 2.90 ಕೋಟಿ ಸೇರಿ ₹ 20 ಕೋಟಿ ಮೊತ್ತದ ಡಿಪಿಆರ್ ತಯಾರಿಸಿದೆ. ಶೀಘ್ರವೇ ಅರಣ್ಯ ಇಲಾಖೆಗೆ ಸಲ್ಲಿಕೆಯೂ ಮಾಡಲಿದೆ.

> ಡಿಪಿಆರ್ ಮಾಹಿತಿ ಪಡೆದು, ಅರಣ್ಯ ಇಲಾಖೆಯ ಸಚಿವರ ಜೊತೆಗೆ ಚರ್ಚಿಸಿ ಅನುದಾನ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.
> **ಶರಣಬಸಪ್ಪ ದರ್ಶನಾಪುರ,** ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ

ಅರಣ್ಯ ಇಲಾಖೆಯು ಸಮ್ಮತಿಸಿ ಅನುದಾನ ಮಂಜೂರು ಮಾಡಿಸಿದರೆ 2026ರಲ್ಲಿ ₹ 4.36 ಕೋಟಿ, 2027ರಲ್ಲಿ ₹ 7.39 ಕೋಟಿ, 2028ರಲ್ಲಿ ₹ 4.17 ಕೋಟಿ, 2029ರಲ್ಲಿ ₹ 1.35 ಕೋಟಿ ಹಾಗೂ 2030ರಲ್ಲಿ ₹ 2.73 ಕೋಟಿ ಅನುದಾನವನ್ನು ವಿನಿಯೋಗಿಸುವ ಯೋಜನೆಯನ್ನು ಅಧಿಕಾರಿಗಳು ಹಾಕಿಕೊಂಡಿದ್ದಾರೆ.

ಕೆರೆಯ ಸುತ್ತಲೂ ಹಣ್ಣಿನ ಮತ್ತು ನೆರಳು ಕೊಡುವ ವಿವಿಧ ಜಾತಿಯ ಮರಗಳು ಮತ್ತು ಪೊದೆ ಗಿಡಗಳನ್ನು ನೆಡುವುದು; ಗೂಡು ಕಟ್ಟಿಕೊಳ್ಳಲು ಹಾಗೂ ಮೊಟ್ಟೆಗಳು ಇರಿಸಲು ಅನುಕೂಲ ಆಗುವಂತೆ ಐದು ಮಣ್ಣಿನ ದ್ವೀಪಗಳ ನಿರ್ಮಾಣ; ಪಕ್ಷಿಗಳ ವಿಶ್ರಾಂತಿ ಹಾಗೂ ವೀಕ್ಷಣೆಗಾಗಿ ಎತ್ತರದ 75 ಕೃತಕ ಪಕ್ಷಿಗಳ ಸ್ಟ್ಯಾಂಡ್ ನಿರ್ಮಾಣ; ಪಕ್ಷಿಗಳಿಗೆ ಜೀವಕ್ಕೆ ಎರವಾಗುವ ಪ್ರಭೇದಗಳ ನಿರ್ಮೂಲನೆ; ನೀರಿನ ಗುಣಮಟ್ಟ ಕಾಪಾಡಿ ಹಾಗೂ ಆವಾಸಸ್ಥಾನದ ಸ್ವಾಸ್ಥ್ಯ ಸುಧಾರಣೆಗೆ ಒಟ್ಟು ₹ 6.35 ಕೋಟಿ ಬೇಕಾಗುತ್ತದೆ ಎಂದು ಡಿಪಿಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಪ್ರವಾಸಿಗರ ಸ್ನೇಹಿಯಾದ ಮೂರು ಪಕ್ಷಿ ವೀಕ್ಷಣೆ ಗೋಪುರ ನಿರ್ಮಾಣ, ಬೋಟಿಂಗ್ ಬೇ, ಕ್ಯಾಂಟೀನ್ ಮತ್ತು ಶೌಚಾಲಯ, ಕೃತಕ ಕಾರಂಜಿಗಳು, ಟಿಕೆಟ್ ಕೌಂಟರ್, ಪ್ರವೇಶದ್ವಾರ ಸೇರಿ ಇತರೆ ಮೂಲಸೌಕರ್ಯಗಳಿಗೆ ₹ 10.75 ಕೋಟಿ ಅಗತ್ಯವಿದೆ. ದೋಣಿ ನಡೆಸುವವರು, ಸ್ವಚ್ಛತಾ ಕಾರ್ಮಿಕರು, ಭದ್ರತಾ ಸಿಬ್ಬಂದಿ, ಕಂಪ್ಯೂಟರ್ ಆಪರೇಟರ್‌ಗಳನ್ನು ನಿಯೋಜನೆಗೆ ಸುಮಾರು ₹ 2.90 ಕೋಟಿಯ ಅವಶ್ಯವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಬೋನಾಳ ಕೆರೆ ಪಕ್ಷಿಧಾಮ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಬಾಳು ಇರುವುದು ಭೋಗಕ್ಕಲ್ಲ, ತ್ಯಾಗಕ್ಕೆ. ಇತರರ ಸೇವೆಗಾಗಿ. ಆತ್ಮಸಂಯಮ ಇಲ್ಲದೆ ಸೇವೆ ಸಾಧ್ಯವಿಲ್ಲ.

– ಮಹಾತ್ಮ ಗಾಂಧೀಜಿ

ಸಂಪಾದಕೀಯ

ಹೆಚ್ಚುತ್ತಿರುವ ನಿರುದ್ಯೋಗದ ಝಳ ಸರ್ಕಾರಿ ಹುದ್ದೆಗಳು ಭರ್ತಿಯಾಗಲಿ

ಕೆಲವು ವರ್ಷಗಳಿಂದ ಸರ್ಕಾರಿ ಉದ್ಯೋಗಗಳ ನೇರ ನೇಮಕಾತಿ ಪ್ರಕ್ರಿಯೆ ರಾಜ್ಯದಲ್ಲಿ ಸ್ಥಗಿತಗೊಂಡಿರುವುದನ್ನು ಪ್ರತಿಭಟಿಸಿ, ನಿರುದ್ಯೋಗಿ ಯುವಜನರು ರಾಜ್ಯದ ವಿವಿಧ ಭಾಗಗಳಲ್ಲಿ ಬೀದಿಗೆ ಇಳಿಯುತ್ತಿದ್ದಾರೆ. ಧಾರವಾಡದಲ್ಲಿ ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘಟನೆ ವತಿಯಿಂದ ಇತ್ತೀಚೆಗೆ ನಡೆದ ಬೃಹತ್ ಪ್ರತಿಭಟನೆಯಲ್ಲಿ ಸಾವಿರಾರು ಉದ್ಯೋಗಾಕಾಂಕ್ಷಿಗಳು ಭಾಗವಹಿಸಿ, ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಬೆಳಗಾವಿಯಲ್ಲಿ ಉದ್ಯೋಗಾಕಾಂಕ್ಷಿ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆದಿದೆ. ಈ ಪ್ರತಿಭಟನೆಗಳನ್ನು ರಾಜ್ಯದ ಎಲ್ಲ ಭಾಗಗಳ ನಿರುದ್ಯೋಗಿ ಯುವಜನರ ತವಕ–ತಲ್ಲಣ ಹಾಗೂ ಒಡಲೊಳಗಿನ ಬೆಂಕಿಯ ರೂಪದಲ್ಲಿ ಸರ್ಕಾರ ಗಮನಿಸಬೇಕಾಗಿದೆ. ದುರದೃಷ್ಟಕರ ಸಂಗತಿಯೆಂದರೆ, ನೇರ ನೇಮಕಾತಿ ಕೊನೆಯದಾಗಿ ನಡೆದದ್ದು ಯಾವಾಗ ಎನ್ನುವುದೇ ಸರ್ಕಾರಕ್ಕೆ ಮರೆತುಹೋದಂತಿದೆ ಅಥವಾ ಯುವಜನರಿಗೆ ಉದ್ಯೋಗ ಒದಗಿಸುವುದು ತನ್ನ ಜವಾಬ್ದಾರಿ ಎನ್ನುವುದನ್ನು ಸರ್ಕಾರ ಮರೆತಿರುವಂತಿದೆ. ವಯೋನಿವೃತ್ತಿಯೂ ಸೇರಿದಂತೆ ಬೇರೆ ಬೇರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡಲು ಇತ್ತೀಚಿನ ವರ್ಷಗಳಲ್ಲಿ ಯಾವ ಸರ್ಕಾರವೂ ಮುತುವರ್ಜಿ ತೋರಿಸಿಲ್ಲ. ದಿನಗೂಲಿ, ಗುತ್ತಿಗೆ, ಅರೆಕಾಲಿಕ ಉದ್ಯೋಗಗಳ ಮೂಲಕ ನೇರ ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರಗಳು ಮುಂದೂಡುತ್ತಲೇ ಬರುತ್ತಿವೆ. ಶಿಕ್ಷಣ ಕ್ಷೇತ್ರದಲ್ಲೂ, ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಅತಿಥಿ ಬೋಧಕರ ಮೂಲಕವೇ ಶೈಕ್ಷಣಿಕ ವರ್ಷಗಳನ್ನು ನಿಭಾಯಿಸುವ ಕಸರತ್ತನ್ನು ಸರ್ಕಾರ ಹಲವು ವರ್ಷಗಳಿಂದ ಮಾಡುತ್ತಿದೆ. ಈ ಮೂಲಕ, ಅತಿಥಿ ಶಿಕ್ಷಕರ ಶೋಷಣೆಯ ಜೊತೆಗೆ ಮಕ್ಕಳಿಗೂ ಅನ್ಯಾಯ ಮಾಡಲಾಗುತ್ತಿದೆ.

ನಿರುದ್ಯೋಗ ಸಮಸ್ಯೆಯ ಝಳ ರಾಜ್ಯದಾದ್ಯಂತ ಹೆಚ್ಚುತ್ತಿದೆ. ಯಾವುದೇ ನೆಪ ಮುಂದಿಡದೆ, ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಈಗಲಾದರೂ ಮನಸ್ಸು ಮಾಡಬೇಕು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 8,334, ಕೃಷಿ ಇಲಾಖೆಯಲ್ಲಿ 6,773 ಹಾಗೂ ಸರ್ಕಾರಿ ಅನುದಾನಿತ ಶಾಲೆಗಳಲ್ಲಿನ 18,500 ಹುದ್ದೆಗಳು ಸೇರಿದಂತೆ 43 ಇಲಾಖೆಗಳಲ್ಲಿ 2.84 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಉಳಿದಿವೆ. ತೆರವಾದ ಹುದ್ದೆಗಳಿಗೆ ಆಯಾ ವರ್ಷವೇ ನೇಮಕಾತಿ ನಡೆಸಿದರೆ, ಅರ್ಹ ನಿರುದ್ಯೋಗಿಗಳಿಗೆ ಕೆಲಸ ದೊರೆತಂತಾಗುತ್ತದೆ, ಆಡಳಿತ ಯಂತ್ರದ ಮೇಲಿನ ಒತ್ತಡವೂ ಕಡಿಮೆಯಾಗುತ್ತದೆ. ಆದರೆ, ವಿವಿಧ ಕಾರಣಗಳನ್ನೊಡ್ಡಿ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವುದು ಸಾಮಾನ್ಯ ಎನ್ನುವಂತಾಗಿದೆ. ನೇಮಕಾತಿ ಪ್ರಕ್ರಿಯೆ ಮುಂದೆ ಹೋದಂತೆಲ್ಲ ಅರ್ಹ ಅಭ್ಯರ್ಥಿಗಳು ವಯೋಮಿತಿ ದಾಟಿ, ಸರ್ಕಾರಿ ಉದ್ಯೋಗಕ್ಕೆ ಅನರ್ಹರಾಗುತ್ತಾರೆ. ಶಿಕ್ಷಕ, ಪೊಲೀಸ್ ಹುದ್ದೆ ಸೇರಿದಂತೆ ಸರ್ಕಾರದ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ನಿರೀಕ್ಷೆಯಿಂದ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳು ತಮ್ಮ ವಯಸ್ಸಿನೊಂದಿಗೆ ಕನಸುಗಳೂ ಜಾರಿಹೋಗುತ್ತಿರುವ ಆತಂಕ ಎದುರಿಸುತ್ತಿದ್ದಾರೆ. ಮಕ್ಕಳ ನೌಕರಿಯ ಮೂಲಕ ನೆಮ್ಮದಿಯ ಬದುಕಿಗೆ ಹಂಬಲಿಸುವ ಕುಟುಂಬಗಳು ಕೂಡ ಅತಂತ್ರ ಪರಿಸ್ಥಿತಿಯಲ್ಲಿ ಇರುವಂತಾಗಿದೆ.

ಸರ್ಕಾರಿ ವಲಯದ ಜೊತೆಗೆ ಖಾಸಗಿ ವಲಯದಲ್ಲೂ ವ್ಯಾಪಕ ಉದ್ಯೋಗ ಸೃಷ್ಟಿ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಖಾಸಗಿ ವಲಯಕ್ಕೆ ಅಗತ್ಯವಾದ ಮೂಲ ಸೌಕರ್ಯಗಳನ್ನು ಒದಗಿಸಿಕೊಡುವುದು ಸರ್ಕಾರದ ಹೊಣೆಗಾರಿಕೆ. ರಸ್ತೆ ಗುಂಡಿ, ಸಂಚಾರ ದಟ್ಟಣೆ ಸಮಸ್ಯೆಯಂಥ ವಿಷಯಗಳು ಪ್ರಸ್ತಾಪವಾದಾಗಲೆಲ್ಲ ಕರ್ನಾಟಕದ ಉದ್ಯಮಿಗಳನ್ನು ಸೆಳೆಯಲು ನೆರೆಯ ರಾಜ್ಯಗಳು ತುದಿಗಾಲಲ್ಲಿ ನಿಂತಿರುತ್ತವೆ. ಉದ್ಯಮಿಗಳನ್ನು ಸೆಳೆಯಲು ರಾಜ್ಯಗಳು ಸ್ಪರ್ಧೆ ನಡೆಸುತ್ತಿರುವ ಸಂದರ್ಭದಲ್ಲಿ, ಕರ್ನಾಟಕಕ್ಕೆ ಇರುವ ವರ್ಚಸ್ಸನ್ನು ಬಳಸಿಕೊಂಡು ಹೆಚ್ಚಿನ ಉದ್ಯಮ–ಉದ್ಯೋಗಗಳು ರೂಪುಗೊಳ್ಳುವುದಕ್ಕೆ ಅಗತ್ಯವಾದ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು. ರಾಜ್ಯ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಜನಸಾಮಾನ್ಯರ ಬದುಕು ಕೊಂಚ ಸಹನೀಯಗೊಂಡಿದೆ ಎನ್ನುವುದು ನಿಜ. ಆದರೆ, ಉದ್ಯೋಗ ಸೃಷ್ಟಿಯ ಮೂಲಕವಷ್ಟೇ ಕುಟುಂಬಗಳ ಸಬಲೀಕರಣಕ್ಕೆ ಸ್ಥಿರತೆ ದೊರೆಯುತ್ತದೆ ಎನ್ನುವುದನ್ನು ಸರ್ಕಾರ ಮರೆಯಬಾರದು. ನಿರುದ್ಯೋಗ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ನಿರುದ್ಯೋಗಿಗಳ ಧ್ವನಿ ಆಗಬೇಕಾಗಿದ್ದ ವಿರೋಧ ಪಕ್ಷಗಳು ಧಾರ್ಮಿಕ ಚಟುವಟಿಕೆಗಳಲ್ಲಿ ಬಿಡುವು ಕಳೆದುಕೊಂಡು ತಮ್ಮ ಹೊಣೆಗಾರಿಕೆಯನ್ನೇ ನಿರ್ಲಕ್ಷಿಸಿವೆ. ಹಾಗಾಗಿ, ಉದ್ಯೋಗದ ಹಕ್ಕನ್ನು ಮಂಡಿಸಲು ಬೀದಿಗಿಳಿಯುವುದರ ಹೊರತು ಯುವಜನರಿಗೆ ಬೇರೆ ದಾರಿ ಉಳಿದಿಲ್ಲ. ಯುವಜನರ ಹತಾಶೆ ಆಕ್ರೋಶವಾಗಿ ಬದಲಾಗುವುದಕ್ಕೆ ಅವಕಾಶ ಕಲ್ಪಿಸದೆ, ಸರ್ಕಾರಿ ಹುದ್ದೆಗಳನ್ನು ತುಂಬಲು ಸರ್ಕಾರ ತಕ್ಷಣ ಮುಂದಾಗಬೇಕು ಹಾಗೂ ನಿರ್ದಿಷ್ಟ ಕಾಲಮಿತಿಗೆ ಅನುಗುಣವಾಗಿ ವಯೋಮಿತಿಯನ್ನು ಹೆಚ್ಚಿಸಬೇಕು. ನಿರುದ್ಯೋಗ ನಿವಾರಣೆ ಉದ್ದೇಶದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಸರ್ಕಾರ ಉದ್ಯೋಗ ಮೇಳಗಳನ್ನು ನಡೆಸುತ್ತಿದೆ. ಅವುಗಳ ಫಲಶ್ರುತಿಯ ಬಗ್ಗೆ ಪರಾಮರ್ಶೆಯೂ ನಡೆಯಬೇಕಾಗಿದೆ.

ಜಾಲತಾಣ

ವರದಿ ಬಹಿರಂಗಪಡಿಸಿ

ರಾಜ್ಯ ಸಚಿವ ಸಂಪುಟವು ₹26 ಸಾವಿರ ಕೋಟಿ ಮೊತ್ತದ ಸುರಂಗ ರಸ್ತೆ ಯೋಜನೆಗೆ ಹೆಗ್ಡಾ ರೆಡ್ಡಿ ಅವರು ನೀಡಿದ ವರದಿ ಆಧರಿಸಿ ಅನುಮೋದನೆ ನೀಡಿತ್ತು. ಆ ವರದಿ ಎಲ್ಲಿದೆ? ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅವರು, ಈ ವರದಿಯನ್ನು ಬಹಿರಂಗಪಡಿಸಬೇಕು. ಅಷ್ಟಕ್ಕೂ ವರದಿಯನ್ನು ಗೋಪ್ಯವಾಗಿಡುವ ಔಚಿತ್ಯವೇನು?

ರವಿ ಕೀರ್ತಿಗೌಡ, 'ಎಕ್ಸ್'ನಿಂದ

ಕಿಡಿನುಡಿ



ಒಂದೆಡೆ ಮನರಂಜನಾ ಉದ್ಯಮ ನಡೆಯಬೇಕು; ಇನ್ನೊಂದೆಡೆ ಮಾಲಿನ್ಯವಾಗದಂತೆ ನೋಡಿಕೊಳ್ಳಬೇಕಿದೆ. ಜಾಲಿವುಡ್ ಸ್ಟುಡಿಯೊಕ್ಕೆ ಸಂಬಂಧಿಸಿದ ಸಮಸ್ಯೆ ಬಹಳಷ್ಟು ದಿನಗಳಿಂದ ಇದೆ. ಈಗ ಏಕೆ ಕ್ರಮ ಕೈಗೊಂಡಿದ್ದಾರೆ? ಇಕೊ ಎಕನಾಮಿಕ್ಸ್ ಅಂತಾರೆ: ಆರ್ಥಿಕತೆಯೂ ನಡೆಯಬೇಕು, ಪರಿಸರವೂ ಉಳಿಯಬೇಕು. ಅದು ಈ ರಾಜ್ಯದಲ್ಲಿ ತಪ್ಪಿಹೋಗಿದೆ. ರಾಜ್ಯದಲ್ಲಿ ಎಲ್ಲವೂ ದಾರಿತಪ್ಪಿದೆ. ನಡೆದದ್ದೇ ದಾರಿ ಎನ್ನುವಂತಾಗಿದೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 10-10-2000

• **ಜಯಲಲಿತಾ ಅವರಿಗೆ 3 ವರ್ಷ ಜೈಲು ಶಿಕ್ಷೆ**

ಚೆನ್ನೈ, ಅ. 9 (ಪಿಟಿಐ)– ತಾನ್ಸಿ ಭೂ ಖರೀದಿ ಹಗರಣಕ್ಕೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ ವಿಶೇಷ ನ್ಯಾಯಾಲಯ ಇಂದು ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರಿಗೆ, ಮೂರು ಹಾಗೂ ಎರಡು ವರ್ಷಗಳ ಕಠಿಣ ಕಾರಾಗೃಹ ವಾಸ ಶಿಕ್ಷೆ ನೀಡಿತು.

ಈ ಎರಡೂ ಶಿಕ್ಷೆಗಳನ್ನು ಏಕಕಾಲದಲ್ಲಿ ಜಾರಿಗೊಳಿಸಲಾಗುವುದೇ, ಇಲ್ಲವೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಯಾವುದೇ ಒಂದು ಶಿಕ್ಷೆ ಜಾರಿಯಾದರೂ ಜಯಲಲಿತಾ ಅವರ ರಾಜಕೀಯ ಜೀವನದ ಮೇಲೆ ಭಾರಿ ಪರಿಣಾಮ ಬೀರಲಿದೆ.

• **ರಾಜ್ಯಾದ್ಯಂತ ಭಾರಿ ಮಳೆಗೆ 9 ಮಂದಿ ಬಲಿ**

ಬೆಂಗಳೂರು, ಅ. 9– ಕಳೆದ ಎರಡು ದಿನಗಳಿಂದ ರಾಜ್ಯಾದ್ಯಂತ ಸುರಿಯುತ್ತಿರುವ ಭಾರಿ ಮಳೆಗೆ 9 ಮಂದಿ ಬಲಿಯಾಗಿದ್ದು, ಆಸ್ತಿಪಾಸ್ತಿಗಳಿಗೆ ಭಾರಿ ಹಾನಿಯಾಗಿದೆ.

75 ವರ್ಷಗಳ ಹಿಂದೆ

ಸೋಮವಾರ, 10-10-1950

• **ವಿಮಾನ ಕಾರ್ಖಾನೆಯಲ್ಲಿ ಪೂರ್ಣ ಕೆಲಸಾರಂಭ**

ಬೆಂಗಳೂರು, ಅ.9: ಮುಷ್ಕರವನ್ನು ಕೊನೆಗಾಣಿಸಿ ಹಿಂದೂಸ್ಥಾನ್ ವಿಮಾನ ಕಾರ್ಖಾನೆ ಕೆಲಸಗಾರರು ಇಂದು ಕೆಲಸಕ್ಕೆ ಹಿಂದಿರುಗಿದರು. ಮುಷ್ಕರ ಸಂಬಂಧದಲ್ಲಿ ಬಂಧಿಸಲ್ಪಟ್ಟವರು ಇಂದು ಸಂಜೆ ಬಿಡುಗಡೆಯಾಗಿದ್ದರು. ನಗರದಲ್ಲಿ ಜಾರಿಯಲ್ಲಿದ್ದ 144ನೇ ಸೆಕ್ಷನ್ ಅನ್ನು ಹಿಂದಕ್ಕೆ ಪಡೆಯಲಾಯಿತು.

• **ದೆಹಲಿಯಲ್ಲಿ ಭಾರಿ ಬೆಂಕಿ, ಕೋಟ್ಯಂತರ ಆಸ್ತಿ ನಾಶ**

ನವದೆಹಲಿ, ಅ.9– ದೆಹಲಿಯ ಜನದಟ್ಟಣೆಯ ಪ್ರದೇಶಗಳಲ್ಲಿ ಒಂದಾದ ಸಾದಾರ್ ಬಜಾರಿನ ಹೊಜ್ಯೆರಿ ಪೇಟೆಯಲ್ಲಿ ಭಾರಿ ಬೆಂಕಿ ಹೊತ್ತಿ ಅನೇಕ ಕೋಟಿ ರೂ.ಗಳಷ್ಟು ಆಸ್ತಿ ಭಸ್ಮವಾಯಿತು. ರಾತ್ರಿ 8 ಗಂಟೆಗೆ ಹೊತ್ತಿದ ಬೆಂಕಿ ಮಧ್ಯರಾತ್ರಿಯಲ್ಲೂ ಶಮನವಾಗಲಿಲ್ಲ. 11 ಅಗ್ನಿ ನಿರೋಧಕ ಯಂತ್ರಗಳು ಬೆಂಕಿ ನಂದಿಸಿದವು.

ದಾಳಿಯ ಹಿನ್ನೆಲೆ-ಮುನ್ನೆಲೆ...

ವಿಶ್ಲೇಷಣೆ

ಸಿ.ಎಚ್. ಹನುಮಂತರಾಯ

> ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಪ್ರಯತ್ನಿಸಿದ ವ್ಯಕ್ತಿಯ ಮೇಲೆ ಕಾನೂನು ಕ್ರಮ ಜರುಗಿಸುವುದು ಅಗತ್ಯ. ಆತನಿಗೆ ಕ್ಷಮಾದಾನ ದೊರೆತಲ್ಲಿ, ಆ ಔದಾರ್ಯ ಮುಂದೆ ಇಂತಹುದೇ ಪ್ರಕರಣಗಳಲ್ಲಿ ಆರೋಪಿಗಳಿಗೆ ಅನುಕೂಲ ಮಾಡಿಕೊಡುವ ಸಾಧ್ಯತೆಯಿದೆ.

ಅಕ್ಟೋಬರ್ 6. ದೇಶದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಂಗಣದ ಸಂಖ್ಯೆ 1ರಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಭೂಷಣ್ ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರನ್ನು ಒಳಗೊಂಡ ವಿಭಾಗೀಯ ನ್ಯಾಯಪೀಠದಲ್ಲಿ ಕಲಾಪಗಳು ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಿದ್ದವು. ನ್ಯಾಯಪೀಠ ಪ್ರಕರಣವೊಂದರ ವಿಚಾರಣೆ ನಡೆಸುತ್ತಿದ್ದ 11.15ರ ಸಮಯದಲ್ಲಿ ಭಾರತೀಯ ನ್ಯಾಯಾಂಗದ ಇತಿಹಾಸದಲ್ಲಿ ಹಿಂದೆಂದೂ ಕಂಡು ಕೇಳರಿಯದ ಘಟನೆ ಈ ನ್ಯಾಯಾಂಗಣದಲ್ಲಿ ಸಂಭವಿಸಿತು.

ಮಧ್ಯಪ್ರದೇಶದ ವಿಶ್ವವಿಖ್ಯಾತ ಖಜುರಾಹೊದ ಜವಾರಿ ದೇವಸ್ಥಾನದಲ್ಲಿರುವ ವಿಷ್ಣು ಮೂರ್ತಿಯ ಮರು ನಿರ್ಮಾಣ ಹಾಗೂ ಪ್ರತಿಷ್ಠಾಪನೆಗೆ ನಿರ್ದೇಶಿಸಬೇಕು ಎಂದು ಕೋರಿ ವಕೀಲ ರಾಕೇಶ್ ದಲಾಲ್ ಅರ್ಜಿದಾರರಾಗಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ (ರಿಟ್ ಪಿಟಿಷನ್ (ಸಿವಿಲ್) ಡೈರಿ ನಂ:32820/2025) ಕಳೆದ ತಿಂಗಳ 16ರಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ವಿಭಾಗೀಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಂದಿತ್ತು. ಜವಾರಿ ಮಂದಿರವು 'ಯುನೆಸ್ಕೊ'ದ ವಿಶ್ವಪರಂಪರೆ ತಾಣವಾಗಿದೆ ಮತ್ತು ಖಜುರಾಹೊ ದೇವಾಲಯ ಇದರ ಸಂಕೀರ್ಣದಲ್ಲಿದೆ ಎಂಬ ಹಿನ್ನೆಲೆಯಲ್ಲಿ ನ್ಯಾಯಪೀಠವು, 'ಸಂವಿಧಾನದ 32ನೇ ವಿಧಿಯ ಅಡಿಯಲ್ಲಿ ವಿಚಾರಣೆಗೆ ಕೋರಲಾಗಿರುವ ಅರ್ಜಿಯನ್ನು ಪರಿಶೀಲಿಸಲು ಇಚ್ಛಿಸುವುದಿಲ್ಲ. ಹಾಗಾಗಿ, ಈ ಅರ್ಜಿಯನ್ನು ವಜಾ ಮಾಡಲಾಗುತ್ತಿದೆ ಮತ್ತು ವಿಲೇವಾರಿ ಮಾಡಲಾಗಿದೆ' ಎಂಬ ಆದೇಶ ನೀಡಿ ಅರ್ಜಿಯನ್ನು ವಜಾಗೊಳಿಸಿತು. ಗವಾಯಿ ಅವರು ಮೌಖಿಕವಾಗಿ, 'ಕೋರ್ಟಿನಲ್ಲೇಕೆ ಈ ವಿಷಯ ಪ್ರಸ್ತಾಪಿಸುತ್ತಿದ್ದೀರಿ? ಇದು ಪ್ರಚಾರ ಹಿತಾಸಕ್ತಿಯ ಅರ್ಜಿಯಂತಿದೆ. ನೀವು ವಿಷ್ಣು ಭಕ್ತ ಎಂದು ಹೇಳಿಕೊಳ್ಳುತ್ತಿದ್ದೀರಿ, ಹಾಗಿದ್ದರೆ ಹೋಗಿ ದೇವರನ್ನೇ ಕೇಳಿ' ಎಂಬ ನುಡಿಗಳನ್ನೂ ಆಡಿದರು.

ತಮ್ಮ ಮಾತುಗಳು ವಿವಾದಕ್ಕೆ ಗುರಿಯಾಗಿವೆ ಎಂಬುದು ಅರಿವಿಗೆ ಬರುತ್ತಿದ್ದಂತೆಯೇ, ಮುಖ್ಯ ನ್ಯಾಯಮೂರ್ತಿಗಳು 'ನಾನು ಯಾವುದೇ ಧರ್ಮದ ವಿರೋಧಿಯಲ್ಲ. ಎಲ್ಲ ಧರ್ಮಗಳನ್ನೂ ಗೌರವಿಸುತ್ತೇನೆ' ಎಂದು ಸ್ಪಷ್ಟಪಡಿಸಿದರು. ಆದರೂ, ವಿವಾದ ಮುಂದುವರಿಯಿತು. ಶೂ ಎಸೆಯುವ ಪ್ರಯತ್ನಕ್ಕೆ ಕಾರಣವಾಯಿತು. ಇಂತಹದೊಂದು ಕಪ್ಪುಚುಕ್ಕೆಗೆ ಎಡೆಮಾಡಿಕೊಟ್ಟವರು 71 ವರ್ಷದ ವಕೀಲ ರಾಕೇಶ್ ಕಿಶೋರ್. ಅಂದು ನ್ಯಾಯಾಂಗಣ 1ರಲ್ಲಿ ಆಸೀನರಾಗಿದ್ದ ಅವರು, ಇದ್ದಕ್ಕಿದ್ದಂತೆ ತಮ್ಮ ಕಾಲಿನಲ್ಲಿ ಧರಿಸಿದ್ದ ಬಿಳಿ ಶೂ ಅನ್ನು ಕಳಚಿ ಗವಾಯಿ ಕೂತಿದ್ದ ನ್ಯಾಯಪೀಠದತ್ತ ತೂರಲು ಪ್ರಯತ್ನಿಸಿದರು. ಹಠಾತ್ತನೇ ನಡೆದ ಘಟನೆ ಎಲ್ಲರ ಅರಿವಿಗೆ ಬರಲು ಹಲವು ಕ್ಷಣಗಳೇ ಬೇಕಾಯಿತು. ಭದ್ರತಾ ಸಿಬ್ಬಂದಿ ಅವರನ್ನು ಹೊರಕ್ಕೆ ಕರೆದೊಯ್ಯುವಾಗ ರಾಕೇಶ್, 'ಸನಾತನ ಧರ್ಮಕ್ಕೆ ಮಾಡುವ ಅವಮಾನಗಳನ್ನು ಸಹಿಸುವುದಿಲ್ಲ' ಎಂದು ಕೂಗಿದರು. 'ನನ್ನ ದಾಳಿ ಮುಖ್ಯ ನ್ಯಾಯಮೂರ್ತಿಯವರನ್ನು ಗುರಿಯಾಗಿಸಿತ್ತು' ಎನ್ನುತ್ತಾ, ಶೂ ಎಸೆತದ ಪ್ರಯತ್ನಕ್ಕೆ ಅವರ ಕ್ಷಮೆಯಾಚಿಸುವೆ ಎಂದೂ ಬಡಬಡಿಸಿದರು.

ಮುಖ್ಯ ನ್ಯಾಯಮೂರ್ತಿ ಗವಾಯಿ, 'ಅವರನ್ನು ಬಿಟ್ಟುಬಿಡಿ, ನಾನು ವಿಚಲಿತನಾಗಿಲ್ಲ. ಇಂತಹ ವಿಷಯಗಳು ನನ್ನ ಮೇಲೆ ಪರಿಣಾಮ ಬೀರುವುದೂ ಇಲ್ಲ' ಎಂದು ತಕ್ಷಣವೇ ಪ್ರತಿಕ್ರಿಯಿಸಿದರು. ವಶಕ್ಕೆ ಪಡೆದ ವಕೀಲರನ್ನು ಸುಮಾರು ಎರಡು ಗಂಟೆ ವಿಚಾರಣೆಗೆ ಒಳಪಡಿಸಿದ್ದ ಪೊಲೀಸರು, ಮುಖ್ಯ ನ್ಯಾಯಮೂರ್ತಿಗಳ ಮಾತಿನಂತೆ ಅವರನ್ನು ಬಿಟ್ಟು ಹೊರಗೆ ಕಳುಹಿಸಿದರು. ಈ ಕ್ಷಣದಿಂದಾಚೆಗೆ ಉದ್ಭವವಾದ ಕಾನೂನಾತ್ಮಕ ಪ್ರಶ್ನೆಗಳು ಹಲವು.

ತೆರೆದ ನ್ಯಾಯಾಲಯದಲ್ಲಿ ನ್ಯಾಯಮೂರ್ತಿ ಮೇಲೆ ಶೂ ಎಸೆದು ಹಲ್ಲೆ ಅಥವಾ ದಾಳಿಗೆ ಪ್ರಯತ್ನಿಸಿದ ವ್ಯಕ್ತಿಯೊಬ್ಬನ ವಿರುದ್ಧ ಮುಖ್ಯ ನ್ಯಾಯಮೂರ್ತಿಗಳು ಸುಪ್ರೀಂ ಕೋರ್ಟ್ ರಿಜಿಸ್ಟ್ರಾರ್ ಮುಖಾಂತರ ಪೊಲೀಸರಿಗೆ ದೂರು ಸಲ್ಲಿಸುವಂತೆ ಮಾಡಬಹುದಿತ್ತು ಮತ್ತು ಆತನನ್ನು ನ್ಯಾಯಾಂಗ ನಿಂದನೆಗೆ ಗುರಿಪಡಿಸುವ ಕ್ರಮವನ್ನೂ ಜರುಗಿಸಬಹುದಿತ್ತು. ಆದರೆ, ಮುಖ್ಯ ನ್ಯಾಯಮೂರ್ತಿಗಳು ಇವೆರಡನ್ನೂ ಬಿಟ್ಟುಕೊಟ್ಟರು. ವಿಪರ್ಯಾಸ ಎಂದರೆ, ಕುಕೃತ್ಯವೆಸಗಿದ ವಕೀಲರು ಅಲ್ಲಿಂದಾಚೆಗೆ ಮಾಧ್ಯಮದವರಿಗೆ ಸಂದರ್ಶನ ನೀಡುತ್ತಾ, ಮುಖ್ಯ ನ್ಯಾಯಮೂರ್ತಿಗಳು ತಮ್ಮ ಅನೇಕ ತೀರ್ಪುಗಳಲ್ಲಿ ಹಿಂದೂ ಧರ್ಮಕ್ಕೆ ದ್ರೋಹವೆಸಗಿದ್ದಾರೆ ಎನ್ನುವ ಹೇಳಿಕೆಗಳನ್ನು ಕೊಡುತ್ತಿರುವುದನ್ನು ಮಾತ್ರ ಇನ್ನೂ ನಿಲ್ಲಿಸಿಲ್ಲ.

ಈ ಬೆಳವಣಿಗೆಯನ್ನು ಗಮನಿಸಿದಾಗ ಆ ವಕೀಲರು, ಪ್ರತಿ ಸಂದರ್ಶನದ ವೇಳೆಯಲ್ಲಿ ನ್ಯಾಯಾಂಗ ನಿಂದನೆಯನ್ನು ಮಾಡುತ್ತಾ ಬರುತ್ತಿರುವುದು ಎದ್ದು ಕಾಣಿಸುತ್ತಿದೆ. ಅಲ್ಲದೆ, ಅವರ ಈ ಪ್ರವೃತ್ತಿ 'ಮುಂದುವರಿಯುತ್ತಿರುವ ಅಪರಾಧ' (continuing offence) ಎಂದು ಕಂಡುಬರುತ್ತಿದ್ದರೂ ಸಂಬಂಧಪಟ್ಟವರು; ಅಂದರೆ, ಸುಪ್ರೀಂ ಕೋರ್ಟ್‌ನ ಸೆಕ್ರೆಟರಿ ಜನರಲ್ ಯಾವುದೇ ಕ್ರಮ ಜರುಗಿಸಲು ಮುಂದಾಗದೇ ಇರುವುದು ಸಮಾಧಾನಕರ ಬೆಳವಣಿಗೆಯಲ್ಲ.

ಕಾನೂನಿನಲ್ಲಿ ಸಂಜ್ಞೇಯ ಅಪರಾಧಗಳ ಬಗ್ಗೆ ಬಾಧಿತ ಅಥವಾ ಸಂತ್ರಸ್ತ ವ್ಯಕ್ತಿಯೇ ಅಥವಾ ಘಟನೆಯನ್ನು ಕಣ್ಣಾರೆ ಕಂಡ ವ್ಯಕ್ತಿಯೇ ಪೊಲೀಸರಿಗೆ ದೂರು ನೀಡಬೇಕು ಎಂದೇನಿಲ್ಲ. ಯಾವುದೇ ಸಾರ್ವಜನಿಕ ವ್ಯಕ್ತಿ ಆ ವಕೀಲನ ವಿರುದ್ಧ ಕೋರ್ಟಿನ ಒಳಗೆ ನಡೆದ ಮತ್ತು ಹೊರಗೆ ನಡೆಯುತ್ತಿರುವ ಅವರ ಕಾನೂನುಬಾಹಿರ ಕೃತ್ಯಗಳ ಕುರಿತು, ಕಾನೂನಾತ್ಮಕ ಕ್ರಮಗಳನ್ನು ಜರುಗಿಸಲು ಸಾಧ್ಯವಿದೆ.

ಘಟನೆಯೊಂದರ ವಿಚಾರವನ್ನು ತಿಳಿದ (hear-say) ವ್ಯಕ್ತಿಯೂ ಪೊಲೀಸರಿಗೆ ದೂರು ಕೊಟ್ಟು ಕ್ರಮ ಜರುಗಿಸುವಂತೆ ಮಾಡಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ ಅಡಿಯಲ್ಲಿ ಮುಕ್ತ ಅವಕಾಶವಿದೆ. ಈ ದಿಕ್ಕಿನಲ್ಲಿ ಬೆಂಗಳೂರಿನ ವಕೀಲ ಭಕ್ತವತ್ಸಲ, ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 132 (ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿಯನ್ನು ಅಪರಾಧಿಕ ಬಲಪ್ರಯೋಗದ ಮೂಲಕ ಆತ ತನ್ನ ಕರ್ತವ್ಯವನ್ನು ನಿರ್ವಹಿಸದಂತೆ ಅಡ್ಡಿಪಡಿಸುವುದು) ಮತ್ತು ಕಲಂ 133 (ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿಯನ್ನು ಅವಮಾನಿಸುವುದು) ಅಡಿಯಲ್ಲಿ ದೂರು ದಾಖಲಿಸಿರುವುದು ಶ್ಲಾಘನೀಯ. ದೂರನ್ನು ಪಡೆದು ಜೀರೊ ಕ್ರೈಂ ದಾಖಲಿಸಿರುವ ವಿಧಾನಸೌಧ ಠಾಣೆಯ ಪೊಲೀಸರು ಪ್ರಥಮ ವರ್ತಮಾನವನ್ನು ಸುಪ್ರೀಂ ಕೋರ್ಟ್ ವ್ಯಾಪ್ತಿಯ ಸ್ಥಳೀಯ ಪೊಲೀಸರಿಗೆ ರವಾನಿಸಿದ್ದಾರೆ. ಇದರ ಹೊರತಾಗಿ, ಕೃತ್ಯವೆಸಗಿದ ವಕೀಲರ ವಿರುದ್ಧ ಯಾವುದೇ ಸಾರ್ವಜನಿಕ ವ್ಯಕ್ತಿಯು, ಅಟಾರ್ನಿ ಜನರಲ್ ಅವರಿಗೆ ಅರ್ಜಿ ಸಲ್ಲಿಸಿ ಸಮ್ಮತಿ ಪಡೆದು ನ್ಯಾಯಾಂಗ ನಿಂದನೆಯ ಪ್ರಕರಣವನ್ನೂ ದಾಖಲಿಸಬಹುದಾಗಿದೆ.

ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಸಂದರ್ಭದಲ್ಲಿ ನ್ಯಾಯಾಧೀಶರು ಪ್ರಕರಣಗಳಿಗೆ ಸಂಬಂಧಪಡದ ಮಾತುಗಳನ್ನು ಬಳಕೆ ಮಾಡಿದಾಗ, ಅವರ ವಿರುದ್ಧ ಯಾವುದೇ ರೀತಿಯ ಕ್ರಮವನ್ನು ಯಾವುದೇ ನ್ಯಾಯಾಲಯದಲ್ಲಿ ಜರುಗಿಸಲು ಸಾಧ್ಯವಿಲ್ಲ. ಈ ರಕ್ಷಣೆಯನ್ನು 'ಜಡ್ಜಸ್ ಪ್ರೊಟೆಕ್ಷನ್ ಆ್ಯಕ್ಟ್' (ನ್ಯಾಯಾಧೀಶರ ಸುರಕ್ಷಾ ಕಾಯ್ದೆ-1985) ಕೊಡಮಾಡುತ್ತದೆ.

ಇಲ್ಲಿ ಎಲ್ಲರೂ ಗಮನಿಸಬೇಕಾದ ಮುಖ್ಯ ವಿಚಾರವೊಂದಿದೆ: ಮುಂದಿನ ದಿನಗಳಲ್ಲಿ ವಕೀಲರಾಗಲೀ, ಕಕ್ಷಿದಾರರಾಗಲೀ ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯಗಳಲ್ಲಿ ಇಂತಹ ಘಟನೆಗಳಿಗೆ ಅವಕಾಶ ಮಾಡಿಕೊಟ್ಟಾಗ ಅವರ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಿ ಅಥವಾ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ, ವಿಚಾರಣೆ ಸಂದರ್ಭದಲ್ಲಿ ಹತ್ತು ವರ್ಷಗಳ ಅಥವಾ ಅದರೊಳಗಿನ ಶಿಕ್ಷೆವಿಧಿಸಬಹುದಾದಂತಹ ಅಪರಾಧದಲ್ಲಿ ಅಂಥವರು ತಪ್ಪಿತಸ್ಥರು ಎಂದು ಕಂಡುಬಂದು, ಶಿಕ್ಷೆಯ ಪ್ರಮಾಣವನ್ನು ಇತ್ಯರ್ಥಗೊಳಿಸುವಾಗ ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ ಪ್ರಕಾರ ಶಿಕ್ಷೆಗೆ ಒಳಪಡಿಸಿರುವ ಅಥವಾ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡುವ ಕಾರಣವೇನಾದರೂ ಇರಬಹುದೇ ಎಂದು ಆರೋಪಿಯಿಂದ (ಆರೋಪಿಯ ಹಿನ್ನೆಲೆ) ನ್ಯಾಯಾಧೀಶರು ಕಂಡುಕೊಳ್ಳುವ ಬಗ್ಗೆ ಅವಕಾಶವಿದೆ.

ಈ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಮೂರ್ತಿಗಳು ಕ್ಷಮಾದಾನ ನೀಡಿರುವುದನ್ನು ಆಧಾರ ಆಗಿಸಿಕೊಂಡು, ಅಕೃತ್ಯ ಎಸಗಿದ ರಾಕೇಶ್ ವಿರುದ್ಧ ಕ್ರಮ ಜರುಗಿಸದೇ ಇರುವುದನ್ನು ಒಂದು ಪೂರ್ವನಿದರ್ಶನವಾಗಿ (precedent) ಬಳಸಿಕೊಳ್ಳುವಂತಿಲ್ಲ. ಇದು ಬಾಧ್ಯತೆಯಿಲ್ಲದ ಅಂಶ (binding force) ಎಂದು ಹೇಳಬಹುದಾದರೂ, ಪ್ರಭಾವಿಸುವ ಶಕ್ತಿ (persuasive force) ಹೊಂದಿರುತ್ತದೆ ಎಂಬುದನ್ನು ಕಡೆಗಣಿಸಲಾಗದು. ಹಾಗಾಗಿ, ಇದರ ಲಾಭವನ್ನು ವಕೀಲರು ತಮ್ಮ ಕಕ್ಷಿದಾರರ ಪರವಾಗಿ ಬಳಸಿಕೊಳ್ಳಲು ಯಾವುದೇ ಅಡ್ಡಿ, ಆತಂಕ ಇರುವುದಿಲ್ಲ. ಈ ಕಾರಣದಿಂದಾಗಿ ರಾಕೇಶ್ ಕಿಶೋರ್ ವಿರುದ್ಧ ಕಾನೂನಿನ ಚೌಕಟ್ಟಿನಲ್ಲಿ ಅವರನ್ನು ಶಿಕ್ಷೆಗೆ ಒಳಪಡಿಸಲು ಲಭ್ಯವಿರುವ ಎಲ್ಲ ಅವಕಾಶಗಳನ್ನು ಬಳಸಲು ಸಂಬಂಧಪಟ್ಟವರು ಕಾರ್ಯಪ್ರವೃತ್ತರಾಗುವುದು ಉಚಿತವಿರುತ್ತದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ವಿಚಾರಣಾ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುವ ಅವಶ್ಯಕತೆ ಇರುವುದಿಲ್ಲ. ಅವರ ಸಾಕ್ಷ್ಯವನ್ನು ಅವರ ನಿವಾಸದಲ್ಲೇ ಆರೋಪಿ ವಕೀಲ ಮತ್ತು ಪ್ರಾಸಿಕ್ಯೂಟರ್ ಹಾಜರಿದ್ದು, ನ್ಯಾಯಾಧೀಶರಿಂದ ನೇಮಕಗೊಂಡ ವ್ಯಕ್ತಿ ಸಾಕ್ಷ್ಯ ದಾಖಲಿಸಿಕೊಳ್ಳಬಹುದಾಗಿರುತ್ತದೆ.

ಮುಖ್ಯ ನ್ಯಾಯಮೂರ್ತಿಗಳಾಡಿದ ಮಾತುಗಳು ವೈಯಕ್ತಿಕವಾದವು. ಇದನ್ನು ಒತ್ತಡದಿಂದ, ಏಕತಾನತೆಯಿಂದ, ತುಮುಲ ಆವರಿಸಿದ ಸಂದರ್ಭದಿಂದ ಆಡಿದ ಭಾವವಿರೇಚಕ ಮಾತುಗಳೆಂದೇ ಪರಿಗಣಿಸಬೇಕಾಗುತ್ತದೆ. ಅಂದರೆ, ನ್ಯಾಯಮೂರ್ತಿಗಳು ಕೆಲವು ಸಂದರ್ಭಗಳಲ್ಲಿ ಹಗುರವಾದ, ಲಘುವಾದ, ನಿರ್ದಿಷ್ಟ ಉದ್ದೇಶವಿಲ್ಲದ ತಮಾಷೆಯ ಮಾತುಗಳನ್ನು ತೆರೆದ ಕಲಾಪಗಳಲ್ಲಿ ಆಡುವುದುಂಟು. ಆದರೆ, ಮುಖ್ಯ ನ್ಯಾಯಮೂರ್ತಿಗಳು ಆಡಿದರೆನ್ನುವ ಮಾತುಗಳು ಇಂತಹ ಭಾವಲಹರಿಯಿಂದ ಜಿಗಿದು ಬೇರೆಯದೇ ಅರ್ಥ ಪಡೆದುಕೊಂಡಿರುವುದು ದುರದೃಷ್ಟಕರ.

ವಾಚಕರ ವಾಣಿ

ತೆರಿಗೆ ಭರಿಸುವ ಗುಂಡಿಗೆ ನಮಗಿಲ್ಲ

ಆ 'ಗುಂಡಿ'ಗೆ ನಿಮಗಿದೆಯೇ ಸೋಮಿ? ಲೇಖನ (ಲೇ: ಪ್ರವೀಣ ಕುಲಕರ್ಣಿ, ಪ್ರ.ವಾ., ಅ. 8) ಓದಿ ಗಾಬರಿಯಾಯಿತು. ಮತ್ತೆ ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಜಪಾನ್, ವಿಯೆಟ್ನಾಂ, ಸಿಂಗಪುರ, ಚೀನಾಕ್ಕೆ ಅಲ್ಲಿನ ಗುಂಡಿಗಳ ನಿರ್ವಹಣೆಯ ವೀಕ್ಷಣೆ ಮತ್ತು ತರಬೇತಿಗೆ ಶಾಸಕ– ಸಚಿವರು– ಅಧಿಕಾರಿಗಳ ತಂಡ ಕಳುಹಿಸುವ ಸಾಧ್ಯತೆಯಿದೆ. ಇಲ್ಲಿ ಪೋಲಾಗುವುದು ಮತ್ತೆ ನಮ್ಮ, ಅಂದರೆ ಬಡಪಾಯಿಗಳಾದ ಗುಂಡಿ ಸಂತ್ರಸ್ತರ ಹಣವೇ ಅಲ್ಲವೇ! ನಮ್ಮ ಮೇಲೆ ಇನ್ನಷ್ಟು ತೆರಿಗೆ ಹೊರೆ ಬಿದ್ದರೇನು ಗತಿ. ಇದನ್ನು ಭರಿಸುವ ಗುಂಡಿಗೆ ನಮಗಂತೂ ಇಲ್ಲ.

ಸುಧಾ ಕೆ., ಬೆಂಗಳೂರು

ಜಾತಿ ನೆತ್ತರಿನ ನಂಜನ್ನು ಮೀರಲಾಗದೆ?

ದೇಶವು ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧ ಮುನ್ನಡೆ ಸಾಧಿಸಿದೆ. ಆದರೆ, ಜಾತಿಯ ವ್ಯಸನದಿಂದ ಮುಕ್ತವಾಗಿಲ್ಲ ಎಂಬುದಕ್ಕೆ ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಕನ್ನಡಿ ಹಿಡಿದಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯ ಮೇಲೆ ಶೂ ಎಸೆಯುವ ಪ್ರಯತ್ನದ ಹಿಂದೆಯೂ ಜಾತೀಯತೆಯ ಷಡ್ಯಂತ್ರವಿದೆ. ಹೀಗಿದ್ದಾಗ ಮನುಷ್ಯ ಜಾತಿ, ಧರ್ಮದ ಅಮಲನ್ನು ಮೀರಲು ಸಾಧ್ಯವೇ? ನಮ್ಮ ದೇಶದಲ್ಲಿ ಜಾತಿಯ ಘಟಸರ್ಪದ ಫೂತ್ಕಾರ ಹೆಚ್ಚುತ್ತಿರುವುದು ವಿಷಾದನೀಯ.

ಷಣ್ಮುಖ ಎಸ್.ಎಚ್., ಹಳೇಬಾತಿ

ಭಾರಿ ಜನಸಂದಣಿ: ಮುನ್ನೆಚ್ಚರಿಕೆ ಅಗತ್ಯ

ಇತ್ತೀಚೆಗೆ ದೇಗುಲ ಮತ್ತು ಪ್ರವಾಸಿ ತಾಣಗಳಲ್ಲಿ ಭಾರಿ ಜನಸಂದಣಿ ಸೇರುತ್ತಿದೆ. ಒಂದೇ ಕಡೆ ಜನ ಕೇಂದ್ರೀಕೃತವಾದಾಗ ಆಗುತ್ತಿರುವ ಅನಾಹುತ, ಸಾರಿಗೆ ಅವ್ಯವಸ್ಥೆ ಬಗ್ಗೆ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕಿದೆ. ಸೀಗೆಹುಣ್ಣಿಮೆ ನಿಮಿತ್ತ ಹುಲಿಗಿ ದೇವಸ್ಥಾನಕ್ಕೆ ಪಾದಯಾತ್ರೆ ಕೈಗೊಂಡ ಭಕ್ತರ ದುರ್ಮರಣ ಪ್ರಕರಣದಲ್ಲಿ ಸಂತ್ರಸ್ತರಾಗಿರುವ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕಿದೆ. ದೇವಸ್ಥಾನಗಳ ಆವರಣದಲ್ಲಿ ನೂಕುನುಗ್ಗಲು ಆಗದಂತೆ ವ್ಯವಸ್ಥೆ ಮಾಡಬೇಕಿದೆ.

ವಿಶೇಷ ಸಂದರ್ಭದಲ್ಲಿ ಇಂತಹ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕಿದೆ. ಈ ದೇವಸ್ಥಾನಕ್ಕೆ ಭಕ್ತಾದಿಗಳಿಂದ ಕೋಟ್ಯಂತರ ಹಣ ಸಂಗ್ರಹವಾಗುತ್ತಿದೆ. ಆದರೆ, ದೇವಸ್ಥಾನದಲ್ಲಿ ಕನಿಷ್ಠ ಮೂಲ ಸೌಕರ್ಯ ಇಲ್ಲದಿರುವುದು ದುರಂತವೇ ಸರಿ.

ಶರಣು ಗಡ್ಡಿ, ಕೊಪ್ಪಳ

'ಬಸವ ಮೆಟ್ರೊ' ಸ್ವಾಗತಾರ್ಹ ಪ್ರಸ್ತಾಪ

ನಮ್ಮ ಮೆಟ್ರೊಗೆ 'ಬಸವ ಮೆಟ್ರೊ' ಎಂದು ನಾಮಕರಣ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಸ್ವಾಗತಾರ್ಹ. ನಾಡಿನ ಪುಣ್ಯ ಪುರುಷರಲ್ಲಿ ಬಸವಣ್ಣ ಅಗ್ರಗಣ್ಯರು. ಈಗಾಗಲೇ, ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರಿಡಲಾಗಿದೆ.

ಬೆಂಗಳೂರಿನ ರೈಲ್ವೆ ನಿಲ್ದಾಣಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಹೆಸರಿಸಲಾಗಿದೆ. ಸಮಾಜದಲ್ಲಿನ ಅಂಧಕಾರದ ನಿರ್ಮೂಲನೆಗೆ ಬಸವಣ್ಣ ಶ್ರಮಿಸಿದ್ದಾರೆ. ಮೆಟ್ರೊಗೆ ಅವರ ಹೆಸರಿಡುವ ಮೂಲಕ ಅವರನ್ನು ಸ್ಮರಿಸುವುದು ಒಳ್ಳೆಯ ನಡೆಯಾಗಿದೆ.

ಅಶೋಕ ಉಗಾರ, ವಿಜಯಪುರ

ಕನ್ನಡ ಕಲಿಕೆ: ಮುಗಿಯದ ಜಿಜ್ಞಾಸೆ

'ಕಡ್ಡಾಯ ಕನ್ನಡ ಪರೀಕ್ಷೆ: ಅಸ್ಪಷ್ಟ ನಿರೀಕ್ಷೆ' ಲೇಖನ (ಪ್ರೊ. ಅಬ್ದುಲ್ ರೆಹಮಾನ್ ಪಾಷ, ಪ್ರ.ವಾ., ಅ. 9) ಕುರಿತು ಎರಡು ಅಂಶಗಳನ್ನು ಹೇಳಬೇಕೆನಿಸಿತು. ಒಂದು, 'ಕನ್ನಡೇತರರು ಗದ್ಯ, ಪದ್ಯ, ಸಂಧಿ, ಸಮಾಸ, ಛಂದಸ್ಸು ಇತ್ಯಾದಿ ಸಾಹಿತ್ಯಕ ಅಂಶಗಳಿಂದ ಕೂಡಿರುವ 6ನೇ ತರಗತಿ ಪಠ್ಯ ಓದುವುದರಿಂದ ಪ್ರಯೋಜನವಿಲ್ಲ'. ಎರಡು, 'ಇಂಗ್ಲಿಷ್–ಕನ್ನಡ ಅನುವಾದ ಅಗತ್ಯವಿಲ್ಲ.' ಆಡಳಿತ ಕನ್ನಡ ಕಲಿಸಬೇಕು ಎಂಬುದು ಲೇಖಕರ ಉದ್ದೇಶ.

ಒಂದು, ಯಾರೂ ಆಡಳಿತ ಕನ್ನಡವನ್ನು ಕಲಿತುಕೊಂಡು ಕೆಲಸಕ್ಕೆ ಸೇರುವುದಿಲ್ಲ. ಅವರಿಗೆ ಕನ್ನಡ ಭಾಷೆಯನ್ನು ಓದಲು, ಬರೆಯಲು ಮತ್ತು ಮಾತನಾಡಲು ಬಂದರೆ ಅವರಿಗೆ ಆಡಳಿತ ಕನ್ನಡ ಕುರಿತು ತರಬೇತಿ ನೀಡಬಹುದು. ಎರಡು, ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳನ್ನು ಎಷ್ಟರ-ಮಟ್ಟಿಗೆ ತಿಳಿದುಕೊಂಡಿದ್ದಾರೆ ಎಂದು ಪರೀಕ್ಷಿಸಲು, ಕನ್ನಡ–ಇಂಗ್ಲಿಷ್ ಭಾಷಾಂತರ ಪರೀಕ್ಷೆ ಇರುತ್ತದೆಯೇ ವಿನಾ, ಅವರು ಕಚೇರಿಯಲ್ಲಿ ಕನ್ನಡ–ಇಂಗ್ಲಿಷ್ ಅನುವಾದ ಮಾಡಲಿ ಎಂದಲ್ಲ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಪರಿಹಾರಕ್ಕೂ ಲಂಚ: ಗಾಯದ ಮೇಲೆ ಬರೆ

ಮಳೆ-ಬೆಳೆ ಏರಿಳಿತದಲ್ಲಿ, ಪ್ರವಾಹ ಪರಿಸ್ಥಿತಿಯಲ್ಲಿ ಹೆಚ್ಚಾಗಿ ನೋವು ಅನುಭವಿಸುವವರು ಉತ್ತರ ಕರ್ನಾಟಕದ ಜನ. ಅದರಲ್ಲೂ ರೈತಾಪಿ ವರ್ಗವೇ ಅಧಿಕ. ಸರ್ಕಾರ ಕಣ್ತೆರೆದು ಪರಿಹಾರ ಘೋಷಣೆ ಮಾಡಿದರೆ ಅದನ್ನು ಪಡೆಯಲು ಹೋರಾಟ ಮಾಡಬೇಕಾದ ಸಂದಿಗ್ಧತೆ ಸೃಷ್ಟಿಯಾದರೆ ಹೇಗೆ?

ಯಾದಗಿರಿ ಜಿಲ್ಲೆ ಶಹಾಪುರ ತಾಲ್ಲೂಕಿನ ಹತ್ತಿಗೂಡೂರ ಗ್ರಾಮದಲ್ಲಿ ವರದಿಯಾಗಿರುವ ಘಟನೆಯೊಂದು ಮಾನವೀಯತೆ ಯನ್ನೇ ಅಣಕಿಸುವಂತಿದೆ. ಬೆಳೆ ಪರಿಹಾರದ ಅರ್ಜಿ ಸ್ವೀಕರಿಸಲು ಗ್ರಾಮ ಲೆಕ್ಕಾಧಿಕಾರಿಯೊಬ್ಬರು ₹9 ಸಾವಿರ ಲಂಚ ಪಡೆದಿರುವುದು ಹೇಸಿಗೆ ವಿಚಾರವೇ ಸರಿ. ಅಂತಹ ಅಧಿಕಾರಿಯನ್ನು ಅಮಾನತುಗೊಳಿಸಿದರೆ ಸಾಲದು. ಕೆಲಸದಿಂದಲೇ ವಜಾಗೊಳಿಸಬೇಕು. ಲಂಚಬಾಕರಿಗೆ ಅದೊಂದು ಪಾಠವಾಗಬೇಕು. ಪರಿಹಾರ ಕೊಡುವ ಸಂದರ್ಭದಲ್ಲೂ ನೋವಿನ ಮೇಲೆ ಬರೆ ಎಳೆಯುವ ದುರಾತ್ಮರಿಗೆ ಸರಿಯಾದ ಪಾಠ ಕಲಿಸಬೇಕಿದೆ.

ಪ್ರಕಾಶ್ ಮಲ್ಕಿ ಒಡೆಯರ್, ಹೂವಿನ ಹಡಗಲಿ

ಚುರುಮುರಿ



ಶಾಂತಿ ಮತ್ತು ಸುಖ!

• ಬಿ.ಎನ್. ಮಲ್ಲೇಶ್

'ಲೇ ತೆಪರ, ವಿಧಾನಸೌಧದ ಮೇಲೆ, ಸರ್ಕಾರದ ಕೆಲಸ ದೇವರ ಕೆಲಸ ಅಂತ ಬರೆಸಿದಾರಲ್ಲ, ಯಾಕಿರಬೋದು?' ಹರಟೆಕಟ್ಟೆಯಲ್ಲಿ ಗುಡ್ಡೆ ಕೇಳಿದ.

'ದೇವರ ಕೆಲ್ಸ ಅಲ್ವಾ? ತಟ್ಟೆಗೆ ಕಾಸು ಬೀಳದೆ ನಿಮ್ ಕೆಲ್ಸ ಆಗಲ್ಲ ಅಂತ ಹೇಳೋಕಿರಬೋದು...' ತೆಪರೇಸಿ ನಕ್ಕ.

'ಅದೇ ತರ ವಿಧಾನಸೌಧದ ಮೂರನೇ ಮಹಡಿಗೆ ಈಗ ಏನಂತ ಬರೆಸಬೋದು?'

'ಸಿ.ಎಂ ಕುರ್ಚಿ ಖಾಲಿ ಇಲ್ಲ!'

'ನಮ್ ಬಂಡೆ ಸಾಹೇಬ್ರ ಆಫೀಸಿಗೆ?'

'ಇಲ್ಲಿ ನಟ್ಟು ಬೋಲ್ಟು ಟೈಟ್ ಮಾಡಲಾಗುವುದು!'

'ಕರೆಕ್ಟ್, ನಮ್ ಸಿದ್ರಾಮಣ್ಣ ಸಾಹೇಬ್ರ ಆಫೀಸ್ ಮೇಲೆ ಏನಂತ ಬರೆಸಬೋದು?' ಕೊಟ್ರೇಶಿ ಕೊಕ್ಕೆ.

'ಹೊಡೀರಿ ಕಪಾಳಕ್ಕೆ...'

'ಯಾರಿಗೆ, ನಂಗಾ?'

'ಥೋ... ನಿಂಗಲ್ಲಲೆ, ಸಿದ್ರಾಮಣ್ಣ ಯಾವಾಗ್ಲು ಹಂಗೆ ಅಂತಿರ್ತಾರಲ್ಲ, ಅದ್ಕೆ ಹಂಗಂದೆ...'

'ಲೇ ಗುಡ್ಡೆ, ನೀನೇಳಲೆ, ಹೋಂ ಮಿನಿಸ್ಟ್ರು ಆಫೀಸ್ ಮೇಲೆ ಏನ್ ಬರೆಸಬೋದು?' ಮಂಜಮ್ಮ ಕೇಳಿದಳು.

'ಗೊತ್ತಿಲ್ಲ...'

'ಏನು? ಗೊತ್ತಿಲ್ವಾ?'

'ಥೋ, ಹಂಗಲ್ಲ... ನಮ್ ಹೋಂ ಸಾಹೇಬ್ರು ಏನ್ ಕೇಳಿದ್ರೂ ಗೊತ್ತಿಲ್ಲ ಅಂತಿರ್ತಾರಲ್ಲ, ಅದ್ನೇ ಹೇಳಿದೆ ಮಂಜಮ್ಮ...' ಗುಡ್ಡೆ ನಕ್ಕ.

'ಸರಿ, ನಮ್ ಜಮೀರಣ್ಣನ ಆಫೀಸ್ ಮೇಲೆ?'

'ಥು, ನಿನ್ ಜನ್ಮಕ್ಕೆ, ಹೋಗು...'

'ಏಯ್, ಯಾಕೋ?' ಮಂಜಮ್ಮಗೆ ಸಿಟ್ಟು ಬಂತು.

'ಥೋತ್ತೇರಿ, ಅದು ಜಮೀರಣ್ಣಂಗೆ ಸಿಟ್ಟು ಬಂದಾಗ ಹಂಗೆ ಅಂತಿರ್ತಾರೆ ಮಂಜಮ್ಮ...'

'ಆತು ಬಿಡ್ರಪ್ಪ, ನಮ್ ಬ್ರದರ್ ಕುಮಾರಣ್ಣನ ಆಫೀಸ್ ಮೇಲೆ ಏನ್ ಬರೆಸಬೋದು?' ದುಬ್ಬೀರ ಕೇಳಿದ.

'ಸೂಕ್ತ ಸಮಯ ಬಂದಾಗ ಎಲ್ಲ ಬಿಚ್ಚಿಡಲಾಗುವುದು...'

'ಓಕೆ, ನಮ್ ರಾಗಾ ಆಫೀಸ್ ಮೇಲೆ?'

'ಬಾಂಬುಗಳಿವೆ ಎಚ್ಚರಿಕೆ!'

'ಟ್ರಂಪಣ್ಣನ ವೈಟ್ ಹೌಸ್ ಮೇಲೆ?'

'ಶಾಂತಿ' ಇಲ್ಲದೆ ಸುಖವಿಲ್ಲ...!'

'ಶಾಂತಿನಾ? ಯಾರದು?'

'ಅವಳಾ, ನಮ್ ತೆಪರೇಸಿ ಅಕ್ಕನ ಮಗಳು...!' ಗುಡ್ಡೆ ಕೀಟಲೆಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಕಲಿಕಾ ವಿಷಯ: ಆಯ್ಕೆ ಮಕ್ಕಳದೇ ಆಗಿರಲಿ

ವಿಜ್ಞಾನವೋ, ಕಲಾ ವಿಭಾಗವೋ, ವಾಣಿಜ್ಯವೋ – ಮೂರರಲ್ಲಿ ಯಾವುದು ಹಿತ ಎಂಬುದನ್ನು ನಿರ್ಣಯಿಸಬೇಕಾದುದು ಮಕ್ಕಳೇ ಹೊರತು, ದೊಡ್ಡವರಲ್ಲ.

• ರಾಹುಲ ಬೆಳಗಲಿ

ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣಗೊಂಡ ಮಗನನ್ನು ಒಳ್ಳೆಯ ಪಿಯು ಕಾಲೇಜಿಗೆ ಸೇರಿಸಬೇಕು ಎಂಬ ಆಸೆ ಹುಬ್ಬಳ್ಳಿಯ ಆ ಪೋಷಕರದ್ದು. ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯೊಂದರ ಆಡಳಿತ ಮಂಡಳಿ ಸದಸ್ಯರೊಬ್ಬರನ್ನು ಭೇಟಿಯಾಗಿ, 'ಆರ್ಟ್ಸ್ (ಕಲಾ) ಕಾಲೇಜಿನಲ್ಲಿ ಒಂದು ಸೀಟು ಕೊಡಿ' ಎಂದು ಕೋರಿದರು. ಅದಕ್ಕೆ ಆ ಸದಸ್ಯರು, 'ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣನಾಗಿದ್ದರೂ ಸೈನ್ಸ್ ಕಾಲೇಜಿನಲ್ಲಿ ಸೀಟು ಕೊಡಿಸುವೆ. ಚಿಂತೆ ಮಾಡಬೇಡಿ' ಎಂದರು. ಮಗನ ಇಚ್ಛೆಗೆ ಮನ್ನಣೆ ಕೊಟ್ಟ ಪೋಷಕರು, ಆರ್ಟ್ಸ್ ಕಾಲೇಜಿನಲ್ಲೇ ಸೀಟು ಪಡೆದು ಸಂತಸಪಟ್ಟರು.

ಅದು ಇಷ್ಟಕ್ಕೇ ಮುಗಿಯಲಿಲ್ಲ. ಮನೆಯ ಸುತ್ತಮುತ್ತಲಿನವರಷ್ಟೇ ಅಲ್ಲದೆ ಗೆಳೆಯರು ಸಹ, 'ಆರ್ಟ್ಸ್ ಕೊಡಿಸಿ ತಪ್ಪು ಮಾಡಿಬಿಟ್ರೆ. ಅದಕ್ಕೆ ಭವಿಷ್ಯವೇ ಇಲ್ಲ. ಸೈನ್ಸ್ ಕಷ್ಟವಾದರೆ ಕಾಮರ್ಸ್ ಸೀಟಿಗಾದರೂ ಪ್ರಯತ್ನಿಸಬಹುದಿತ್ತು. ಬೇಗನೇ ಕೆಲಸ ಸಿಗುತ್ತಿತ್ತು. ಹಣವನ್ನೂ ಚೆನ್ನಾಗಿ ಗಳಿಸಬಹುದಿತ್ತು' ಎಂದೆಲ್ಲ ಹೇಳಿ ಭಯ ಹುಟ್ಟಿಸಿದರು. ಆದರೆ, ಆರ್ಟ್ಸ್ ಹೊರತುಪಡಿಸಿ ಬೇರೆ ಯಾವುದನ್ನೂ ಓದುವುದಿಲ್ಲ ಎಂದು ಮನಸ್ಸು ಗಟ್ಟಿ ಮಾಡಿಕೊಂಡ ಆ ಹುಡುಗ ಮುಂದೆ ಬಿ.ಎ. ಮಾಡಿದ. ನಂತರ ಎಂ.ಎ. ಪದವಿ ಗಳಿಸಿದ. ಪಿಎಚ್.ಡಿ. ಮಾಡಲೂ ಪ್ರಯತ್ನಿಸಿದ. ಸದ್ಯ ಕಾಲೇಜೊಂದರಲ್ಲಿ ಉಪನ್ಯಾಸಕ.



ವಿಷಯ ಇಷ್ಟೇ. ಮೇಲಿನ ಘಟನೆ ನಡೆದು ಎರಡು ದಶಕಗಳೇ ಕಳೆದಿದ್ದರೂ ಶಿಕ್ಷಣದಲ್ಲಿನ ವಿಷಯ ಆಯ್ಕೆ ಕುರಿತ ಬಹುತೇಕ ಜನರ ಮನಃಸ್ಥಿತಿ ಇನ್ನೂ ಬದಲಾಗಿಲ್ಲ. ಈಗಲೂ ವಿಜ್ಞಾನ ಮತ್ತು ವಾಣಿಜ್ಯದ ಕಲಿಕೆಗೆ ಪೈಪೋಟಿ ಇದೆ. ಕಲಾ ವಿಭಾಗದ ಕಲಿಕೆಗೆ ಅಷ್ಟು ಆದ್ಯತೆ ಸಿಗುತ್ತಿಲ್ಲ. ವಿಜ್ಞಾನ, ವಾಣಿಜ್ಯ ಕಾಲೇಜುಗಳು ಹೆಚ್ಚಿನ ಸಂಖ್ಯೆಯಲ್ಲಿ ತಲೆ ಎತ್ತುತ್ತಿದ್ದರೆ, ಕಲಾ ಕಾಲೇಜುಗಳು ನಿಧಾನವಾಗಿ ಕಣ್ಮರೆಯಾಗುತ್ತಿವೆ. 'ವಿದ್ಯಾರ್ಥಿಗಳೇ ಬಾರದಿರುವಾಗ, ನಾವು ಕಾಲೇಜು ನಡೆಸುವುದು ಹೇಗೆ?' ಎಂಬ ಪ್ರಶ್ನೆ ಕಲಾ ಕಾಲೇಜಿನವರದ್ದು. ಇಂಥ ಪರಿಸ್ಥಿತಿ ನಗರ ಪ್ರದೇಶದಲ್ಲಷ್ಟೇ ಅಲ್ಲ, ಗ್ರಾಮೀಣ ಪ್ರದೇಶದಲ್ಲೂ ವ್ಯಾಪಿಸಿದೆ.

ಕಲಾ ವಿಭಾಗ ಎಂದ ಕೂಡಲೇ ಅದು ಕಲೆ ಮತ್ತು ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ್ದು ಎಂಬ ಭಾವನೆ ಹಲವರಲ್ಲಿದೆ. ಆದರೆ, ಆ ವಿಭಾಗದಲ್ಲಿ ಇತಿಹಾಸ, ಭೂಗೋಳಶಾಸ್ತ್ರ, ಮನಃಶಾಸ್ತ್ರ, ರಾಜಕೀಯ ವಿಜ್ಞಾನದಂತಹ ಹಲವು ವಿಷಯಗಳನ್ನು ಕಲಿಯಬಹುದು ಎಂಬುದನ್ನು ಹೆಚ್ಚಿನವರು ಗಮನಿಸುವುದಿಲ್ಲ. ಕಲಾ ವಿಭಾಗದ ವಿಷಯಗಳ ಅಧ್ಯಯನದಿಂದ ಸುತ್ತಮುತ್ತಲ ಜಗತ್ತನ್ನು ವಿಭಿನ್ನ, ಸೃಜನಾತ್ಮಕ ಮತ್ತು ವಿಮರ್ಶಾತ್ಮಕ ದೃಷ್ಟಿಕೋನದಿಂದ ನೋಡಬಹುದು. ಉತ್ತಮ ಸಂವಹನವನ್ನು ರೂಢಿಸಿಕೊಂಡು, ಸಾಮಾಜಿಕ ಬದಲಾವಣೆ ತರಬಹುದು ಎಂಬ ಆಶಾಭಾವವೂ ಬಹುತೇಕರಲ್ಲಿ ಕಾಣಿಸುವುದಿಲ್ಲ.

ಸಾಹಿತ್ಯ, ಸಂಸ್ಕೃತಿ, ಸಮಾಜ, ಕಲೆ, ಇತಿಹಾಸ, ಜೀವನಶೈಲಿಯಂತಹ ವಿಷಯಗಳ ಬಗ್ಗೆ ಆಸಕ್ತಿಯುಳ್ಳವರು ಕಲಾ ವಿಭಾಗವನ್ನು ಆಯ್ಕೆ ಮಾಡಿಕೊಳ್ಳಲು ಬಯಸುತ್ತಾರೆ. ಅವರಲ್ಲಿ ಬಹಳಷ್ಟು ಮಂದಿ ವಿಜ್ಞಾನ, ತಂತ್ರಜ್ಞಾನ, ಗಣಿತದಂತಹ ವಿಷಯಗಳಿಂದ ದೂರ ಇರುತ್ತಾರೆ. ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದರೂ, ಪೋಷಕರು ಎಷ್ಟೇ ಒತ್ತಡ ಹೇರಿದರೂ ಅವರ ಮೊದಲ ಆಯ್ಕೆ ಕಲಾ ವಿಭಾಗವೇ ಆಗಿರುತ್ತದೆ. ಕಲಾ ವಿಭಾಗದಲ್ಲಿ ಸಿಗುವ ಪೂರಕ ವಾತಾವರಣದಿಂದ ಅವರು ಹಂತ ಹಂತವಾಗಿ ಸಾಧನೆ ಮಾಡುತ್ತಾರೆ.

ಪರಿಚಯಸ್ಥರ ಮಕ್ಕಳ ಪೈಪೋಟಿ ಎದುರಿಸಬೇಕು, ಕುಟುಂಬದ ಪ್ರತಿಷ್ಠೆ ಕಾಯ್ದುಕೊಳ್ಳಬೇಕು ಮತ್ತು ತಮ್ಮ ಮಕ್ಕಳು ಎಂಜಿನಿಯರ್ ಅಥವಾ ಡಾಕ್ಟರ್ ಆಗಬೇಕು ಎಂದೆಲ್ಲ ಕನಸು ಕಾಣುವ ಮುನ್ನ ಪೋಷಕರು ಓದಿನ ವಿಷಯದ ಆಯ್ಕೆಗೆ ಸಂಬಂಧಿಸಿದಂತೆ ಮಕ್ಕಳ ಜೊತೆ ಚರ್ಚಿಸುವುದು ಒಳಿತು. ನದಿಯ ನೀರು ಹರಿದಂತೆ ಸುಮ್ಮನೆ ಹರಿದುಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಯಾವ ದಿಕ್ಕಿನಲ್ಲಿ, ಯಾಕಾಗಿ ಹರಿದುಕೊಂಡು ಹೋಗುತ್ತಿದೆ ಎನ್ನುವ ಸ್ಪಷ್ಟತೆ ಅಗತ್ಯ. ಮಕ್ಕಳ ಆಲೋಚನೆ ಏನಿದೆ ಮತ್ತು ಅವರಿಗೆ ಯಾವುದರಲ್ಲಿ ಆಸಕ್ತಿ ಇದೆ ಎಂಬುದನ್ನು ಅರಿಯಲು ಪ್ರಯತ್ನಿಸಬೇಕು.

ಬರವಣಿಗೆ, ಇತಿಹಾಸ, ಕಲೆ, ಸಂಸ್ಕೃತಿ, ಸಾಮಾಜಿಕ ಅಧ್ಯಯನ, ಜೀವನ ಸಂಸ್ಕೃತಿ, ರಾಜಕೀಯ ವಿದ್ಯಮಾನದ ಬಗ್ಗೆ ಆಸಕ್ತಿಯಿದ್ದರೆ, ಕಲಾ ವಿಭಾಗ ಆಯ್ಕೆ ಮಾಡಿಕೊಳ್ಳಲು ಮಕ್ಕಳಿಗೆ ಅವಕಾಶ ಮಾಡಿಕೊಡಬೇಕು. 'ಒತ್ತಾಯದಿಂದ ಒಪ್ಪಿದ್ದೇವೆ' ಎನ್ನುವ ಬದಲು, 'ಸೂಕ್ತ ನಿರ್ಣಯ ತೆಗೆದುಕೊಂಡ ಬಗ್ಗೆ ಖುಷಿಯಿದೆ' ಎಂದು ಮನವರಿಕೆ ಮಾಡಬೇಕು. ಹೀಗೆ ಮಾಡದಿದ್ದರೆ, ಮೊಳಕೆಯನ್ನು ಆರಂಭದಲ್ಲೇ ಚಿವುಟಿದಂತೆ ಆಗುತ್ತದೆ.

ಮಕ್ಕಳು ಇಷ್ಟಪಟ್ಟಿದ್ದನ್ನು ಕಲಿಯಲಿಕ್ಕೆ ಅವಕಾಶ ಕಲ್ಪಿಸದೆ ಹೋದರೆ, ಅದರ ಪರಿಣಾಮ ಅವರ ಆರೋಗ್ಯದ ಮೇಲೆ ಬೀರುವ ಸಾಧ್ಯತೆ ಇರುತ್ತದೆ. ಇಂಥ ಶಿಕ್ಷಣ ಶ್ರೇಷ್ಠ ಅಥವಾ ಅಂಥ ಶಿಕ್ಷಣ ಕನಿಷ್ಠ ಎಂಬ ಭಾವನೆಯನ್ನು ಪೋಷಕರು ತೊಡೆದು ಹಾಕಬೇಕು. ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಬಲ್ಲ, ಬದುಕಿಗೆ ಆಸರೆ ಆಗಬಲ್ಲ, ಖುಷಿಯಿಂದ ಓದಬಲ್ಲ ಮತ್ತು ಕಲಿಕಾಸಕ್ತಿ ಮೂಡಿಸಬಲ್ಲ ವಿಷಯಕ್ಕೆ ಆದ್ಯತೆ ನೀಡಬೇಕು. ಮಕ್ಕಳ ಮನಸ್ಸನ್ನು ಅರಿತುಕೊಳ್ಳದೇ ಹೋಗುವುದು ಹಾಗೂ ಅವರ ಭಾವನೆಗಳಿಗೆ ಸ್ಪಂದಿಸದೇ ಇರುವುದು ಪೋಷಕರಾಗಿ ನಮ್ಮ ಜವಾಬ್ದಾರಿ ನಿರ್ವಹಿಸುವಲ್ಲಿನ ವೈಫಲ್ಯವಲ್ಲದೇ ಬೇರೇನೂ ಅಲ್ಲ.

ಆರ್‌ಟಿಐ ಕಾಯ್ದೆ ಹಾವಿಗೀಗ ಹಲ್ಲಿಲ್ಲ

ಮಾಹಿತಿ ಹಕ್ಕು ಕಾಯ್ದೆ ಜಾರಿಯಾಗಿ ಅಕ್ಟೋಬರ್ 12ಕ್ಕೆ 20 ವರ್ಷ ಆಗುತ್ತದೆ. ಆರಂಭದಲ್ಲಿ ಕಾಯ್ದೆಯು ಜನರಲ್ಲಿ ಒಂದಿಷ್ಟು ಭರವಸೆ ಮೂಡಿಸಿತ್ತು. ಮುಖ್ಯವಾಗಿ, ಜಡ ಮತ್ತು ಭ್ರಷ್ಟ ಸರ್ಕಾರಿ ವ್ಯವಸ್ಥೆಯಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರಬಹುದು ಎನ್ನುವ ಆಶಾಭಾವ ಮೂಡಿತ್ತು. ಆದರೆ, ಆರ್‌ಟಿಐ ಮೂಲಕ ಅಧಿಕಾರಿಗಳ, ಆಡಳಿತಾರೂಢರ ಹುಳುಕುಗಳು ಬಯಲಾಗತೊಡಗಿದಂತೆ ಕಾಯ್ದೆಯನ್ನು ದುರ್ಬಲಗೊಳಿಸುವ ಪ್ರಯತ್ನಗಳು ಆರಂಭವಾದವು. ಕಾಯ್ದೆಗೆ ಹಲವು ತಿದ್ದುಪಡಿಗಳನ್ನು ತರಲಾಯಿತು. ಹಲವು ಇಲಾಖೆ, ವಿಭಾಗ, ಸಂಸ್ಥೆಗಳು ಭದ್ರತೆಯ ಹೆಸರಿನಲ್ಲಿ ಕಾಯ್ದೆಯಿಂದ ವಿನಾಯಿತಿ ಪಡೆದವು. ಜತೆಗೆ, ಕೇಂದ್ರವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಮಾಹಿತಿ ಆಯುಕ್ತರ ಹುದ್ದೆಗಳು ಖಾಲಿ ಇದ್ದು, ಬಾಕಿ ದೂರುಗಳು/ಮೇಲ್ಮನವಿಗಳ ಸಂಖ್ಯೆ ಲಕ್ಷಗಳಿಗೇರಿದೆ. ಈ ಮೂಲಕ ಕಾಯ್ದೆಯು ಹಲ್ಲಿಲ್ಲದ ಹಾವಾಗಿದೆ

ಪ್ರಜಾವಾಣಿ ವಾರ್ತೆ

2005ರ ಅ.12ರಂದು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಜಾರಿಗೆ ಬಂದಾಗ ಅದರ ಬಗ್ಗೆ ಭಾರಿ ನಿರೀಕ್ಷೆಗಳಿದ್ದವು. ಸರ್ಕಾರಿ ವ್ಯವಸ್ಥೆಯಲ್ಲಿ ಉತ್ತರದಾಯಿತ್ವ, ಪಾರದರ್ಶಕತೆ ತರುವ ಮತ್ತು ಅಧಿಕಾರಿಗಳ ಭ್ರಷ್ಟಾಚಾರವನ್ನು ತಡೆಯುವ ದಿಸೆಯಲ್ಲಿ ಆರ್‌ಟಿಐ ಪ್ರಮುಖ ಪಾತ್ರ ವಹಿಸಲಿದೆ ಎಂದೂ ಭಾವಿಸಲಾಗಿತ್ತು.

ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಎಲ್ಲ ಮಾಹಿತಿಯನ್ನೂ ತಿಳಿಯುವ ಹಕ್ಕು ಪ್ರಜೆಗಳಿಗಿದೆ ಎನ್ನುವುದು ಆರ್‌ಟಿಐನ ಮೂಲತತ್ವ. ಸರ್ಕಾರವು ಎಲ್ಲ ಮಾಹಿತಿಯನ್ನೂ ಜನರಿಗೆ ಹಂಚಿಕೊಳ್ಳುವಂತಾಗಬೇಕು ಎನ್ನುವುದು ಕಾಯ್ದೆಯ ಧ್ಯೇಯವಾಗಿತ್ತು. ಕಾಯ್ದೆಯ ಸೆಕ್ಷನ್ 8 (1)ರ ಅನ್ವಯ ನಿರ್ದಿಷ್ಟ 10 ಇಲಾಖೆ/ಸಂಸ್ಥೆಗಳನ್ನು ಬಿಟ್ಟು ಸರ್ಕಾರದ ಉಳಿದ ಎಲ್ಲ ಇಲಾಖೆ/ವಿಭಾಗ, ಸಂಸ್ಥೆಗಳೂ ಮಾಹಿತಿ ನೀಡಬೇಕಿತ್ತು.

ಆರಂಭದ ಕೆಲವು ವರ್ಷಗಳಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಮತ್ತು ಆಡಳಿತಾರೂಢರಿಗೆ ಆರ್‌ಟಿಐ ಆತಂಕ ಮೂಡಿಸಿದ್ದೂ ನಿಜ. ಪತ್ರಕರ್ತರು, ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿದ್ದ ಸಾಮಾಜಿಕ ಕಾರ್ಯಕರ್ತರಿಗೆ ಆರ್‌ಟಿಐ ಒಂದು ಅಸ್ತ್ರವೂ ಆಗಿತ್ತು. ಸರ್ಕಾರದ ಯೋಜನೆ, ಕಾರ್ಯಕ್ರಮ ಅನುಷ್ಠಾನದ ಖರ್ಚುವೆಚ್ಚ, ಗಡುವು ಇತ್ಯಾದಿಗಳನ್ನು ಆರ್‌ಟಿಐ ಮೂಲಕ ತಿಳಿಯುವುದು ಹೆಚ್ಚಾಯಿತು. ಸಂಸತ್ತು, ವಿಧಾನಸಭೆಗಳಿಂದ ಗ್ರಾಮ ಪಂಚಾಯ್ತಿ ಮಟ್ಟದವರೆಗೆ, ದಿಲ್ಲಿಯಿಂದ ಹಳ್ಳಿಯವರೆಗೆ ಸರ್ಕಾರದ ಇಲಾಖೆಗಳಲ್ಲಿ ಆರ್‌ಟಿಐ ಅರ್ಜಿಗಳು ದಾಖಲಾಗತಡೊಗಿದವು. ಭ್ರಷ್ಟಾಚಾರ ಪ್ರಕರಣಗಳು ಬಯಲಿಗೆ ಬರತೊಡಗಿದವು. ಅವ್ಯವಹಾರ ನಡೆಸಿದ ಮಂತ್ರಿಗಳು, ಅಧಿಕಾರಿಗಳಿಗೆ ಇರಿಸುಮುರುಸು, ಸಮಸ್ಯೆಗಳು ಎದುರಾದವು. ಅನೇಕ ಅಧಿಕಾರಿಗಳು ಕಾನೂನು ಕ್ರಮ ಎದುರಿಸಬೇಕಾಗಿ ಬಂತು. ಸರ್ಕಾರದಿಂದ ಮಾಹಿತಿ ಪಡೆಯಲು ಮಾಧ್ಯಮಗಳಿಗೂ ಇದು ಉತ್ತಮ ಅಸ್ತ್ರವಾಯಿತು. ಸಾಮಾಜಿಕ ಕಾರ್ಯಕರ್ತರು ಕಾಯ್ದೆಯಡಿ ಮಾಹಿತಿ ಪಡೆದು, ಅದನ್ನು ಮಾಧ್ಯಮಗಳ ಮೂಲಕ ಜನರಿಗೆ ಮುಟ್ಟಿಸತೊಡಗಿದರು. ಸರ್ಕಾರಿ ವ್ಯವಸ್ಥೆಯಲ್ಲಿ ಸಣ್ಣ ಮಟ್ಟದ ಉತ್ತರದಾಯಿತ್ವ ಕಂಡುಬರತೊಡಗಿತು. ಆದರೆ, ಇದು ಹೆಚ್ಚು ದಿನ ಮುಂದುವರಿಯಲಿಲ್ಲ.

ದೇಶದ ಭದ್ರತೆಯ ನೆಪವೊಡ್ಡಿ ಮಾಹಿತಿ ನಿರಾಕರಿಸುವ ಪ್ರವೃತ್ತಿ ಹೆಚ್ಚಾಯಿತು. ಗಿರೀಶ್ ರಾಮಚಂದ್ರ ದೇಶಪಾಂಡೆ ಮತ್ತು ಕೇಂದ್ರ ಮಾಹಿತಿ ಆಯೋಗ ಮತ್ತು ಇತರರು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಮಾಹಿತಿ ನಿರಾಕರಿಸುವವರಿಗೆ ಸಮರ್ಥನೆಯಾಯಿತು. ಕಾನೂನನ್ನು ತಪ್ಪಾಗಿ ವ್ಯಾಖ್ಯಾನಿಸಿ, ವೈಯಕ್ತಿಕತೆಯ ಹೆಸರಿನಲ್ಲಿ ಮಾಹಿತಿ ನಿರಾಕರಿಸುವ ಪ್ರವೃತ್ತಿ ಹೆಚ್ಚಾಯಿತು. ಇದರ ಜತೆಯಲ್ಲೇ, ಕಾಯ್ದೆಗೆ ಕೇಂದ್ರ ಸರ್ಕಾರವು ಕ್ರಮೇಣ ಹಲವು ತಿದ್ದುಪಡಿಗಳನ್ನೂ ತರತೊಡಗಿತು. ಈ ಮೂಲಕ ಕಾಯ್ದೆಯ ಆಶಯಗಳಿಗೆ ಪೆಟ್ಟು ಬೀಳತೊಡಗಿತು.

ಮಾಹಿತಿ ಆಯುಕ್ತರ ಹುದ್ದೆಗಳು ಖಾಲಿ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರ್‌ಟಿಐ ಅನ್ನು ದುರ್ಬಲಗೊಳಿಸುವ, ನಿಷ್ಕ್ರಿಯಗೊಳಿಸುವ ವ್ಯವಸ್ಥಿತ ಕಾರ್ಯತಂತ್ರ ಅನುಸರಿಸತೊಡಗಿದವು. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಬೆಳೆಸಲು ಶ್ರಮಿಸುತ್ತಿರುವ ದೆಹಲಿಯ ‘ಸಾತರ್ಕ್ ನಾಗರಿಕ ಸಂಘಟನೆ’ಯು ಆರ್‌ಟಿಐ ಬಗ್ಗೆ ಅಧ್ಯಯನ ನಡೆಸಿ ‘ರಿಪೋರ್ಟ್ ಕಾರ್ಡ್ 2024–25’ ಬಿಡುಗಡೆ ಮಾಡಿದೆ. ಅದರ ಪ್ರಕಾರ, ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯಗಳ ಮಟ್ಟದಲ್ಲಿರುವ ಮಾಹಿತಿ ಆಯೋಗಗಳಲ್ಲಿ ಮಾಹಿತಿ ಆಯುಕ್ತರ ಹುದ್ದೆಗಳು ಖಾಲಿ ಇದ್ದು, ಅದರಿಂದ ಮಾಹಿತಿಗಾಗಿ ಸಲ್ಲಿಕೆಯಾಗಿರುವ ಲಕ್ಷಾಂತರ ಅರ್ಜಿಗಳು ಬಾಕಿ ಇವೆ.

ಕೇಂದ್ರ ಮಾಹಿತಿ ಆಯೋಗಕ್ಕೆ ಪ್ರಸ್ತುತ ಮುಖ್ಯಸ್ಥರೇ ಇಲ್ಲ; ಕೇವಲ ಇಬ್ಬರು ಮಾಹಿತಿ ಆಯುಕ್ತರು ಮಾತ್ರ ಇದ್ದಾರೆ. ಜಾರ್ಖಂಡ್‌ನಲ್ಲಿ ಐದು ವರ್ಷಗಳಿಂದ ಮತ್ತು ಹಿಮಾಚಲ ಪ್ರದೇಶದಲ್ಲಿ ಮೂರು ತಿಂಗಳಿನಿಂದ ಆಯುಕ್ತರಿಲ್ಲದೇ ಆಯೋಗ ನಿಷ್ಕ್ರಿಯವಾಗಿದೆ. ಕರ್ನಾಟಕದ ಮಾಹಿತಿ ಆಯೋಗದಲ್ಲಿ ಪ್ರಸ್ತುತ ಮುಖ್ಯಸ್ಥರೂ ಸೇರಿ ಏಳು ಮಾಹಿತಿ ಆಯುಕ್ತರು ಕೆಲಸ ಮಾಡುತ್ತಿದ್ದಾರೆ. ಆದರೆ, ಇದೇ ಜನವರಿವರೆಗೆ, ಕೇವಲ ಮೂವರು ಆಯುಕ್ತರೊಂದಿಗೆ ಆಯೋಗ ಕಾರ್ಯನಿರ್ವಹಿಸುತ್ತಿತ್ತು.

ಪೂರ್ಣ ಪ್ರಮಾಣದಲ್ಲಿ ಆಯುಕ್ತರು ಇಲ್ಲದಿರುವುದರಿಂದ ಅನೇಕ ರಾಜ್ಯಗಳಲ್ಲಿ ಲಕ್ಷಾಂತರ ಅರ್ಜಿಗಳು ವಿಲೇವಾರಿಯಾಗದೇ ಬಾಕಿ ಇವೆ. ವರದಿಯ ಪ್ರಕಾರ, ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಲು ತೆಲಂಗಾಣ ಮಾಹಿತಿ ಆಯೋಗಕ್ಕೆ 29 ವರ್ಷ ಬೇಕು, ತ್ರಿಪುರಾದ ಆಯೋಗಕ್ಕೆ 23 ವರ್ಷ ಬೇಕು. ಇದರ ಜೊತೆಗೆ, ಅರ್ಹರಲ್ಲದವರನ್ನೂ ಸರ್ಕಾರಗಳು ಆಯುಕ್ತರನ್ನಾಗಿ ನೇಮಕ ಮಾಡುತ್ತಿವೆ ಎಂಬ ದೂರುಗಳೂ ಇವೆ.

ರಾಯಚೂರಿನ ದೇವದುರ್ಗದ ಜಾಲಹಳ್ಳಿಯ ಅತಿಥಿ ಗೃಹದ ದುರಸ್ತಿ ಸಂಬಂಧ ಮಾಹಿತಿ ಬಯಸಿ 2015ರಲ್ಲಿ ಅರ್ಜಿ ಸಲ್ಲಿಸಿದ್ದ ಮಾಹಿತಿ ಹಕ್ಕು ಕಾರ್ಯಕರ್ತ ಅಳ್ಳಪ್ಪ ಅಮರಾಪುರ ಮಾಹಿತಿ ಸಿಗದೇ ಮೇಲ್ಮನವಿ ಸಲ್ಲಿಸಿದ್ದರು. ಬರೋಬ್ಬರಿ ಎಂಟೂವರೆ ವರ್ಷಗಳ ನಂತರ ಮೇಲ್ಮನವಿ ವಿಚಾರಣೆಗೆ ಹಾಜರಾಗಲು ಇತ್ತೀಚೆಗೆ ನೋಟಿಸ್ ಬಂದಿರುವುದಾಗಿ ಅವರು ಹೇಳಿದ್ದು ಸುದ್ದಿಯಾಗಿತ್ತು. ‘ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿದ 30 ದಿನಗಳಲ್ಲಿ ಮಾಹಿತಿ ಒದಗಿಸಬೇಕು. ಆದರೆ, ಮಾಹಿತಿ ಆಯೋಗವು 10 ವರ್ಷ ವಿಳಂಬ ಮಾಡುವ ಮೂಲಕ ಭ್ರಷ್ಟ ಅಧಿಕಾರಿಗಳ ರಕ್ಷಣೆ ಮಾಡಿದೆ’ ಎಂದು ಬೇಸರ ವ್ಯಕ್ತಪಡಿಸಿದ್ದರು. ಆರ್‌ಟಿಐಗೆ 20 ವರ್ಷ ತುಂಬಿದ ಸಂದರ್ಭದಲ್ಲಿ ದೇಶದ ಅನೇಕ ರಾಜ್ಯಗಳಲ್ಲಿ ಇಂಥದ್ದೇ ಸ್ಥಿತಿ ಕಂಡುಬರುತ್ತಿದೆ.

ದುರ್ಬಲಗೊಂಡ ಕಾನೂನು

2005ರಲ್ಲಿ ಜಾರಿಗೆ ಬಂದ ಮೂಲಕಾಯ್ದೆಗೆ ಹೋಲಿಸಿದರೆ, ಇತ್ತೀಚಿನ ವರ್ಷಗಳಲ್ಲಿ ಈ ಕಾನೂನನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂಬ ಆರೋಪ ಇದೆ. ಕೇಂದ್ರ ಸರ್ಕಾರವು 2023ರಲ್ಲಿ ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆ (ಡಿಪಿಡಿಪಿ) ಕಾಯ್ದೆಯ ಸೆಕ್ಷನ್ 44 (3)ರ ಮೂಲಕ ಆರ್‌ಟಿಐ ಕಾಯ್ದೆಯ ಸೆಕ್ಷನ್ 8 (1) (ಜೆ)ಗೆ ಮಾಡಿರುವ ತಿದ್ದುಪಡಿಯು ಹಲವರ ಆಕ್ಷೇಪಕ್ಕೆ ಕಾರಣವಾಗಿದೆ.

ಆರ್‌ಟಿಐ ಕಾಯ್ದೆಯ ಸೆಕ್ಷನ್ 8(1)(ಜೆ) ಪ್ರಕಾರ, ಯಾವುದೇ ವ್ಯಕ್ತಿಯ ಖಾಸಗಿ ಮಾಹಿತಿಗಳು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದು ಅಲ್ಲದಿದ್ದರೆ ಅಥವಾ ನೀಡುವ ಮಾಹಿತಿಯು ವ್ಯಕ್ತಿಯ ಖಾಸಗಿತನಕ್ಕೆ ಅನಗತ್ಯವಾಗಿ ಧಕ್ಕೆ ತರುವಂತೆ ಇದ್ದರೆ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರಗಳು ಕಾಯ್ದೆಯ ಅಡಿಯಲ್ಲಿ ಕೇಳಲಾದ ಮಾಹಿತಿಯನ್ನು ತಡೆ ಹಿಡಿಯಬಹುದು.

ಅಂದರೆ, ಅರ್ಜಿದಾರರು ಕೇಳಿದ ಮಾಹಿತಿಯು ಖಾಸಗಿ ವ್ಯಕ್ತಿಯಾಗಿದ್ದರೂ, ಅದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದ್ದರೆ ಮಾಹಿತಿ ಅಧಿಕಾರಿಯು ಅಥವಾ ಮೇಲ್ಮನವಿ ಪ್ರಾಧಿಕಾರಗಳು ನಿರ್ದಿಷ್ಟ ವ್ಯಕ್ತಿಯ ಬಗ್ಗೆ ಮಾಹಿತಿ ನೀಡುವುದಕ್ಕೆ ಈ ಸೆಕ್ಷನ್ ಅವಕಾಶ ನೀಡುತ್ತಿತ್ತು.

ಆದರೆ, ಡಿಪಿಡಿಪಿ ಕಾಯ್ದೆಯ ಸೆಕ್ಷನ್ 44 (3)ರಲ್ಲಿ ಸಾರ್ವಜನಿಕ ಹಿತಾಸಕ್ತಿ ಹಾಗೂ ಇತರ ವಿಚಾರಗಳ ಉಲ್ಲೇಖಗಳನ್ನು ತೆಗೆಯಲಾಗಿದ್ದು, ವ್ಯಕ್ತಿಯ ಖಾಸಗಿ ಮಾಹಿತಿಗಳನ್ನು ತಡೆ ಹಿಡಿಯುವುದಕ್ಕೆ ಅವಕಾಶ ನೀಡಿದೆ.

ಈ ತಿದ್ದುಪಡಿಯಿಂದಾಗಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಇಲ್ಲದಾಗಿದೆ ಎಂಬುದು ವಿರೋಧ ಪಕ್ಷಗಳು, ಸಾಮಾಜಿಕ ಕಾರ್ಯಕರ್ತರು ಆಕ್ಷೇಪಿಸಿದ್ದಾರೆ. ಆದರೆ, ಸರ್ಕಾರ ಇದನ್ನು ಸಮರ್ಥಿಸಿಕೊಂಡಿದ್ದು, ಕಾಯ್ದೆಯ ದುರ್ಬಳಕೆ ತಡೆಯುವುದಕ್ಕಾಗಿ ಈ ತಿದ್ದುಪಡಿ ತರಲಾಗಿದೆ ಎಂದು ಹೇಳಿದೆ.

ವಿವಿಧ ಆರೋಪಗಳನ್ನು ಹೊತ್ತಿರುವ ಅಧಿಕಾರಿಗಳು, ಸಚಿವರು ಹಾಗೂ ಸಾರ್ವಜನಿಕ ಜೀವನದಲ್ಲಿರುವವರ ಜಾತಿ ಪ್ರಮಾಣ ಪತ್ರ, ಪದವಿ ಪ್ರಮಾಣಪತ್ರ ಸೇರಿದಂತೆ ಇನ್ನಿತರ ವೈಯಕ್ತಿಕ ಮಾಹಿತಿಗಳನ್ನು ಕಾಯ್ದೆಯ ಅಡಿಯಲ್ಲಿ ಕೇಳಿದಾಗ, ಈ ತಿದ್ದುಪಡಿಯ ಕಾರಣ ನೀಡಿ ಮಾಹಿತಿಗಳನ್ನು ನಿರಾಕರಿಸಿರುವ ಹಲವು ನಿದರ್ಶನಗಳು ಇವೆ.

ಮಾಹಿತಿ ಹಕ್ಕು ಕಾರ್ಯಕರ್ತರ ಕೊಲೆ

ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ಬಂದ ನಂತರ, ಸರ್ಕಾರಿ ಅಧಿಕಾರಿಗಳ ಮತ್ತು ಆಡಳಿತ ವ್ಯವಸ್ಥೆಯ ಹುಳುಕುಗಳನ್ನು ಬಹಿರಂಗಪಡಿಸುವುದು ಹೆಚ್ಚಾಯಿತು. ಅದರ ಜತೆಯಲ್ಲೇ, ಮಾಹಿತಿ ಹಕ್ಕು ಕಾರ್ಯಕರ್ತರನ್ನು ಬೆದರಿಸುವ, ಕೊಲ್ಲುವ ಪ್ರವೃತ್ತಿಯೂ ಹುಟ್ಟಿಕೊಂಡಿತು. ಕಾಮನ್‌ವೆಲ್ತ್ ಮಾನವ ಹಕ್ಕುಗಳ ಕಾರ್ಯಕ್ರಮ (ಸಿಎಚ್‌ಆರ್‌ಐ) ಪ್ರಕಾರ, ಕಾಯ್ದೆ ಜಾರಿಯಾದಾಗಿನಿಂದ ಪ್ರತಿ ವರ್ಷವೂ ಹತ್ಯೆಗಳು ನಡೆಯುತ್ತಲೇ ಇವೆ. ಇದುವರೆಗೆ ಕನಿಷ್ಠ 107 ಮಂದಿ ಮಾಹಿತಿ ಹಕ್ಕು ಕಾರ್ಯಕರ್ತರು ಕೊಲೆಯಾಗಿದ್ದಾರೆ ಮತ್ತು ಬೆದರಿಕೆ, ಒತ್ತಡಗಳಿಂದ ಏಳು ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೊಲೆಯಾದವರು ಯಾರೂ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಮಾಹಿತಿಯನ್ನಾಗಲಿ, ಸೂಕ್ಷ್ಮ ದಾಖಲೆಗಳಿಗೆ ಸಂಬಂಧಿಸಿದ ಮಾಹಿತಿಯನ್ನಾಗಲಿ ಕೇಳಿದ್ದವರಲ್ಲ; ಸ್ಥಳೀಯ ಆಡಳಿತಗಳನ್ನು ಉತ್ತರದಾಯಿಯಾಗಿಸುವಂಥ ಮಾಹಿತಿ ಬಯಸಿದ್ದವರು ಎನ್ನುವುದು ಗಮನಾರ್ಹ. ರಿಯಲ್ ಎಸ್ಟೇಟ್, ಮರಳು ಮಾಫಿಯಾಗೆ ಸೇರಿದವರು ಮಾಹಿತಿ ಹಕ್ಕು ಕಾರ್ಯಕರ್ತರ ಮೇಲೆ ಹಲ್ಲೆ, ದೌರ್ಜನ್ಯ ನಡೆಸುವ ಘಟನೆಗಳು ದೇಶದ ನಾನಾ ಭಾಗಗಳಲ್ಲಿ ವರದಿಯಾಗುತ್ತಲೇ ಇವೆ.

ಆರ್‌ಟಿಐ ಅಡಿ ಅತಿ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗುವ ರಾಜ್ಯಗಳಲ್ಲಿ ಮಹಾರಾಷ್ಟ್ರ ಮುಂಚೂಣಿಯಲ್ಲಿದೆ. ಮಾಹಿತಿ ಹಕ್ಕು ಕಾರ್ಯಕರ್ತರ ಕೊಲೆಗಳಲ್ಲಿಯೂ ಮಹಾರಾಷ್ಟ್ರ ಮೊದಲ ಸ್ಥಾನ ಪಡೆದು ಕುಖ್ಯಾತಿ ಗಳಿಸಿದೆ.

ಇನ್ನೊಂದು ವಾದವೂ ಇದೆ; ಮಾಹಿತಿ ಹಕ್ಕು ಕಾಯ್ದೆಯನ್ನು ದುರುಪಯೋಗಿಸಿಕೊಂಡು ಕೆಲವು ಮಾಹಿತಿ ಹಕ್ಕು ಕಾರ್ಯಕರ್ತರು ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡಿ, ಹಣ ವಸೂಲಿ ಮಾಡುತ್ತಿದ್ದಾರೆ ಎನ್ನುವುದು ಆ ವಾದ. ಇದರಲ್ಲಿ ಅಲ್ಪ ಮಟ್ಟಿಗಿನ ಸತ್ಯಾಂಶವೂ ಇರಬಹುದು. ಆದರೆ, ಹೀಗೆ ಆರೋಪ ಮಾಡುವ ಬಹುತೇಕರು ಸರ್ಕಾರಿ ವ್ಯವಸ್ಥೆಗೆ ಸಂಬಂಧಿಸಿದವರು, ಅಧಿಕಾರಿಗಳು ಎನ್ನುವುದು ವಾಸ್ತವ.

ಆಧಾರ: ಪಿಟಿಐ, ಡೌನ್ ಟು ಅರ್ಥ್, ಆರ್‌ಟಿಐ ಕಾಯ್ದೆ 2005, ಡಿಪಿಡಿಪಿ ಕಾಯ್ದೆ 2023, ಸಸಸಮಾಧ್ಯಮ ವರದಿಗಳು

ಬಾಕಿ ಅರ್ಜಿಗಳು ಹೆಚ್ಚಳ

ವಿವಿಧ ಮಾಹಿತಿಗಳನ್ನು ಕೋರಿ ಆರ್‌ಟಿಐ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳು ಮತ್ತು ಮೇಲ್ಮನವಿಗಳು ಸಮರ್ಪಕವಾಗಿ ಇತ್ಯರ್ಥವಾಗುತ್ತಿಲ್ಲ. ಇಂತಹ ಅರ್ಜಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗಗಳ ಮುಂದೆ ಇಂತಹ 4.13 ಲಕ್ಷ ಅರ್ಜಿಗಳಿವೆ. ಅತ್ಯಂತ ಹೆಚ್ಚು ಅರ್ಜಿಗಳು ಬಾಕಿ ಇರುವ ಮೊದಲ ಮೂರು ರಾಜ್ಯಗಳಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ಮತ್ತು ತಮಿಳುನಾಡು ನಂತರದ ಸ್ಥಾನದಲ್ಲಿವೆ.

ಸಕಾಲದಲ್ಲಿ ಮಾಹಿತಿ ಆಯುಕ್ತರ ನೇಮಕವಾಗದೇ ಇರುವುದರಿಂದ ಇಂಥ ಸನ್ನಿವೇಶ ನಿರ್ಮಾಣವಾಗಿದೆ ಎಂದು ‘ಸಾತರ್ಕ್ ನಾಗರಿಕ ಸಂಘಟನೆ’ ಸಿದ್ಧಪಡಿಸಿರುವ ಭಾರತದ ಮಾಹಿತಿ ಆಯೋಗಗಳ ಸಾಧನೆ ಕುರಿತ 2024–25ರ ವರದಿ ಉಲ್ಲೇಖಿಸಿದೆ.

ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಆಯೋಗಗಳು ಆದೇಶ ನೀಡದೇ ದೂರುಗಳು ಮತ್ತು ಮೇಲ್ಮನವಿಗಳನ್ನು ವಾಪಸ್ ಕಳುಹಿಸುತ್ತಿರುವುದರ ಬಗ್ಗೆ ವರದಿಯು ಕಳವಳ ವ್ಯಕ್ತಪಡಿಸಿದೆ. ಕಾಯ್ದೆಯ ನಿಯಮಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ ಮಾಹಿತಿ ನೀಡಲು ನಿರಾಕರಿಸುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಆಯೋಗಗಳು ಮೀನ–ಮೇಷ ಎಣಿಸುತ್ತಿರುವುದರ ಬಗ್ಗೆಯೂ ವರದಿ ಆಕ್ಷೇಪಿಸಿದೆ.

ಬಾಕಿ ಇರುವ ಅರ್ಜಿ/ಮೇಲ್ಮನವಿ

(2025ರ ಜೂನ್ 30ರವರೆಗೆ)

ಮಹಾರಾಷ್ಟ್ರ	95,340
ಕರ್ನಾಟಕ	47,825
ತಮಿಳುನಾಡು	41,059

ಒಟ್ಟು 4.13 ಲಕ್ಷ

ಇತ್ಯರ್ಥವಾಗದ ದೂರು/ ಮೇಲ್ಮನವಿ ಹೆಚ್ಚಳ

(ಲಕ್ಷಗಳಲ್ಲಿ)

2019 ಜೂನ್	2.86
2023 ಜೂನ್	3.88
2025 ಜೂನ್	4.13

ಆದೇಶ ನೀಡದೆ ದೂರು/ಮೇಲ್ಮನವಿ ವಾಪಸ್ ಮಾಡಿದ ಪ್ರಕರಣಗಳು

ದೇಶ	51,148
ಮಹಾರಾಷ್ಟ್ರ	23,509
ಕೇಂದ್ರ ಮಾಹಿತಿ ಆಯೋಗ	11,993
ಬಿಹಾರ	8,729
ಕರ್ನಾಟಕ	4,886

ದಾಖಲಾದ ಮತ್ತು ಇತ್ಯರ್ಥ ಪಡಿಸಲಾದ ದೂರುಗಳು

(2024ರ ಜುಲೈನಿಂದ 2025ರ ಜೂನ್ 30ರವರೆಗೆ)

	ದೂರುಗಳು	ಇತ್ಯರ್ಥ
ಮಹಾರಾಷ್ಟ್ರ	54,869	38,410
ತಮಿಳುನಾಡು	27,748	22,336
ಕರ್ನಾಟಕ	27,490	26,802
ದೇಶ	2.41 ಲಕ್ಷ	1.82 ಲಕ್ಷ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಲಡಾಖ್‌ನ ಶಿಕ್ಷಣ ತಜ್ಞ, ಪರಿಸರವಾದಿ ಸೋನಮ್ ವಾಂಗ್ಚುಕ್ ಅವರು ಬಾಂಗ್ಲಾದೇಶದ ಹಂಗಾಮಿ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಅವರೊಂದಿಗೆ ಇರುವ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಹಂಚಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಲಡಾಖ್‌ನಲ್ಲಿ ಹಿಂಸಾಚಾರ ಸಂಭವಿಸಿತ್ತು. ಇದರ ನಡುವೆಯೇ ಈ ಭೇಟಿ ನಡೆದಿದೆ ಎಂಬರ್ಥದಲ್ಲಿ ಪ್ರತಿಪಾದಿಸಲಾಗುತ್ತಿದೆ. ‘ಭಾರತದ ವಿರುದ್ಧ ಅಂತರರಾಷ್ಟ್ರೀಯ ಸಂಚುಕೋರರು ಆಡುತ್ತಿರುವ ಆಟ ಇದು. ಅಂತರರಾಷ್ಟ್ರೀಯ ದಲ್ಲಾಳಿ ಗ್ಯಾಂಗ್ ಮತ್ತು ಅಂತರರಾಷ್ಟ್ರೀಯ ದಲ್ಲಾಳಿಗಳ ಕುಟುಂಬ ಹಾಗೂ ಅವರ ಏಜೆಂಟರ ಪಿತೂರಿ ಇದು’ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು.

ರಿವರ್ಸ್ ಇಮೇಜ್ ವಿಧಾನದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಸೋನಮ್ ವಾಂಗ್ಚುಕ್ ಅವರು 2020ರ ಫೆಬ್ರುವರಿಯಲ್ಲಿ ಫೇಸ್‌ಬುಕ್‌ನಲ್ಲಿ ಮಾಡಿದ ಪೋಸ್ಟ್ ಸಿಕ್ಕಿತು. ಅದರಲ್ಲಿ ಇದೇ ಫೋಟೊ ಇತ್ತು. ಹಾಗಾಗಿ, ಇದು ಇತ್ತೀಚಿನ ಭೇಟಿಯ ಫೋಟೊ ಅಲ್ಲ ಎಂಬುದು ದೃಢಪಟ್ಟಿತು. ‘ಢಾಕಾದ ಬ್ರಿಟಿಷ್ ಹೈಕಮಿಷನ್‌ನಲ್ಲಿ ಡಾ.ಯೂನುಸ್ ಅವರನ್ನು ಭೇಟಿಯಾದೆ’ ಎಂದು ಚಿತ್ರದ ಶೀರ್ಷಿಕೆಯಲ್ಲಿ ಬರೆಯಲಾಗಿತ್ತು. ಆ ಸಂದರ್ಭದಲ್ಲಿ ಯೂನುಸ್ ಅವರು ರಾಜಕೀಯದಲ್ಲಿ ಇರಲಿಲ್ಲ. ಆರ್ಥಿಕ ತಜ್ಞರಾಗಿ ಮತ್ತು ನೊಬೆಲ್ ಪುರಸ್ಕೃತರಾಗಿ ಗುರುತಿಸಿಕೊಂಡಿದ್ದರು. ಕಳೆದ ವರ್ಷವಷ್ಟೆ ಅವರು ಬಾಂಗ್ಲಾದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರರಾಗಿ ನೇಮಕಗೊಂಡಿದ್ದರು. ವಾಂಗ್ಚುಕ್ ಮತ್ತು ಯೂನುಸ್ ಅವರು ಇತ್ತೀಚೆಗೆ ಭೇಟಿ ಮಾಡಿದ ಬಗ್ಗೆ ಎಲ್ಲೂ ಮಾಹಿತಿ ಇಲ್ಲ. ಹಳೆಯ ಫೋಟೊವನ್ನು ಬಳಸಿ ಇತ್ತೀಚಿನ ಫೋಟೊ ಎಂಬಂತೆ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ತಿಳಿಸಿದೆ.

ದಯೆಯಿಲ್ಲದ ಧರ್ಮವು ಆವುದಯ್ಯ?

ನುಡಿ ಬೆಳಗು

ರೇಣುಕಾ ನಿಡಗುಂದಿ

ವಾರಾಣಸಿಯಲ್ಲಿ ಒಂದೆರಡು ತಿಂಗಳ ಹಿಂದೆ ನಡೆದ ಘಟನೆಯಿದು. 45 ವಯಸ್ಸಿನ ಪ್ಯಾರೇಲಾಲ್ ಲಕ್ವಾಗ್ರಸ್ಥರಾಗಿದ್ದು ಅವರ ಜೀವನೋಪಾಯದ ಹೊಣೆ 22 ವರ್ಷದ ಮಗ ಶಿವಪೂಜನನ ಮೇಲಿತ್ತು. ಮಗ ಈಗ ಟ್ರ್ಯಾಕ್ಟರ್ ನಡೆಸುವುದನ್ನೂ ಕಲಿತು ಠಾಕೂರರ ಬಳಿ ಇಟ್ಟಂಗಿ ಭಟ್ಟಿಗೆ ಮಣ್ಣು ಹಾಕುವ ಕೆಲಸವನ್ನು ಮಾಡತೊಡಗಿದ್ದ. ಅವನಿಗೆ ಮದುವೆಯನ್ನೂ ಗೊತ್ತುಮಾಡಿದ್ದರು. ಮದುವೆಯ ಔತಣಕ್ಕಾಗಿ 100 ಕೆಜಿ. ಕಟ್ಟಿಗೆಯನ್ನೂ ಖರೀದಿಸಿದ್ದ ಪ್ಯಾರೇಲಾಲ್.

ಒಂದು ಸುತ್ತಿಗೆ 25 ರೂಪಾಯಿಯಂತೆ ಇಪ್ಪತ್ತು ಸುತ್ತು ಟ್ರ್ಯಾಕ್ಟರ್ ಓಡಿಸಿದಾಗ ಅವನಿಗೆ ಸಿಗುತ್ತಿದ್ದುದು ಬರೀ 500 ರುಪಾಯಿಗಳು. ಮಣ್ಣಿನ ಲೋಡಿಂಗ್ ಕೆಲಸ ರಾತ್ರಿ ನಡೆಯುವುದರಿಂದ, ಟ್ರ್ಯಾಕ್ಟರ್ ಮಾಲೀಕರು ಅವನನ್ನು ಇಡೀ ರಾತ್ರಿ ಕೆಲಸ ಮಾಡಿಸಿದರು. ಬೆಳಿಗ್ಗೆ 6ರ ಹೊತ್ತಿಗೆ, ಹಸಿವಾಗಿದ್ದ ಕಾರಣ ಊಟಕ್ಕೆ ಬಿಡಿ ಎಂದು ಕೇಳಿದರೂ, ಮಾಲೀಕರು ಇನ್ನೊಂದು ಸುತ್ತು ಹೊಡೆಯಲು ಹೇಳಿದರು. ಅದೇ ಸುತ್ತು ಅವನ ಜೀವನದ ಕೊನೆಯ ಸುತ್ತಾಯಿತು. ಹಸಿವು ನಿದ್ದೆಯಿಂದ ಬಸವಳಿದಿದ್ದ ಶಿವಪೂಜನ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ. ಮದುವೆಗೆ ಖರೀದಿಸಿದ್ದ ಕಟ್ಟಿಗೆಯನ್ನು ಮಗನ ಚಿತೆಗೆ ಬಳಸಬೇಕಾಗಿದ್ದು ದುರಂತ.

ಹೀಗೆ 15 ದಿನದಲ್ಲಿ ಇಬ್ಬರು ಯುವಕರು ಬೇರೆ ಬೇರೆ ಸಂದರ್ಭಗಳಲ್ಲಿ ಮರಣಹೊಂದಿದರು. ಎರಡೂ ಘಟನೆಗಳಲ್ಲಿ ಸಾಮ್ಯವೆಂದರೆ, ಇಬ್ಬರೂ ಯುವಕರು ಟ್ರ್ಯಾಕ್ಟರ್ ಮೂಲಕ ಇಟ್ಟಿಗೆಯ ಭಟ್ಟಿಯಲ್ಲಿ ಮಣ್ಣು ಹೊರುವ ಕೆಲಸ ಮಾಡುತ್ತಿದ್ದರು. ಶಿವಪೂಜನ ತನ್ನ ಮದುವೆಗೆ ಹಣ ಸೇರಿಸಲು ರಾತ್ರಿ ಟ್ರ್ಯಾಕ್ಟರ್ ಓಡಿಸುತ್ತಿದ್ದ. ಇನ್ನೊಬ್ಬ, ಮಾಲೀಕರಿಂದ ಸಾಲ ಪಡೆದಿದ್ದರಿಂದ ಅದನ್ನು ತೀರಿಸಲು ದಿನರಾತ್ರಿ ಟ್ರ್ಯಾಕ್ಟರ್ ಓಡಿಸುತ್ತಿದ್ದ. ಮೂಸಹರ್ ಬನವಾಸಿ ಸಮುದಾಯದ ಈ ಇಬ್ಬರು ಯುವಕರು ಬಡತನದೊಂದಿಗೆ ಹೋರಾಡುತ್ತಾ ಕುಟುಂಬದ ಜವಾಬ್ದಾರಿಗಳನ್ನು ಹೊತ್ತುಕೊಂಡಿದ್ದರು.

ಇವು ಕೇವಲ ಘಟನೆಗಳಲ್ಲ. ನಮ್ಮ ಸಮಾಜಕ್ಕೆ ಹಿಡಿದ ಕನ್ನಡಿ. ಚಂದ್ರ, ಮಂಗಳ ಗ್ರಹಗಳನ್ನು ತಲುಪಿರುವ ಭಾರತದಂತಹ ಅಭಿವೃದ್ಧಿ ಹೊಂದಿದ ದೇಶದಲ್ಲಿ ಈಗಲೂ ಕೆಲವೆಡೆ ಬಡವರು ಒಂದು ಹೊತ್ತಿನ ಊಟಕ್ಕೂ ಬಡಿದಾಡಬೇಕಾದ ಸ್ಥಿತಿಯಿದೆ. ಇಲ್ಲದವರನ್ನು ಶೋಷಿಸುವ, ಅವರನ್ನು ಹುಳು ಹುಪ್ಪಟೆಗಳಿಗಿಂತಲೂ ಕಡೆಯಾಗಿ ಕಾಣುವ ದೊಡ್ಡ ಮನುಷ್ಯರಿದ್ದಾರೆ. ಬಡವರು, ದುರ್ಬಲರು. ಶಕ್ತಿಶಾಲಿಗಳ ಎದುರು ನಿಲ್ಲಲು ಸಾಧ್ಯವಿಲ್ಲ. ಅವರು ಸತ್ತರೂ ಯಾರಿಗೂ ನೋವು ಆಗುವುದಿಲ್ಲ.

ಇಂತಹ ದಯೆಯಿಲ್ಲದ ಜನರನ್ನು ಕುರಿತೇ ಬಸವಣ್ಣನವರು ‘ದಯೆಯಿಲ್ಲದ ಧರ್ಮವು ಆವುದಯ್ಯ’ ಎಂದು ನುಡಿದಿದ್ದಾರೆ. ಸಕಲ ಜೀವಾತ್ಮರಿಗೆ ಲೇಸ ಬಯಸುವವನೇ ಕುಲಜ ಎಂದು ಅರಿತು ನಡೆಯಲಾರದವರನ್ನು ದೇವರೂ ಮೆಚ್ಚುವುದಿಲ್ಲ ಅಲ್ಲವೇ?

ಯುವಕ ಹಸಿವು ಎಂದಾಗ ಅವನಿಗೆ ಊಟಕ್ಕೆ ಬಿಡುವು ಕೊಟ್ಟಿದ್ದರೂ ಸಾಕಿತ್ತು. ಕತ್ತೆಯಂತೆ ರಾತ್ರಿಯಿಡೀ ದುಡಿಸಿಕೊಳ್ಳದೇ ತಮ್ಮಂತೆ ಅವರೂ ಮನುಷ್ಯರು ಎಂದು ದೊಡ್ಡಮನಸ್ಸು ಮಾಡಿದ್ದರೂ ಸಾಕಿತ್ತು.

ಮಾನವ ಜೀವನದಲ್ಲಿ ಕರುಣೆ ಒಂದು ಶಾಶ್ವತ ಮೂಲ್ಯ. ಕ್ರಿಸ್ತ, ಬುದ್ಧ, ಗಾಂಧಿ– ಎಲ್ಲರೂ ಕರುಣೆಯನ್ನೇ ಬೋಧಿಸಿದರು. ಧರ್ಮದ ಮೂಲವನ್ನು ದಯೆಯಲ್ಲಿ ಕಂಡರು. ❖

ಪದಬಂಧ 6189

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1. ಸಾರವುಳ್ಳ ನೆಮ್ಮದಿಯ ಕುಟುಂಬ (5)
3. ಕಾರಿನಲ್ಲಿ ಕರು ತರಲು ಈ ನಿಬಂಧನೆ! (3)
5. ಅವನು ಸರ ತರಲು ತೋರಿದ ಆತುರ! (4)
7. ರೇಷ್ಮೆ ನಗರ ಎಂದು ಕರೆಯಲ್ಪಡುವ ಜಿಲ್ಲೆ (5)
9. ಶೈಕ್ಷಣಿಕ ಜಿಲ್ಲೆ ಎಂದು ಕರೆಸಿಕೊಳ್ಳುವ ಈ ಊರು ಪೇಢೆಗೂ ಪ್ರಸಿದ್ಧಿ (4)
10. ವಾರದ ಕೊನೆಗೆ ಬಂದಿರುವ ಆರೋಹಿ (3)
11. ಹಿಂದಿನಿಂದ ಉಳಿದು ಬಂದುದು (5)

ಮೇಲಿಂದ ಕೆಳಕ್ಕೆ

2. ಶ್ರೀಗಂಧ ಕೆತ್ತನೆಗೆ ಹೆಸರಾದ ಈ ಊರು ಶಿವಮೊಗ್ಗ ಜಿಲ್ಲೆಯಲ್ಲಿದೆ (3)
3. ಬಣ್ಣದ ತೊಟ್ಟಿಲುಗಳಿಗೆ ಪ್ರಸಿದ್ಧಿಯಾಗಿರುವ ಧಾರವಾಡ ಜಿಲ್ಲೆಯ ತಾಲ್ಲೂಕು ಕೇಂದ್ರ (5)
4. ಹಟ್ಟಿ ಚಿನ್ನದ ಗಣಿಯಿರುವ ಜಿಲ್ಲೆ ಉಲ್ಟಾ ಕಾಣುತ್ತಿದೆ (4)
5. ಸಿಹಿ ತಿಂಡಿ ಕರದಂಟುಗೆ ಪ್ರಸಿದ್ಧಿ ಪಡೆದ ಈ ಊರು ಬಾಗಲಕೋಟೆ ಜಿಲ್ಲೆಯಲ್ಲಿದೆ (5)
6. ಗೋಲ್‌ಗುಂಬಜ್ ಸ್ಮಾರಕವು ಈ ಊರಿನಲ್ಲಿದೆ (5)
8. ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
9. ಉದಾರಿಯನ್ನು ಹೀಗೂ ಕರೆವರು (3)

6188ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಅಂಟು 4.ಪರಾವಲಂಬಿ 5.ಉಮ್ಮಳ 6.ಪರಾಗ 8.ಮಂಡೂಕ 9.ಮರ್ಮಭೇದಕ 10.ನಿಧಾನ 11.ರಿಕಾಪು 14.ಕುಸುರಿ 15.ಕತಚಿಂತಹಿ 16.ಬಂಡಿ

ಮೇಲಿಂದ ಕೆಳಕ್ಕೆ: 1.ಅಪರೂಪ 2.ಅಂಬಿಗ 3.ನಳಪಾಕ 8.ಗಮನ 9.ಮಂಕರಿ 10.ನಿರಂಕುಶ 12.ಪುರೋಹಿತ 13.ತುಕಡಿ

ಸುಡೊಕು 6573

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	6		4				9
5			6		9			2
2		4		7		3		
7	8						5	
			4	9		6		7
6		5		8			2	
		7	2				9	5
	5				7			
9				5		2		4

6572 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ಅಕ್ಟೋಬರ್ 2025 ಶುಕ್ರವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಚತುರ್ಥಿ ಗಂ. 19-39 **ನಕ್ಷತ್ರ:** ಕೃತಿಕ ಗಂ. 17-32, **ಯೋಗ:** ಸಿದ್ಧಿ (ಅಸ್ರಿಕ್) ಗಂ. 17-42 **ಕರಣ:** ಬವ ಗಂ. 9-15 ಕನ್ಯಾ ಮಾಸದ 23 ನೇ ದಿನ. **ಮಳೆ ನಕ್ಷತ್ರ:** ಹಸ್ತಾ 4 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 12-00 **ಸೂರ್ಯೋದಯ:** 06-24 **ಸೂರ್ಯಾಸ್ತ:** 06-11 **ಮುಸ್ಲಿಂ ದಿನಾಂಕ:** 17 ರಬಿಯುಸ್ಸಾನಿ **ದಿನ ವಿಶೇಷ:** ಸಂಕಷ್ಟಹರ ಚತುರ್ಥಿ **ಅದೃಷ್ಟ ಸಂಖ್ಯೆ:** 1, 7

ಮೇಷ: ಕಳೆದು ಹೋಗಿದ್ದ ವಸ್ತುಗಳು ಪತ್ತೆಯಾಗಿ, ಸಂತೋಷವಾಗಲಿದೆ. ವಿಮಾ ಸಲಹೆಗಾರರು ನಿಮ್ಮ ಗುರಿ ತಲುಪುವುದರಲ್ಲಿ ಯಶಸ್ಸನ್ನು ಹೊಂದುವಿರಿ. ಆಕಸ್ಮಿಕ ರೀತಿಯಲ್ಲಿ ಮದುವೆ ನಿಶ್ಚಯ ಕಾರ್ಯ ನಡೆಯಲಿದೆ.

ವೃಷಭ: ಕೆಲವೊಂದು ಜವಬ್ದಾರಿಯುತವಾದ ಊರಿನ ಕಾರ್ಯಗಳು ನಿಮ್ಮ ಮುಂದಾಳತ್ವದಲ್ಲಿ ನೆಡೆಯಲಿದೆ. ನಿಮ್ಮಲ್ಲಿರುವ ಸೃಜನ ಶೀಲತೆಗೆ ಉತ್ತಮ ವೇದಿಕೆ ಪ್ರಾಪ್ತಿಯಾಗುವುದು. ಮಕ್ಕಳ ಭವಿಷ್ಯದ ಚಿಂತೆಯು ನಿದ್ದೆಗೆಡಿಸುತ್ತದೆ.

ಮಿಥುನ: ಮಾರ್ಗದರ್ಶಕರ ಸಲಹೆ ಸೂಚನೆ ಪಡೆದು ಆರಂಭಿಸಿದ ಯೋಜನಾ ಬದ್ಧ ಕೆಲಸಗಳಲ್ಲಿ ಹೆಚ್ಚಿನ ಅನುಕೂಲ ಉಂಟಾಗಲಿದೆ. ಪ್ರಯಾಣದಲ್ಲಿ ಅಪವಾದದ ಸನ್ನಿವೇಶಗಳು ಎದುರಾಗಬಹುದು, ಜಾಗ್ರತರಾಗಿರಿ.

ಕರ್ಕಾಟಕ: ನಿಮ್ಮ ಮಾತುಗಳು ನಿಮಗೆ ಮುಳ್ಳಾಗುವ ಸಾಧ್ಯತೆ ಇದೆ. ಜಾಗರೂಕತೆಯಿಂದ ವ್ಯವಹರಿಸಿ. ಪ್ರತಿ ವರ್ಷ ಮಾಡಿಕೊಂಡುಬಂದ ಕುಟುಂಬದ ಧಾರ್ಮಿಕ ಕೆಲಸ ಮಾಡುವ ಬಗ್ಗೆ ತೀರ್ಮಾನಿಸಿ.

ಸಿಂಹ: ತೈಲ ಉತ್ಪನ್ನ ವಸ್ತುಗಳ ಮಾರಾಟ ಮತ್ತು ಪಾಲುದಾರಿಕೆ ವ್ಯವಹಾರಗಳು ಲಾಭ ತರಲಿದೆ. ಪರಿಸ್ಥಿತಿಗೆ ಹೊಂದಿಕೊಂಡು ನಡೆಯಬೇಕಾಗುವುದು ಅನಿವಾರ್ಯ. ದಕ್ಷಿಣಾಮೂರ್ತಿಯನ್ನು ಪೂಜಿಸುವುದರಿಂದ ಶುಭವಾಗಲಿದೆ.

ಕನ್ಯಾ: ಕುಟುಂಬದ ಸದಸ್ಯರು ನಿಮ್ಮ ನಿರ್ಧಾರಗಳನ್ನು ಒಪ್ಪಿಕೊಳ್ಳುವರು. ವೈಯಕ್ತಿಕ ಕೆಲಸಗಳಿಗೆ ಯಾವುದೇ ಅಡಚಣೆ ಇರುವುದಿಲ್ಲ. ದಿಟ್ಟತನದ ಜತೆ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟವೇನಲ್ಲ.

ತುಲಾ: ಆಫೀಸಿನ ಕೆಲಸದ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳ ಬೇಕಾಗುವುದು. ಆಭರಣಗಳಿಗಾಗಿ ಹಣ ಖರ್ಚು ಮಾಡುವಿರಿ. ಅನಿರೀಕ್ಷಿತ ಪ್ರಯಾಣ ಸಾಧ್ಯ. ಶುಭ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುವಿರಿ.

ವೃಶ್ಚಿಕ: ಲೋಹ ವಸ್ತುಗಳ ಮಾರಾಟಗಾರರು ವ್ಯಾಪಾರದಲ್ಲಿ ಮಂದಗತಿ ಕಂಡರೂ ಅಭಿವೃದ್ಧಿಯಂತೂ ಖಚಿತವಾಗಿ ಸಿಗಲಿದೆ. ಚರ್ಮ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಲಾಭ. ಮಗಳಿಂದ ಸಂತೋಷದ ಸುದ್ದಿ ಕೇಳಿ ಬರಲಿದೆ.

ಧನು: ರಾಜಕೀಯ ವರ್ಗದವರು ರಾಜಕಾರಣದ ತಂತ್ರಗಾರಿಕೆ ನಡೆಸಿ ಎದುರಾಳಿಯ ವೈಯಕ್ತಿಕ ಜೀವನಕ್ಕೆ ತೊಂದರೆ ಮಾಡದಿರಿ. ನಿಮ್ಮ ಚಾಣಾಕ್ಷತನದಿಂದ ಕಿರಿಯರಾದ ನಿಮಗೆ ಆಫೀಸಿನಲ್ಲಿ ಉನ್ನತ ಸ್ಥಾನಮಾನ ಸಿಗಲಿದೆ.

ಮಕರ: ಕೋರ್ಟ್ ಕೆಲಸಗಳಿಗಾಗಿ ಹಿರಿಯ ಅಧಿಕಾರಿಗಳ ಸಲಹೆ ಪಡೆಯಿರಿ. ಬಂಧುಗಳೊಂದಿಗಿದ್ದ ಭಿನ್ನಾಭಿಪ್ರಾಯ ಬಗೆಹರಿಯಲಿದೆ. ವಿವಾದಗಳಿಂದ ದೂರವಿರಿ. ಅನಿರೀಕ್ಷಿತ ಹೊಸ ಉದ್ಯೋಗ ದೊರೆತು ಸಂತೋಷ ಹೆಚ್ಚಲಿದೆ.

ಕುಂಭ: ತಾಂತ್ರಿಕ ವಿಷಯದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮದ ಅಗತ್ಯವಿದೆ. ಮನೆ ಹುಡುಕುವ ಕೆಲಸಕ್ಕೆ ಸಹೋದ್ಯೋಗಿ ನೆರವು ಸಿಗಲಿದೆ. ಹೆಂಡತಿ ಮಕ್ಕಳ ಆರೋಗ್ಯ ಉತ್ತಮವಾಗಿರುವುದು ನೆಮ್ಮದಿಗೆ ಕಾರಣ.

ಮೀನ: ಈ ದಿನವನ್ನು ಗಣಪತಿಯ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲು ಮರೆಯದಿರಿ. ವಿಚಾರ ಸಂಕಿರಣದಲ್ಲಿ ಭಾಗವಹಿಸಲುವಾಗಿ ಆಮಂತ್ರಿಸುವರು. ವೈವಾಹಿಕ ಮಾತುಕತೆಗಳಿಗೆ ಸೌಹಾರ್ದಯುತ ವಾತಾವರಣ ಒದಗಿಬರಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,046
ಇಂದಿನ ಅಂತ್ಯ:	25,181
ದಿನದ ಗರಿಷ್ಠ:	25,199
	135

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹392-639
ದ್ವಿತಳಿ (ಬಿ.ವಿ)	₹286-900

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182.50
ಆರ್‌ಎಸ್‌ಎಸ್-5	₹177.50
ಗುಡ್ ಲಾಟ್	₹164.50

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1600
ಮಧ್ಯಮ	₹700-1200
ಸಣ್ಣ	₹200-500

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29750
ಎಸಿ	₹15400
ಆರ್‌ಪಿ	₹20000
ಆರ್‌ಸಿ	₹11400

ಫ್ರೀಡಂ ಸನ್‌ಫ್ಲವರ್ ಆಯಿಲ್‌ಗೆ ರಾಹುಲ್ ದ್ರಾವಿಡ್ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್ ಕಂಪನಿಯ ಫ್ರೀಡಂ ರಿಫೈನ್ಡ್ ಸನ್‌ಫ್ಲವರ್ ಆಯಿಲ್, ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರಾಹುಲ್ ದ್ರಾವಿಡ್ ಅವರನ್ನು ತನ್ನ ಬ್ರ್ಯಾಂಡ್ ರಾಯಭಾರಿಯಾಗಿ ನೇಮಿಸಿದೆ.

ಈ ಸಹಯೋಗದ ಕಾರಣದಿಂದಾಗಿ ದ್ರಾವಿಡ್ ಅವರು 'ಫ್ರೀಡಂ ರಿಫೈನ್ಡ್ ಸನ್‌ಫ್ಲವರ್ ಅಡುಗೆ ಎಣ್ಣೆ ಬಳಸಿ ಅಡುಗೆ ಮಾಡುವಂತೆ ಕುಟುಂಬಗಳನ್ನು ಪ್ರೇರೇಪಿಸಲಿದ್ದಾರೆ' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

'ಫ್ರೀಡಂ ಕುಟುಂಬಕ್ಕೆ ದ್ರಾವಿಡ್ ಅವರನ್ನು ಸ್ವಾಗತಿಸಲು ನಮಗೆ ಹೆಮ್ಮೆ ಎನಿಸುತ್ತದೆ. ಅವರ ಶ್ರದ್ಧೆ, ಸಮತೋಲನ ಮತ್ತು ಸ್ಥಿರತೆಯು ನಮ್ಮ ಬ್ರ್ಯಾಂಡ್ ಹೊಂದಿರುವ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ' ಎಂದು ಜೆಮಿನಿ ಎಡಿಬಲ್ಸ್ ಮತ್ತು ಫ್ಯಾಟ್ಸ್ ಇಂಡಿಯಾ ಲಿಮಿಟೆಡ್‌ನ ಮಾರಾಟ ಮತ್ತು ಮಾರ್ಕೆಟಿಂಗ್ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರರೆಡ್ಡಿ ಹೇಳಿದ್ದಾರೆ.

ಫ್ರೀಡಂ ರಿಫೈನ್ಡ್ ಸನ್‌ಫ್ಲವರ್ ಆಯಿಲ್ ಕಂಪನಿಯು ರಾಹುಲ್ ದ್ರಾವಿಡ್ ಅವರನ್ನು ತನ್ನ ರಾಯಭಾರಿಯಾಗಿ ನೇಮಿಸಿದೆ

ಅಡಿಕೆ ಧಾರಣೆ

ಕುಮಟಾ					
ಚಾಲಿ	37010-46001	ಕೆಂಪುಗೋಟು	32119-38900	ಚಾಲಿ	38089-44700
ಚಿಪ್ಪು	24088-35389	ರಾಶಿ	45000-66666	ಕೋಕ	20619-29619
ಕೋಕ	10509-33499	ಸಿಪ್ಪೆಗೋಟು	10999-22899	ಕೆಂಪುಗೋಟು	32600-33699
ಪುತ್ತೂರು		**ಶಿವಮೊಗ್ಗ**		ರಾಶಿ	46999-60199
ಕೋಕ	18000-28500	ಬೆಟ್ಟೆ	51000-70711	ತಟ್ಟಿಬೆಟ್ಟೆ	32500-54799
ಹೊಸತು	26000-35000	ಗೊರಬಲು	19000-43899	**ಶಿರಸಿ**	
ಹಳತು	37500-52500	ಹೊಸತು	61069-64899	ಬೆಟ್ಟೆ	41100-52909
ಸಾಗರ		ರಾಶಿ	49009-65599	ಬಿಳಿಗೋಟು	29099-37899
ಬಿಳಿಗೋಟು	18666-34099	ಸರಕು	53129-86896	ಚಾಲಿ	40819-46099
ಚಾಲಿ	28989-42149	**ಸಿದ್ದಾಪುರ**		ಕೆಂಪುಗೋಟು	24109-36099
ಕೋಕ	15100-35219	ಬಿಳಿಗೋಟು	25899-33500	ರಾಶಿ	51699-56919

ಬೆಳ್ಳಿ ದರ ₹6 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ. ಚಿನ್ನದ ಬೆಲೆ ಯಥಾಸ್ಥಿತಿಯಲ್ಲಿದೆ.

ಬೆಳ್ಳಿ ದರ ಕೆ.ಜಿಗೆ ₹6 ಸಾವಿರ ಹೆಚ್ಚಳವಾಗಿ, ₹1.63 ಲಕ್ಷದಂತೆ ಮಾರಾಟವಾಗಿದೆ. ಅಕ್ಟೋಬರ್ 6ರಂದು ಬೆಳ್ಳಿ ದರ ಕೆ.ಜಿಗೆ ₹7,400ರಷ್ಟು ಹೆಚ್ಚಳವಾಗಿತ್ತು. ಒಂದೇ ವಾರದಲ್ಲಿ ಎರಡನೇ ಬಾರಿಗೆ ತೀವ್ರ ಪ್ರಮಾಣದಲ್ಲಿ ಬೆಲೆ ಏರಿಕೆ ಆಗಿದೆ.

ಶೇ 99.9 ಮತ್ತು ಶೇ 99.5ರಷ್ಟು ಪರಿಶುದ್ಧತೆಯ (ಆಭರಣ ಚಿನ್ನ) 10 ಗ್ರಾಂ ಚಿನ್ನದ ದರವು ಕ್ರಮವಾಗಿ ₹1,26,600 ಮತ್ತು ₹1.26 ಲಕ್ಷ ಇದೆ. ಕಳೆದ ವಹಿವಾಟಿನಲ್ಲೂ ಇಷ್ಟೇ ದರವಿತ್ತು ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು, ಆರ್ಥಿಕ ಅನಿಶ್ಚಿತತೆ, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತ ಮಾಡುವ ನಿರೀಕ್ಷೆ ಹೆಚ್ಚಳದಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಬೆಳ್ಳಿ ಖರೀದಿಗೆ ಮುಂದಾಗಿದ್ದಾರೆ. ಜೊತೆಗೆ ಕೈಗಾರಿಕೆಗಳಲ್ಲಿ ಬೆಳ್ಳಿಗೆ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಬೆಳ್ಳಿ ದರ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಟಿಸಿಎಸ್: ಲಾಭ ಶೇ 1.4 ಏರಿಕೆ

ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ವಿಮಾ ವಲಯದ ವರಮಾನ ಹೆಚ್ಚಳ

ನವದೆಹಲಿ (ಪಿಟಿಐ): ಜುಲೈ–ಸೆಪ್ಟೆಂಬರ್ ತ್ರೈಮಾಸಿಕದ ಹಣಕಾಸು ಫಲಿತಾಂಶವನ್ನು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಗುರುವಾರ ಪ್ರಕಟಿಸಿದ್ದು, ಕಂಪನಿಯ ನಿವ್ವಳ ಲಾಭವು ಶೇ 1.4ರಷ್ಟು ಹೆಚ್ಚಾಗಿದೆ. ಕಂಪನಿಯು ಈ ತ್ರೈಮಾಸಿಕದಲ್ಲಿ ₹12,075 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಲಾಭವು ₹11,909 ಕೋಟಿ ಆಗಿತ್ತು.

ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ವಿಮಾ ವಲಯಗಳಿಗೆ ನೀಡುವ ಸೇವೆಯಲ್ಲಿ ಟಿಸಿಎಸ್ ವರಮಾನ ಜಾಸ್ತಿ ಆಗಿರುವುದು ಲಾಭ ಹೆಚ್ಚಳಕ್ಕೆ ಒಂದು ಕಾರಣ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಾರ್ಯಾಚರಣೆ ವರಮಾನವು ಶೇ 2.39ರಷ್ಟು ಹೆಚ್ಚಳ ಕಂಡು, ₹65,799 ಕೋಟಿಗೆ ತಲುಪಿದೆ. ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹64,259 ಕೋಟಿ ಆಗಿತ್ತು. ಆದರೆ, ಈ ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ವರಮಾನ ಶೇ 3.7ರಷ್ಟು ಹೆಚ್ಚಾಗಿದ್ದರೂ ಲಾಭದ ಪ್ರಮಾಣವು ಶೇ 5.3ರಷ್ಟು ಕಡಿಮೆ ಆಗಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ತಂತ್ರಜ್ಞಾನ ಮತ್ತು ಸೇವಾ ವಲಯದ ವಹಿವಾಟುಗಳ ವರಮಾನ ಶೇ 2.8ರಷ್ಟು, ಬಿಎಫ್‌ಎಸ್‌ಐ (ಬ್ಯಾಂಕಿಂಗ್, ಹಣಕಾಸು ಸೇವೆ ಮತ್ತು ವಿಮೆ) ವಲಯದಿಂದ ಸಿಗುವ ವರಮಾನ ಶೇ 1ರಷ್ಟು ಬೆಳವಣಿಗೆ ದಾಖಲಿಸಿದೆ. ಅಮೆರಿಕದಿಂದ ಬರುವ ವರಮಾನ ಪ್ರಮಾಣದಲ್ಲಿ ಶೇ 0.1ರಷ್ಟು ಇಳಿಕೆ ಆಗಿದೆ. ಆದರೆ ಲ್ಯಾಟಿನ್ ಅಮೆರಿಕದಿಂದ ಸಿಗುವ ವರಮಾನವು ಶೇ 1.8ರಷ್ಟು ಹೆಚ್ಚಾಗಿದೆ.

ಭಾರತದಲ್ಲಿ 1 ಗಿಗಾವಾಟ್ ಸಾಮರ್ಥ್ಯದ ಎ.ಐ. ದತ್ತಾಂಶ ಕೇಂದ್ರ ಸ್ಥಾಪಿಸಲು ಹೊಸ ಸಂಸ್ಥೆಯೊಂದನ್ನು ಹುಟ್ಟುಹಾಕುವುದಾಗಿ ಟಿಸಿಎಸ್ ತಿಳಿಸಿದೆ. ಕಂಪನಿಯು ತನ್ನ ಷೇರುದಾರರಿಗೆ ₹11 ಮಧ್ಯಂತರ ಲಾಭಾಂಶ ಘೋಷಿಸಿದೆ.

'6 ಸಾವಿರ ಮಂದಿ ಕೆಲಸದಿಂದ ಬಿಡುಗಡೆ'

ಪುನರ್‌ರಚನೆ ಪ್ರಕ್ರಿಯೆಯ ಭಾಗವಾಗಿ ಒಟ್ಟು 6,000 ನೌಕರರನ್ನು 'ಕೆಲಸದಿಂದ ಬಿಡುಗಡೆ ಮಾಡಲಾಗಿದೆ' ಎಂದು ಟಿಸಿಎಸ್ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಸುದೀಪ್ ಕುನ್ನುಮಾಲ್ ಹೇಳಿದ್ದಾರೆ.

ಕಂಪನಿಯು ಕೆಲಸದಿಂದ ತೆಗೆದಿರುವ ನೌಕರರ ಸಂಖ್ಯೆಯು 80 ಸಾವಿರ ಕೂಡ ಆಗಿರಬಹುದು ಎಂಬ ಅಂದಾಜುಗಳ ಬಗ್ಗೆ ಪ್ರಶ್ನಿಸಿದಾಗ ಕುನ್ನುಮಾಲ್ ಅವರು, 'ಈ ಸಂಖ್ಯೆ ಸತ್ಯವಲ್ಲ, ಇದು ತೀರಾ ಉತ್ಪ್ರೇಕ್ಷೆಯಿಂದ ಕೂಡಿದ ಸಂಖ್ಯೆ' ಎಂದು ಉತ್ತರಿಸಿದ್ದಾರೆ. ಆದರೆ ಈ ನಡುವೆ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಐ.ಟಿ. ಉದ್ಯೋಗಿಗಳ ಸಂಘಟನೆ ಎನ್‌ಐಟಿಇಎಸ್, ಕಂಪನಿಯಲ್ಲಿ ಉದ್ಯೋಗಿಗಳ ಸಂಖ್ಯೆಯು ಒಂದು ತ್ರೈಮಾಸಿಕದ ಅವಧಿಯಲ್ಲಿ 19,755ರಷ್ಟು ಕಡಿಮೆ ಆಗಿದೆ ಎಂದು ಹೇಳಿದೆ.

ಮಧ್ಯಮ ಮತ್ತು ಹಿರಿಯ ಶ್ರೇಣಿಯ ನೌಕರರ ಪೈಕಿ ಒಟ್ಟು 6,000 ಮಂದಿಯನ್ನು 'ಕೆಲಸದಿಂದ ಬಿಡುಗಡೆ ಮಾಡಲಾಗಿದೆ' ಎಂದು ಕುನ್ನುಮಾಲ್ ಹೇಳಿದ್ದಾರೆ. ಸೂಕ್ತವಾದ ಜವಾಬ್ದಾರಿಯ ಹುದ್ದೆಯಲ್ಲಿ ಮರುನಿಯೋಜನೆ ಸಾಧ್ಯವಾಗದವರನ್ನು 'ಕೆಲಸದಿಂದ ಬಿಡುಗಡೆ ಮಾಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು 18,500 ಮಂದಿಯನ್ನು ಹೊಸದಾಗಿ ನೇಮಕ ಮಾಡಿಕೊಂಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಒಟ್ಟು 12,261 ನೌಕರರನ್ನು ಕೆಲಸದಿಂದ ತೆಗೆಯಲು ಬಯಸಿರುವುದಾಗಿ ಟಿಸಿಎಸ್ ಕಂಪನಿಯು ಜುಲೈನಲ್ಲಿ ಹೇಳಿತ್ತು.

ಮುಂಬೈ ಧಾರಣೆ (ಶೇಂಗಾ)

09-10-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಪಾಮ್ ವಾರದ ಡೆಲಿವರಿ	1288 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1400)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,22,100 (1,21,600)
ಬೆಳ್ಳಿ ಕೆ.ಜಿಗೆ	1,62,000 (1,52,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1370 (1370)
ಸೋಯಾ (ರಿಫೈನ್ಡ್)	₹1290 (1290)
ಸೂರ್ಯಕಾಂತಿ (ರಿಫೈನ್ಡ್)	₹1460 (1460)
ಪಾಮೋಲಿನ್	₹1290 (1290)

ದ್ವಿದಳ ಧಾನ್ಯ ಮಿಷನ್‌ಗೆ ಪ್ರಧಾನಿ ನಾಳೆ ಚಾಲನೆ

ನವದೆಹಲಿ (ಪಿಟಿಐ): 'ದ್ವಿದಳ ಧಾನ್ಯ ಮಿಷನ್' ಮತ್ತು 'ಪ್ರಧಾನ ಮಂತ್ರಿ ಧನ ಧಾನ್ಯ ಕೃಷಿ ಯೋಜನೆ'ಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ನವದೆಹಲಿಯಲ್ಲಿ ಚಾಲನೆ ನೀಡಲಿದ್ದಾರೆ.

ಧಾನ್ಯಗಳ ಉತ್ಪಾದನೆಯಲ್ಲಿ ದೇಶವು ಸ್ವಾವಲಂಬನೆ ಸಾಧಿಸುವಂತೆ ಮಾಡುವ ಗುರಿಯನ್ನು ಈ ಯೋಜನೆಗಳು ಹೊಂದಿವೆ.

ಈ ಎರಡು ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟವು ಈಗಾಗಲೇ ಅನುಮೋದನೆ ನೀಡಿದೆ. ಮುಂದಿನ ಹಿಂಗಾರು ಹಂಗಾಮಿನಿಂದ ಈ ಯೋಜನೆ ಅನುಷ್ಠಾನಗೊಳ್ಳಲಿದೆ. 2030-31ರವರೆಗೆ ಜಾರಿಯಲ್ಲಿ ಇರಲಿವೆ.

ಇದೇ ವೇಳೆ ಮೀನುಗಾರಿಕೆ, ಜಾನುವಾರು, ಆಹಾರ ಸಂಸ್ಕರಣೆ ಸೇರಿದಂತೆ ಇತರ ಕ್ಷೇತ್ರಗಳಿಗೆ ಸಂಬಂಧಿಸಿದ ₹3,681 ಕೋಟಿ ಮೌಲ್ಯದ ಯೋಜನೆಗಳನ್ನೂ ಮೋದಿ ಅವರು ಆರಂಭಿಸಲಿದ್ದಾರೆ. ರೈತರೊಂದಿಗೆ ಮೋದಿ ಅವರು ಮಾತುಕತೆ ನಡೆಸಲಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, 'ಗೋಧಿ ಮತ್ತು ಅಕ್ಕಿ ಉತ್ಪಾದನೆಯಲ್ಲಿ ದೇಶ ಸ್ವಾವಲಂಬನೆ ಸಾಧಿಸಿದೆ. ಧಾನ್ಯಗಳು, ಎಣ್ಣೆಕಾಳುಗಳು ವಿಷಯದಲ್ಲಿಯೂ ಸ್ವಾವಲಂಬನೆ ಸಾಧಿಸಬೇಕಿದೆ' ಎಂದು ಹೇಳಿದ್ದಾರೆ.

ದ್ವಿದಳ ಧಾನ್ಯಗಳಲ್ಲಿ ಸ್ವಾವಲಂಬನೆ ಸಾಧಿಸುವ ಯೋಜನೆಗೆ ಮೋದಿ ಅವರು ಚಾಲನೆ ನೀಡಲಿದ್ದಾರೆ. ಪ್ರಸ್ತುತ ದ್ವಿದಳ ಧಾನ್ಯಗಳ ಉತ್ಪಾದನೆ 252.38 ಲಕ್ಷ ಟನ್ ಇದೆ. 2030–31ರ ಬೆಳೆ ವರ್ಷದ ವೇಳೆಗೆ ಇದನ್ನು 350 ಲಕ್ಷ ಟನ್‌ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದರು.

ಈ ಯೋಜನೆಯ ಗಾತ್ರ ₹11,440 ಕೋಟಿ. ಹೆಚ್ಚು ಇಳುವರಿ ನೀಡುವ ಮತ್ತು ರೋಗಗಳನ್ನು ತಾಳಿಕೊಂಡು ಹೆಚ್ಚಿನ ಉತ್ಪಾದನೆ ನೀಡುವ ವಿವಿಧ ಮಾದರಿಯ ಬೀಜಗಳನ್ನು ರೈತರಿಗೆ ನೀಡಲಾಗುವುದು ಎಂದರು.

'ಪ್ರಧಾನ ಮಂತ್ರಿ ಧನ ಧಾನ್ಯ ಯೋಜನೆ'ಯ ಗಾತ್ರ ₹24 ಸಾವಿರ ಕೋಟಿಯಾಗಿದೆ. ಕಡಿಮೆ ಕೃಷಿ ಚಟುವಟಿಕೆ ಇರುವ 100 ಜಿಲ್ಲೆಗಳಲ್ಲಿ ಈ ಯೋಜನೆಯಡಿ ಉತ್ಪಾದನೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ತಯಾರಿಕಾ ವಲಯ: ಸದೃಢ ಬೆಳವಣಿಗೆ ನಿರೀಕ್ಷೆ-ಫಿಕ್ಕಿ

ನವದೆಹಲಿ (ಪಿಟಿಐ): 'ದೇಶದ ತಯಾರಿಕಾ ವಲಯವು ಸದೃಢ ಬೆಳವಣಿಗೆ ಕಾಣುವ ನಿರೀಕ್ಷೆ ಇದೆ' ಎಂದು ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘದ (ಫಿಕ್ಕಿ) ಸಮೀಕ್ಷೆ ಗುರುವಾರ ತಿಳಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ತಯಾರಿಕಾ ವಲಯದ ಉತ್ಪಾದನೆ ಹೆಚ್ಚಳವಾಗಿದೆ ಅಥವಾ ಅಷ್ಟೇ ಪ್ರಮಾಣದಲ್ಲಿ ಇದೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡವರ ಪೈಕಿ ಶೇ 87ರಷ್ಟು ಮಂದಿ ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ತಯಾರಿಕಾ ವಲಯದ ಪ್ರಮುಖ ಎಂಟು ವಿಭಾಗಗಳ ಕಾರ್ಯಾಚರಣೆಯನ್ನು ಫಿಕ್ಕಿ ಮೌಲ್ಯಮಾಪನ ಮಾಡಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಸರಕುಗಳಿಗೆ ಕಾರ್ಯಾದೇಶ ಹೆಚ್ಚಾಗಿರುವ ನಿರೀಕ್ಷೆ ಇದೆ. ಜಿಎಸ್‌ಟಿ ದರ ಕಡಿತ ಘೋಷಿಸಿದ ನಂತರ ಕಾರ್ಯಾದೇಶ ಇನ್ನೂ ಹೆಚ್ಚಾಗಿರುವ ನಿರೀಕ್ಷೆ ಇದೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ ಶೇ 83ರಷ್ಟು ಮಂದಿ ಹೇಳಿದ್ದಾರೆ.

ಕಬ್ಬಿಣದ ಅದಿರು, ರಾಸಾಯನಿಕಗಳು, ಪ್ರಮುಖ ಬಿಡಿ ಭಾಗಗಳು ಸೇರಿದಂತೆ ಕಚ್ಚಾ ವಸ್ತುಗಳ ಬೆಲೆ ಏರಿಕೆಯಿಂದ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ತಯಾರಿಕಾ ವೆಚ್ಚ ಹೆಚ್ಚಳವಾಗಿದೆ. ಜೊತೆಗೆ ಕಾರ್ಮಿಕ ವೆಚ್ಚ, ಸರಕು ಸಾಗಣೆ, ವಿದ್ಯುತ್ ವೆಚ್ಚ ಹೆಚ್ಚಳವಾಗಿದೆ. ಇದರಿಂದ ಪ್ರಸಕ್ತ ಆರ್ಥಿಕ ವರ್ಷದ ಜೂನ್ ಮತ್ತು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಉತ್ಪಾದನೆ ವೆಚ್ಚ ಹೆಚ್ಚಿದೆ.

ಮುಂದಿನ ದಿನಗಳಲ್ಲಿ ಹೂಡಿಕೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಹೂಡಿಕೆದಾರರಲ್ಲಿ ಸಕಾರಾತ್ಮಕ ಧೋರಣೆ ಇದೆ, ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ 50ಕ್ಕೂ ಹೆಚ್ಚು ಮಂದಿ ಮುಂದಿನ ಆರು ತಿಂಗಳಿನಲ್ಲಿ ಹೂಡಿಕೆ ಮತ್ತು ವಹಿವಾಟನ್ನು ವಿಸ್ತರಣೆ ಮಾಡಿಕೊಳ್ಳುವ ಆಲೋಚನೆ ಹೊಂದಿದ್ದಾರೆ ಎಂದು ತಿಳಿಸಿದೆ.

'ಟಾಟಾ ಟ್ರಸ್ಟ್ಸ್‌ಗೆ ಟಾಟಾ ಕುಟುಂಬದವರೇ ಸೂಕ್ತ'

ನವದೆಹಲಿ (ಪಿಟಿಐ): ಸಂಸ್ಥಾಪಕರು ಹಾಗೂ ನಾಯಕರು ಹೊಂದಿದ್ದ ಉದ್ದೇಶಗಳನ್ನು ನಿರಂತರವಾಗಿ ಈಡೇರಿಸಲು ಟಾಟಾ ಟ್ರಸ್ಟ್ಸ್‌ಗೆ ಯಾವಾಗಲೂ ಟಾಟಾ ಕುಟುಂಬದವರ ಮುಂದಾಳತ್ವವೇ ಇರಬೇಕು ಎಂದು ರತನ್ ಟಾಟಾ ಅವರ ಜೀವನ ಚರಿತ್ರೆಯ ಲೇಖಕ ಥಾಮಸ್ ಮ್ಯಾಥ್ಯೂ ಹೇಳಿದ್ದಾರೆ.

ರತನ್ ಟಾಟಾ ಅವರ ಮರಣದ ನಂತರ ಟಾಟಾ ಟ್ರಸ್ಟ್ಸ್‌ಗಳಲ್ಲಿ ಆಂತರಿಕ ಸಂಘರ್ಷ ನಡೆದಿರುವ ಸಂದರ್ಭದಲ್ಲಿ ಮ್ಯಾಥ್ಯೂ ಅವರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಟಾಟಾ ಟ್ರಸ್ಟ್ಸ್‌ನಲ್ಲಿನ ಈಗಿನ ಆಂತರಿಕ ಬಿಕ್ಕಟ್ಟು 'ಸಣ್ಣ ಪ್ರಮಾಣದ ಭಿನ್ನಾಭಿಪ್ರಾಯ' ಎಂದು ಅವರು ಹೇಳಿದ್ದಾರೆ. ಯಾವುದೇ ಬದಲಾವಣೆಯ ಸಂದರ್ಭದಲ್ಲಿ ಈ ರೀತಿ ಆಗುತ್ತದೆ. ಇವುಗಳಿಂದ ಟಾಟಾ ಸಮೂಹದ ಮೇಲೆ ಯಾವುದೇ ಪರಿಣಾಮ ಆಗುವುದಿಲ್ಲ. ಟಾಟಾ ಸಮೂಹವು ಬಹಳ ದೊಡ್ಡದಾಗಿದೆ, ಬಹಳ ಶಕ್ತಿಯುತವಾಗಿದೆ ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಟಾಟಾ ಸಮೂಹದ ಈಗಿನ ನಾಯಕರು ರತನ್ ಟಾಟಾ ಅವರ ಹೆಸರನ್ನು ಉಳಿಸುವ ಕೆಲಸ ಮಾಡುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಮ್ಯಾಥ್ಯೂ ಅವರು, 'ಟಾಟಾ ಸನ್ಸ್‌ನ ಈಗಿನ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರು ಟಾಟಾ ಸಮೂಹದ ಮೌಲ್ಯಗಳಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್' ಇನ್ನು ರಾಜ್ಯ ಕ್ರೀಡಾ ಸಂಸ್ಥೆ

ಕಂಬಳಕ್ಕೆ ಕ್ರೀಡಾ ಪ್ರಾಧಿಕಾರ ಮಾನ್ಯತೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕಂಬಳ ಕ್ರೀಡೆಗೆ, ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಅಧಿಕೃತ ಮನ್ನಣೆ ಸಿಕ್ಕಿದೆ. 'ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್'ಗೆ ಮಾನ್ಯತೆ ನೀಡಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆದೇಶ ಹೊರಡಿಸಿದೆ.

ಈ ಮಾನ್ಯತೆಯು ಮೂರು ವರ್ಷದ ಅವಧಿಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಅನ್ವಯವಾಗಲಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಚೇತನ್ ಆರ್. ಅವರು ಈ ಆದೇಶದಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರವು ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್‌ಗೆ ಅನುದಾನ ನೀಡಲಿದೆ.

ಕಂಬಳ ಕ್ರೀಡೆಯನ್ನು ಸಂಘಟಿಸುವ ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್‌ಗೆ ಮಾನ್ಯತೆ ನೀಡುವಂತೆ ಕೋರಿ ಸಂಸ್ಥೆಯ ಅಧ್ಯಕ್ಷರು ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದರು. ಈ ಅಸೋಸಿಯೇಷನ್‌ಗೆ ಮಾನ್ಯತೆ ನೀಡಬಹುದು ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಶಿಫಾರಸು ಮಾಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ 2025ರ ಮೇ 5ರಂದು ನಡೆದ ಸಭೆಯಲ್ಲಿ ರಾಜ್ಯದ ಗ್ರಾಮೀಣ ಕ್ರೀಡೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಹಾಗೂ ಕಂಬಳ ಕ್ರೀಡೆಯ ವಿಶೇಷತೆಯನ್ನು ಪರಿಗಣಿಸಿ ಅದಕ್ಕೆ ಮಾನ್ಯತೆ ನೀಡುವ ನಿರ್ಧಾರ ಕೈಗೊಳ್ಳಲಾಗಿತ್ತು.

ಪ್ರಜಾವಾಣಿ ಸಂಗ್ರಹ ಚಿತ್ರ

ಕರಾವಳಿಯ ವಿಶೇಷ ಜಾನಪದ ಕ್ರೀಡೆಯಾದ ಕಂಬಳಕ್ಕೆ ಸರ್ಕಾರದಿಂದ ಈಗ ಅಧಿಕೃತ ಮನ್ನಣೆ ಸಿಕ್ಕಿದಂತಾಗಿದೆ. ಈ ಬಗ್ಗೆ ಅನೇಕ ವರ್ಷಗಳಿಂದ ಹೋರಾಟ ನಡೆಸಿದ್ದೆವು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಧನ್ಯವಾದ

ದೇವಿಪ್ರಸಾದ ಶೆಟ್ಟಿ, ಅಧ್ಯಕ್ಷ, ರಾಜ್ಯ ಕಂಬಳ ಅಸೋಸಿಯೇಷನ್

'ಬಜೆಟ್‌ನಲ್ಲೇ ಸಿಗಲಿದೆ ಅನುದಾನ'

ಇನ್ನು ಮುಂದೆ ರಾಜ್ಯ ಸರ್ಕಾರ ಬಜೆಟ್‌ನಲ್ಲೇ ಕಂಬಳ ಆಯೋಜನೆಗೂ ನಿರ್ದಿಷ್ಟ ಅನುದಾನವನ್ನು ಮೀಸಲಿಡಲಿದೆ. ಅನುದಾನವು ಕಂಬಳ ಆಯೋಜಿಸುವ ಸಂಸ್ಥೆಗೆ ನೇರವಾಗಿ ಬಿಡುಗಡೆಯಾಗಲಿದೆ. ಇದಕ್ಕಾಗಿ ವಿಶೇಷ ಅನುದಾನ ಸಂಹಿತೆಯನ್ನೂ ರೂಪಿಸಲಾಗುತ್ತಿದೆ.

ದೇವಿಪ್ರಸಾದ್ ಶೆಟ್ಟಿ ಅಧ್ಯಕ್ಷರಾಗಿರುವ ಈ ಅಸೋಸಿಯೇಷನ್‌ನಲ್ಲಿ 18 ಮಂದಿ ಪದಾಧಿಕಾರಿಗಳಿದ್ದಾರೆ. ಜೀವಂಧರ್ ಬಲ್ಲಾಳ್, ಜೀವನದಾಸ ಅಡ್ಯಂತಾಯ ಹಾಗೂ ಗುಣಪಾಲ ಕಡಂಬ ಗೌರವ ಸಲಹೆಗಾರರಾಗಿದ್ದಾರೆ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಂಬಳವನ್ನು ಶಿಸ್ತುಬದ್ಧವಾಗಿ ಸಂಘಟಿಸಲು ಈ ಅಸೋಸಿಯೇಷನ್ ಕ್ರಮ ವಹಿಸುತ್ತದೆ. ಕಂಬಳ ಕ್ರೀಡೆಯ ವೇಳಾಪಟ್ಟಿಯನ್ನು ತಯಾರಿಸುತ್ತದೆ.

ಫೆನೆಸ್ತಾ ಓಪನ್: ಸೆಮಿಗೆ ಸ್ನಿಗ್ಧಾ, ಪದ್ಮಾ

ನವದೆಹಲಿ (ಪಿಟಿಐ): ಕರ್ನಾಟಕದ ಸ್ನಿಗ್ಧಾ ಕಾಂತಾ ಅವರು ಫೆನೆಸ್ತಾ ಓಪನ್ ರಾಷ್ಟ್ರೀಯ ಟೆನಿಸ್ ಚಾಂಪಿಯನ್‌ಷಿಪ್‌ನ 16 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಸೆಮಿಫೈನಲ್ಸ್ ತಲುಪಿದರು.

ಗುರುವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ, ನಾಲ್ಕನೇ ಶ್ರೇಯಾಂಕದ ಸ್ನಿಗ್ಧಾ 6-4, 6-4 ರಿಂದ ಉತ್ತರಾಖಂಡದ ದಿಯಾ ಚೌಧರಿ ಅವರನ್ನು ಅವರನ್ನು ಹಿಮ್ಮೆಟ್ಟಿಸಿದರು.

ಒಂದು ಹಂತದಲ್ಲಿ ಮೊದಲ ಸೆಟ್‌ನ ಆರಂಭದಲ್ಲಿ ಗೇಮ್ ಕಳೆದು ಕೊಂಡ ಸ್ನಿಗ್ಧಾ 2-4ರಲ್ಲಿ ಹಿಂದಿದ್ದರು. ದಿಯಾ ಅಮೋಘ ಫೋರ್‌ಹ್ಯಾಂಡ್ ಹೊಡೆತಗಳನ್ನೂ ಆಡಿದ್ದರು. ಆದರೆ ಕರ್ನಾಟಕದ ಆಟಗಾರ್ತಿ ಚೇತರಿಸಿಕೊಂಡು ಸತತವಾಗಿ ನಾಲ್ಕು ಗೇಮ್‌ಗಳನ್ನು ಪಡೆದು ಸೆಟ್ ತಮ್ಮದಾಗಿಸಿಕೊಂಡರು.

ಎರಡನೇ ಸೆಟ್‌ನಲ್ಲಿ ಒಂದು ಹಂತದಲ್ಲಿ ಸ್ಕೋರ್ 3-3 ಸಮನಾಗಿತ್ತು. ಆದರೆ ನಂತರ ಸ್ನಿಗ್ಧಾ ಅವರ ವೇಗ ಮತ್ತು ಆಕ್ರಮಣದ ಆಟಕ್ಕೆ ದಿಯಾ ಮಣಿಯಬೇಕಾಯಿತು.

14 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್‌ನಲ್ಲಿ ಕರ್ನಾಟಕದ ಪದ್ಮಾ ರಮೇಶಕುಮಾರ್ 6-4, 6-1 ರಿಂದ ತಮ್ಮ ರಾಜ್ಯದವರೇ ಆದ ಆದ ಕೃಷಿಕಾ ಗೌತಮ್ ವಿರುದ್ಧ ಜಯಗಳಿಸಿ ಸೆಮಿಫೈನಲ್ ತಲುಪಿದರು.

ಬರ್ನಾರ್ಡ್ ಜೂಲಿಯನ್ ನಿಧನ

ಪ್ಯಾರಿಸ್ (ಎಎಫ್‌ಪಿ): ವಿಶ್ವಕಪ್ ಗೆಲ್ಲುವ ಮೂಲಕ ಕ್ರಿಕೆಟ್ ಜೀವನದಲ್ಲಿ ವೈಭವದ ದಿನಗಳನ್ನು ಕಂಡ ಮತ್ತು ವರ್ಣಭೇದ ನೀತಿ ಅನುಸರಿಸುತ್ತಿದ್ದ ದಕ್ಷಿಣ ಆಫ್ರಿಕಾಕ್ಕೆ ರೆಬೆಲ್ ಪ್ರವಾಸ ಕೈಗೊಂಡು ಅವನತಿಯನ್ನು ಕಂಡ ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ಬರ್ನಾರ್ಡ್ ಜೂಲಿಯನ್ (75) ಅವರು ಈಚೆಗೆ ನಿಧನರಾದರು.

ಗ್ಯಾರಿ ಸೋಬರ್ಸ್ ಅವರ ಉತ್ತರಾಧಿಕಾರಿ ಎಂದೇ ಬಿಂಬಿತರಾಗಿದ್ದ ಅವರು ಆ ಮಟ್ಟಕ್ಕೇರುವ ಒತ್ತಡವನ್ನೂ ಎದುರಿಸಿದ್ದರು. 1973ರಲ್ಲಿ ಸೋಬರ್ಸ್ ಜೊತೆ ಲಾರ್ಡ್ಸ್‌ನಲ್ಲಿ ಟೆಸ್ಟ್ ಪಂದ್ಯವನ್ನೂ ಆಡಿದ್ದ ಅವರು ಅದನ್ನು ಸ್ಮರಣೀಯಗೊಳಿಸಿದ್ದರು.

ಏಳನೇ ವಿಕೆಟ್‌ಗೆ ಇವರಿಬ್ಬರು 155 ರನ್ ಸೇರಿಸಿದ್ದು ಈಗಲೂ ದಾಖಲೆಯಾಗಿ ಉಳಿದಿದೆ. ಆ ಪಂದ್ಯದಲ್ಲಿ ಸೋಬರ್ಸ್ ಔಟಾಗದೇ 150 ರನ್ ಗಳಿಸಿದ್ದರು. ಇದು ಅವರ 26 ಶತಕಗಳಲ್ಲಿ ಕೊನೆಯದಾಗಿತ್ತು. ಜೂಲಿಯನ್ ಆ ಪಂದ್ಯದಲ್ಲಿ 121 ರನ್ ಹೊಡೆದಿದ್ದರು. ಆದರೆ ಅವರು ನಂತರದ ದಿನಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಏಳಿಗೆ ಕಾಣಲಿಲ್ಲ.

24 ಟೆಸ್ಟ್ ಪಂದ್ಯಗಳಲ್ಲಿ 30.92 ಸರಾಸರಿಯಲ್ಲಿ 866 ರನ್ ಗಳಿಸಿದ್ದ ಅವರು, 37.36 ಸರಾಸರಿಯಲ್ಲಿ 50 ವಿಕೆಟ್‌ಗಳನ್ನು ಕಬಳಿಸಿದ್ದರು. ಏಕದಿನ ಪಂದ್ಯಗಳಲ್ಲಿ ಅವರು 18 ವಿಕೆಟ್‌ಗಳನ್ನು (25.72 ಸರಾಸರಿ) ಪಡೆದಿದ್ದರು. ಇಂಗ್ಲೆಂಡ್ ಕೌಂಟಿಯಲ್ಲಿ ಕೆಂಟ್ ತಂಡಕ್ಕೆ ಆಡಿದ್ದರು. 1975ರಲ್ಲಿ ವೆಸ್ಟ್ ಇಂಡೀಸ್ ಏಕದಿನ ವಿಶ್ವ ಚಾಂಪಿಯನ್ ಆಗುವಲ್ಲಿ ಅವರೂ ಪ್ರಮುಖ ಪಾತ್ರ ವಹಿಸಿದ್ದರು.

ಅವರ ಕೌಶಲ ಮತ್ತು ಶಾಂತಚಿತ್ತತೆ ವೆಸ್ಟ್ ಇಂಡೀಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು ಎಂದು ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿ ತಿಳಿಸಿದೆ.

ಕೆರಿ ಪ್ಯಾಕರ್ಸ್ ವಿಶ್ವ ಸರಣಿ ಆಡಲೂ ಸಹಿಹಾಕಿದ್ದರು. ಆದರೆ 1982–83ರಲ್ಲಿ ಮತ್ತು 1983–84ರಲ್ಲಿ ಅವರು ವೆಸ್ಟ್ ಇಂಡೀಸ್ ಬಂಡುಕೋರ ತಂಡದ ಜೊತೆ ದಕ್ಷಿಣ ಆಫ್ರಿಕಾಕ್ಕೆ ಪ್ರವಾಸ ಕೈಗೊಂಡಿದ್ದು ಅವರ ಕ್ರಿಕೆಟ್ ಜೀವನಕ್ಕೆ ಮುಳುವಾಯಿತು. ₹71 ಲಕ್ಷದ ಆಮಿಷವನ್ನು ತಂಡಕ್ಕೆ ನೀಡಲಾಗಿತ್ತು. ವರ್ಣಭೇದ ನೀತಿ ಅನುಸರಿಸುತ್ತಿದ್ದ ದಕ್ಷಿಣ ಆಫ್ರಿಕಾವನ್ನು ಆಗ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಹೊರಗಿಡಲಾಗಿತ್ತು.

ಜೂಲಿಯನ್ ಜೊತೆ ಆಗ ಪ್ರಸಿದ್ಧಿ ಪಡೆದಿದ್ದ ವೆಸ್ಟ್ ಇಂಡೀಸ್‌ನ ಇನ್ನೂ ಕೆಲವರು– ಅಲ್ವಿನ್ ಕಾಳೀಚರಣ್, ಕಾಲಿನ್ ಕ್ರಾಫ್ಟ್, ಲಾರೆನ್ಸ್ ರೋವ್ ಆ ತಂಡದಲ್ಲಿದ್ದರು. ಆದರೆ ಇವರಲ್ಲಿ ಬಹುತೇಕ ಮಂದಿ ಕ್ರಿಕೆಟ್ ಜೀವನದ ನಿವೃತ್ತಿಯಂಚಿನಲ್ಲಿದ್ದರು.

ಕ್ಯಾಸ್ಪರೋವ್‌ಗೆ ಆರಂಭದ ಮುನ್ನಡೆ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ರಷ್ಯಾದ ಮಹಾನ್ ಆಟಗಾರರಲ್ಲಿ ಒಬ್ಬರಾದ ಗ್ಯಾರಿ ಕ್ಯಾಸ್ಪರೋವ್ ಅವರು ಭಾರತದ ದಿಗ್ಗಜ ವಿಶ್ವನಾಥನ್ ಆನಂದ್ ವಿರುದ್ಧ ನಡೆಯುತ್ತಿರುವ 'ಕ್ಲಚ್ ಚೆಸ್' ಟೂರ್ನಿಯ (ಲೆಜೆಂಡ್ಸ್ ಟೂರ್ನಿಯ) ಮೊದಲ ದಿನದ ಕೊನೆಗೆ 2.5–1.5 ರಲ್ಲಿ ಮುನ್ನಡೆ ಸಾಧಿಸಿದರು.

ಗುರುವಾರ ಸೇಂಟ್ ಲೂಯಿಯಲ್ಲಿ ಮಾಜಿ ವಿಶ್ವ ಚಾಂಪಿಯನ್ನರ ಮುಖಾಮುಖಿ ಆರಂಭವಾಯಿತು. ನಿವೃತ್ತರಾಗಿ 21 ವರ್ಷಗಳ ನಂತರವೂ ತಮ್ಮಲ್ಲಿ ಆಟವಿನ್ನೂ ಉಳಿದಿದೆ ಎನ್ನುವುದನ್ನು 62 ವರ್ಷ ವಯಸ್ಸಿನ ಕ್ಯಾಸ್ಪರೋವ್ ಸಾಬೀತುಪಡಿಸಿದರು. ಆನಂದ್ ಅವರಿಗೂ ಎರಡು ಆಟಗಳಲ್ಲಿ ಗೆಲ್ಲುವ ಅವಕಾಶಗಳಿದ್ದರೂ, ನಿಖರ ನಡೆಗಳನ್ನಿರಿಸದ ಕಾರಣ ಕ್ಯಾಸ್ಪರೋವ್ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾದರು.

ಆದರೆ ಮೂರನೇ ಪಂದ್ಯದಲ್ಲಿ ಕ್ಯಾಸ್ಪರೋವ್ ಎಂಡ್‌ಗೇಮ್‌ನಲ್ಲಿ ಮೇಲುಗೈ ಸಾಧಿಸಿ ಪಂದ್ಯ ಗೆದ್ದುಕೊಂಡರು. ಈ ಪಂದ್ಯಾವಳಿಯಲ್ಲಿ ರ್‍ಯಾಪಿಡ್ ಮತ್ತು ಬ್ಲಿಟ್ಸ್ ಆಟವನ್ನು 'ಚೆಸ್ 960' ಮಾದರಿಯಲ್ಲಿ ಆಡಲಾಗುತ್ತಿದೆ.

ಈ ಹಣಾಹಣಿಯು ₹1.28 ಕೋಟಿ ಬಹುಮಾನ ಹಣ ಹೊಂದಿದೆ.

ರಣಜಿ ಟ್ರೋಫಿ: ಬಂಗಾಳ ತಂಡದಲ್ಲಿ ಶಮಿ, ಆಕಾಶ್

ಕೋಲ್ಕತ್ತ (ಪಿಟಿಐ): ಪ್ರಸಕ್ತ ಋತುವಿನ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಬಂಗಾಳ ತಂಡಕ್ಕೆ ಅಭಿಮನ್ಯು ಈಶ್ವರನ್ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಹಾಗೂ ಆಕಾಶ್ ದೀಪ್ ತಂಡದಲ್ಲಿದ್ದಾರೆ.

ಇದೇ 15ರಿಂದ ಟೂರ್ನಿಯು ಆರಂಭವಾಗಲಿದೆ. ಬಂಗಾಳ ಕ್ರಿಕೆಟ್ ಸಂಸ್ಥೆ (ಸಿಎಬಿ) ಬುಧವಾರ ತಂಡವನ್ನು ಆಯ್ಕೆ ಮಾಡಿದೆ. ಬಂಗಾಳ ತಂಡವು ಸಿ ಗುಂಪಿನಲ್ಲಿ ಕಣಕ್ಕಿಳಿಯಲಿದೆ. ಇದೇ ಗುಂಪಿನಲ್ಲಿ ಗುಜರಾತ್, ಹರಿಯಾಣ, ಸರ್ವಿಸಸ್, ರೈಲ್ವೆಸ್, ತ್ರಿಪುರ, ಉತ್ತರಾಖಂಡ ಮತ್ತು ಅಸ್ಸಾಂ ತಂಡಗಳೂ ಇವೆ.

ತಂಡ ಇಂತಿದೆ: ಅಭಿಮನ್ಯು ಈಶ್ವರನ್ (ನಾಯಕ), ಅಭಿಷೇಕ್ ಪೊರೆಲ್ (ಉಪನಾಯಕ/ ವಿಕೆಟ್‌ಕೀಪರ್), ಸುದೀಪ್ ಕುಮಾರ್ ಘರಮಿ, ಅನುಸ್ತುಪ್ ಮಜುಂದಾರ್, ಸುದೀಪ್ ಚಟರ್ಜಿ, ಸುಮಂತ್ ಗುಪ್ತಾ, ಸೌರಭ್ ಕುಮಾರ್ ಸಿಂಗ್, ವಿಶಾಲ್ ಭಾಟಿ, ಮೊಹಮ್ಮದ್ ಶಮಿ, ಆಕಾಶ್ ದೀಪ್, ಸೂರಜ್ ಸಿಂಧು ಜೈಸ್ವಾಲ್, ಶಾಕೀರ್ ಹಬೀಬ್ ಗಾಂಧಿ (ವಿಕೆಟ್‌ಕೀಪರ್), ಇಶಾನ್ ಪೊರೆಲ್, ಖಾಜಿ ಜುನೈದ್ ಸೈಫಿ, ರಾಹುಲ್ ಪ್ರಸಾದ್, ಸುಮಿತ್ ಮೊಹಾಂತಾ, ವಿಕಾಶ್ ಸಿಂಗ್.

ಮೊಹಮ್ಮದ್ ಶಮಿ

ಮೈಸೂರು ರೇಸ್

ಮೆರೋಪಿ ಗೆಲ್ಲುವ ನಿರೀಕ್ಷೆ

ಮೈಸೂರು ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೆರೋಪಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ನ್ಯಾಚುರಲ್ ಫ್ಲೈ 9, ಮಿರಾಕಲ್ ಹನಿ 4, ವಾರಿಯರ್ ವುಮನ್ 6
2ನೇ ರೇಸ್: ಅಕಂಥ 6, ಅಮೇಜಿಂಗ್ ಅಟ್ರ್ಯಾಕ್ಷನ್ 5, ಡಾಲೀಸ್ ಗೋಲ್ಡ್ 7
3ನೇ ರೇಸ್: ಮಿಸ್ಟಿಕೋಸ್ 8, ರೀನ್ ಆಫ್ ಟೆರರ್ 5, ಸ್ಟ್ರಾವಿನ್‌ಸ್ಕಿ 7
4ನೇ ರೇಸ್: ಮೆರೋಪಿ 2, ಇಂಪೀರಿಯಲ್ ಬ್ಲೂ 5, ಆಲ್ಟ್‌ಗೇಟ್ 3
5ನೇ ರೇಸ್: ವಂಧಿಯಥೇವನ್ 3, ಕನ್ಯಾ ರಾಶಿ 2, ದಿ ಗೋಲ್ಡನ್ ಸನ್‌ರೈಸ್ 5
6ನೇ ರೇಸ್: ಸೆಲ್ಮಾ 5, ದಿ ರೋಮನ್ ರೀನ್ಸ್ 2, ಸಿಯೆನ್ನಾ ಪ್ರಿನ್ಸೆಸ್ 7

ಉತ್ತಮ ಬೆಟ್: ಮಿಸ್ಟಿಕೋಸ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
2,3,4,5,6	1,2,3	4,5,6

26ಕ್ಕೆ ಚೆಸ್ ಟೂರ್ನಿ

ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿಯಿಂದ ಇದೇ 29ರಂದು ರ್‍ಯಾಪಿಡ್ ಚೆಸ್ ಟೂರ್ನಿ ನಡೆಯಲಿದೆ. 10 ಮತ್ತು 16 ವರ್ಷದೊಳಗಿನವರ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ.

ನೋಂದಣಿಗೆ ಇದೇ 24 ಕೊನೆಯ ದಿನ. ರಾಜರಾಜೇಶ್ವರಿ ನಗರದ ಆರ್.ವಿ.ಕಾಲೇಜು ಬಳಿಯ ಕೃಷ್ಣ ಗಾರ್ಡನ್‌ನಲ್ಲಿ ಟೂರ್ನಿ ನಡೆಯಲಿದೆ. ವಿವರಗಳಿಗೆ www.championschessacademy.com. ಮೊಬೈಲ್ 9845466416.

12ನೇ ಆವೃತ್ತಿ ಸ್ವರೂಪದ ಬದಲಾವಣೆ ಕುರಿತು ಇ. ಪ್ರಸಾದ್ ರಾವ್ ಪ್ರತಿಕ್ರಿಯೆ

'ಪಿಕೆಎಲ್ ನಿಯಮ ಚರ್ಚೆಯಾಗಲಿ'

• ಪ್ರದೀಶ್ ಎಚ್.ಮರೋಡಿ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನ ಸ್ವರೂಪಕ್ಕೆ ಕಾಲಕಾಲಕ್ಕೆ ಹೊಸ ಸ್ಪರ್ಶ ನೀಡಲಾಗಿದೆ. ಈ ಬಾರಿಯ 12ನೇ ಆವೃತ್ತಿಯಲ್ಲೂ ಟೈಬ್ರೇಕರ್, ಗೋಲ್ಡನ್ ರೇಡ್, ಪ್ಲೇಇನ್, ಪ್ಲೇ ಆಫ್ ಸೇರಿದಂತೆ ನಿಯಮಗಳಲ್ಲಿ ಬದಲಾವಣೆ ತಂದು, ಸ್ಪರ್ಧೆಯನ್ನು ಮತ್ತಷ್ಟು ರೋಚಕಗೊಳಿಸುವ ಪ್ರಯತ್ನ ಮಾಡಲಾಗಿದೆ. ಈ ಪ್ರಯೋಗಗಳ ಸೂತ್ರದಾರಿ 'ಕಬಡ್ಡಿ ರಾವ್' ಎಂದೇ ಹೆಸರಾಗಿರುವ ಇ. ಪ್ರಸಾದ್ ರಾವ್.

ಪ್ರೊ ಕಬಡ್ಡಿ ಲೀಗ್‌ನ (ಪಿಕೆಎಲ್) ಪ್ರಸ್ತುತ ತಾಂತ್ರಿಕ ನಿರ್ದೇಶಕರಾಗಿರುವ ರಾವ್ ಅವರು, ಅಂತರರಾಷ್ಟ್ರೀಯ ಕಬಡ್ಡಿ ಫೆಡರೇಷನ್‌ನ ತಾಂತ್ರಿಕ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕಳೆದ ನಾಲ್ಕೂವರೆ ದಶಕಗಳಿಂದ ಕಬಡ್ಡಿ ಕ್ಷೇತ್ರದಲ್ಲೇ ಕೃಷಿ ಮಾಡುತ್ತಿರುವ ಅವರು, ಕ್ರೀಡೆಯ ವಿಕಸನ ಮತ್ತು ಹೊಸ ಪ್ರಯೋಗಗಳ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ್ದಾರೆ.

'ಭಾರತೀಯ ಸಾಂಪ್ರದಾಯಿಕ ಕ್ರೀಡೆಗಳಲ್ಲಿ ಒಂದಾಗಿರುವ ಕಬಡ್ಡಿ ಕಳೆದ ಒಂದು ದಶಕದಲ್ಲಿ ಅತಿ ವೇಗವಾಗಿ ಬೆಳೆಯುತ್ತಿದೆ. ಪಿಕೆಎಲ್ ಬಂದ ಬಳಿಕ ಈ ಕ್ರೀಡೆಯ ಖದರ್ ಬದಲಾಗಿದೆ. ದೇಶದಲ್ಲಿ ಕ್ರಿಕೆಟ್ ನಂತರ ಈ ಕ್ರೀಡೆ ಜನಪ್ರಿಯವಾಗಲು ಅದರಲ್ಲಿ ಅಡಗಿರುವ ಸೌಂದರ್ಯವೇ ಕಾರಣ. ಅದರ ಒಳನೋಟವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿದರೆ ಕಬಡ್ಡಿಗಿಂತ ರೋಮಾಂಚನ ಕ್ರೀಡೆ ಮತ್ತೊಂದಿಲ್ಲ' ಎನ್ನುತ್ತಾರೆ ರಾವ್.

ಇ. ಪ್ರಸಾದ್ ರಾವ್

'ಕೆಲ ವರ್ಷಗಳ ಹಿಂದೆ ಕಬಡ್ಡಿಯು ದೈಹಿಕ ತಾಕತ್ತು ಉಳ್ಳವರ ಕ್ರೀಡೆಯಾಗಿತ್ತು. ಆದರೆ, ಇಂದು ಈ ಕ್ರೀಡೆಯೊಳಗೆ ವಿಜ್ಞಾನ ಪ್ರವೇಶ ಮಾಡಿದ್ದರಿಂದ ಅವರ ಮೌಲ್ಯವೂ ವೃದ್ಧಿಸಿದೆ. ಪಿಕೆಎಲ್ ಸ್ವರೂಪದಲ್ಲಿನ ಬದಲಾವಣೆಯೂ ವಿಜ್ಞಾನಕ್ಕೆ ಹೊರತಾಗಿಲ್ಲ. ಪ್ರೇಕ್ಷಕರಿಗೆ ಮನರಂಜನೆಯ ಜೊತೆಗೆ ರೋಮಾಂಚನ ಅನುಭವ ನೀಡುವ ಉದ್ದೇಶದೊಂದಿಗೆ ನಾನಾ ಪ್ರಯೋಗ ಮಾಡುತ್ತಿದ್ದೇವೆ. ಈ ಪ್ರಯೋಗಗಳು ಪಿಕೆಎಲ್‌ಗೆ ಸೀಮಿತವಾಗದೆ ಜನರ ಮಧ್ಯೆ ಪರ– ವಿರೋಧ ಚರ್ಚೆಯಾಗಬೇಕು' ಎಂದು ಅವರು ಅಭಿಪ್ರಾಯಪಟ್ಟರು.

'ಪ್ಲೇಆಫ್ ಹಂತದಲ್ಲಿ ಸೀಮಿತವಾದ ಟೈಬ್ರೇಕರ್, ಗೋಲ್ಡನ್ ರೈಡ್ ನಿಯಮವನ್ನು ಈ ಬಾರಿ ಲೀಗ್ ಹಂತಕ್ಕೆ ಪರಿಚಯಿಸಿದ್ದರಿಂದ ಸಾಕಷ್ಟು ಧನಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈಗಾಗಲೇ ಐದು ಪಂದ್ಯಗಳ ಫಲಿತಾಂಶ ಟೈಬ್ರೇಕರ್‌ನಲ್ಲಿ ನಿರ್ಧಾರವಾಗಿದೆ. ಇದು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸುವ ಕ್ಷಣಗಳು. ಈ ನಿಯಮಗಳನ್ನು ನಾವು ಹೊಸದಾಗಿ ಮಾಡಿಲ್ಲ. ಹಾಕಿ, ಫುಟ್‌ಬಾಲ್ ಕ್ರೀಡೆಯಿಂದ ಎರವಲು ಪಡೆದಿದ್ದೇವೆ. ಆದರೆ, ಕಬಡ್ಡಿಯಲ್ಲಿ ಮಾತ್ರ ಉಭಯ ತಂಡಗಳಿಗೆ ಅಂಕ ಗಳಿಸಲು ಅವಕಾಶವಿದೆ. ಅದು ಈ ಕ್ರೀಡೆಯ ಸೌಂದರ್ಯ' ಎಂದು ಹೇಳಿದರು.

'ಹಿಂದಿನ ಆವೃತ್ತಿಯಲ್ಲಿ ಲೀಗ್‌ನಲ್ಲಿ ಆರು ತಂಡಗಳಿಗೆ ಪ್ಲೇ ಆಫ್ ಮೂಲಕ ಫೈನಲ್‌ಗೆ ಹೋಗಲು ಅವಕಾಶವಿತ್ತು. ಈ ಬಾರಿ ಪ್ಲೇ ಇನ್ ಮತ್ತು ಪ್ಲೇ ಆಫ್ ಮಾದರಿ ಪ್ರಯೋಗ ಮಾಡಿ ಎಂಟು ತಂಡಗಳಿಗೆ ಆ ಅವಕಾಶ ನೀಡಲಾಗಿದೆ. ತಂಡಗಳ ನಡುವೆ ಆರೋಗ್ಯಕರ ಸ್ಪರ್ಧೆ ಹೆಚ್ಚಿಸುವುದು ನಮ್ಮ ಉದ್ದೇಶ. ಮುಂದೊಂದು ದಿನ ನಮ್ಮ ನಿಮಯಗಳು ಅಂತರರಾಷ್ಟ್ರೀಯ ಪಂದ್ಯಗಳಿಗೂ ವಿಸ್ತರಣೆಯಾದರೂ ಅಚ್ಚರಿಯಿಲ್ಲ' ಎನ್ನುತ್ತಾರೆ ರಾವ್.

'ಎಂಟು ಭಾಷೆಗಳಲ್ಲಿ ಪ್ರಸಾರ'

'ಪ್ರೊ ಕಬಡ್ಡಿ ಲೀಗ್ ಜನಪ್ರಿಯವಾಗುವಲ್ಲಿ ಪ್ರಾದೇಶಿಕ ಭಾಷೆಗಳ ಕೊಡುಗೆ ತುಂಬಾ ದೊಡ್ಡದು. ದಶಕದ ಹಿಂದೆ ಎರಡು ಭಾಷೆಗಳಿಗೆ ಸೀಮಿತವಾಗಿದ್ದ ಪ್ರಸಾರವನ್ನು ಇಂದು ಎಂಟು ಭಾಷೆಗಳಿಗೆ ವಿಸ್ತರಿಸಲಾಗಿದೆ' ಎಂದು ಜಿಯೊಸ್ಟಾರ್ ಸ್ಪೋರ್ಟ್ಸ್ ಕಂಟೆಂಟ್ ಹೆಡ್ ಸಿದ್ಧಾರ್ಥ್ ಶರ್ಮಾ ಹೇಳಿದರು.

ಪಿಕೆಎಲ್‌ನಲ್ಲಿ ಆಟಗಾರರ ಮತ್ತು ಪ್ರೇಕ್ಷಕರ ನಡುವಿನ ಸಂಪರ್ಕ ಸೇತುವೆಯಂತೆ 'ಜಿಯೊ ಸ್ಟಾರ್' ಕೆಲಸ ಮಾಡುತ್ತಿದೆ. ಆಟದಲ್ಲಿ ರೋಚಕ ಕ್ಷಣವನ್ನು ಸೆರೆಯಿಡಿದು ಅದೇ ತೀವ್ರತೆಯನ್ನು ಉಳಿಸಿಕೊಂಡು ಪ್ರೇಕ್ಷಕರಿಗೆ ತಲುಪಿಸುವುದು ನಮ್ಮ ಉದ್ದೇಶ. ಇಂದಿನ ಸ್ಪರ್ಧಾತ್ಮಕ ಎಐ ಜಗತ್ತಿನಲ್ಲಿ ವೀಕ್ಷಕರಿಗೆ ತಾಜಾ ಅನುಭವವನ್ನು ಕಲ್ಪಿಸುವುದು ಬಹು ದೊಡ್ಡ ಸವಾಲು. ಈ ನಿಟ್ಟಿನಲ್ಲಿ ಜಿಯೊ ಸ್ಟಾರ್ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹೊಸ ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ' ಎಂದು ತಿಳಿಸಿದರು.

'ಪಿಕೆಎಲ್ ವೀಕ್ಷಕರ ಸಂಖ್ಯೆ ಆವೃತ್ತಿಯಿಂದ ಆವೃತ್ತಿಗೆ ಏರಿಕೆಯಾಗುತ್ತಿದೆ. ಹಳ್ಳಿ ಜನರು ಈ ಕ್ರೀಡೆಯನ್ನು ಇಷ್ಟಪಟ್ಟು ನೋಡುತ್ತಾರೆ. ಹೀಗಾಗಿ, ಈ ಬಾರಿ ಹರ್ಯಾನ್ವಿ ಮತ್ತು ಭೋಜ್‌ಪುರಿ ಪ್ರಾದೇಶಿಕ ಭಾಷೆಯಲ್ಲಿ ಪ್ರಸಾರ ಆರಂಭಿಸಲಾಗಿದೆ. ಭವಿಷ್ಯದಲ್ಲಿ ಇನ್ನಷ್ಟು ದೇಶೀಯ ಭಾಷೆಗಳಲ್ಲಿ ಪ್ರಸಾರ ಮಾಡುವ ಉದ್ದೇಶವಿದೆ' ಎಂದರು.

ಚಿರಶ್ರೀ

‘ಸಿನಿಮಾ ನಿರ್ಮಾಣ ಮಾಡುವ ಕನಸಿದೆ’

‘ಉಪಾಧ್ಯಕ್ಷ’ ಗೆಲುವಿನ ಬಳಿಕ ನಟ ಚಿಕ್ಕಣ್ಣ ನಾಯಕನ ಪಾತ್ರಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಅವರ ಅಭಿನಯದ ‘ಜೋಡೆತ್ತು’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಅದರ ಬಗ್ಗೆ ಹಾಗೂ ತಮ್ಮ ಸಿನಿಪಯಣ ಕುರಿತು ಅವರು ಮಾತಿಗೆ ಸಿಕ್ಕರು.

ಚಿಕ್ಕಣ್ಣ

- ವಿನಾಯಕ ಕೆ.ಎಸ್.

• ಸಿನಿಮಾ ಮತ್ತು ನಿಮ್ಮ ಪಾತ್ರ ಕುರಿತು ಹೇಳಬಹುದೇ?

ಇದು 80ರ ದಶಕದ ಕಥೆ. ಹಳ್ಳಿ ಹಿನ್ನೆಲೆಯಲ್ಲಿ ಕಥೆ ಸಾಗುತ್ತದೆ. ನಾನು ಮಿಡಲ್‌ಕ್ಲಾಸ್ ಕುಟುಂಬದ ಹುಡುಗನಾಗಿ ಕಾಣಿಸಿಕೊಳ್ಳುತ್ತೇನೆ. ಆ ಊರು, ಈ ಊರು ಎಂದು ಯಾವುದೋ ಒಂದು ಪ್ರಾಂತ್ಯಕ್ಕೆ ಸೀಮಿತವಾಗಿಲ್ಲ. ಒಟ್ಟಾರೆ ಹಳ್ಳಿಗಾಡಿನ ಕಥೆ. ಜೋಡೆತ್ತಿಗೆ ಮೂಲ ಬೇರೆನೇ ಇದೆ. ಯಶ್ ಮತ್ತು ದರ್ಶನ್ ಜೋಡೆತ್ತುಗಳೆಂದು ಪ್ರಸಿದ್ಧರಾಗಿದ್ದರು. ಅದಾದ ಬಳಿಕ ಸುನಿಲ್ ಮತ್ತು ನಾನು ಜೋಡೆತ್ತು ಎಂಬಂತೆ ಆಯಿತು. ಆದರೆ ಈ ಶೀರ್ಷಿಕೆ ಯಾವ ವ್ಯಕ್ತಿಗೂ ಸಂಬಂಧಿಸಿದ್ದಲ್ಲ. ಸಿನಿಮಾ ನೋಡಿದಾಗ ಈ ಶೀರ್ಷಿಕೆಗಿಂತ ಉತ್ತಮ ಹೆಸರು ಆಯ್ಕೆ ಮಾಡಲು ಸಾಧ್ಯವಿರಲಿಲ್ಲ ಎನ್ನಿಸುತ್ತದೆ. ಹೀಗಾಗಿ ಈ ಹೆಸರಷ್ಟೆ. ನಾನು ಯಾವ ಸಿನಿಮಾ ಮಾಡಿದರೂ ಹಾಸ್ಯ ಇದೆಯಾ ಎಂದು ಕೇಳುವಂತೆಯೇ ಇಲ್ಲ. ಅದರ ಮೇಲೆ ಏನಿದೆ ಎಂದು ನೋಡಬೇಕು. ಮುಂದಿನ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭ.

• ನಿಮ್ಮ ‘ಲಕ್ಷ್ಮಿಪುತ್ರ’ ಚಿತ್ರ ಯಾವ ಹಂತದಲ್ಲಿದೆ?

ಶೇಕಡ 20ರಷ್ಟು ಚಿತ್ರೀಕರಣ ಬಾಕಿಯಿದೆ. ತಾಯಿ–ಮಗನ ಕಥೆಯಿದೆ. ಜತೆಗೆ ದುಡ್ಡಿನ ಕಥೆಯೂ ಬರುತ್ತದೆ. ಮುಖ್ಯವಾಗಿ ಅಮ್ಮ–ಮಗನ ಬಾಂಧವ್ಯದ ಮೇಲೆ ಕಥೆ ಸಾಗುತ್ತದೆ.

• ಈಗ ಹಾಸ್ಯನಟನಾಗಿ, ಸಹ ಕಲಾವಿದನಾಗಿ ನಟಿಸುತ್ತಿಲ್ಲವೆ? ನಾಯಕನಾಗಿಯೇ ಮುಂದುವರಿಯುತ್ತೀರಾ?

ಸಹ ಕಲಾವಿದನ ಪಾತ್ರಕ್ಕೆ ಈಗ ಅಷ್ಟು ಬೇಡಿಕೆ ಇಲ್ಲ. ಅವಕಾಶ ಬಂದರೆ ಮಾಡುತ್ತೇನಾ ಅಥವಾ ಇಲ್ಲವಾ ಎಂದು ನಿರ್ಧರಿಸಬಹುದು. ಆದರೆ ಪ್ರಾಮಾಣಿಕವಾಗಿ ಹೇಳುತ್ತೇನೆ, ಈಗೀಗ ಅಂಥ ಪಾತ್ರಗಳಿಗೆ ಯಾರೂ ಕರೆಯುತ್ತಲೇ ಇಲ್ಲ. ‘ಉಪಾಧ್ಯಕ್ಷ’ ನಂತರ ನಾಯಕನಾಗಿಯೇ ಕಥೆಗಳು ಬರುತ್ತಿವೆ.

• ಇಲ್ಲಿಯವರೆಗೆ ಎಷ್ಟು ಸಿನಿಮಾಗಳು ಆಗಿವೆ? ಈ ಪಯಣ ಹೇಗಿದೆ?

200ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದೇನೆ. ಖುಷಿಯಿದೆ. ಚಿತ್ರೋದ್ಯಮ ಚೆನ್ನಾಗಿದೆ. ಸಿನಿಮಾದಲ್ಲಿ ಒಂದು ಸಣ್ಣ ಪಾತ್ರ ಸಿಕ್ಕಿದರೆ ಸಾಕು ಎಂದುಕೊಂಡಿದ್ದೆ. ಆದರೆ ಈಗ ನಾಯಕನಾಗಿಯೇ ಜನ ಒಪ್ಪಿಕೊಂಡಿದ್ದಾರೆ. ಇದು ಖುಷಿಯ ವಿಷಯ. ಚಿತ್ರೋದ್ಯಮ ನಾನು ಕಾಣದೇ ಇದ್ದ ಕನಸು. ಹೀಗೆ ಆಗ್ತೀನಿ ಅಂತ ಗೊತ್ತಿರಲಿಲ್ಲ.

• ನಾಯಕನಾಗಿ ಸಿನಿಮಾ ಮಾಡುವುದು ಎಷ್ಟು ಸವಾಲು?

ದೊಡ್ಡ ಜವಾಬ್ದಾರಿ. ಸಣ್ಣ ಪಾತ್ರ ಮಾಡುವಾಗ ಸಿನಿಮಾ ಹಿಟ್, ಫ್ಲಾಪ್ ಎಂಬುದು ಲೆಕ್ಕಕ್ಕೆ ಬರುತ್ತಿರಲಿಲ್ಲ. ಹಿಟ್ ಆದರೆ ನಮಗೆ ಪ್ಲಸ್ ಆಗುತ್ತಿತ್ತು. ಸೋತರೆ ನಮ್ಮ ವೃತ್ತಿ ಮೇಲೆ ಅಷ್ಟೇನು ಪರಿಣಾಮ ಬೀರುತ್ತಿರಲಿಲ್ಲ. ಪಾತ್ರ ಚೆನ್ನಾಗಿದೆ, ಅದಕ್ಕೆ ನ್ಯಾಯ ಒದಗಿಸಿದ್ದಾರೆ, ಸಿನಿಮಾ ಚೆನ್ನಾಗಿಲ್ಲ ಎಂದು ಮಾತಾಡಿಕೊಳ್ಳುತ್ತಿದ್ದರು. ಆದರೆ ನಾಯಕನಾಗಿ ಹಾಗಲ್ಲ. ಗೆಲುವು ಬಹಳ ಮಹತ್ವದ್ದಾಗುತ್ತದೆ. ಸಿನಿಮಾ ಗೆದ್ದರೆ ಮಾತ್ರ ನಿರ್ಮಾಪಕರಿಗೆ ಹಣ ಬರುವುದು. ಅವರು ಮುಂದೆ ಸಿನಿಮಾಗಳನ್ನು ಮಾಡಲು ಸಾಧ್ಯವಾಗುತ್ತದೆ.

ಬಯಸದೇ ಬಂದ ಭಾಗ್ಯವಿದು. ಅಚಾನಕ್ಕಾಗಿ ‘ಕಿರಾತಕ’ ಚಿತ್ರದಲ್ಲಿ ಅವಕಾಶ ಸಿಕ್ಕಿತು. ‘ರಾಜಾಹುಲಿ’ ಚಿತ್ರದಲ್ಲಿ ಜನ ಗುರುತಿಸಿದರು. ‘ಅಧ್ಯಕ್ಷ’ ವೃತ್ತಿ ಜೀವನದ ಟರ್ನಿಂಗ್ ಪಾಯಿಂಟ್. ಸಿನಿ ಪಯಣದಲ್ಲಿ ನನಗೆ ನೋವು, ಅವಮಾನ ಆಗಿದ್ದು ಕಡಿಮೆ. ಇಲ್ಲಿ ಕಹಿಗಿಂತ ಸಿಹಿ ಸಿಕ್ಕಿದ್ದೇ ಹೆಚ್ಚು.

• ಹಿಂದೊಮ್ಮೆ ನಿಮ್ಮನ್ನು ಆಡಿಕೊಂಡವರ ಕುರಿತು ಅಸಮಾಧಾನದ ಮಾತುಗಳನ್ನಾಡಿದ್ದೀರಲ್ಲವೇ?

‘ಉಪಾಧ್ಯಕ್ಷ’ ಸಮಯದಲ್ಲಿ ಆಡಿದ್ದೆ. ಅದಕ್ಕೆ ಏನೂ ಮಾಡಲು ಸಾಧ್ಯವಿಲ್ಲ. ಅದು ಎಲ್ಲ ಕ್ಷೇತ್ರಗಳಲ್ಲಿಯೂ ಇದ್ದಿದ್ದೆ. ಯಾರೋ ಹತ್ತು ಜನ ಆ ರೀತಿ ಮಾತನಾಡಿರುತ್ತಾರೆ. ಆದರೆ 90 ಜನ ಒಳೆಯದ್ದನ್ನೇ ಹೇಳಿರುತ್ತಾರೆ. ದೇವರೆ ಬಂದು ಸಿನಿಮಾ ಮಾಡಿದರೂ, ಋಣಾತ್ಮಕವಾಗಿ ಮಾತನಾಡುವವರು ಇದ್ದೇ ಇರುತ್ತಾರೆ. ಹೀಗಾಗಿ ಆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ.

• ಉದ್ಯಮದ ದಿಕ್ಕೇ ಬದಲಾದ ಹೊತ್ತಿನಲ್ಲಿ ಹೊಸ ನಾಯಕನಾಗಿ ನೆಲೆ ಕಾಣುವುದು ಸವಾಲಿನ ಸಂಗತಿಯಾ?

ಆ ರೀತಿ ಯಾವ ಸವಾಲೂ ಇಲ್ಲ. ‘ಸು ಫ್ರಂ ಸೋ’ದಲ್ಲಿ ಇದ್ದವರೆಲ್ಲ ಹೊಸಬರೆ ಅಲ್ವಾ? ಅದು ಗೆದ್ದಿಲ್ವಾ? ಇಲ್ಲಿಗೆ ಬರಬೇಕಿದ್ದರೆ ಎಲ್ಲರೂ ಹೊಸಬರಾಗಿಯೇ ಇರುತ್ತಾರಲ್ವಾ? ಗೆದ್ದ ಮೇಲೆ ಹಳಬರಾಗುವುದು. ಸಿನಿಮಾ ಚೆನ್ನಾಗಿದ್ದರೆ, ಕಥೆ ಇಷ್ಟವಾದರೆ ಹೊಸಬರು, ಹಳಬರು ಎಂಬ ವಿಷಯವೇ ಬರುವುದಿಲ್ಲ. ಸಿನಿಮಾ ಚೆನ್ನಾಗಿ ಮಾಡುವುದಷ್ಟೇ ಮುಖ್ಯ. ನಾನು ಮಾಡುವುದು ಹಾಸ್ಯ, ಕೌಟುಂಬಿಕ ಮನರಂಜನೆ ಚಿತ್ರಗಳು. ಹೀಗಾಗಿ ನನಗಂತೂ ಇದು ಸವಾಲಾಗುವುದಿಲ್ಲ. ಜನರ ಬಾಯಿಂದ, ಬಾಯಿಗೆ ಚಿತ್ರ ಪ್ರಚಾರವಾಗಬೇಕಷ್ಟೆ.

• ಮುಂದಿನ ಗುರಿಗಳೇನು?

ನಾಯಕನಾದ ಮೇಲೆ ಮುಂದಿನ ಗುರಿ ಅಂತೇನಿಲ್ಲ. ಬಹಳ ಹಿಂದೆಯೆ ಸಿನಿಮಾ ನಿರ್ಮಾಣ ಮಾಡಿದ್ದೆ. ‘ರ್‍ಯಾಂಬೋ–2’ ಚಿತ್ರದ ನಿರ್ಮಾಪಕರುಗಳಲ್ಲಿ ನಾನೂ ಒಬ್ಬನಾಗಿದ್ದೆ. ಮತ್ತೆ ದೇವರು ಶಕ್ತಿ ಕೊಟ್ಟರೆ ಚಿತ್ರ ನಿರ್ಮಾಣ ಕನಸಿದೆ. ಆದರೆ ನಿರ್ದೇಶನ, ಅದರ ಜವಾಬ್ದಾರಿಗಳು ನನ್ನ ಜಾಯಮಾನಕ್ಕೆ ಆಗಿಬರುವಂಥದ್ದಲ್ಲ. ❖

ಪ್ರೇಮಿಗಳ ಗಮನಕ್ಕೆ ಎಂದ ಹೊಸಬರು

ಬಹುತೇಕ ಹೊಸಬರಿಂದಲೇ ಕೂಡಿರುವ ‘ಪ್ರೇಮಿಗಳ ಗಮನಕ್ಕೆ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿನ್ಸೆಂಟ್ ಇನ್ಬರಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

‘ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ವಾಸಿಸುವ, ಅದರಲ್ಲೂ ಬೇರೆ ಊರುಗಳಿಂದ ಬಂದವರ ನಡುವೆ ಲಿವಿಂಗ್ ರಿಲೇಶನ್‌ಶಿಪ್ ಹೆಚ್ಚಾಗುತ್ತಿದೆ. ಬೆಂಗಳೂರಿನಂಥ ನಗರದ ಐಟಿ, ಬಿಟಿ ಕಂಪನಿಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳಲ್ಲಿ ಇಂಥ ಸಂಬಂಧಗಳು ಹೆಚ್ಚಾಗಿ ಕಂಡುಬರುತ್ತಿವೆ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಲಿವಿಂಗ್ ರಿಲೇಶನ್‌ಶಿಪ್‌ನಲ್ಲಿದ್ದ ಇಬ್ಬರು ಪ್ರೇಮಿಗಳ ಸುತ್ತ ನಡೆಯುವ ಕಥಾಹಂದರ ಒಳಗೊಂಡ ಚಿತ್ರವಿದು. ಆಗ ಆ ಮನೆಯಲ್ಲಿ ಏನೇನು ನಡೆಯಿತು?, ಆಗಂತುಕನೊಬ್ಬ ಆ ಮನೆಗೆ ಎಂಟ್ರಿ ಕೊಟ್ಟಾಗ ಏನಾಗುತ್ತದೆ ಎಂಬುದೇ ಚಿತ್ರಕಥೆ. ಐದು ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ನಡೆದ ಒಂದು ನೈಜಘಟನೆ ಚಿತ್ರಕ್ಕೆ ಪ್ರೇರಣೆ. ಇಡೀ ಚಿತ್ರದ ಕಥೆ ನಡೆಯೋದು ಒಂದೇ ಮನೆಯಲ್ಲಿ, ಎರಡು ಪಾತ್ರಗಳ ಸುತ್ತ. ಮತ್ತೊಂದು ಪಾತ್ರ ಕೆಲ ದೃಶ್ಯಗಳಲ್ಲಿ ಮಾತ್ರ ಬಂದುಹೋಗುತ್ತದೆ. ಜಾಗೃತಿ ಜತೆಗೆ ಮನರಂಜನೆಯ ಅಂಶವನ್ನಿಟ್ಟುಕೊಂಡು ಮಾಡಿರುವ ಚಿತ್ರವಿದು’ ಎಂದರು ನಿರ್ದೇಶಕ.

ಸಿಟಾಡಿಲ್ ಫಿಲ್ಮ್ಸ್ ಹಾಗೂ ಜೊಯಿಟಾ ಎಂಟರ್‌ಟೈನ್‌ಮೆಂಟ್ಸ್ ಅಡಿ ಸುಬ್ಬು ಹಾಗೂ ಯಕ್ಕಂಟಿ ರಾಜಶೇಖರ ರೆಡ್ಡಿ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಬಿಗ್‌ಬಾಸ್ ಖ್ಯಾತಿಯ ಶಶಿ ಚಿತ್ರದ ನಾಯಕನಾಗಿ ಕಾಣಿಸಿಕೊಂಡಿದ್ದು, ಈಗಾಗಲೇ ಕನ್ನಡ, ತುಳು ಚಿತ್ರಗಳಲ್ಲಿ ನಟಿಸಿರುವ ಚಿರಶ್ರೀ ಅಂಚನ್ ನಾಯಕಿ. ಅರುಳ್ ಸೆಲ್ವನ್ ಅವರ ಛಾಯಾಚಿತ್ರಗ್ರಹಣ, ಡೆನ್ನಿಸ್ ವಲ್ಲಭನ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.

ಇದೇ ತಿಂಗಳ ಅಂತ್ಯದಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದಿದೆ ಚಿತ್ರತಂಡ. ❖

‘ಉಗ್ರಾಯುಧಮ್’ ಹಿಡಿದ ಶ್ರೀಮುರಳಿ

ಶ್ರೀಮುರಳಿ

ನಟ ಶ್ರೀಮುರಳಿ ನಾಯಕರಾಗಿ ನಟಿಸುತ್ತಿರುವ ‘ಉಗ್ರಾಯುಧಮ್’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಪುನೀತ್ ರುದ್ರನಾಗ್ ಚೊಚ್ಚಲ ನಿರ್ದೇಶನದ ಚಿತ್ರವಿದು.

‘ನಾನು ಚಿತ್ರರಂಗಕ್ಕೆ ಬಂದಾಗಿನಿಂದ ಪ್ರೋತ್ಸಾಹ ನೀಡುತ್ತಾ ಬಂದವರು ಶ್ರೀಮುರಳಿ ಹಾಗೂ ಕುಟುಂಬದವರು. ನನ್ನ ಮೊದಲ ನಿರ್ದೇಶನದ ‘ಉಗ್ರಾಯುಧಮ್’ ಚಿತ್ರಕ್ಕೆ ಶ್ರೀಮುರಳಿ ಅವರೆ ನಾಯಕನಾಗಿರುವುದು ಸಂತಸ ತಂದಿದೆ. ಏಳುನೂರು ವರ್ಷಗಳ ಹಿಂದಿನ ಪಿರಿಯಾಡಿಕ್ ಡ್ರಾಮಾ ಕಥಾಹಂದರ ಹೊಂದಿರುವ ಚಿತ್ರ. ನವೆಂಬರ್‌ನಿಂದ ಚಿತ್ರೀಕರಣ ಆರಂಭವಾಗುತ್ತಿದೆ. ಸಕಲೇಶಪುರದ ಬಳಿ 135 ಎಕರೆಯಲ್ಲಿ ಅದ್ದೂರಿ ಸೆಟ್ ಹಾಕಲಾಗುತ್ತಿದ್ದು, ಅಲ್ಲೇ ಹೆಚ್ಚಿನ ಚಿತ್ರೀಕರಣ ನಡೆಯಲಿದೆ. ನಾನು ರಾಜಕುಮಾರ್ ಅವರ ಅಪ್ಪಟ ಅಭಿಮಾನಿ. ಅವರ ಅಭಿನಯದ ಸಾಕಷ್ಟು ಐತಿಹಾಸಿಕ ಚಿತ್ರಗಳನ್ನು ನೋಡಿದ್ದೇನೆ. ಅದೇ ನನಗೆ ಈ ಚಿತ್ರ ನಿರ್ದೇಶನ ಮಾಡಲು ಸ್ಫೂರ್ತಿ. ನಮ್ಮ ಚಿತ್ರದಲ್ಲಿ ಅನುಭವಿ ಕಲಾವಿದರ ಹಾಗೂ ತಂತ್ರಜ್ಞರ ದೊಡ್ಡ ತಂಡ ಇದೆ. ಮುಂದಿನ ದಿನಗಳಲ್ಲಿ ಈ ಕುರಿತು ಮಾಹಿತಿ ನೀಡುತ್ತೇವೆ’ ಎಂದು ನಿರ್ದೇಶಕ ಪುನೀತ್ ರುದ್ರನಾಗ್ ತಿಳಿಸಿದರು.

ಸುರಮ್ ಮೂವೀಸ್ ಲಾಂಛನದಲ್ಲಿ ಜಯರಾಮ್ ದೇವಸಮುದ್ರ ಬಂಡವಾಳ ಹೂಡುತ್ತಿದ್ದಾರೆ. ‘ನಾನು ‘ಬಘೀರ’ ಚಿತ್ರದ ನಂತರ ಸುಮಾರು 200 ಕಥೆಗಳನ್ನು ಕೇಳಿದ್ದೇನೆ. ಅದರಲ್ಲಿ ನನಗೆ ಇಷ್ಟ ಆಗಿದ್ದು ಮೂರು ಕಥೆಗಳು ಮಾತ್ರ. ಆ ಪೈಕಿ ಎರಡು ಚಿತ್ರಗಳ ಮುಹೂರ್ತ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ಇತ್ತೀಚೆಗೆ ನೆರವೇರಿದೆ. ನಿರ್ದೇಶಕ ಪುನೀತ್ ರುದ್ರನಾಗ್ 700 ವರ್ಷಗಳ ಹಿಂದಿನ ಕಥೆಯನ್ನು ತೆರೆಯ ಮೇಲೆ ತರಲು ಮುಂದಾಗಿದ್ದಾರೆ. ನಿಜಕ್ಕೂ ಅವರು ಮಾಡಿಕೊಂಡಿರುವ ಕಥೆ ಬಹಳ ಚೆನ್ನಾಗಿದೆ. ಒಟ್ಟಿನಲ್ಲಿ ಒಂದೊಳ್ಳೆ ಚಿತ್ರ ನಿಮ್ಮ ಮುಂದೆ ಬರುವುದಂತು ಖಂಡಿತ’ ಎಂದರು ನಾಯಕ ಶ್ರೀಮುರಳಿ. ❖

‘ಗ್ರೀನ್’ಗೆ ಶಿವರಾಜಕುಮಾರ್ ಸಾಥ್

ಸೈಕಲಾಜಿಕಲ್ ಕಥಾಹಂದರ ಹೊಂದಿರುವ ‘ಗ್ರೀನ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶಿವರಾಜಕುಮಾರ್ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ರಾಜ್ ವಿಜಯ್ ನಿರ್ದೇಶನದ ಚಿತ್ರವಿದು.

‘ಚಿಕ್ಕ ವಯಸ್ಸಿನಿಂದಲೂ ನನಗೆ ಚಿತ್ರ ನಿರ್ದೇಶಕ ಆಗಬೇಕೆಂಬ ಆಸೆ ಇತ್ತು. ಅದು ಈಗ ಈಡೇರಿದೆ. ಮನೋವೈಜ್ಞಾನಿಕ, ಮನಸ್ಸನ್ನು ಬೆರಗುಗೊಳಿಸುವ ಥ್ರಿಲ್ಲರ್ ಚಿತ್ರ. ತನ್ನ ಇಡೀ ಜೀವನವನ್ನೇ ನಿಯಂತ್ರಿಸುತ್ತಿರುವ ತನ್ನೊಳಗಿನ ರಾಕ್ಷಸನಿಂದ ಹೊರಬರಲು ಹೋರಾಡುವ ನಾಯಕನ ಕಥೆಯೇ ‘ಗ್ರೀನ್’. ಇದೊಂದು ಕಾಡಿನಲ್ಲಿ ನಡೆಯುವ ಕಥೆಯಾಗಿದ್ದು, ಊಟಿ ಬಳಿಯಲ್ಲಿ ಹೆಚ್ಚಿನ ಚಿತ್ರೀಕರಣ ಮಾಡಲಾಗಿದೆ. ಈಗಾಗಲೇ ಸಾಕಷ್ಟು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಪ್ರಶಸ್ತಿ ಪಡೆದಿದೆ. ಅಕ್ಟೋಬರ್ 23ರಂದು ಚಿತ್ರ ತೆರೆಗೆ ಬರಲಿದೆ’ ಎಂದರು ನಿರ್ದೇಶಕ.

ರಾಜ್ ವಿಜಯ್ ಹಾಗೂ ಬಿ.ಎನ್. ಸ್ವಾಮಿ ಬಂಡವಾಳ ಹೂಡಿದ್ದಾರೆ. ಬಾಲಾಜಿ ಮನೋಹರ್, ಗೋಪಾಲಕೃಷ್ಣ ದೇಶಪಾಂಡೆ, ಆರ್.ಜೆ. ವಿಕ್ಕಿ ಮುಂತಾದವರು ಪ್ರಮುಖ ಪಾತ್ರದಲ್ಲಿದ್ದಾರೆ. ಶಕ್ತಿ ಸ್ಯಾಕ್ ಸಂಗೀತ, ಮಧುಸೂದನ್ ಛಾಯಾಚಿತ್ರಗ್ರಹಣವಿದೆ. ❖

ಅಕ್ಟೋಬರ್ 17ಕ್ಕೆ ಟೈಮ್ ಪಾಸ್

ಸಿನಿಮಾ ಮಾಡುವ ಕನಸಿಟ್ಟುಕೊಂಡವರ ಏಳುಬೀಳಿನ ಕಥೆ ಹೊಂದಿರುವ ‘ಟೈಮ್ ಪಾಸ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೆ.ಚೇತನ್ ಜೋಡಿದಾರ್ ನಿರ್ದೇಶನದ ಚಿತ್ರ ಅಕ್ಟೋಬರ್ 17ರಂದು ತೆರೆ ಕಾಣಲಿದೆ.

‘ಡಾರ್ಕ್ ಹ್ಯೂಮರ್ ಜಾನರ್‌ನ ಕಥೆಯಿದು. ಮನೋರಂಜನೆಯನ್ನೇ ಮುಖ್ಯವಾಗಿಸಿಕೊಂಡು ಕಥೆ ಮಾಡಲಾಗಿದೆ. ನನ್ನ ಚೊಚ್ಚಲ ಸಿನಿಮಾ. ಯಾವ ನಿರ್ದೇಶಕರ ಬಳಿಯೂ ಕೆಲಸ ಮಾಡಿಲ್ಲ. ಸಿನಿಮಾ ಪ್ರೇಮದಿಂದ ಎಲ್ಲವನ್ನೂ ನೋಡಿ ಕಲಿತಿದ್ದೇನೆ’ ಎಂದಿದ್ದಾರೆ ನಿರ್ದೇಶಕರು.

ಶ್ರೀ ಚೇತನ ಸರ್ವೀಸಸ್ ಬ್ಯಾನರ್ ಮೂಲಕ ಗುಂಡೂರು ಶೇಖರ್, ಕಿರಣ್ ಕುಮಾರ್ ಶೆಟ್ಟಿ, ಎಂ.ಹೆಚ್.ಕೃಷ್ಣಮೂರ್ತಿ ನಿರ್ಮಾಣ ಮಾಡಿದ್ದಾರೆ. ಇಮ್ರಾನ್ ಪಾಷಾ, ವೈಸಿರಿ ಕೆ.ಗೌಡ, ರಕ್ಷಾರಾಮ್ ಮುಂತಾದವರು ಚಿತ್ರದಲ್ಲಿದ್ದಾರೆ.

ಡಿ.ಎಂ. ಉದಯ ಕುಮಾರ್ (ಡಿಕೆ) ಸಂಗೀತ ನಿರ್ದೇಶನ, ರಾಜೀವ್ ಗಣೇಶ್ ಛಾಯಾಚಿತ್ರಗ್ರಹಣ, ಹರಿ ಪರಮ್ ಸಂಕಲನ ಈ ಚಿತ್ರಕ್ಕಿದೆ. ❖

ವೈಸಿರಿ

ತೆರೆಗೆ ಬರಲು ಸಿದ್ಧವಾದ ‘ಲವ್ ಒಟಿಪಿ’

ಅನೀಶ್ ತೇಜೇಶ್ವರ್

ನಟ ಅನೀಶ್ ತೇಜೇಶ್ವರ್ ಎರಡನೇ ಸಲ ನಿರ್ದೇಶನದ ಯತ್ನ ಮಾಡಿರುವುದು ಗೊತ್ತೇ ಇದೆ. ಅವರ ನಿರ್ದೇಶನದ ‘ಲವ್ ಒಟಿಪಿ’ ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ಸಂಪೂರ್ಣ ಪ್ರೇಮ ಕಥೆಯನ್ನು ಹೊಂದಿರುವ ಚಿತ್ರ ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಸಿದ್ಧಗೊಂಡಿದೆ.

ಅನೀಶ್ ಈ ಹಿಂದೆ ‘ರಾಮಾರ್ಜುನ’ ಚಿತ್ರ ನಿರ್ದೇಶಿಸಿದ್ದರು. ನಟನಾಗಿ ಅವರ ಹಿಂದಿನ ಚಿತ್ರ ‘ಆರಾಮ್ ಅರವಿಂದ ಸ್ವಾಮಿ ಅಷ್ಟೇನು ಯಶಸ್ಸು ಕಂಡಿರಲಿಲ್ಲ. ಅದರ ಬೆನ್ನಲ್ಲೇ ಅನೀಶ್ ನಿರ್ದೇಶನಕ್ಕಿಳಿದಿದ್ದರು. ಭಾವಪ್ರೀತ ಪ್ರೊಡಕ್ಷನ್ಸ್ ಮೂಲಕ ವಿಜಯ್ ಎಂ ರೆಡ್ಡಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ಚಿತ್ರೀಕರಣ ಮುಗಿದು ಬಿಡುಗಡೆ ಹಂತಕ್ಕೆ ಬಂದಿದೆ. ಶೀಘ್ರದಲ್ಲಿ ಚಿತ್ರದ ಟ್ರೇಲರ್ ಬಿಡುಗಡೆ ಮಾಡುತ್ತೇವೆ. ತೆಲುಗಿನ ಹೆಸರಾಂತ ನಟ ರಾಜೀವ್ ಕನಕಾಲ ಈ ಚಿತ್ರದ ಮೂಲಕ ಕನ್ನಡಕ್ಕೆ ಬರುತ್ತಿದ್ದಾರೆ’ ಎಂದರು ಅನೀಶ್.

ಅನೀಶ್ ಜೊತೆಗೆ ಜಾಹ್ನವಿ ಕಲಕೇರಿ, ಆರೋಹಿ ನಾರಾಯಣ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ❖

‘ಸರ್ಕಾರಿ ನ್ಯಾಯಬೆಲೆ ಅಂಗಡಿ’ಯಲ್ಲಿ ಶಿವರಾಮೇಗೌಡ

ನಟಿ ರಾಗಿಣಿ ದ್ವಿವೇದಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವ ‘ಸರ್ಕಾರಿ ನ್ಯಾಯಬೆಲೆ ಅಂಗಡಿ’ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಾರಂಭಗೊಂಡಿವೆ. ಚಿತ್ರದಲ್ಲಿ ರಾಜಕಾರಣಿ ಎಲ್. ಆರ್. ಶಿವರಾಮೇಗೌಡ ಕೂಡ ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪಡಿತರ ವ್ಯವಸ್ಥೆಯ ಸುತ್ತ ನಡೆಯುವಂಥ ಕಥಾಹಂದರದ ಚಿತ್ರಕ್ಕೆ ಸಾತ್ವಿಕ್ ಪವನ್ ಕುಮಾರ್ ನಿರ್ದೇಶನವಿದೆ.

‘ನಾನು ಸುಮಾರು ನಾಲ್ಕು ದಶಕಗಳಿಂದ ರಾಜಕಾರಣದಲ್ಲಿದ್ದೇನೆ. ಜನಪ್ರತಿನಿಧಿಯಾಗಿ ಆಯ್ಕೆಯಾಗಿ ಬಂದರೂ, ಮಂತ್ರಿಯಾಗುವ ಅದೃಷ್ಟ ನನಗೆ ಸಿಗಲಿಲ್ಲ ಎಂಬ ಬೇಸರವಿದೆ. ಆದರೆ ಈ ಸಿನಿಮಾದಲ್ಲಿ ಬರೀ ಮಂತ್ರಿಯಲ್ಲ, ರಾಜ್ಯದ ಮುಖ್ಯಮಂತ್ರಿಯಾಗಿಯೇ ಕಾಣಿಸಿಕೊಂಡಿದ್ದೇನೆ. ಸಿನಿಮಾರಂಗದ ಜೊತೆಗೆ ಮೊದಲಿನಿಂದಲೂ ನಂಟಿದ್ದರೂ, ಯಾವತ್ತೂ ಅಭಿನಯಿಸಿರಲಿಲ್ಲ. ಅಭಿನಯ ನನಗೊಂದು ಹೊಸ ಅನುಭವ ಕೊಟ್ಟಿದೆ. ಇಂದಿನ ಪಡಿತರ ವ್ಯವಸ್ಥೆ ಪರಿಸ್ಥಿತಿಯನ್ನು ಬಿಂಬಿಸುವ ಸಿನಿಮಾವಾಗಿದ್ದು, ಎಲ್ಲರಿಗೂ ಇಷ್ಟವಾಗುತ್ತದೆ’ ಎಂದರು ಎಲ್. ಆರ್. ಶಿವರಾಮೇಗೌಡ.

ನಟಿ ರಾಗಿಣಿ ದ್ವಿವೇದಿ ಪಾರ್ವತಿ ಎಂಬ ಗ್ರಾಮೀಣ ಮಹಿಳೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ‘ನನ್ನ ಸಿನಿಮಾ ಜೀವನದಲ್ಲಿ ಇಲ್ಲಿಯವರೆಗೂ ಮಾಡಿರದ ಅಪರೂಪದ ಪಾತ್ರ ಈ ಸಿನಿಮಾದಲ್ಲಿದೆ. ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಏನೇನು ವ್ಯವಹಾರಗಳು, ಅವ್ಯವಹಾರಗಳು ನಡೆಯುತ್ತವೆ ಎಂಬುದನ್ನು ಸಮಾಜಕ್ಕೆ ತೋರಿಸುವಂಥ ದಿಟ್ಟ ಮಹಿಳೆಯ ಪಾತ್ರ ಈ ಸಿನಿಮಾದಲ್ಲಿದೆ. ನನಗೆ ಗೊತ್ತಿರುವಂತೆ, ಕನ್ನಡ ಚಿತ್ರರಂಗದಲ್ಲಿ ಇಂಥ ಸಿನಿಮಾ ಇಲ್ಲಿಯವರೆಗೂ ಬಂದಿಲ್ಲ’ ಎಂದರು ರಾಗಿಣಿ.

ಕುಮಾರ್ ಬಂಗಾರಪ್ಪ, ದೊಡ್ಡಣ್ಣ ಮುಂತಾದವರು ಚಿತ್ರದಲ್ಲಿದ್ದಾರೆ. ಜಯಶಂಕರ ಟಾಕೀಸ್ ಬ್ಯಾನರ್‌ನಲ್ಲಿ ತೇಜು ಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದ ಹಾಡುಗಳಿಗೆ ಅನಂತ್ ಆರ್ಯನ್ ಸಂಗೀತವಿದೆ. ಬಿ. ರಾಮಮೂರ್ತಿ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯಿರುವ ಚಿತ್ರಕ್ಕೆ ನಿರ್ದೇಶಕರೇ ಛಾಯಾಚಿತ್ರಗ್ರಹಣ ಮಾಡಿದ್ದಾರೆ. ❖

MARUTI SUZUKI

NEXA

CELEBRATIONS JUST GOT BIGGER.

WITH GST BENEFITS + *LIMITED PERIOD FESTIVE OFFERS

	PRICE REDUCTION OF UP TO#	NOW STARTING AT#	ADDITIONAL FESTIVE OFFERS OF UP TO*
FRONX	₹1 12 600	₹6 84 900	₹1 00 000
GRAND VITARA	₹1 07 000	₹10 76 500	₹1 54 100 + 5 Year Extended Warranty
BALENO	₹86 100	₹5 98 900	₹47 500
IGNIS	₹71 300	₹5 35 100	₹67 500
INVICTO	₹61 700	₹24 97 400	₹75 000
XL6	₹52 000	₹11 52 300	₹35 000
JIMNY	₹51 900	₹12 31 500	₹75 000

SCAN TO CONNECT TO A SHOWROOM NEAR YOU

*FESTIVE OFFERS VALID TILL 23RD OCT ONLY

NEXA SAFETY SHIELD

UP TO 100% WAIVER ON CAR LOAN PROCESSING FEE (ONLY TILL 31ST OCT)##

E-BOOK TODAY @ WWW.NEXAEXPERIENCE.COM

Contact us at 1800-200-6392 1800-102-6392

For detailed T&C kindly visit your nearest dealership. Features and accessories shown may not be a part of the standard fitment. Black glass shade on the vehicle is due to the lighting effect. Images used are for illustration purposes only. All offers are brought to you by NEXA dealers only. Offers and features may vary subject to the model and variant purchased. *The mentioned offers include "Consumer Offer + Booking offer + Exchange Bonus + Rural offer", and may vary from city to city. Please contact nearby dealership for more details. Maruti Suzuki reserves the right to withdraw offers at any point in time without any advance notice. All offers are applicable till 23rd October '25 or till stocks last. Maruti Suzuki Smart Finance is now available pan India. Maruti Suzuki Subscribe is available only in selected cities. ##Offers include consumer offer, exchange bonus and institutional or rural offers (wherever applicable) on select models/variants. Finance is at the sole discretion of the financer by selected finance partners. #Prices and savings mentioned above are for select variants and may vary across cities/ variants.